To,
The Secretary,
Veerasevamandira
21, Dhariyaganj
DELHI-6

presented by
B. S. Sunnaiah
Asst. Director.
Oriental Research Instt.
MYSORE-

ನೇಮಿಚಂದ್ರ ವಿರಚಿತ

ನೇಮಿನಾಥ ಪುರಾಣಂ

(ಅರ್ಧನೇಮಿ)

ಸಂಪಾದಕ

ಬಿ. ಎಸ್. ಸಣ್ಣಯ್ಯ, ಎಂ.ಎ.

ಪ್ರಕಾಶಕರು:

ಸಾಧನ ಸಾಹಿತ್ಯ ಮಂದಿರ

ಜಗನ್ಮೋಹನ ಪ್ಯಾಲೇಸ್ ರಸ್ತೆ, ಮೈಸೂರು.

ಪ್ರಥಮ ಮುದ್ರಣ—೧೯೬೧

ಬೆಲೆ :

ಸಾದಾ : ರೂ. ೫

ಕ್ಯಾಲಿಕೊ : ರೂ. ೬-೫೦

ಮುದ್ರಕರು

ಚೇತನ ಮುದ್ರಾಲಯ

ರಾಮವಿಲಾಸ ಅಗ್ರಹಾರ, ಮೈಸೂರು.

ವಿಷಯಸೂಚಿ

ಚಿತ್ರಗಳು

ದಿಸಿ, ಸಂಪ್ರತಿಸಿ, ಪ್ರಕಟಮಾಡುವ ಸುಯೋಗ ದೊರೆತುದು ನನ್ನ ಪುಣ್ಯವೆಂದೇ ಬಗೆದಿದ್ದೇನೆ.

ಈ ಕೃತಿಯ ಪಾಠವನ್ನು ನಾಲ್ಕು ಪ್ರತಿಗಳು ಮತ್ತು ಒಂದು ಅಚ್ಚಿನ ಪ್ರತಿಯ ಆಧಾರದಿಂದ ನಿರ್ಣಯಿಸಲಾಗಿದೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದ ಪ್ರತಿಯೆಂದರೆ 'ಜ' ಪ್ರತಿ. ಇದರ ಒಂದು ವಿಶೇಷವೆಂದರೆ ಅಲ್ಲಲ್ಲಿ ಇರುವ ರೇಖಾ ಚಿತ್ರಗಳು. ಇದರಿಂದ ಕಾವ್ಯಗಳನ್ನು ಚಿತ್ರಗಳಮೂಲಕ ಪರಿಚಯ ಮಾಡಿಕೊಡುವುದು ಹಿಂದೆಯೇ ರೂಢಿಯಲ್ಲಿದ್ದುದನ್ನು ಕಾಣಬಹುದಾಗಿದೆ. ಈ ಚಿತ್ರಗಳನ್ನು ಕಾವ್ಯದಲ್ಲಿ ಅಲ್ಲಲ್ಲಿಯೇ ಸಂದರ್ಭಕ್ಕೆ ತಕ್ಕಂತೆ ಕೊಡಲಾಗಿದೆ. ಈ ಮೂಲಕ ಆಗಲೇ ಶಿಥಿಲವಾಗಿರುವ ಚಿತ್ರಗಳು ಒಂದೆಡೆ ಬೆಳಕಿಗೆ ಬಂದಿರುವುದು ಸಂತೋಷದ ಸಂಗತಿ. ಪರಿಶೋಧನೆಗೆ ಉಪಯೋಗಿಸಿಕೊಂಡಿರುವ ಪ್ರತಿಗಳ ವಿವರಇಂತಿದೆ.

ಚ:—ಇದು ಪ್ರಾಚ್ಯವಿದ್ಯಾ ಸಂಶೋಧನಾಲಯದ ೨೬೦ ನೆಯ ನಂಬರಿನ ಮೈಕ್ರೊಫಿಲಂ ಪ್ರತಿ, ಓಲೆಯ ಪ್ರತಿ. ಇದರಲ್ಲಿರುವ ಪಾಠಗಳು ಸಾಮಾನ್ಯವಾಗಿವೆ. ಶಕಟರೇಫ ಇದ್ದರೂ ಸರಿಯಾಗಿ ಪ್ರಯೋಗವಾಗಿಲ್ಲ. ಪ್ರತಿಯ ಕೊನೆಯಲ್ಲಿ ಪ್ರತಿಕಾರನು ಬರೆದಿರುವ

ಬರೆ ಶಾಲೀವಾಹನಂ ಪೋಗದೆ ಶಕ ವರುಷಂ ಸಾಸಿರೆ ಸಂವತ್ಸರಂ ಸಾ |
ಸಿರದಾನೂರ್ಱಱು ಸಂದೊಪ್ಪುವ ಕಲಿಯುಗ ರಕ್ತಾಕ್ಷಿಯಾ ಮಾಘ ಮಾಸಾ |
ಪರಪಕ್ಷಂ ಸಚ್ಚತುರ್ದಶ್ಯ ಹಿಮಕಿರಣವಾರಂ ಬರಲ್ ಪದ್ಮರಾಜಂ |
ಬರೆದತ್ಯಂತಕ್ಕಱಿಂದತ್ಯಧಿಕ ಬಕುತಿಯಿಂ ನೇಮಿ ಸತ್ಕಾವ್ಯಮಂ ||

ಎಂಬ ಪದ್ಯದಿಂದ ಪ್ರತಿಯು ಕಾಲ ಕ್ರಿ. ಶ. ೧೬೮೫ ನೆಯ ರಕ್ತಾಕ್ಷಿ ಸಂವತ್ಸರದ ಮಾಘಮಾಸದ ಕೃಷ್ಣಪಕ್ಷದ ಚತುರ್ದಶೀ ಸೋಮವಾರ ಎಂದೂ, ಪ್ರತಿಕಾರನು ಪದ್ಮರಾಜ ಪಂಡಿತನೆಂದೂ ತಿಳಿದುಬರುತ್ತದೆ.

'ಜ':—ಪ್ರಾ. ವಿ. ಸಂ. ದ ೩೬೧ ನೆಯ ನಂಬರಿನ ಮೈಕ್ರೋಫಿಲಂ ಪ್ರತಿ. ಇದು ಕಾರ್ಕಳದ ಶ್ರೀ ಆದಿರಾಜ ಇಂದ್ರರು ಕಳುಹಿಸಿಕೊಟ್ಟಿದ್ದ ಓಲೆ ಪ್ರತಿ. ಇದು ಈಗ ದೊರೆತಿರುವ ಪ್ರತಿಗಳಲ್ಲೆಲ್ಲಾ ಪ್ರಾಚೀನವಾದುದು. ಇದರಲ್ಲಿ ಸೊಗಸಾದ ರೇಖಾ ಚಿತ್ರಗಳಿವೆ. ಸ್ವಲ್ಪ ಶಿಥಿಲವಾಗಿದೆ. ಇದ್ದುದರಲ್ಲಿ ಪಾಠಗಳು ಉತ್ತಮವಾಗಿವೆ. ಶಕಟರೇಫ ಪ್ರಯೋಗವಿದೆ.

'ಟ':—ಇದು 'ಚ' ಪ್ರತಿಯನ್ನೇ ಹೋಲುತ್ತದೆ. ಶಕಟರೇಫ ಇದ್ದರೂ ಸರಿಯಾಗಿಲ್ಲ. ಇದು ಪ್ರಾ. ವಿ. ಸಂ. ದ ಕೆ. ಎ. ೩೪ ನೆಯ ನಂಬರಿನ ಕಾಗದದ ಪ್ರತಿ.

'ಡ'.—ಪ್ರಾ. ವಿ. ಸಂ. ದ ಕೆ. ಎ. ೨೪೯ ನೆಯ ನಂಬರಿನ ಕಾಗದದ ಪ್ರತಿ. ಶಕಟರೇಫ ಇಲ್ಲ, ಅಶುದ್ಧ. ಕೆಲವೆಡೆ ಕೆಲವು ಪದ್ಯಗಳನ್ನೇ ಬಿಟ್ಟಿದೆ.

ಮುನ್ನುಡಿ

ಅರ್ಧನೇಮಿ ಪುರಾಣವೆಂದು ಸುಪ್ರಸಿದ್ಧವಾಗಿರುವ ಈ ಕೃತಿಯನ್ನು ರಚಿಸಿರುವವನು ಸು.ಕ್ರಿ.ಶ. ೧೧೯೦ರಲ್ಲಿ ಜೀವಿಸಿದ್ದ ನೇಮಿಚಂದ್ರ. ಹೊಯ್ಸಳ ವೀರಬಲ್ಲಾಳನ (೧೧೭೩–೧೨೨೦) ಪ್ರಧಾನನಾದ ಪದ್ಮನಾಭನು ಈತನಿಗೆ ಆಶ್ರಯದಾತನಾಗಿದ್ದನೆಂದೂ, ಈತನಿಗೆ "[illegible] ಎಂಬ ಹೆಸರೂ, ಕಲಾಕಾಂತ ಕವಿರಾಜಮಲ್ಲ, ಕವಿಧವಳ, ಶೃಂಗಾರಕಾರ [illegible] ರಾಜಕುಂಜರ, ಸಾಹಿತ್ಯ ವಿದ್ಯಾಧರ. ವಿದ್ಯಾವಧೂವಲ್ಲಭ, ಸುಕ[illegible], [illegible]ಸಿದ್ಧವಿದ್ಯಾವಿನೋದ, ಭಾರತೀಚಿತ್ತಚೋರ, ಚತುರ್ಭಾಷಾ[illegible]ರ ಕವಿಶೇಖರ, ಕೃತಿಕು[illegible], ವಾಗ್ವಲ್ಲಕೀವೈಣಿಕ ಮೊದಲಾದ [illegible] ಇದ್ದುವೆಂದು ತಿಳಿದು ಬರುತ್ತದೆ."[1] ಈತನು ಲೀಲಾವತೀ ಪ್ರಬಂಧವೆಂಬ [illegible] ಕಾವ್ಯವನ್ನು ರಚಿಸಿದ್ದಾನೆ. ಕನ್ನಡ ಸಾಹಿತ್ಯ[illegible] ನವುರೆಂಬುದಕ್ಕೆ ನಂಜುಂಡ ಕವಿಯ

> ಕಾ[illegible]ಬರಿದು ಕಾರಿಸಿ ಲೀಲಾವತಿ
> ಗಾರವದೊಳ್ ಕಪ್ಪಸಿತ್ತು
> ಮೇ[illegible]ಸಿಗುಸು ನಿಟ್ಟಿಸಿದ ನೇಮಿಚಂದ್ರನ
> ಪಾದಗಳನು ಬಲಗೊಂಬೆ[2]

ಎಂಬ ಮಾತುಗಳೇ ಸಾಕ್ಷಿಯಾಗಿವೆ.

ಇಪ್ಪತ್ತೆರಡನೆಯ ತೀರ್ಥಂಕರನ ಸ್ವಾಮಿಕಥೆಯೆಂದು ಜೈನರೂ ಭಾಗವತ ಪುರಾಣದ ಇನ್ನೊಂದು ಸ್ವರೂಪವೆಂದು ವೈಷ್ಣವರೂ ಈ ಕಥೆಯನ್ನು ಶ್ರದ್ಧಾಭಕ್ತಿಗಳಿಂದ ಅಭ್ಯಾಸಮಾಡುತ್ತಿರುತ್ತಾರೆ. ಕರ್ಣಪಾರ್ಯ, ಮಹಾಬಲ, ಬಂಧುವರ್ಮ, ಸಗರನ—ಮುಂತಾದ ಕವಿಗಳು ಇದೇ ವಸ್ತುವನ್ನೇ ಆರಿಸಿಕೊಂಡಿರುವುದರಿಂದ ಇದು ಜನಪ್ರಿಯವೂ ಸ್ವಪಸಂಗಮವೂ ನವರಸಭರಿತವೂ ಆದ ಮಹಾಕಾವ್ಯವಸ್ತುವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಸ್ತು ಸುಪ್ರಸಿದ್ಧ, ವಸ್ತುವನ್ನು ಗ್ರಹಿಸಿ ರಸಭರಿತ ಕಾವ್ಯವನ್ನು ರಚಿಸ ಹೊರಟವನು 'ಭಾರತೀ ಚಿತ್ತಚೋರ'ನಾದ ನೇಮಿಚಂದ್ರ. ಕಾವ್ಯ ಅತ್ಯಂತ ರಮಣೀಯವಾಗಿರುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅದೇನು ಕಾರಣವೋ ಕಥೆ ಕಂಸವಧಾ ಪ್ರಸಂಗದವರೆಗೆ ಹರಿದು ಅಷ್ಟಕ್ಕೆ ನಿಂತಿತು. ಅರ್ಧ ನೇಮಿಪುರಾಣ ಎಂಬ ಹೆಸರನ್ನು ಪಡೆಯಿತು. ಇಂತಹ ಸತ್ಕಾವ್ಯವನ್ನು ಸಂಪಾ

1 ಕರ್ಣಾಟಕ ಕವಿಚರಿತೆ (ಪರಿಷತ್ ಮುದ್ರಣ) ಪು ೨೮೬

2 ರಾಮನಾಥಚರಿತ, ೧ನೆಯ ಸಂಧಿ, ಪದ್ಯ ೪೧

'ಈ' : — ಇದು ಶ್ರೀ. ಮಂ. ಆ. ರಾಮಾನುಜಯ್ಯಂಗಾರ್, ಅವರಿಂದ ಪರಿಶೋಧಿತವಾಗಿ ೧೯೧೪ ರಲ್ಲಿ ಪ್ರಕಟಗೊಂಡ ಅಚ್ಚಾದ ಪ್ರತಿ. ಇದರಲ್ಲಿ ಕ, ಗ ಸಂಕೇತಗಳಿಂದ ಪಾಠಾಂತರಗಳನ್ನು ಗುರುತಿಸಿದೆ. ಈ ಪಾಠಾಂತರಗಳನ್ನು ಕ, ಗ ಸಂಕೇತದಿಂದಲೇ ಈ ಪುಸ್ತಕದಲ್ಲಿಯೂ ಕೊಟ್ಟಿದೆ.

ಈ ದೊರೆತಷ್ಟು ಪ್ರತಿಗಳ ಸಹಾಯದಿಂದಲೇ ಪರಿಶೋಧಿಸಲು ಅನೇಕ ಎಡರು ತೊಡರುಗಳಿದ್ದರೂ ಈ ಹೊತ್ತಗೆಯು ಹೊರಬರಲು ಶ್ರೀ ಎಚ್. ದೇವೀರಪ್ಪ, ಎಂ.ಎ., ಶ್ರೀ ಡಿ. ಜವರೇಗೌಡ, ಎಂ.ಎ. ಇವರ ಒತ್ತಾಯ ಮತ್ತು ಸಹಕಾರವೇ ಮುಖ್ಯಕಾರಣ ವಾಗಿದೆ. ಹೆಸರು ನನ್ನದಿದ್ದರೂ ಉಸಿರು ಪ್ರೊ ಡಿ. ಎಲ್. ನರಸಿಂಹಾಚಾರ್ಯ, ಎಂ.ಎ. ಅವರದು. ಇದಕ್ಕೆ ಜೀವಕಳೆ ಬಂದುದು ಈ ಮಹನೀಯರಿಂದ. ಇವರು ನಾನು ಎಂದೇ ಹೋಗಲಿ ಪ್ರೀತಿಯಿಂದ ಕಂಡು ಕರಡು ಪ್ರತಿಯನ್ನು ಓದಿ, ತಿದ್ದಿ, ಸೂಕ್ತ ಸಲಹೆಗಳನ್ನಿತ್ತು ಕಾವ್ಯವು ಆದಷ್ಟು ಉತ್ತಮವಾಗಿ ಪ್ರಕಟವಾಗಲು ಸಹಾಯ ಮಾಡಿದ್ದಾರೆ. ಈ ಮಹನೀಯರೆಲ್ಲರಿಗೂ ನಾನು ಅತ್ಯಂತ ಚಿರಋಣಿ. ಪರಿಶೋಧನೆಗೆ ಪ್ರತಿಗಳನ್ನು ಕೊಟ್ಟು ರೇಖಾಚಿತ್ರಗಳನ್ನು ಹಾಕಿಕೊಳ್ಳಲು ಅವಕಾಶಮಾಡಿಕೊಟ್ಟ ಪ್ರಾ. ವಿ. ಸಂ. ದ ಡೈರೆಕ್ಟರವರಿಗೆ ನನ್ನ ಅನಂತ ಪ್ರಣಾಮಗಳು.

ಪ್ರಕಾಶನದ ಪೂರ್ಣ ಹೊರೆಯನ್ನು ಹೊರಲು ಮುಂದೆ ಬಂದು ಪುಸ್ತಕವನ್ನು ತರುವುದರಲ್ಲಿ ಶ್ರಮಿಸಿದ ಶ್ರೀ ಎಸ್. ಶ್ರೀಕಂಠಯ್ಯನವರಿಗೂ, ಇಷ್ಟು ಅಂದವಾಗಿ ಮುದ್ರಣಮಾಡಿ ಸಕಾಲಕ್ಕೆ ಪುಸ್ತಕಗಳನ್ನು ಒದಗಿಸಿಕೊಟ್ಟ ಗೆಳೆಯ ಶ್ರೀ ನ. ಕೃಷ್ಣ ಅವರಿಗೂ ನನ್ನ ಧನ್ಯವಾದಗಳು.

೨೨—೧೨—೧೯೬೧ ಇತಿ,
ಮೈಸೂರು ಬಿ. ಎಸ್. ಸಣ್ಣಯ್ಯ

ಒಪ್ಪೋಲೆ

ಪುಟ—ಪದ್ಯ	ತಪ್ಪು		ಒಪ್ಪು
16— ೨೯	ಸಿಂಹಸಧರನನ್ನು	—	ಸಿಂಹರಥನನ್ನು
18— ೧೮	ಅರ್ಧನೇಮಿಗೆ	—	ಅರ್ಧನೇಮಿ
೪— ೨೧	ಮರ್ಹನ್ಮುರ್ಖ	—	ಮರ್ಹನ್ಮುಖ
೫— ೨೭	ವೈಕಟಕಂ	—	ದ್ವೈಕಟಕಂ
೧೦— ೫೭	ಪೂರ್ವಾಪರ	—	ಪೂರ್ವಾಪರ
೨೨—೧೧೧	ಪದ್ಮದಂಡಂದಿಂ	—	ಪದ್ಮದಂಡದಿಂ
೨೪—೧೨೦–ಗದ್ಯ	ಚಕ್ರವತ್ರಿ	—	ಚಕ್ರವರ್ತಿ
೫೩— ೩೩–ವ	ನಗರಮನಾಳ್ಪ	—	ನಗರಮನಾಳ್ವ
೫೮— ೬೦	ಪಲ್ಲಿಗೆಯಿಂ ಕೈ	—	ಮಲ್ಲಿಗೆಯಿಂ ಕೈ
೬೨— ೭೪–ವ	ಮರ್ಗುಜ್ದು	—	ಮರ್ಗುಬ್ದು
೮೬— ೬೩	[1]ಮೆಲ್ಲೈಕಿಲ್[1]	—	[1]ಸೇಲ್ಲೈಕಿಲ್[1]
೧೦೨—೧೨೭	ಕಡವಿಸಿಲಿಂ	—	ಕಡುವಿಸಿಲಿಂ
೧೧೧— ೧೦ ನೆ ಪಂಕ್ತಿ	ಕೇರಿಯೋಳಂ	—	ಕೇರಿಯೊಳಂ
೧೮೩— ೮೧–ವ	ಕಂಭಮನಂ[6]ಜನ[6]	—	ಕಂಭಮನಂ[6][ಜನ][6]
೧೮೩— ೮೨	[7]ಬಿಣ್ಪೆನಿತಾಯ್ತೇ	—	[7]ಬಿಣ್ಪಿ[ನಿ]ತಾಯ್ತೇ
೧೮೩—ಪಾಠಾಂತರ	7 ಬಿಣ್ಪೆಂತಾಯ್ತೇ (ಚಟಡಣ)	—	(೬ ನೇ ಪಾಠಾಂತರದ ಕೊನೆಗೆ) ಬಿಣ್ಪೆಂತಾಯ್ತೆ
	ಬಿಣ್ಮಿತ್ರಾಯ್ತೇ (ಜ) (ಚಟಡಣ)		(ಚಟಡಣ) ಬಿಣ್ಮಿತ್ರಾಯೇ (ಜ)
,, — ,,	5 ಗಜ (ಚಟಡಣ)	—	5 ಗಜ (ಚಜಟಡಣ)
೧೯೩— ೨೧–ವ	ತೊರೆದೆಚ್ಟು	—	ತೊರೆದೆಚ್ಚು
೧೯೪—ಪಾಠಾಂತರ	9 ಕಜ್ಜ (ಣ)	—	9 ಕಂಜ (ಚಜಟಡ) ಕಜ್ಜ (ಣ)
೨೧೦— ,,	10 ವ (ಜ)	—	10 ವಿದಿ (ಚಟಡಣ)
೨೧೨— ,,	4 ಅರ್ಪಿನಂ	—	4 ಲರ್ಪಿನಂ
೨೨೦—೧೩ ನೆ ಪಂಕ್ತಿ	ವತ್ರಪದ್ಮ	—	ವಕ್ರಪದ್ಮ
೨೨೦—೩೩ ,,	ಸುವ್ರತಿಷ್ಠ	—	ಸುಪ್ರತಿಷ್ಠ
೨೪೩—೩೨ ,,	ಬಿಟ್ಟ	—	ಬಿಟ್ಟ
೨೪೬—೩೧ ,,	ಬೆಲು	—	ಬೆಸ್ಸು

ಕವಿ ಕಾವ್ಯವಿಚಾರ

ನೇಮಿಚಂದ್ರನು ಪಂಪ, ಪೊನ್ನ, ರನ್ನರಂತೆಯೇ ಒಂದು ಲೌಕಿಕ ಕಾವ್ಯವನ್ನೂ, ಮತ್ತೊಂದು ಮತೀಯ ಕಾವ್ಯವನ್ನೂ ರಚಿಸಿದ್ದಾನೆ. ತನ್ನ ಹೆಸರನ್ನುಳಿದು ಸ್ವವಿಷಯವನ್ನಾಗಲಿ, ತನ್ನ ಕಾಲವನ್ನಾಗಲಿ ಕಾವ್ಯದಲ್ಲೆಲ್ಲಿಯೂ ಹೇಳಿಕೊಂಡಿಲ್ಲ ಮತ್ತು ತನ್ನ ಹಿಂದಿನ ಕವಿಗಳಾರನ್ನೂ ಸ್ತುತಿಸಿಲ್ಲ. ಆದರೆ, ತನ್ನ ಆಶ್ರಯದಾತರನ್ನು ಹೊಗಳಿರುವುದರಿಂದ, ಆಶ್ರಯದಾತರ ಕಾಲದ ಆಧಾರದ ಮೇಲೂ, ಇವನಾದ ಮೇಲೆ ಬಂದ ಕವಿಗಳು ಈತನನ್ನು ಸ್ತುತಿಸಿರುವುದರಿಂದಲೂ ಈತನ ಕಾಲ ನಿರ್ಣಯವಾಗಿದೆ.

ಕವಿಯು ತನ್ನ ಮೊದಲ ಕಾವ್ಯವಾದ ' ಲೀಲಾವತಿ ' ಗ್ರಂಥದ ಕೊನೆಯಲ್ಲಿ ಹೇಳುವ

ಅಂಬುಧಿವೇಷ್ಟಿತಾವನಿಗೆ ಲಕ್ಷ್ಮಣದೇವನೆ ರಾಜನೆಂದು ಲೋ
ಕಾಂಬಿಕೆಯಪ್ಪ ಪುಣ್ಯಾಪತಿ ಚಂದಲದೇವಿಯೆ ದೇವಿಯೆಂದು ಸೇ
ವ್ಯಂ ಬುಧ ನೇಮಿಚಂದ್ರನೆ ಕವೀಂದ್ರಂ....... ....

ಧರೆಯಂ ರಕ್ಷಿಸುತಿರ್ಕೆ ಲಕ್ಕ ಬರಿಸಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂತಾತನ ತೋಳೊಳಿರ್ಕೆ ಸತತಂ ಶ್ರೀ ಚಂದ್ರಿಕಾದೇವಿ ಸಾ
ವಿರಮುಂ ಕಾವ್ಯಮನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತಸಾ
ಗರ ಪರಿಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ||

ಎಂಬ ಈ ಪದ್ಯಗಳಿಂದ ಲಕ್ಷ್ಮಣರಾಜನ ಆಶ್ರಯದಲ್ಲಿ ಲೀಲಾವತಿ ಗ್ರಂಥವನ್ನು ರಚಿಸಿದಂತೆ ತಿಳಿದುಬರುತ್ತದೆ. ' ಸೌಂದತ್ತಿಯ ರಟ್ಟವಂಶಕ್ಕೆ ಸೇರಿದ ಇಬ್ಬರು ಲಕ್ಷ್ಮಣರಾಜರ ಹೆಸರು ಇತಿಹಾಸದಲ್ಲಿ ಪ್ರಸಿದ್ಧವಾಗಿವೆ. ಮೊದಲನೆಯವನು ೧೧೯೦ ರಲ್ಲಿಯೂ, ಎರಡನೆಯವನು ೧೨೨೮ ರಲ್ಲಿಯೂ ರಾಜ್ಯವಾಳುತ್ತಿದ್ದರೆಂದು ಖಚಿತವಾಗಿದೆ. ಮೊದಲನೆಯವನ ಹೆಂಡತಿ ಚಂದಲದೇವಿಯಾದುದರಿಂದ, ಅವನ ಆಶ್ರಯದಲ್ಲಿಯೇ, ಅಂದರೆ ಸು. ೧೧೯೦ ಕ್ಕೆ ಮುಂಚೆಯೇ ಲೀಲಾವತಿಯನ್ನೂ ಆಮೇಲೆ ವೀರಬಲ್ಲಾಳನು ಚಕ್ರವರ್ತಿಯಾದ ಮೇಲೆ ನೇಮಿನಾಥಪುರಾಣವನ್ನೂ ರಚಿಸಿರುವಂತೆ ಊಹಿಸಬಹುದು.'[1]

ಎರಡನೆ ಬಲ್ಲಾಳ ಅಥವಾ ವೀರಬಲ್ಲಾಳನು ೧೧೭೩–೧೨೨೦ ರವರೆಗೆ ಆಳುತ್ತಿದ್ದನು. ನೇಮಿನಾಥಪುರಾಣದಲ್ಲಿ ವೀರಬಲ್ಲಾಳನನ್ನೂ, ಆತನ ಆಸ್ಥಾನದಲ್ಲಿದ್ದ

1 ನೇಮಿಚಂದ್ರ—ಶ್ರೀ ಎಸ್. ಅನಂತರಂಗಾಚಾರ್, ಎಂ.ಎ., ಪುಟ ೮.

ಸೆಜ್ಜೆವಳ್ಳ ಪದ್ಮನಾಭನನ್ನೂ ಕವಿಯು ಸ್ತುತಿಸಿರುವುದರಿಂದ ಈ ಕಾವ್ಯವು ವೀರ ಬಲ್ಲಾಳನ ಆಸ್ಥಾನದಲ್ಲಿ ಬರೆದುದೆಂಬುದರಲ್ಲಿ ಸಂಶಯವಿಲ್ಲ.

ನೇಮಿಚಂದ್ರನನ್ನು ೧೨೦೯ ರಲ್ಲಿದ್ದ ಜನ್ನನೂ, ೧೨೦೫ ರಲ್ಲಿದ್ದ ಪಾರ್ಶ್ವನಾಥನೂ ಹೊಗಳಿರುವುದರಿಂದ ಇವರಿಗಿಂತ ಹಿಂದೆಯೇ ನೇಮಿಚಂದ್ರನ ಕಾವ್ಯಗಳು ಪ್ರಸಿದ್ಧವಾಗಿರಬೇಕು. ಇವರಿಂದ ನೇಮಿಚಂದ್ರನ ಕಾಲವನ್ನು ಸು. ೧೧೯೦ ಎಂದು ಒಪ್ಪಿಕೊಳ್ಳಬಹುದು.

ಈತನು ಸಮಂತಭದ್ರ, ಪೂಜ್ಯಪಾದ – ಮೊದಲಾದವರನ್ನು ಸ್ತುತಿಸಿ ಕನ್ನಡ ಕವಿಗಳಾರನ್ನೂ ಹೆಸರಿಸದೆ ಮುಂದುವರಿಯುತ್ತಾನೆ. ಚತುರ್ಭಾಷಾ ಪಂಡಿತ, ಕವಿ ಚಕ್ರವರ್ತಿ – ಮೊದಲಾದ ಹಲವಾರು ಬಿರುದುಗಳನ್ನು ಪಡೆದಿದ್ದಾನೆ. ಕವಿಗಳ ವಿಷಯದಲ್ಲಿದ್ದ ಆತನ ಹೆಮ್ಮೆ ಅಸಾಧಾರಣವಾದುದು. ಅದಕ್ಕೆ ' ಕಟ್ಟುಗೆ ಕಟ್ಟಿದಿರ್ಕೆ ಕಡಲಂ ಕಪಿಸಂತತಿ ' ಎಂಬ ಪದ್ಯವನ್ನು ಲೀಲಾವತಿಯಲ್ಲಿಯೂ, ' ಕುವಳಯ ದಲದಂ .ರವಿ ಕಾಣದುದಂ ಕವಿ ಕಾಣ್ಬನೆನಿಪ್ಪ ವಚನಮೇಂ ತಪ್ಪುಗುಮೇ ' (ನೇ. ಪು. ಆ. ೧–೩೩) ಎಂಬ ಪದ್ಯವನ್ನು ನೇಮಿನಾಥಪುರಾಣದಲ್ಲಿಯೂ ನೋಡಬಹುದು. ಇಂತಹ ಕವಿ,ಕಾವ್ಯ ವಿಷಯದಲ್ಲಿ ಹಲವಾರು ಉತ್ತಮ ಪದ್ಯಗಳು ಗ್ರಂಥದಲ್ಲಿ ಬರುತ್ತವೆ.

ಕಥಾಸಾರ

ಸುಗಂಧಿಲ ದೇಶದಲ್ಲಿ ಜನಭರಿತವಾದ ಸಿಂಹಪುರವಿತ್ತು. ಇದರ ಅರಸ ಅರ್ಹದ್ದಾಸನು ಪತ್ನಿ ಜಿನದತ್ತೆಯೊಡನೆ ಸುಖವಾಗಿ ಕಾಲಕಳೆಯುತ್ತಿರಲು, ಅವರಿಗೆ ಬಹುಕಾಲ ಮಕ್ಕಳಾಗಲಿಲ್ಲ. ಕೊನೆಗೆ ಮಲಧಾರಿ ಸ್ವಾಮಿಗಳ ಆದೇಶದಂತೆ ಒಂದು ಗಂಡುಮಗುವಾಯಿತು. ಆತನಿಗೆ ಅಪರಾಜಿತನೆಂದು ಹೆಸರಿಟ್ಟರು. ಮಗನು ಸಕಲ ವಿದ್ಯಾ ಪ್ರವೀಣನಾದುದನ್ನು ಅರಿತ ಅರ್ಹದ್ದಾಸನು ಮಗುವಿಗೆ ತಕ್ಕ ಕನ್ಯೆಯನ್ನು [illegible] ಪ್ರೀತಿಮತಿಯೆಂಬ ರಾಜಕುಮಾರಿಯನ್ನು ತಂದು ಮದುವೆಮಾಡಿದನು. ಕೊನೆಗೆ ಅರ್ಹದ್ದಾಸನು ವೈರಾಗ್ಯಪರನಾಗಿ ಅಪರಾಜಿತನಿಗೆ ಪಟ್ಟಗಟ್ಟಿ ತಾನು ತಪಸ್ಸಿಗೆ ನಡೆದನು. ಜನದತ್ತೆಯೂ ಪತಿಯನ್ನೇ ಹಿಂಬಾಲಿಸಿದಳು.

ಅಪರಾಜಿತನು ಸಮ್ಯಕ್ ದರ್ಶನಾದಿ ಶ್ರಾವಕಗಳನ್ನು ಕೈಗೊಂಡು ಪಟ್ಟಣಕ್ಕೆ ಒಂದು ರಾಜ್ಯವಾಳುತ್ತಾ ಸುಖವಾಗಿ ಕಾಲಕಳೆಯುತ್ತಿರಲು, ಒಂದುದಿನ ವಿಮಲ ವಾಹನರು [illegible] ತನ್ನ ತಂದೆ ಅರ್ಹದ್ದಾಸನೂ ಮುಕ್ತಿಗೆ ಸಂದರೆಂಬ ಮಾತನ್ನು ಕೇಳಿ ಮೂರ್ಛೆಹೋದನು. ಎಚ್ಚತ್ತು ಸುವರ್ಣಬೆಟ್ಟವನ್ನೇರಿ ಸ್ವರ್ಗವನ್ನು ಸೇರಿ ಅಲ್ಲಿ ತನ್ನ ತಂದೆಯನ್ನು ಸಂಧಿಸುವೆನೆಂದು ಬಗೆಯಲು, ಈ ಇಷ್ಟಾರ್ಥವು ಈತನ ಏಳನೆಯ [illegible] ಅಶರೀರವಚನವಾಗುವುದು. ಆದರೂ ತಂದೆಯ ಅಗಲಿಕೆಯನ್ನು ಸಹಿಸದ [illegible] ತಂದೆಯನ್ನೂ, ಜಿನನನ್ನೂ ಕಂಡಲ್ಲದೆ ಆಹಾರತೆಗೆದುಕೊಳ್ಳುವುದಿಲ್ಲ

ವೆಂದು ಪ್ರತಿಜ್ಞೆಮಾಡಿ ಸೈನ್ಯದೊಡನೆ ದೇವಾಚಳಪ್ರಸ್ಥದತ್ತ ನಡೆದನು. ಈ ವಿಷಯ ವನ್ನು ತಿಳಿದ ದೇವೇಂದ್ರನು ಐಂದ್ರಜಾಲಿಕ ವಿದ್ಯೆಯಿಂದ ಅರ್ಹದ್ದಾಸನನ್ನೂ, ಜಿನನಿರುವ ಸಭಾದೃಶ್ಯವನ್ನೂ ನಿರ್ಮಿಸಿ ತೋರಿಸಿದನು. ಅಪರಾಜಿತನು ಆ ರೂಪನ್ನೆ ಲೆಪ್ಪದಿಂದ ಮಾಡಿಸುವ ಯೋಚನೆಯಿಂದ ಹಿಂದಿರುಗಿ ಸುಖವಾಗಿದ್ದನು.

ಒಂದುದಿನ ಅಪರಾಜಿತನು ಪ್ರೀತಿಮತಿಯೊಡನೆ ಬಸದಿಗೆ ಹೋಗಿ ನಮಸ್ಕರಿಸು ತ್ತಿರಲು ಆಕಾಶಮಾರ್ಗದಿಂದ ಇಬ್ಬರು ಚಾರಣರು ಇಳಿದು ಬಂದರು. ಅವರನ್ನು ಅಪರಾಜಿತನು ಎದುರುಗೊಂಡು ಸತ್ಕರಿಸಲು, ಅವರು ಅಪರಾಜಿತನ ಜನ್ಮಾಂತರ ಕಥೆಯನ್ನು ಹೇಳಿದರು.

ಪುಷ್ಕರಾರ್ಧದ ಪಶ್ಚಿಮ ದಿಕ್ಕಿನಲ್ಲಿ ಅಪರ ವಿದೇಹವಿದ್ದಿತು. ಅಲ್ಲಿ ಐಶ್ವರ್ಯ ಭರಿತವಾದ ಗಂಧಿಲ ವಿಷಯವೆಂಬ ನಾಡಿನಲ್ಲಿ ಸೂರ್ಯಪ್ರಭವೆಂಬ ಪಟ್ಟಣವಿದ್ದಿತು. ಅದನ್ನು ಸೂಯಪ್ರಭರಾಜ ಆಳುತ್ತಿದ್ದನು. ಆತನ ಹೆಂಡತಿ ಧಾರಿಣಿ. ಇವರಿಗೆ ಚಿಂತಾ ಗತಿಯೆಂಬ ಮಗ ಹುಟ್ಟಿದನು. ರಾಗಕ್ಕೆ ಭೋಗ ಉಪಭೋಗಗಳು ಹುಟ್ಟುವಂತೆ ಚಿಂತಾಗತಿಗೆ ಮನೋಗತಿ, ಚಪಳಗತಿಯರೆಂಬ ತಮ್ಮಂದಿರಾದರು. ಚಿಂತಾಗತಿಯು ತಮ್ಮಂದಿರೊಡಗೂಡಿ ರಾಜ್ಯಭಾರ ಮಾಡುತ್ತಿದ್ದನು.

ಅತ್ತ ಅರಿಂದಮ ಪುರದರಸು ಅರಿಂಜಯ ಖೇಚರ ಮತ್ತು ಆತನ ಪತ್ನಿ ಅಜಿತ ಸೇನಾದೇವಿಗೆ ವಿಳಾಸವತಿಯೆಂಬ ಮಗಳು ಹುಟ್ಟಿದಳು.

ಅರಿಂಜಯನು ಮಗಳಿಗೆ ಸ್ವಯಂವರವನ್ನೇರ್ಪಡಿಸಿದನು. ಈಕೆಯ ಸೌಂದರ್ಯಕ್ಕೆ ಮಾರುಹೋಗಿದ್ದ ಹಲವರು ಖೇಚರರು ನೆರೆದರು. ಚಿಂತಾಗತಿಯೂ ತಮ್ಮಂದಿರೊಡನೆ ಬಂದನು. ಗತಿ ವಿದ್ಯೆಯಲ್ಲಿ ವಿಳಾಸವತಿಯನ್ನು ಮೀರಿಸಿ ಬರುವ ಪುರುಷನಿಗೆ ಆಕೆಯು ಮಾಲೆಯನ್ನು ಹಾಕುವಳೆಂದು ಹೇಳಲು, ಚಿಂತಾಗತಿಯು ವಿಳಾಸವತಿ ಯನ್ನು ಗತಿವಿದ್ಯೆಯಲ್ಲಿ ಸೋಲಿಸಿದನು. ವಿಳಾಸವತಿಯು ಸೋತು ಸಿಗ್ಗಾಗಿ ಚಿಂತಾ ಗತಿಗೆ ಮಾಲೆಯನ್ನು ಹಾಕಲು ಹಾರವನ್ನು ಎತ್ತಿದಳು. ಆದರೆ ಚಿಂತಾ ಗತಿಯು ಹಿಮ್ಮೆಟ್ಟನಿಂತು 'ಇದು ನನ್ನ ತಮ್ಮಂದಿರ ಗೆಲವಲ್ಲದೆ ನನ್ನ ಗೆಲವಲ್ಲ. ಅವರಲ್ಲಿ ನಿನ್ನ ಮನಬಂದವರಿಗೆ ಮಾಲೆ ಹಾಕು' ಎನ್ನಲು, ವಿಳಾಸವತಿಯು, ನೀನು ನನಗೆ ದೂರಪ್ರಿಯನಾದೆ. ನಿನ್ನ ನೋಟಕ್ಕೆ ಗುಣಕ್ಕೆ ಸೋತ ನಾನು ನಿನ್ನನ್ನು ಮದುವೆ ಯಾಗದೆ ಹೆರವರನ್ನು ವರಿಸಿ ಕುಲಕ್ಕೆ ಅಪಕೀರ್ತಿ ತರಲೇ?' ಎಂದವಳೇ ತಪಸ್ಸೆಂಬ ಮದುವಣಿಗನನ್ನು ವರಿಸಿದಳು. ಚಿಂತಾಗತಿಯೂ ತಮ್ಮಂದಿರ ಸಮೇತ ತಪಸ್ಸನ್ನು ಸ್ವೀಕರಿಸಿ, ಆಯುಸ್ಸನ್ನು ಕಳೆದು ಮಹೇಂದ್ರಕಲ್ಪದಲ್ಲಿ ಸಾಮಾನಿಕ ದೇವತೆಗಳಾದರು.

ಆ ಚಿಂತಾಗತಿಯೇ ಈಗ ಅಪರಾಜಿತ. ಚಾರಣರೇ ಚಪಲಗತಿ ಮತ್ತು ಮನೋ ಗತಿ. ಚಾರಣರು ಅಪರಾಜಿತನ ಪೂರ್ವ ವೃಂತ್ತಾಂತವನ್ನು ಕೇಳಿ ಆತನನ್ನು ನೋಡಲು ಬಂದಿದ್ದರು. ಇವರ ಅನ್ಯೋನ್ಯ ಪ್ರೀತಿಗೆ ಪೂರ್ವಜನ್ಮದ ಕಥೆಯನ್ನು ಇಂತೆಂದು ಹೇಳಿದರು.

ಮಗಧಮಂಡಲದಲ್ಲಿ ಒಂದು ಕಾಡಿದ್ದಿತು. ಅದು ಕ್ರೂರ ಮೃಗಗಳಿಂದ ತುಂಬಿದ್ದಿತು. ಅಲ್ಲಿ ಒಂದು ಬೇಡರ ಪಾಳೆಯವಿದ್ದಿತು. ಆ ಹಳ್ಳಿಗೆ ವಿಂಧ್ಯಕನೆಂಬುವನು ಅಧಿಪ. ಅತನು ಮಹಾಶೂರ ಮತ್ತು ಒಳ್ಳೆಯ ಬೇಟೆಗಾರ. ಅತನೊಂದು ದಿನ ತನ್ನ ಮನಃಪ್ರಿಯೆ ವಾಗುರೆಯೊಡನೆ ಬೇಟೆಗೆ ಹೋಗಿದ್ದಾಗ ದೂರದಲ್ಲಿ ಬೆಟ್ಟದ ಮೇಲೆ ಎರಡು ಗಿರಿಶಿಖರಗಳಂತಿದ್ದ ಮುನೀಂದ್ರರನ್ನು ಹೊಡೆದು ಕೆಡಹುವೆನೆಂದು ವಾಗುರೆಗೆ ಹೇಳಿದನು. ಆಗ ವಾಗುರೆಯು ಅವರು ಮುನಿಗಳೆಂದು ತಿಳಿದು ಗಂಡನನ್ನು ತಡೆದಳು. ವಿಂಧ್ಯಕನು ಬಾಣವನ್ನು ಎಸೆದು ಬೆಟ್ಟವನ್ನೇರಿ ಮುನೀಂದ್ರರಿಗೆ ನಮಸ್ಕರಿಸಿ ಧರ್ಮೋಪದೇಶದಿಂದ ವ್ರತವನ್ನು ಸ್ವೀಕರಿಸಿದನು. ವಾಗುರೆಯೂ ಮನವಿಲ್ಲದ ಮನದಿಂದ ಗಂಡನನ್ನೇ ಅನುಸರಿಸಿದಳು.

ಹೀಗೆ ಇಬ್ಬರೂ ಅಹಿಂಸಾ ವ್ರತಧಾರಿಗಳಾಗಿ ಹಿಂದಿರುಗಿ ಕಂದಮೂಲಗಳನ್ನು ತಿಂದು ಜೀವಿಸುತ್ತಿದ್ದರು. ಜೊತೆಯ ಬೇಡಿತಿಯರು ವಾಗುರೆಯನ್ನು ಕುರಿತು 'ನೀನುಂ ನಿನ್ನ ಗಂಡನುಂ ಪುಲಿಯಂತಿರ್ದು ನರಿಯಂತಿರೇಕಿರ್ದಪಿರ್' ಎನ್ನಲು, ಆಕೆಯು ಕಣ್ಣಲ್ಲಿ ನೀರು ತಂದು ಆದುದೆಲ್ಲವನ್ನೂ ವಿವರಿಸಿದಳು. ಆ ಬೇಡಿತಿಯರು ವಾಗುರೆಯನ್ನು ತಮ್ಮೊಡನೆ ಬಂದು ಬಾಯ್ಗೆ ಬಯಸಿದುದನ್ನುಂಡು ಸೈಗೆ ಬೆಚ್ಚಂತಿರೆಂದು ಹೇಳಲು, ಆಕೆಯು ತಲೆಯಲ್ಲಾಡಿಸಿ ಗಂಡನಾದುದನ್ನೇ ಆಗುವೆನೆಂದಳು.

ಒಂದು ದಿನ ವಿಂಧ್ಯಕನು ಹಣ್ಣುಗಳನ್ನು ಕೀಳಲು ಹೋಗಿ ಹಾವು ಕಡಿದು ಸತ್ತು ವೃಷಭದತ್ತನೆಂಬ ರಾಜನಿಗೆ ಇಭ್ಯಕೇತುವೆಂಬ ಮಗನಾಗಿ ಹುಟ್ಟಿದನು. ವನಚರಿಯಾದ ವಾಗುರೆಯೂ ತನ್ನ ಪತಿಯಗತಿಯೇ ತನಗೂ ಸರಿಯೆಂದು ಹಾವಿನ ಹಲ್ಲಿಗೆ ಕೈಕೊಟ್ಟು ಸತ್ತು ಆ ಪಟ್ಟಣದಲ್ಲಿ ಧೀವರನಾಗಿ ಹುಟ್ಟಿದಳು. ಸಕಲ ಸಂಪತ್ತಿನಿಂದ ಕೂಡಿದ ವೃಷಭದತ್ತನ ಮನೆಯಲ್ಲಿ ಇಭ್ಯಕೇತು ಸುಂದರನಾಗಿ ಬೆಳೆದು ಯೌವನವನ್ನು ತಾಳಿದನು. ರೂಪಿಗೆ ತಕ್ಕಂತೆ ನಾಟ್ಯಪ್ರಾವೀಣ್ಯತೆ, ಕಾವ್ಯಪಾಂಡಿತ್ಯ, ರಸಜ್ಞತೆ ಆತನಲ್ಲಿ [illegible]ತುಳುಕುತ್ತಿದ್ದುವು.

ಇತ್ತ ರಾಜಗೃಹನಗರದ ಪ್ರಭು ಜಿತಶತ್ರುವಿಗೆ ಆತನ ಅರಸಿ ಸುಪ್ರಭೆಯಲ್ಲಿ ಹುಟ್ಟಿದ ಕಮಲಪ್ರಭೆ ರೂಪಾತಿಶಯದಿಂದ ಮೆರೆಯುತ್ತಿದ್ದಳು. ಈಕೆಯ ಸ್ವಯಂವರ ನೇರ್ಪಟ್ಟಿತು. ಸ್ವಯಂವರಕ್ಕೆ ಇಭ್ಯಕೇತುವೂ ಬಂದನು. ಕಮಲಪ್ರಭೆಯ ಕೈಲಿದ್ದ ಮಾಲೆ ಇಭ್ಯಕೇತುವಿನ ಕೊರಳಿಗೇ ಬಿದ್ದಿತು.

[illegible] ರಾಜನ ಕಿರಿಯ ಹೆಂಡತಿ ವಸಂತಸೇನೆಗೆ ಮದನಸುಂದರಿಯೆಂಬ ಮಗ[illegible]ಯು ನೃತ್ಯ, ಸಂಗೀತ, ಸಾಹಿತ್ಯದಲ್ಲಿ ಅದ್ವಿತೀಯಳಾಗಿದ್ದುದನ್ನು ತಿ[illegible]ಗೆ ತಕ್ಕ ವರನೆಂದರೆ ಇಭ್ಯಕೇತುವೇ ಎಂದು ಬಗೆದು ಅತನಿಗೆ ಕೊಟ್ಟು [illegible]ಸಮಾಡಿದನು. ಅನಂತರ ಜಿತಶತ್ರುವು ಇಭ್ಯಕೇತುವಿಗೇ ರಾಜ್ಯಭಾರವನ್ನು [illegible] ತಪಸ್ಸಿಗೆ ನಡೆದನು. ಇಭ್ಯಕೇತುವಿನ ತಂದೆಯೂ ಮಗನಿಗೆ ಪಟ್ಟ

ಗಟ್ಟಿ ತಾನು ದೀಕ್ಷೆಯನ್ನು ಕೈಗೊಂಡನು. ಇಭ್ಯಕೇತುವು ಎರಡೂ ಐಶ್ವರ್ಯಕ್ಕೆ ಅಧಿಪತಿಯಾದನು.

ಒಂದು ದಿನ ಇಭ್ಯಕೇತುವು ಒಡ್ಡೋಲಗಗೊಟ್ಟಿರಲು ಒಬ್ಬ ಬೇಡನು ಆನೆಯ ಕುಂಭಸ್ಥಳದ ಮುತ್ತುಗಳನ್ನೂ, ಕಸ್ತೂರೀ ಮಿಗವನ್ನೂ, ಸಿಂಹದ ಮರಿಯನ್ನೂ ತಂದು ಅರಸನಿಗೆ ಕಾಣಿಕೆಯಾಗಿ ಕೊಡಲು, ಇಭ್ಯಕೇತುವಿಗೆ ಆತನ ಮೇಲೆ ಮೋಹ ಹುಟ್ಟಿ ಅವನನ್ನು ಸೇನಾಪತಿಯನ್ನಾಗಿ ಮಾಡಿದನು.

ಹೀಗೆ ಇಭ್ಯಕೇತುವು ಸೇನಾಪತಿ ಸಮೇತ ರಾಜ್ಯಭಾರಮಾಡುತ್ತಿರುವಲ್ಲಿ ಒಂದು ಸಲ ಮಂದರಸ್ಥ ಭಟ್ಟಾರಕರಲ್ಲಿ ಹೋಗಿ ಧರ್ಮವನ್ನು ಕೇಳಿ, ಆ ಬೇಡನಲ್ಲಿ ತನಗೆ ಅತ್ಯಧಿಕಮೋಹ ಹುಟ್ಟಲು ಕಾರಣವೇನೆಂದು ಕೇಳಲು, ಮುನಿಗಳು ಹಿಂದೆ ಇಭ್ಯಕೇತುವು ನಿಂಧ್ಯಕನಾಗಿದ್ದುದನ್ನೂ, ಆಗ ಆತನ ಹೆಂಡತಿಯಾಗಿದ್ದ ವಾಗುರೆಯೆಂಬುವಳೇ ಈಗ ಬೇಡನಾಗಿರುವುದನ್ನೂ ತಿಳಿಸಿದರು. ಇದರಿಂದ ಇಭ್ಯಕೇತುವಿಗೆ ಪೂರ್ವಜನ್ಮ ಸ್ಮರಣೆಯುಂಟಾಗಿ ತನ್ನ ಮಗನಿಗೆ ರಾಜ್ಯವನ್ನು ವಹಿಸಿ ತಾನು ತಪಸ್ಸಿಗೆ ನಡೆದನು. ಕಮಲಪ್ರಭೆಯೂ ಗಂಡನನ್ನೇ ಅನುಸರಿಸಿದಳು. ಸೇನಾಪತಿಯಾಗಿದ್ದ ಧೀವರನೂ ವ್ರತವನ್ನು ಕೈಗೊಂಡನು.

ಇಭ್ಯಕೇತು ಮನ್ಮಥನಿಗೆ ಧೂಮಕೇತುವಾಗಿ ತಪಸ್ಸನ್ನಾಚರಿಸಿ ಸೌಧರ್ಮ ಕಲ್ಪದಲ್ಲಿ ಶ್ರೀ ನಿಳಯ ವಿಮಾನದಲ್ಲಿ ಶ್ರೀದೇವನೆಂಬ ದೇವನಾದನು. ಕಮಲಪ್ರಭೆ ಸುಪ್ರಭವಿಮಾನದಲ್ಲಿ ವಿಮಲಪ್ರಭದೇವನಾದನು. ಧೀವರನು ವಿದ್ಯುತ್ಪ್ರಭ ವಿಮಾನದಲ್ಲಿ ಶ್ರುತಪ್ರಭಾಂಕದೇವನಾದನು. ಅಲ್ಲಿಂದ ಮೂವರೂ ಚಿಂತಾಗತಿ, ಮನೋಗತಿ ಮತ್ತು ಚಪಲಗತಿಯಾಗಿ ಹುಟ್ಟಿದರು.

ಹೀಗೆ ಚಾರಣರು ಹೇಳಿದ ಪೂರ್ವವೃತ್ತಾಂತವನ್ನು ಕೇಳಿದ ಅಪರಾಜಿತನು ತಪಸ್ಸನ್ನು ಸ್ವೀಕರಿಸಿ, ದೇಹ ತ್ಯಾಗಮಾಡಿ ಇಪ್ಪತ್ತೆರಡು ಸಾಗರ ಆಯುಷ್ಯದಿಂದ ಕೂಡಿದ ಅಚ್ಯುತಸಾಂತಕರ ವಿಮಾನದಲ್ಲಿ ಅಚ್ಯುತೇಂದ್ರನಾಗಿ ಹುಟ್ಟಿದನು. ಅಲ್ಲಿಯೂ ಅವನ ಭೋಗತೃಷ್ಣೆ ಆರದಾಯಿತು.

ಜಂಬೂದ್ವೀಪದ ಭರತ ಕ್ಷೇತ್ರದಲ್ಲಿ ಕುರುಜಾಂಗಣ ದೇಶದಲ್ಲಿ ಹಸ್ತಿನಾಪುರವೆಂಬ ಪಟ್ಟಣವಿದ್ದಿತು. ಸುಖಸಂಪತ್ತಿನ ಆಗರವಾದ ಆ ಪುರದ ಅಧಿಪತಿ ಶ್ರೀ ಚಂದ್ರರಾಜ. ಆತನ ರಾಣಿ ಶ್ರೀಮತಿ. ಇವರಿಗೆ ಸುಪ್ರತಿಷ್ಠನೆಂಬ ಮಗನು ಹುಟ್ಟಿದನು. ಈತನಿಗೆ ಸುನಂದಾ ದೇವಿಯನ್ನು ಕೊಟ್ಟು ಮದುವೆಮಾಡಿದರು. ಇವರಿಗೆ ಸುದೃಷ್ಟನೆಂಬ ಮಗ ಹುಟ್ಟಿದನು. ರಾಜಸುಖದಿಂದ ಓಲಾಡುತ್ತಿದ್ದ ಸುಪ್ರತಿಷ್ಠನು ಒಂದುದಿನ ಕರುಮಾಡದಲ್ಲಿ ಮಲಗಿರುವಾಗ ಉಲ್ಕಾಪಾತವಾದುದನ್ನು ಕಂಡು, ರಾಜ್ಯವನ್ನು ತ್ಯಜಿಸಿ ತಪಸ್ಸನ್ನು ಮಾಡಿ ಉತ್ತರವಿಜಯಂತಿ ವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿದನು. ಈತನೇ ಮುಂದೆ ಹರಿವಂಶದ ಸಮುದ್ರ ವಿಜಯನಿಗೆ ಮಗನಾಗಿ ನೇಮಿನಾಥನಾಗಿ ಜನಿಸುವನು.

ಭರತ ಕ್ಷೇತ್ರದಲ್ಲಿ ಶೌರ್ಯಪುರವೆಂಬ ಪಟ್ಟಣವಿದ್ದಿತು. ಅದನ್ನು ಶೂರಸೇನನು ಆಳುತ್ತಿದ್ದನು. ಆತನ ಪತ್ನಿ ಧಾರಿಣಿ. ಇವರಿಗೆ ಅಂಧಕವೃಷ್ಣಿ, ನರಪತಿವೃಷ್ಣಿ ಎಂಬಿಬ್ಬರು ಮಕ್ಕಳಾದರು. ಅಂಧಕವೃಷ್ಣಿಗೆ ಸುಭದ್ರೆಯೂ, ನರಪತಿವೃಷ್ಣಿಗೆ ಪದ್ಮಾವತಿಯೂ ಹೆಂಡತಿಯರಾದರು. ಅಂಧಕವೃಷ್ಣಿಗೆ ಸಮುದ್ರ ವಿಜಯನೇ ಆದಿಯಾಗಿ ಹತ್ತುಜನ ಗಂಡುಮಕ್ಕಳೂ, ಕೊಂತಿ ಮಾದ್ರಿಯರೆಂಬ ಹೆಣ್ಣುಮಕ್ಕಳೂ ಆದರು. ಗಂಡುಮಕ್ಕಳಲ್ಲಿ ವಸುದೇವನೇ ಅತ್ಯಂತ ಕಿರಿಯವನು. ನರಪತಿವೃಷ್ಣಿಗೆ ಉಗ್ರಸೇನ, ಮಹಾಸೇನರೆಂಬ ಗಂಡುಮಕ್ಕಳೂ, ಗಾಂಧಾರಿಯೆಂಬ ಹೆಣ್ಣುಮಗಳೂ ಹುಟ್ಟಿದರು.

ಇತ್ತ ಹಸ್ತಿನಾವತಿಯಲ್ಲಿ ಕುರುವಂಶದಲ್ಲಿ ಪ್ರಸಿದ್ಧನಾದ ಪರಾಶರನಿಗೆ ಸತ್ಯವತಿಯಲ್ಲಿ ಯಶೋವಲ್ಲಭನಾದ ವ್ಯಾಸನು ಹುಟ್ಟಿದನು. ವ್ಯಾಸ ಮತ್ತು ಸುಭದ್ರೆಯರಿಗೆ ಧೃತರಾಷ್ಟ್ರ, ಪಾಂಡು, ವಿದುರರೆಂಬ ಮಕ್ಕಳಾದರು. ಪಾಂಡುವಿಗೆ ಕುಂತಿಯಲ್ಲಿ ಮೋಹಹುಟ್ಟಿ ವಿದ್ಯಾಧರನೊಬ್ಬನ ಕಾಮುಮುದ್ರಿಕೆಯಿಂದ 'ಗಂಡುನೊಣಂ ಅಡ್ಡಪಾರದಂತಿ'ಟ್ಟಿದ್ದ ಕುಂತಿಯ ಅಂತಃಪುರವನ್ನು ಪ್ರವೇಶಿಸಿ ಆಕೆಯೊಡನೆ ಕೂಡಿದನು. ಕುಂತಿಗೆ ಗರ್ಭೋದಯವಾಗಿ ಮಗು ಹುಟ್ಟಿತು. ಆ ಮಗುವನ್ನು ಹೊನ್ನಪೆಟ್ಟಿಗೆಯಲ್ಲಿರಿಸಿ ಯಮುನಾ ನದಿಯಲ್ಲಿ ಬಿಟ್ಟಳು. ಆದಿತ್ಯನೆಂಬ ಅರಸು ತನ್ನ ಉಪ್ಪರಿಗೆಯ ಮೇಲೆ ನಿಂತು ತೇಲಿಬರುತ್ತಿದ್ದ ಪೆಟ್ಟಿಗೆಯನ್ನು ತರಿಸಿ ತೆಗೆದುನೋಡಲು ಹೊಳೆಯುತ್ತಿದ್ದ ಮಗುವನ್ನು ನೋಡಿ ಸಂತೋಷಗೊಂಡು ರಾಣಿಯರನ್ನು ಕರೆಸಿ ಕಿವಿವಿಡಿದು ರಾಧೆಯ ಕೈಗೆ ಕೊಡಲು ಕರ್ಣ, ರಾಧೇಯ ಎಂಬ ಹೆಸರು ಬಂದುವು.

ಒಮ್ಮೆ ಸಾಹಸದಿಂದ ಪಾಂಡುವಿನ ಸಹವಾಸವನ್ನು ಪಡೆದ ಕುಂತಿಯ ವಿರಹತಾಪ ಅತಿಯಾದುದನ್ನು ತಿಳಿದ ಅಂಧಕವೃಷ್ಣಿಯು ಪಾಂಡುವಿಗೆ ಕುಂತಿಮಾದ್ರಿಯರನ್ನು ಕೊಟ್ಟು ಮದುವೆಮಾಡಿದನು. ಇವರಿಗೆ ಧರ್ಮ, ಭೀಮ, ಅರ್ಜುನ, ನಕುಲ, ಸಹದೇವರು ಹುಟ್ಟಿದರು. ಪರಾಕ್ರಮಶಾಲಿಯಾದ ಧೃತರಾಷ್ಟ್ರನಿಗೆ ನರಪತಿವೃಷ್ಣಿಯು ತನ್ನ ಮಗಳು ಗಾಂಧಾರಿಯನ್ನು ಕೊಟ್ಟು ಮದುವೆಮಾಡಿದನು. ಇವರಿಗೆ ದುರ್ಯೋಧನ, ದುಶ್ಶಾಸನ ಮೊದಲಾದ ನೂರ್ವರು ಮಕ್ಕಳಾದರು. ಹೀಗೆ ಹರಿವಂಶ, ಕುರುವಂಶಗಳು ಎರಡು ಸಮುದ್ರಗಳ ಸಂಗಮದಂತೆ ಕೂಡಿದುವು.

ಹೀಗಿರುವಲ್ಲಿ ಒಂದು ದಿನ ಗಂಧಮಾದನ ಪರ್ವತದಲ್ಲಿದ್ದ ಸುಪ್ರತಿಷ್ಠರೆಂಬ ಯತಿಪತಿಯನ್ನು ನೋಡಿ ಶೂರವೀರನು ವೈರಾಗ್ಯಪರನಾಗಿ ರಾಜ್ಯವನ್ನು ತ್ಯಜಿಸಿ ದೀಕ್ಷೆವಹಿಸಿದನು. ಸುಪ್ರತಿಷ್ಠನಿಗೆ ಸುದರ್ಶನನೆಂಬುವನು ಅತಿಯಾದ ಹಿಂಸೆಯನ್ನು ಕೊಟ್ಟುದನ್ನು ಕಂಡ ಶೂರವೀರನು, ಸುದರ್ಶನನು ಹಾಗೆ ಉಪದ್ರವವನ್ನು ಕೊಡಲು ಕಾರಣವೇನೆಂದು ಸುಪ್ರತಿಷ್ಠರನ್ನು ಕೇಳಲು, ಆತನು ಪೂರ್ವಭವದ ಕಥೆಯನ್ನು ಹೀಗೆ ಹೇಳಿದನು.

ಭರತಕ್ಷೇತ್ರದ ಚಂಪಾಪುರದಲ್ಲಿ ಸೂರದತ್ತ, ಸುದತ್ತ ಎಂಬಿಬ್ಬರು ವರ್ತಕರಿದ್ದರು. ಇವರಿಬ್ಬರು ವ್ಯಾಪಾರಕ್ಕೆ ಹೋಗಿ ಅಪಾರ ಹಣವನ್ನು ಸಂಪಾದಿಸಿ ಬಂದು ಸುಂಕವನ್ನು ಕೊಡಬೇಕಲ್ಲಾ ಎಂಬ ವ್ಯಥೆಯಿಂದ ಹಣವನ್ನು ಒಂದು ಪೊದರಿನಲ್ಲಿ ಬಚ್ಚಿಟ್ಟು ಹೋಗುವರು. ಅದು ಬೇರುಬಿಕ್ಕೆಗಳನ್ನು ಅರಸುತ್ತ ಬರುತ್ತಿದ್ದ ಶೌಂಡಿಕನೆಂಬ ಕಳ್ಳಸಿಗನಿಗೆ ದೊರೆಯಿತು. ಹರದರು ಮತ್ತೆ ಬಂದು ನೋಡುವಲ್ಲಿ ಹಣವಿಲ್ಲದುದನ್ನು ಕಂಡು ಒಬ್ಬರನ್ನೊಬ್ಬರು ಅನುಮಾನಿಸಿ ಇಬ್ಬರೂ ಹೊಡೆದಾಡಿ ಸತ್ತು ನರಕಕ್ಕೆ ಹೋಗುವರು. ಅನಂತರ ಇವರು ಟಗರುಗಳಾಗಿ, ಗೂಳಿಗಳಾಗಿ ಹುಟ್ಟಿ, ಜನ್ಮಾಂತರ ವೈರದಿಂದ ಹೋರಾಡಿ ಸತ್ತು ಕೋಡಗಗಳಾಗಿ ಜನ್ಮತಳೆದು ಅಲ್ಲಿಯೂ ಹೊಡೆದಾಡಿ ಒಂದು ಸಾಯುತ್ತದೆ, ಮತ್ತೊಂದು ಸಾಯುವ ಸ್ಥಿತಿಯಲ್ಲಿರುತ್ತದೆ. ಆಗ ಆಕಾಶದಿಂದ ಚಾರಣರು ಇಳಿದು ಬಂದು ಧರ್ಮೋಪದೇಶಮಾಡಲು, ಆ ಕಪಿಯು ಶುಭಸಂಸ್ಕಾರದಿಂದ ಸತ್ತು ಸೌಧರ್ಮಕಲ್ಪತರುವಿನಲ್ಲಿ ಚಿತ್ರಾಂಗದ ದೇವನಾಗಿ ಹುಟ್ಟಿ ಅಲ್ಲಿಂದ ಸುರಮ್ಯದೇಶದ ಪೌದನ ಪುರದರಸನಿಗೆ ಸುಪ್ರತಿಷ್ಠನೆಂಬ ಮಗನಾಗಿ ಜನಿಸುವನು.

ಇತ್ತ ಕಪಿಯಾಗಿ ಸತ್ತ ಸುದತ್ತನು ಸಿಂಧುತೀರದ ರುಸಿಪಳ್ಳಿಯಲ್ಲಿ ಮೃಗಾಯಣನೆಂಬ ಮುನಿಗೂ, ವಿಶಾಳೆಯೆಂಬ ಗೊರವತಿಗೂ ಗೌತಮನಾಗಿ ಹುಟ್ಟಿ, ಅಲ್ಲಿಂದ ಸುದರ್ಶದೇವನಾಗಿ ಉಪಸರ್ಗಮಾಡಿದನೆಂದು ಹೇಳಿದರು. ಇದನ್ನು ಕೇಳಿದ ಸುದರ್ಶನದೇವನು ಸದ್ದರ್ಶನವನ್ನು ಕೈಗೊಂಡನು. ಅಂಧಕವೃಷ್ಣಿಯೂ ವಿರಕ್ತನಾಗಿ ತಪಸ್ಸುಮಾಡಿ ಮೋಕ್ಷವನ್ನೈದಿದನು.

ಸಮುದ್ರ ವಿಜಯನೇ ಮೊದಲಾದ ಎಂಟುಜನ ಅಣ್ಣತಮ್ಮಂದಿರು ರಾಜ್ಯವಾಳುತ್ತಿರಲು, ಕಿರಿಯ ತಮ್ಮನಾದ ವಸುದೇವನು ತನ್ನ ರೂಪು ಮತ್ತು ಯೌವನದಿಂದ ಭೂಮಿಗೆ ಕಣ್ಣು ಮುಳ್ಳಾಗಿದ್ದನು. ಈತನ ವೀಣಾವಾದನಕ್ಕೆ ಮಾರುಹೋದ ಅಬಲೆಯರ ಸಂಖ್ಯೆ ಲಕ್ಷಕೋಟಿಯನ್ನು ಮೀರಿದ್ದಿತು. ಪುರಜನರು ಸಮುದ್ರವಿಜಯನಲ್ಲಿ ದೂರುತರಲು, ಆತನು ಉಪಾಯದಿಂದ ವಸುದೇವನನ್ನು ಅರಮನೆಯ ಒಳಗೇ ಇರುವಂತೆ ಮಾಡುವನು. ಆದರೆ, ಅಣ್ಣನ ಈ ಉಪಾಯವನ್ನು ಚೇಟಿಕೆಯಿಂದ ತಿಳಿದ ವಸುದೇವನು ಯಾರೂ ತಿಳಿಯದಂತೆ ಅರಮನೆಯಿಂದ ಹೊರಟು ಶ್ಮಶಾನಕ್ಕೆ ಬಂದು, ಅಲ್ಲಿ ತನ್ನ ಬಟ್ಟೆಯನ್ನು ತೆಗೆದಿಟ್ಟು ಚಿತೆಗೆ ಪ್ರವೇಶಿಸಿದವನಂತೆ ಹೆಜ್ಜೆಯ ಗುರುತುಗಳನ್ನು ಮಾಡಿ, ಅಲ್ಲಿಂದ ಹೊರಟು ಹೋಗುವನು.

ಹೀಗೆ ಶ್ಮಶಾನದಿಂದ ಹೊರಟ ವಸುದೇವನು ವಿಜಯಖೇಟ ನಗರಕ್ಕೆ ಬಂದು ಮಾವಿನ ಮರದಡಿಯಲ್ಲಿ ಮಲಗಿರಲು ಲಕ್ಷ್ಮಿಯಂತಿದ್ದ ಕನ್ನೆಯು ತನ್ನ ಕಾಲೊತ್ತುತ್ತಿದ್ದಳು. ಇವಳೇ ಮಗದಾಧಿಪತಿಯ ಮಗಳು ಶ್ಯಾಮಲೆ. ಈಕೆಯನ್ನು ವಸುದೇವನು ಮದುವೆಯಾಗಿ ಸುಖಸಂತೋಷದಿಂದ ಕೆಲವು ದಿನಗಳನ್ನು ಕಳೆಯುವನು. ಒಂದು ದಿನ ಶ್ಯಾಮಲೆಯು ವಿಷಮ ನೃತ್ಯಮಾಡಿ ಆಯಾಸದಿಂದ ಮಲಗಿರಲು ವಸುದೇವನು

ಮೆಲ್ಲನೆದ್ದು ಹೊರಹೊರಟು ಒಂದು ಕಾಡನ್ನು ಸೇರಿ, ಅಲ್ಲಿ ಬರುತ್ತಿದ್ದ ಮದಗಜವನ್ನೇರಿ ಆ ಪುರದರಸು ಅಶನಿವೇಗನ ಮಗಳಾದ ಶಾಲ್ಮಲಿದತ್ತೆಯನ್ನು ಮದುವೆಯಾಗುವನು. ಒಂದು ದಿನ ಪತಿಪತ್ನಿಯರು ವನಜಲಕೇಳಿಯಾಡಿ ಬಳಲಿ ದೇವದಂಪತಿಗಳಂತೆ ಸೌಧಾಗ್ರದಲ್ಲಿ ಪವಡಿಸಿರಲು, ಪೂರ್ವಭವ ವೈರದಿಂದ ಒಬ್ಬ ಖಚರನು ಭುಜಂಗಿಯ ಆಲಿಂಗನವನ್ನು ಬಿಡಿಸಿ ಪ್ರಿಗಂಧವನ್ನು ಕದ್ದೊಯ್ಯುವಂತೆ ಶಾಲ್ಮಲಿದತ್ತೆಯ ತೋಳ್ತೆಕ್ಕೆಯನ್ನು ತಪ್ಪಿಸಿ ವಸುದೇವನನ್ನು ಕೊಂಡೊಯ್ಯುತ್ತಿದ್ದನು. ಎಚ್ಚರಗೊಂಡ ಶಾಲ್ಮಲಿದತ್ತೆಯು ಗಂಡುದೆಯುಟ್ಟು ಕತ್ತಿಯನ್ನು ಹಿಡಿದು ಆಕಾಶಕ್ಕೆ ಹಾರಿ ಖಚರನ ಬೆನ್ನಟ್ಟಿದಳು. ಆಕೆಯ ಗರ್ಜನೆಗೆ ಹೆದರಿದ ಖಚರನು ವಸುದೇವನನ್ನು ಬೀಸಾಡಿ ಹೊರಟು ಹೋದನು. ಶಾಲ್ಮಲಿದತ್ತೆಯು ಗಂಡನನ್ನು ಅಂತು ಹಿಡಿದು ಬರುತ್ತಿರಲು, ಒಂದು ದಿವ್ಯಧ್ವನಿಯ ಆದೇಶದಂತೆ ಪತಿಯನ್ನು ಪರ್ಣಲಘು ವಿದ್ಯೆಯ ಸಹಾಯದಿಂದ ಚಂಪಾಪುರದ ಹೊರಭಾಗದ ಉದ್ಯಾನದಲ್ಲಿಳಿಸಿ ಹೊರಟುಹೋದಳು.

ವಸುದೇವನು ಆ ಚಂಪಾಪುರದರಸನ ಕೊಳ್‌ಮಗಳಾದ ಗಂಧರ್ವದತ್ತೆಯನ್ನು ವೀಣಾವಾದನದಿಂದ ಗೆಲ್ಲಲು ಸ್ವಯಂವರ ಮಂಟಪವನ್ನು ಸೇರಿದನು. ಈತನು ತನಗೆ ತಂದುಕೊಟ್ಟ ವೀಣೆಗಳಲ್ಲೆಲ್ಲವೂ ದೋಷವನ್ನು ಕಂಡುಹಿಡಿದನು. ಕೊನೆಗೆ ಸರಿಯಾದ ವೀಣೆಯಾವುದೆಂದು ಕೇಳಲು, ವಸುದೇವನು ಬಲಿಚಕ್ರವರ್ತಿ ಮತ್ತು ವಾಮನರ ಕಥೆಯನ್ನು ಹೇಳಿ, ಆಗ ರಾಗಾಲಾಪಕ್ಕೆಂದು ತಂದ ವೀಣೆಯ ವಂಶದ ವೀಣೆಯನ್ನು ತನ್ನಿರೆನ್ನಲು, ವಸುದೇವನ ವೀಣಾ ವೈದಗ್ಧ್ಯತೆಗೆ ಮೆಚ್ಚಿದ ಗಂಧರ್ವದತ್ತೆಯು ಆತನಿಗೆ ಮಾಲೆಯನ್ನು ಹಾಕಿದಳು.

ಇಲ್ಲಿ ವಸುದೇವನು ಕೆಲವು ದಿನ ಸುಖವಾಗಿದ್ದು ಭಟರಿಬ್ಬರಿಂದ ರೋಹಿಣಿಯೆಂಬುವಳ ಸ್ವಯಂವರ ವಾರ್ತೆಯನ್ನು ಕೇಳಿ, ಮಾಗಧಿಗೆ ಹೋಗಿ, ಮಧುರಾತಿಮಧುರವೂ, ಚಿತ್ರಾತಿಚಿತ್ರವೂ ಆದ ವಾದನದಿಂದ ಆಕೆಯನ್ನು ಗೆದ್ದು, ಅಸೂಯೆಯಿಂದ ಮೇಲೇರಿಬಂದ ರಾಜರನ್ನು ಹತ್ತಿಕ್ಕಿ ರೋಹಿಣಿ ಮತ್ತು ಹದಿನಾರು ಸಾವಿರ ಕನ್ಯಾರತ್ನಗಳನ್ನು ಸ್ವೀಕರಿಸಿ ಸುಖವಾಗಿದ್ದನು. ರೋಹಿಣಿ ಮತ್ತು ವಸುದೇವರಿಗೆ ಬಲರಾಮನು ಹುಟ್ಟಿದನು.

ರೋಹಿಣಿಯ ಸ್ವಯಂವರ ಸಮಯದಲ್ಲಿ ತೋರಿಸಿದ ವಸುದೇವನ ಬಿಲ್ಲಾಣ್ಮೆಗೆ ಮೆಚ್ಚಿದ ಹಲವರು ಬಂದು ಈತನ ಶಿಷ್ಯರಾಗಿ ಬಿಲ್ವಿದ್ಯೆಯನ್ನು ಕಲಿತರು. ಹೀಗೆ ಬಂದವರಲ್ಲಿ ಕಂಸನೂ ಒಬ್ಬನಾಗಿದ್ದನು.

ಪೌದನಪುರದರಸು ಸಿಂಹರಥನೆಂಬುವನು ಬಹಳ ಪರಾಕ್ರಮಿಯಾಗಿದ್ದನು. ಈತನನ್ನು ಗೆಲ್ಲಲು ಹೋದ ಜರಾಸಂಧನು ಸೋತು ಹಿಂದಿರುಗಿ ಆ ಸಿಂಹರಥರನನ್ನು ಹಿಡಿದುತಂದವರಿಗೆ ಮಗಳನ್ನೂ, ಬೇಡಿದ ನಾಡನ್ನೂ ಕೊಡುವೆನೆಂದು ಘೋಷಣೆ ಮಾಡಿಸಿದನು. ಇದನ್ನು ಕೇಳಿದ ಕಂಸನು ವಸುದೇವನಿಗೆ ತಿಳಿಸಲು, ವಸುದೇವನು ಸಿಂಹರಥನನ್ನು ಹಿಡಿದುತರಲು ಹೊರಟನು. ಆದರೆ, ಕಂಸನು ಆತನನ್ನು ತಡೆದು

ತಾನೇ ಹೋಗಿ ಸಿಂಹರಥನನ್ನು ಜರಾಸಂಧನಿಗೊಪ್ಪಿಸಲು, ಜರಾಸಂಧನು ವಸುದೇವನನ್ನು ಸನ್ಮಾನಿಸಿ, ಇಷ್ಟಬಂದುದನ್ನು ಬೇಡಿಕೊಳ್ಳೆಂದನು. ವಸುದೇವನು ಈಕಾರ್ಯ ತನ್ನದಲ್ಲವೆಂದು ಕಂಸನನ್ನು ತೋರಿಸಿದನು. ಜರಾಸಂಧನು ಈತನು ಕೌಶಾಂಬಿಯ ಕಳ್ಳವತಿ ಮಂಡೋದರಿಯ ಮಗನೆಂದು ಕೇಳಿ, ಮಾಂಗುಲಿಗರ ವೇಷದಲ್ಲಿರುವ ಕಂಸನು ಉತ್ತಮವಂಶದ ರಾಜಕುಮಾರನಿರಬೇಕೆಂದು ಬಗೆದು ಅವನ ತಾಯನ್ನು ಕರೆಸಿದನು. ಆಕೆಯು ಇವನು ತನ್ನ ಮಗನಲ್ಲವೆಂದೂ ಕಾಳಿಂದಿಯಲ್ಲಿ ಸಿಕ್ಕಿದ ಮಗುವೆಂದೂ ಹೇಳಿದಳು. ಇದರಿಂದ ಸಂತೋಷಗೊಂಡ ಜರಾಸಂಧನು ತನ್ನ ಮಗಳು ಜೀವಂಜಸೆಯನ್ನೂ, ಬೇಡಿದ ನಾಡನ್ನೂ ಕೊಟ್ಟು ಕಳುಹಿದನು. ಕಂಸನು ಮಧುರಾಪುರಕ್ಕೆ ಹೋಗಿ ತನ್ನ ತಂದೆ ಉಗ್ರಸೇನನನ್ನು ಸೆರೆಯಲ್ಲಿಟ್ಟು, ವಸುದೇವನಿಗೆ ರಾಜ್ಯವನ್ನು ವಹಿಸಿ, ದೇವಕಿಯನ್ನು ಮದುವೆಮಾಡಿದನು.

ವಸುದೇವನು ದೇವಕಿಯೊಡನೆ ಸುಖವಾಗಿ ಕಾಲಕಳೆಯುತ್ತಿರಲು, ಒಂದುದಿನ ಅತಿಮುಕ್ತಕರೆಂಬ ಮುನಿಗಳು ಚರಿಗೆಗೆ ಬಂದರು. ಕಂಸನ ಹೆಂಡತಿ ಜೀವಂಜಸೆಯು ಅವರನ್ನು ಅಪಮಾನಪಡಿಸಲು, ಅವರು 'ದೇವಕಿಯ ಗರ್ಭವೇ ನಿಮಗೆ ಮೃತ್ಯುವಾಗಲಿ' ಎಂದು ಶಾಪವಿತ್ತರು.

ಇದನ್ನು ತಿಳಿದ ಕಂಸನು ಭಯಸ್ಥನಾಗಿ ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು, ಆಕೆಯಲ್ಲಿ ಹುಟ್ಟುವ ಮಕ್ಕಳನ್ನು ಕೊಲ್ಲುವ ಏರ್ಪಾಟುಮಾಡಿದನು. ದೇವಕಿಯು ಹೆತ್ತ ಮಕ್ಕಳನ್ನು ನೈಗಮದೇವನು ಕೊಂಡೊಯ್ದು ಮಾಯಾಶಿಶುಗಳನ್ನು ಇಟ್ಟನು. ಕಂಸನು ಆ ಮಾಯಾಶಿಶುಗಳನ್ನು ಕೊಂದು ಸಂತಸದಿಂದಿದ್ದನು. ಕೊನೆಗೆ ಭಾದ್ರಪದದ ಅಷ್ಟಮಿಯ ನಡುರಾತ್ರಿಯಲ್ಲಿ ದೇವಕಿಯು ಕೃಷ್ಣನಿಗೆ ಜನ್ಮವಿತ್ತಳು.

ಹುಟ್ಟಿದ ಮಗುವನ್ನು ವಸುದೇವನು ತೆಗೆದುಕೊಂಡು ಹೋಗಿ ಮಧುರಾಪುರದ ಗೊಲ್ಲರಹಳ್ಳಿಯ ನಂದನಿಗೆ ಕೊಟ್ಟು, ಆತನಿಗೆ ಬೇಡವಾದ ಹೆಣ್ಣು ಮಗುವನ್ನು ತಂದು ದೇವಕಿಯ ಬಳಿ ಮಲಗಿಸಿದನು. ಕಂಸನು ಬಂದು ನೋಡಿ ಹೆಣ್ಣು ಮಗುವನ್ನು ಕೊಲ್ಲದೆ ಮೂಗನೊತ್ತಿ ಹೋದನು. ಆಕೆಯು ವಿಂಧ್ಯವಾನಸೆಯೆಂಬ ದೇವತೆಯಾದಳು.

ನಂದನ ಮನೆಯಲ್ಲಿ ಕೃಷ್ಣನು ಬೆಳೆಯುತ್ತಿದ್ದುದನ್ನು ತಿಳಿದ ಕಂಸನು ಆತನ ನಾಶಕ್ಕೆ ಉಪಾಯವನ್ನು ಯೋಚಿಸುತ್ತಿರುವಲ್ಲಿ, ಪೂರ್ವಭವದ ಎಂಟುಜನ ದೇವತೆಗಳು ಬಂದು ಮಾಡಬೇಕಾಗಿರುವ ಕೆಲಸವನ್ನು ಕೇಳಿದರು. ಕಂಸನು ಅವರಿಗೆ ಕೃಷ್ಣನನ್ನು ಕೊಲ್ಲುವಂತೆ ಹೇಳಿದನು. ಆ ದೇವತೆಗಳು ಪೂತನಿಯಾಗಿ, ಕಾಕಾಸುರನಾಗಿ, ಶಕಟವಾಗಿ, ಕುದುರೆಯಾಗಿ, ಮತ್ತಿಯ ಮರವಾಗಿ, ತಾಳೆಯ ಮರವಾಗಿ, ಕತ್ತೆಯಾಗಿ ಕೃಷ್ಣನನ್ನು ಕೊಲ್ಲಹೋಗಿ ತಾವೇ ಮೃತ್ಯುವಿಗೀಡಾದರು.

ಕಂಸನು ಮುನಿಗಳಿಂದ ಯಾರು ನಾಗಶಯ್ಯೆಯೇರಿ, ಶಾರ್ಙ್ಗಚಾಪವನ್ನು ಹೆದೆಯೇರಿಸಿ, ಪಾಂಚಜನ್ಯವನ್ನು ಊದುವನೋ ಅವನು ಚಕ್ರವರ್ತಿಯಾಗುವನೆಂದು ತಿಳಿದು, ಆಗಲೇ ಅದನ್ನು ತಿಳಿಯಬೇಕೆಂದು ಈ ಮೂರು ಕೆಲಸಮಾಡಿದವನಿಗೆ ತನ್ನ ಮಗಳನ್ನು ಕೊಡುವೆನೆಂದು ಘೋಸಣೆಯಿಡಿಸಿದನು. ಕೃಷ್ಣನು ಎಲ್ಲ ಕಾರ್ಯಗಳನ್ನು ಮಾಡಿದನು. ಅದನ್ನು ಕಂಡ ಕಂಸನು ಮೆಚ್ಚಿದವನಂತೆ ನಟಿಸಿ ನಾಗಹ್ರದದೊಳಿರುವ ಸಾವಿರೆಸಳ ತಾವರೆಯನ್ನು ತರಹೇಳಿದನು. ಕೃಷ್ಣನು ಲೀಲಾಜಾಲವಾಗಿ ಹೋಗಿ ಅದನ್ನು ತಂದನು.

ಯಾವ ವಿಧದಲ್ಲಿಯೂ ಶತ್ರುವು ನಾಶವಾಗದಿದ್ದುದನ್ನು ಕಂಡ ಕಂಸನು ಚಾಣೂರಜಟ್ಟಿಯನ್ನು ಕಳುಹಿಸಿದನು. ಇದಕ್ಕೆ ಮೊದಲು ಕುವಲಯಾಪೀಡನೆಂಬ ಮದಗಜವನ್ನು ಕೃಷ್ಣನಮೇಲೆ ಬಿಟ್ಟರು. ಕೃಷ್ಣನು ಅದನ್ನು ಮುರಿದನು. ಇದರಿಂದ ಕಂಸನ ಮುಖ ಬಾಡಿತು. ಅನಂತರ ಚಾಣೂರ ಬಂದನು. ಬಹುಹೊತ್ತು ದ್ವಂದ್ವ ಯುದ್ಧವಾದಮೇಲೆ ಕೃಷ್ಣನ ಕೈಯಲ್ಲಿ ಚಾಣೂರನೂ ಹತನಾದನು. ಮುಷ್ಟಿಕನು ಕೃಷ್ಣನ ಮೇಲೇರಿಬಂದನು. ಆದರೆ, ಆತನೂ ಚಾಣೂರನ ದಾರಿಯನ್ನೇ ಹಿಡಿಯ ಬೇಕಾಯಿತು. ಉಳಿದ ಎಲ್ಲ ಜಟ್ಟಿಗಳೂ ಒಟ್ಟಾಗಿ ಕೃಷ್ಣನನ್ನು ಮುತ್ತಿದರು. ಕೃಷ್ಣನು ಅವರೆಲ್ಲರನ್ನೂ ಸದೆಬಡಿದನು. ಆಗ ಕಂಸನ ಚತುರಂಗ ಸೈನ್ಯವು ಬರಲು, ಕೃಷ್ಣನೂ ಬಲರಾಮನೂ ತಮ್ಮ ಸೈನ್ಯವನ್ನು ಕೈವೀಸಿ ಕರೆದು ಹೋರಾಡಿದರು. ಕೃಷ್ಣನು ಕಂಸನನ್ನು ಹಿಡಿದು ಸೀಳಿಬಿಸುಟನು. ದೇವತೆಗಳು ಹೂಮಳೆಗರೆದರು. (ಅರ್ಥನೇಮಿಗೆ ಇಲ್ಲಿಗೆ ನಿಲ್ಲುತ್ತದೆ.)

ಕಥಾವ್ಯತ್ಯಾಸ

ನೇಮಿಚಂದ್ರನು ಜಿನಸೇನ, ಗುಣಭದ್ರಾಚಾರ್ಯರ ಕಥೆಯನ್ನೇ ಅನುಸರಿಸಿ ದ್ದರೂ, ಕೆಲವುಕಡೆ ಕಥೆಯನ್ನು ಬಿಟ್ಟು, ಕೆಲವುಕಡೆ ಕಥೆಯನ್ನು ಹಿಗ್ಗಿಸಿ ಅಥವಾ ಕುಗ್ಗಿಸಿ ಕಾವ್ಯವನ್ನು ರಸವತ್ತಾಗಿ ಮಾಡಿದ್ದಾನೆ. ಅಲ್ಲಲ್ಲಿ ಬರುವ ಸ್ವತಂತ್ರ ಕಲ್ಪನೆ ಗಳು ಸಹೃದಯರನ್ನು ಆಕರ್ಷಿಸಿ ಕವಿಯ ಬಗ್ಗೆ ಇರುವ ಗೌರವವನ್ನು ಅಧಿಕಗೊಳಿ ಸುತ್ತವೆ. ಇದಕ್ಕೆ ಕೆಲವು ಭಾಗಗಳನ್ನು ನೋಡಬಹುದು.

ಉತ್ತರಪುರಾಣದಲ್ಲಿ ಅರ್ಹದ್ದಾಸನೂ ಜಿನದತ್ತೆಯೂ ಸುಖವಾಗಿ ಕಾಲಕಳೆ ಯುತ್ತಿರುವಲ್ಲಿ ಜಿನದತ್ತೆಯು

ಅಷ್ಟಾಹ್ನಿಕಾ ಮಹಾಪೂಜಾಂ ವಿಧಾಯ ನರಪಪ್ರಿಯಾ ।
ಕುಲಸ್ಯ ತಿಲಕಂ ಪುತ್ರಂ ಲಪ್ಸೀಯಾಹಮಿತಿ ಸ್ವಯಂ ॥ [1]

ಎಂದರೆ, 'ಅಷ್ಟಾಹ್ನಿಕ ಮಹಾಪೂಜೆಯನ್ನು ಮಾಡಿ, ವಂಶಕ್ಕೆ ತಿಲಕನಾದ ಪುತ್ರನನ್ನು ಪಡೆಯುವೆನೆಂದು ಬಗೆಯುವಳು.' ಅನಂತರ ಗರ್ಭವನ್ನು ಧರಿಸುವಳು.

---

1. ಉತ್ತರಪುರಾಣ—ಶ್ರೀ ಎ ಶಾಂತರಾಜಶಾಸ್ತ್ರಿ. ಪುಟ [illegible]೦[illegible]—ಶ್ಲೋಕ ೬.

ಮೂಲದಲ್ಲಿರುವ ಇಷ್ಟು ವಿಷಯ ನೇಮಿಚಂದ್ರನಲ್ಲಿ ವಿಸ್ತಾರವಾಗಿ ವರ್ಣಿತ ವಾಗಿದೆ. ಮಕ್ಕಳಿಲ್ಲದ ಜಿನದತ್ತೆಯು ಮಕ್ಕಳನ್ನು ಹಂಬಲಿಸುವಿಕೆ, ಮಲಧಾರಿ ಸ್ವಾಮಿಗಳು ಬಂದು ಹರಸುವಿಕೆ ಮೊದಲಾದುವೆಲ್ಲವನ್ನೂ ಕವಿಯು ಸಹಜವಾಗಿ ಮತ್ತು ವಿವರವಾಗಿ ಚಿತ್ರಿಸಿದ್ದಾನೆ. ಇಲ್ಲಿ ಮಲಧಾರಿಸ್ವಾಮಿಯು ಬಂದು ಆಶೀರ್ವದಿ ಸುವುದು ನೇಮಿಚಂದ್ರನ ಸ್ವಂತ ಕಲ್ಪನೆ.

ಮುಂದೆ ತನ್ನ ತಂದೆಯು ಮುಕ್ತಿಗೆ ಸಂದನೆಂಬ ವಾರ್ತೆಯನ್ನು ಕೇಳಿದ ಅಪರಾಜಿತನು ಮೂರ್ಛೆಹೋಗಿ, ಮೂರ್ಛೆಯಿಂದೆಚ್ಚತ್ತು ಸುವರ್ಣ ಬೆಟ್ಟವನ್ನು ಹತ್ತಿ ಸ್ವರ್ಗವನ್ನು ನೋಡುವೆನೆಂದು ಹೊರಟಾಗ, 'ಈ ನಿನ್ನ ಇಷ್ಟಾರ್ಥವು ನಿನ್ನ ಏಳನೆಯ ಜನ್ಮಕ್ಕೆ ಆಗುವುದು' ಎಂದು ಅಶರೀರವಾಣಿಯಾಗುವುದು ಕವಿಯ ಹೊಸ ಸೃಷ್ಟಿಯಾಗಿದೆ.

ಉತ್ತರಪುರಾಣದಲ್ಲಿ ಸಮುದ್ರರಾಜನು ಉಪಾಯದಿಂದ ತಮ್ಮ ವಸುದೇವನನು ಅರಮನೆಯಿಂದ ಹೊರಹೋಗದಂತೆ ಮಾಡಿದುದನ್ನು ನಿಪುಣಮತಿಯೆಂಬುವನು ವಸುದೇವನಿಗೆ ನಡೆದ ವಿಷಯವನ್ನು ನೇರವಾಗಿ ತಿಳಿಸಿಬಿಡುತ್ತಾನೆ. ಚಾವುಂಡರಾಯ ಪುರಾಣದಲ್ಲಿ ಇದೇ ನಿಪುಣಮತಿಯೆಂಬ ಲೆಂಕನು ವಸುದೇವನಿಗೆ ಆತನ ಅಣ್ಣನು ಸೆರೆ ಯಲ್ಲಿಟ್ಟಿರುವನೆಂದು ತಿಳಿಸುತ್ತಾನೆ. ಆದರೆ ನೇಮಿನಾಥಪುರಾಣದಲ್ಲಿ ಕವಿಯು ಇದನ್ನು ಅತ್ಯಂತ ರಸವತ್ತಾಗಿ ಚಿತ್ರಿಸಿದ್ದಾನೆ. ಅರಮನೆಯಿಂದ ಹೊರ ಹೋಗ ದಂತಿದ್ದ ವಸುದೇವನು ಅಣ್ಣನು ತನ್ನನ್ನು ಏಕೆ ಹೀಗೆ ಮಾಡಿರುವನೆಂಬುದು ತಿಳಿದಿರಲಿಲ್ಲ. ಆತನು ಸಂತೋಷದಿಂದ ಕಾಲಕಳೆಯುತ್ತಿರುವಲ್ಲಿ, ಒಂದು ದಿನ ಆತನು ಅಂತಃಪುರದ ಒಬ್ಬ ವಾಚಾಳಿ ಚೇಟಿಕೆಯನ್ನು ಹಿಡಿದು ಹಿಂಸಿಸಿ ಬಲಾತ್ಕಾರ ದಿಂದ ಕಾರಣವನ್ನು ತಿಳಿಯುತ್ತಾನೆ.

ಚಾವುಂಡರಾಯಪುರಾಣ ಮತ್ತು ಉತ್ತರಪುರಾಣಗಳಲ್ಲಿ ಶಾಲ್ಮಲಿದತ್ತೆಯು ಪತಿ ವಸುದೇವನನ್ನು ಖೇಚರನಿಂದ ಬಿಡಿಸಿಕೊಂಡು ತನ್ನ ಪರ್ಣಲಘುವಿದ್ಯೆಯ ಸಹಾಯದಿಂದ ಚಂಪಾಪುರದ ಸಮೀಪದ ಸರೋವರದ ದ್ವೀಪದ ಮಧ್ಯದಲ್ಲಿ ಇಳಿಸು ವಳು. ಹೀಗೆ ಪತಿಯನ್ನು ಕದ್ದೊಯ್ಯುತ್ತಿದ್ದ ಖೇಚರನನ್ನು ಬೆನ್ನಟ್ಟಿ ಬಿಡಿಸಿಕೊಂಡ ಶಾಲ್ಮಲಿದತ್ತೆಯು ಚಂಪಾಪುರದ ಬಳಿ ಪತಿಯನ್ನು ಇಳಿಸಲು ಕಾರಣವೇನೆಂಬುದು ಇಲ್ಲಿ ತಿಳಿಯುವುದಿಲ್ಲ. ಇದು ಮೂಲದಲ್ಲಿ ಗೂಢವಾಗಿ ಹಾಗೆಯೇ ಉಳಿಯುತ್ತದೆ. ಆದರೆ ನೇಮಿಚಂದ್ರನ ಕಲ್ಪನೆಯಿಂದ ಅದು ಸುಸ್ಪಷ್ಟವಾಗಿದೆ. ಖಚರನಿಂದ ಬೀಸಾಡಲ್ಪಟ್ಟ ವಸುದೇವನನ್ನು ಶಾಲ್ಮಲಿದತ್ತೆಯೇ ಅಂತುಕೊಂಡಂತೆಯೂ, ಮತ್ತೆ ಆಕಾಶವಚನದ ಆದೇಶದಂತೆ ಪತಿಯನ್ನು ಚಂಪಾಪುರದ ಬಳಿ ಇಳಿಸಿದಂತೆಯೂ ಮಾಡಿರುವ ಕವಿಯ ಕಲ್ಪನೆ ಸಮಂಜಸವಾಗಿದೆ.

ಹಿಂಗೆಯೇ, ನಂದಗೋಪ ಮತ್ತು ವಸುದೇವನು ಬರುವ ಒಂದು ಸಂದರ್ಭ ವನ್ನು ನೋಡಬಹುದು. ಉತ್ತರಪುರಾಣ ಮತ್ತು ಚಾವುಂಡರಾಯ ಪುರಾಣಗಳಲ್ಲಿ

ಕಂದಗೋಪನೂ ವಸುದೇವನೂ ಒಬ್ಬರನ್ನೊಬ್ಬರು ಸಂಧಿಸಿ ಮಕ್ಕಳನ್ನು ಅದಲು ಬದಲು ಮಾಡಿಕೊಳ್ಳುವರು. ಆದರೆ ಇದನ್ನು ನೇಮಿಚಂದ್ರನು ಹೆಚ್ಚು ರಸವತ್ತಾಗಿ, ಆಕರ್ಷಕವಾಗಿ ಚಿತ್ರಿಸಿದ್ದಾನೆ.

ವಸುದೇವ ಬಲರಾಮರು ಹುಟ್ಟಿದ ಶಿಶು ಕೃಷ್ಣನನ್ನು ಎತ್ತಿಕೊಂಡು ಬರುತ್ತಿರಲು, ಅಷ್ಟರಲ್ಲಿ ದೀವಿಗೆಯನ್ನು ಹಿಡಿದು ಯಾರೋ ಬರುತ್ತಿರುವುದನ್ನು ಕಂಡು, ಸಹಜವಾಗಿ ಕಂಸನ ಭಯದಿಂದ ಕೂಡಿದ ಇವರು 'ತಮ್ಮ ಪಜ್ಜೆವಿಡಿದು ಬೆನ್ನಟ್ಟಿ ಬಂದ ಕಂಸನೆಂದೇ ಬಗೆದು' ಭಯಗೊಂಡು ಮುಂದೊಂದು ದೇವಾಲಯ ವಿದ್ದುದನ್ನು ಕಂಡು ಅಲ್ಲಿ ಹೊಕ್ಕರು. ನಂದಗೋಪನು ಹುಟ್ಟಿದ ಒಂದು ಹೆಣ್ಣುಕೂಸನ್ನು ತಂದು ದೇವತೆಯನ್ನು ಕುರಿತು 'ನನ್ನ ಹೆಂಡತಿ ಗಂಡನ್ನು ಬೇಡಿ ಕೊಂಡರೆ, ನೀನು ಹೆಣ್ಣನ್ನು ಕೊಟ್ಟೆ.' ನೀನು ಕೊಟ್ಟ ಹೆಣ್ಣನ್ನು ನೀನೇ ತೆಗೆದುಕೊ. 'ನನ್ನ ಪೆಂಡತಿ ನೋಂತುಂ ಪಸಿದುಂ ಪಾಟಿಂಬಟ್ಟುಂ ಕೊಟ್ಟ ಪರಕೆಯಂ ಮಗುಳೆ ಕುಡು. ಕುಡದಂದು ನಿನ್ನನೀ ಮನೆಯೊಳಗೆ ದಿಟದ ದೇವತೆಯಂತೆ ಮಲಗಿ ಮಲ್ಲಂತಿಗಿಱಿದು ಕುಳ್ಳಿರಲೀಯೆಂ. ವಿಷ್ಣುಗುಪ್ತಂ ಲಿಂಗದ ನೆತ್ತಿಯೊಳಿಕ್ಕಿದಂತೆ ಪಿರಿಯ ಕರಿಯ ಕಲ್ಲನೆತ್ತಿ ತಂದು ನಿನ್ನ ನೆತ್ತಿಯೊಳಿಕ್ಕಿ ತುಱುಕಾರ್ತಿಯನಾಳಿ ಗೊಂಡು ನುಣ್ಣನೆ ನುಂಗಿದುದೆಲ್ಲಮಂ ಮೂಗಿಂ ಬಾಯಿಂ ಕಾಱಿಸುವೆನೆಂದು ಮಿಾಸೆಯಂ ಕಡಿದು ಕೂಸನೀಡಾಡಿ' ಹೋಗುವ ನಂದನನ್ನು ವಸುದೇವನು ಕರೆದು ಗಂಡುಗೂಸನ್ನು ಕೊಡುವನು. ನಂದನು ತನಗಂಜಿದ ದೇವತೆಯೇ ಕರೆದು ಕೊಟ್ಟ ಳೆಂದು ಬಗೆದು ಸಂತೋಷದಿಂದ ಹಿಗ್ಗಿ, ಮನೆಗೆ ಹಿಂದಿರುಗಿ ಹೆಂಡತಿಗೆ ಗಂಡು ಮಗುವನ್ನು ಒಪ್ಪಿಸುವನು. ಈ ಭಾಗ ಎಷ್ಟು ರಸವತ್ತಾಗಿದೆಯೆಂಬುದು ಕಾವ್ಯವನ್ನು ಓದಿದಾಗ ಹೆಚ್ಚು ಅರಿವಾಗುತ್ತದೆ.

ಹೀಗೆ ಮೂಲದ ವಿಷಯ ನೇಮಿಚಂದ್ರನಲ್ಲಿ ಮಾರ್ಪಾಟಾಗಿ ಅತ್ಯಂತ ರಸವತ್ತಾದ ಸನ್ನಿವೇಶಗಳು ನಿರ್ಮಿತವಾಗಿವೆ.

ಕಾವ್ಯ ವಿಮರ್ಶೆ

ನೇಮಿನಾಥಪುರಾಣವು ಲೀಲಾವತಿ ಕಾವ್ಯಕ್ಕಿಂತ ಉತ್ತಮವಾದ ಕಾವ್ಯ. ಈ ಪುರಾಣವು ಪೂರ್ಣವಾಗಿ ದೊರೆತಿದ್ದರೆ ಉಳಿದ ಎಲ್ಲ ಕನ್ನಡ ನೇಮಿನಾಥಪುರಾಣಗಳಿ ಗಿಂತ ಉತ್ತಮ ಕಾವ್ಯವಾಗಿರುತ್ತಿತ್ತೆಂದು ದೊರೆತ ಈ ಅರ್ಧ ಭಾಗವನ್ನು ನೋಡಿ ಹೇಳಬಹುದಾಗಿದೆ.

ಈ ಭವಾವಳಿಗಳ ಗೊಂದಲದಲ್ಲಿಯೂ ನೇಮಿಚಂದ್ರನ ಕಾವ್ಯಪ್ರತಿಭೆಯಿಂದ ಕಾವ್ಯವು ರಸಮಯವಾಗಿದೆ. ಈ ರಸವತ್ತಾದ ಸನ್ನಿವೇಶಗಳಿರುವುದರಿಂದಲೇ ಕಾವ್ಯ ವನ್ನು ಓದುವ ಸಹೃದಯರಿಗೆ ಭವಾವಳಿಯ ಯಾವ ಗೊಂದಲವೂ ಅರಿವಾಗುವುದಿಲ್ಲ

ಕವಿಯ ವಾಕ್ಚತುರತೆ, ಪದಜೋಡಣೆ ಎಲ್ಲರೂ ಮೆಚ್ಚುವಂತಹವು. ಇದಕ್ಕೆ ಉದಾಹರಣೆಯಾಗಿ ಕೆಲವು ಸಂದರ್ಭಗಳನ್ನು ನೋಡಬಹುದು.

ಇದ್ದೊಬ್ಬ ಮಗನು ಕೆಟ್ಟ ಸಹವಾಸಕ್ಕೆ ಬಿದ್ದು ಕ್ಷತ್ರಶಾಸನದಲ್ಲಿ ಶೂಲಕ್ಕೇರಿಸಲ್ಪಟ್ಟುದನ್ನು ಕಂಡ ತಾಯಿಯ ಕರುಳು ಕತ್ತರಿಸುವಂತಹ ಆ ವೇದನೆಯನ್ನು ಕವಿಯು ಹೃದಯಂಗಮವಾಗಿ ವರ್ಣಿಸಿದ್ದಾನೆ. ಆ ತಾಯಿಯು ಮಗನನ್ನು ಕುರಿತು

ಅಂಗಡಿಯಾನೆಯೆ ಬೀದಿಯ
ಸಿಂಗನೆ ಲಲನೆಯರ ಕಣ್ಣ ಪುಣ್ಯಮೆ ನಿನ್ನಂ
ಜಂಗಮವಿಷಮಂ ಪಿಡಿದಾ
ವಂಗಡ ಪಿತೃವನಕೆ ತುಡಿಸಿದ ಬಂಟಂ ॥ ೫–೩೪ ॥

ಊಡಿದೆನೋದಲಿಟ್ಟೆನುಡಕಲ್ವುದುಮಣ್ಣನ ಕೂಸುದಂದೆನಾಂ
ಬೇಡೆನೆ ವಿಾಱಿ ಕಳ್ಳರೊಡನಾಡಿಯೆ ಪೆತ್ತ ಬಸಿರ್ಗೆ ಸಂಕಸ।
ಮಾಡಿದೆಯಿಂದಿದೇ ಮಗನೆ ಪಣ್ಣನೆ ನುಣ್ಕೊಗದಲ್ಲಿ ಮಿಾಸೆಗಳ್
ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸಸೂಲಮಿದೆಂತು ಮೂಡಿತೋ
॥ ೫–೩೫ ॥

ಎಂದು ಮೊದಲಾಗಿ ಹಲುಬುವುದು ಎಲ್ಲರ ಮನವನ್ನೂ ಸೂರೆಗೊಳ್ಳುತ್ತದೆ.

ಮತ್ತೊಂದು ಸಂದರ್ಭವೆಂದರೆ, ವಸುದೇವನೂ ಶಾಲ್ಮಲಿದತ್ತೆಯೂ ದೇವದಂಪತಿಗಳಂತೆ ಪವಡಿಸಿರಲು, ಖೇಚರನೊಬ್ಬನು ವಸುದೇವನನ್ನು ಕದ್ದೊಯ್ಯುತ್ತಿದ್ದನು. ಇದನ್ನು ಎಚ್ಚರಗೊಂಡ ಸತಿ ಶಾಲ್ಮಲಿದತ್ತೆಯು ಪತಿಯನ್ನು ಕದ್ದೊಯ್ಯುವುದನ್ನು ಕಂಡು ದುಃಖಿಸಲಿಲ್ಲ, ಹುಯ್ಯಲಿಡಲಿಲ್ಲ.

ಒಕ್ಕ ನೆಱಂಗಿನಿಂ ಮೊಲೆಯ ಗಾಳಿಸಿ ಗಂಡುಡೆಯುಟ್ಟು ಪೆಚ್ಚುಗಂ
ಟಕ್ಕೆ ಬಟಲ್ದ ಬಲ್ಪಿಣಿಲನೊತ್ತಿ ದೆಱಂಕೆವೊಲೆತ್ತಿ ಕೊಂಡೆರಟಿಱ್
ಪಕ್ಕದ ಬಾಳು ಮತ್ತಪರಮುಂ ಪೊಳೆಯುತ್ತಿರೆ ಪಾಱಿದಳ್ ನಭೋ
ಗ್ರಕ್ಕತಿವೇಗದಿಂ ಖಚರಕಾಮಿನಿ ಕಾಮನ ವೀರಲಕ್ಷ್ಮಿವೊಲ್ ॥೬–೧೦॥
ವ॥ ಅಂತು ಪಾಱಿ ಪೋಗಿ

ಬಿಡು ಬಿಡು ಮನ್ಮನಃಪ್ರಿಯನನಲ್ಲದೊಡಣ್ಕೆನುತಾಕೆ ಖಡ್ಗಮಂ
ಜಡಿದೊಡನಾಲಿಯುಂ ಜಲಮುಮೊಕ್ಕುವಿನಂ ಶತಖಂಡಮಪ್ಪಿನಂ
ಸಿಡಿಲೆಳಮಿಂಚು ನುಚ್ಚುನುಱಿಯಪ್ಪಿನೆಗಂ ಕಡಿಖಂಡಮಪ್ಪಿನಂ
ಪೊಡೆದಳದೊಂದು ನೀಲಘನ ಸಂ ಪೂಡೆವಂತಿರೆ ಮತ್ತದಂತಿಯಂ ॥ ೬–೧೩ ॥

ಸೋಗೆಯ ಕಲ ಮತಿಗಳ್ಕಿದ
ನಾಗರವೊಲ್ ಗಜಱುವವಳ ದನಿಗಳ್ಕಿ ಖಗಂ
ಪೋಗಲ್ ಪಡೆಯದೆ ಖಚರಿಯ
ಮೇಗವನೀಡಾಱ ಪೋದನರಸರ ಮಗನಂ ॥ ೬–೧೪ ॥

ಇದಾದನಂತರ ಬರುವ ಒಂದು ರಸವತ್ತಾದ ಸನ್ನಿವೇಶವೆಂದರೆ ವಾಮನಾವತಾರ. ವಾಮನನು ವಟುವಾಗಿ ಬಲಿಯಲ್ಲಿಗೆ ಬಂದು ಮೂರಡಿ ನೆಲವನ್ನು ಕೇಳಲು, ಬಲಿ ಚಕ್ರವರ್ತಿಯು 'ಕಿಱಿದಂ ಬೇಡಿದಿರ್ ಕೊಟ್ಟೆನಳೆದುಕೊಳ್ಳಿಮೆನೆ'

ವಟು ಮರದುದ್ದವಾದನಿತಲ್ಲದೊಡಿತ್ತಲೆ ಯುದ್ದವಾದನ
ಕ್ಕಟ ಮದಿಲುದ್ದವಾದನಿವನಾವನೊ ಪೆರ್ಮರದುದ್ದವಾದನಿಂ
ತುಟು ಗಿರಿಯುದ್ದವಾದನಿದು ವಿಸ್ಮಯಮಾ ಮುಗಿಲುದ್ದವಾದನೋ
ವಟುಮುಟಿಗಂ ದಿಟಕ್ಕನೆ ಕರಂ ಬಳೆದಂ ಮನದಂತೆ ವಾಮನಂ

ವ || ಅಂತುಮಲ್ಲದೆ || ೬–೨೪ ||

ಮರನಂ ಮುಟ್ಟಿದನಿಲ್ಲ ಮೇಘಘಟಿಯೊಳ್ ಕಾಲ್ಕೋದನಿಲ್ಲಿಲ್ಲ ಭೂ
ಧರಮಂ ದಾಂಟಿದನಿಲ್ಲ ಬಾಂದೊಱಿಯೊಳಿಟ್ಟ ಕಾಲನಿಲ್ಲಿಲ್ಲ ಭಾ
ಸ್ಕರನಂ ಮಾಯದ ಮಾಣಿ ಸೆಂಡೊಡೆದನಾ ಇಲ್ಲೆಂಬಿನಂ ಸೀಡಿದಂ
ತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ವಾ ಮನಂ ವಾಮನಂ || ೬–೨೫ ||

ಮೊದಲಾದ ಪದ್ಯಗಳನ್ನು ಓದಿದಾಗ ಆ ವಾಮನನ ಚಿತ್ರ ಕಣ್ಣಿಗೆ ಕಟ್ಟಿದಂತಾಗಿ, ಕವಿಯ ಬಗ್ಗೆ ಇರುವ ಗೌರವಾದರಗಳು ಇಮ್ಮಡಿಸುತ್ತವೆ.

ಹಾಗೆಯೇ ಅತಿಸುಲಭವಾಗಿ ಮನಮುಟ್ಟುವಂತೆ ಹೇಳುವ ಕವಿಯ ವಾಕ್ಚತುರತೆಯನ್ನು ಬೇಟೆಯಾಡುತ್ತಿದ್ದ ಬೇಡನು ಬಿಲ್ಲುಬಾಣಗಳನ್ನೆಸೆದು ಬಂದು ಮುನಿಗಳ ಪಾದಕ್ಕೆ ಬೀಳಲು, ಮುನಿಗಳು

ಕೊಲಲಾಗದು ಕಳಲಾಗದು
ಕುಲಟೆಯರೊಳ್ ನೆರೆಯಲಾಗದಾರ್ತದಿನರ್ಥ
ಕ್ಕಲವರಲಣಮಾಗದು ಪುಸಿ
ಯಲಾಗದೀ ಬ್ರತಮನೈದುಮಂ ಪಿಡಿ ಮಗನೇ || ೩–೭೨ ||

ಎಂದು ಹೇಳುವಲ್ಲಿ ಕಾಣಬಹುದು.

ನೇಮಿಚಂದ್ರನು ಬರಿಯ ವರ್ಣನೆಗಳೇ ಅಲ್ಲದೆ, ಜೀವನದಿಂದ ಆರಿಸಿಕೊಂಡ ಅನೇಕ ಉಪಮಾನಗಳನ್ನು ಉಪಯೋಗಿಸಿದ್ದಾನೆ. ಮರುಳನಳಿಗೆ ಮಾಣಿಕಮಂ ಮಾಱುವ ತೆಱ, ನಿಧಿ ದೊರೆಕೊಂಡೊಡಂ ಜರಗುಗಚ್ಚುವರೇ, ಪಶುದಿಂಬಂಗಾಡಂ ತಿಂಬುದೇಂ ಪಾತಕಮೇ, ಇಲಿಯುಲಿವು ಗೇಳ್ವ ಬೆಕ್ಕಿನಂತೆ, ಕಾರ್ಯವಶಕ್ಕೆ ಕಾಲ್ವಿಡಿದ ನೆಂಬಂತೆ, ಕಣ್ಬಡೆದ ಕುರುಡನಂತೆ, ಲೋಯಿಸರದ ಮೇಲೆ ಬಂಡಿ ಪರಿದಂತು, ಆನೆಯ ನೆತ್ತುವಂಗಾಡು ಚಿಕ್ಕಾಡೆಂಬಂತೆ ಇವೇ ಮೊದಲಾದ ಹಲವಾರು ಉಪಮಾನಗಳು ಅರ್ಥವನ್ನು ಹೆಚ್ಚು ರಸವತ್ತಾಗಿ ಮಾಡುತ್ತವೆ.

ಇವೇ ಅಲ್ಲದೆ ಕವಿಯು ಪದಪ್ರಯೋಗದಲ್ಲಿಯೂ ನಿಪುಣನೆನಿಸಿಕೊಂಡಿದ್ದಾನೆ. ಇಲ್ಲಿ ಉಪಯೋಗಿಸಿರುವ ಕೆಲವು ಪದಗಳು ಅಪೂರ್ವವಾದುವು. ಪೇರಣೆಮಣಿ, ಪೊಂತಿವಣಿ, ಮಾಚಾಳಿಕೆ, ಮಾರ್ಗಡೆ, ಸಣಗ, ಸಂಡಿ ಮೊದಲಾದ ಪದಗಳಿಗೆ ಅರ್ಥವಾಗುತ್ತಿಲ್ಲ. ಇವುಗಳಿಗೆ ಅರ್ಥ ಹೇಳಲಾಗದುದು ಪಾಠಾಂತರದ ಅಪೂರ್ಣತೆಯಿಂದಲೋ ಪಾಂಡಿತ್ಯದ ಶುಷ್ಕತೆಯಿಂದಲೋ ತಿಳಿಯದು.

ಅಂತೂ ನೇಮಿಚಂದ್ರನು ಪ್ರತಿಭಾವಂತನಾದ ಕವಿಯೆಂಬುದನ್ನು ಎಲ್ಲ ಸಹೃದಯರೂ ಒಪ್ಪಲೇಬೇಕು. ಆದರೆ ಕಾಲದ ಮಹಿಮೆಯಿಂದಲೋ, ಕವಿಯ ಅಭಿರುಚಿಯಿಂದಲೋ, ಸಂಯಮ ಸಾಲದುದರಿಂದಲೋ ' ಕವಿಯು ಲೀಲಾವತಿ ಕಾವ್ಯದಲ್ಲಿ ಔಚಿತ್ಯದ ಎಲ್ಲೆಯನ್ನು ದಾಟಿದ್ದಾನೆ ' ಎಂಬ ಮಾತಿಗೆ ಪಕ್ಕಾಗಿದ್ದಾನೆ. ನೇಮಿನಾಥ ಪುರಾಣದಲ್ಲಿ ಮಾತ್ರ ಆತನ ವರ್ಣನೆಗಳು ಸಹೃದಯರ ಮನಸ್ಸನ್ನು ಉಲ್ಲಾಸಗೊಳಿಸಿ ಕವಿಯ ಹಿರಿಮೆಯನ್ನು ಹೆಚ್ಚಿಸುತ್ತವೆ.

ಯಕ್ಷಿಯಕ್ಷರಿಮುಗೀಗೊಲವಿಂದೆ ದಯಾವಲೋಕಮಂ

ಸಕಲಾಘೌಘ ಪತಂಗ ವಧ್ವಶಿಲೆಯೊಳ್ ತತ್ಕೇವಲ ಜ್ಞಾನದೀ
* ಪಿಕೆಯೊಳ್ ಮಂಗಳಕಾರಣ ಪ್ರಭೆಯೊಳಂತದ್ಧ್ವಾಂತ ವಿಚ್ಛಿತ್ತಿಗು
ತ್ಸುಕನೆಂ ಶುದ್ಧಮನಾತ್ಮಪಾತ್ರಗತಮಂ ಸುಸ್ನಿಗ್ಧಮಂ ಚಿತ್ತವ
ರ್ತಿಕೆಯಂ ಪತ್ತಿಸಿ '¹ರಾಗದಿಂ' ಪೆಗುವೆಂ ಬೋಧಾಮಲ ಜ್ಯೋತಿಯಂ ||೧೧||

ಜೀವನಮಂ ಜಲಸಿಧಿಯೊಳ್
ತೀವಿದ ಮುಗಿಲಂತೆ ಜಿನವಚೋಮೃತಮಂ ಭ
ವ್ಯಾವಳಿಗೆ ಕಱೆದ ಗಣಧರ
ದೇವರ್ ದಯೆಗೆಯ್ಗೆ ನಮಗೆ ಸಕಲಶ್ರುತಮಂ ||೧೨||

ಇದು ಚೋದ್ಯಂ ಜಿನಸಮಯದ
ಮೊದಲಿಗರೆನಿಸಿರ್ದ ಗೃಧ್ರಪಿಂಛಾಚಾರ್ಯರ್
ಮುದಮೊದವೆ ಬರೆದ ತತ್ವಾ
ರ್ಥದ ಸೂತ್ರದ ವೃತ್ತಿಯಾದುದೆಱೆವರ್ಗೆಲ್ಲಂ ||೧೩||

ಧೈರ್ಯನಿಧಿ ²ಕೊಂಡ² ಕುಂದಾ
ಚಾರ್ಯರ ಚರಣಂಗಳೊಲೆದು ನೆಲಮುಟ್ಟದ ತಾ
ತ್ಪರ್ಯಮನಱೆದೆಂ ನಿಜಸೌ
ಕರ್ಯಮನೇಂ ಪೇಳ್ವೆ ಪಿಸ್ವ ಮನದೊಳ್ ಸತತಂ ||೧೪||

ಜಿನವರ ಪ್ರವಚನಂಗಳೊರೆಗಿಂ
ವನೆ ಬರೆದೊಡೆ ಬರೆ '³ದೆ⁴ಂಬರೀ' ಭುವನಂ ಬೀ
ಯೆನೆ ಬರೆದಿಂ ವರಿಸ
ತ್ತುನಾಲ್ಕುಮಂ ಪೊಗೞ ಸುಕವಿ ಪರಮೇಶ್ವರರಂ ||೧೫||

ಸುಕವಿ ಪರಮೇಷ್ಠಿಗಳ ನಾ
ಟಕವೆನಿಸಿದ ಭುವನವಂದ್ಯವರವಿದ್ಯಾತೀ
ರ್ಥಕರತ್ವ ಪುಣ್ಯಲಕ್ಷ್ಮಿಗೆ
ಸಕಳಶ್ರುತದೇವಿ ಯಕ್ಷಿ ಯಕ್ಷಂ ⁵ಬ್ರಹ್ಮಂ⁵ ||೧೬||

---

1 ರಾಗವಮಂ (ಕ) 2 ಕುಂಡ (ಚಟ) 3 ವೆ (ಜಡಣ) 4 ದರೆಂಬೀ (ಡ) 5 ಬೊಮ್ಮಂ (ಣ)

* ಇಲ್ಲಿಂದ ೩೨ನೆಯ ಪದ್ಯದವರೆಗೂ 'ಜ' ಪ್ರತಿಯಲ್ಲಿ ಪತ್ರಲೋಪವಾಗಿದೆ,

ಕುಂದದಿವರ್ ಪೇೞ್ದೋದಿಂ
ಗೊಂದು ಮೊಗಂ ನೆಱೆಯದೆಂದು ಬಹುಮುಖನಾಪಂ
ಸಂದ ಪಿತಾಮಹನೆನೆ ಸಲೆ
ಸಂದರ್ ಜಿನಸೇನ ವೀರಸೇನಾಚಾರ್ಯರ್ ||೧೭||

ನೆಱೆಯಲ್ ಮಹಾಪುರಾಣಮು
ನಱೆವಳವಡೆ ಪೇೞ್ದ ವದನಮಿರೆ ತಮಗೊಲ್ದಾ
ನೆಱಗೆ ಗುಣಭದ್ರದೇವರ
ಮಿಱುಪಂಘ್ರಿಗಳಿತ್ತುನೆನಗೆ ಕವಿತೆಯನಣಕಂ ||೧೮||

ಕಲಿಕಾಲದ ಜಿನರಂ ನ
[1]ಮ್ರಲೋ[1]ಕರಂ ಪುಷ್ಪದಂತಮಲಧಾರಿಗಳಂ
ಬಲಗೊಂಡು ಪಾಡಿ ಮಾಡುವೆ
ನಲಘುಗುಣಸ್ತವನ ಪುಣ್ಯಪುಷ್ಪಾಂಜಲಿಯಂ ||೧೯||

ಲಪನಂ ಕಾರುಣ್ಯಮಂ ಕನ್ನಡಿಸೆ ಸಹಜಸಂಶುದ್ಧಿಯಂ ಮಾನಸಂ [2]ತಾ
ನುಪದೇಶಂಗೆಯ್ಯೆ ಸತ್ವಾವಳಿಗಭಯಸುಧಾಸಾರಮಂ ಸೂಸೆ ನೋಟಂ
ತಪ[3]ಮಾ[4]ಪ್ಪೈಧನ್ಯ ದೀಕ್ಷಾವಿಧಿಯನೆ ರತಿಗಾರ್ತೀಯ ಸಂದಿರ್ದ ಯೋಗೀಂ
ದ್ರಪದಾಂಭೋಜಂಗಳೊಳ್ ರಂಜಿಸುಗೆ ಮಧುರಮುನ್ವಾಕ್ಯ ಪುಷ್ಪೋಪಹಾರಂ ||೨೦||

ಒಳಗಾದಳ್ ಶ್ರುತದೇವಿ ನೇಮಿಗೆ ಗುಣಾಸ್ತ್ರೀ ಸುಪ್ರಣಸ್ತೋತ್ರಮಂ
ಗಳ ಮಂತ್ರಂಗಳಿನಾಕೆ[5]ಗೀ[5]ಜಿನಕಥಾನಾಂದೀಮುಖಂ ಮುಖ್ಯಮಂ
ಗಳಮರ್ಹತ್ಪ್ರತಿ ಮಂಗಳಂ ಸಕಳ[6]ಸಿದ್ಧರ್ ಮಂಗಳಂ[6]ಸಾಧುಮಂ
ಗಳಮರ್ಹನ್ಮುಖಚಂದ್ರಚಂಚದಮೃತಂ ಧರ್ಮಂ ಮಹಾಮಂಗಳಂ ||೨೧||

ಪರಮತಮತ್ತ ಹೈಹಯ ಮುಖಚ್ಯುತಿ ವಿಶ್ರುತಜೈನ ಶಾಸನಾ
ಮರ ಭುವನ ಪ್ರತಿ[6]ಷ್ಠಿತ ವೃಷಾ[6]ನುಭವೋಚಿತೆ ವತ್ಸಲತ್ವದಿಂ
ತೊರೆದ ಕುಚಂಬೊಲೊಪ್ಪುವ ಚತುರ್ವಿಧ ಭಾಷೆಯೊಳಂ ಸರಸ್ವತೀ
ಸುರಭಿ ನಿರಂತರಂ ಕಱೆಗೆ ಕಾಮಿತಮಂ ಕವಿರಾಜಮಲ್ಲನಾ ||೨೨||

---

1 ಮ್ನಲಿಂ (ಙ) 2 ಕಣ್ಗೆ (ಗಚಟಡ) 3 ಮಂ (ಗಚಟಡ) 4 ನೀಂ (ಙ) 5 ಸದ್ಧರ್ಮಂ ಗಳಂ (ಟಡ) 6 ಷ್ಠಿತ ತೀವ್ರರಸಾ (ಕ), ಷ್ಠಿತೆ ರಸಾ (ಙ)

ಸಮನಿಸೆ ಪಡೆದುವು ಜಿನಮುಖ
ಕಮಲಂಗಳ್ [1]ವ[1]ರ ಸರಸ್ವತೀ ಸೌರಭಮಂ
ತಮಗೆಱಪ ನೇಮಿಚಂದ್ರ
ಭ್ರಮರಂಗುೞಿದಂತಿರದನವೇಗೈದಪುದೋ ||೨೩||

ನೇಮಿಗೆ ಸಮಂತಭದ್ರ
ಸ್ವಾಮಿಯ ಸಮವಿಷಮ ಕವಿತೆಯಕಲಂಕನ ವಿ
ದ್ಯಾಮಹಿಮೆ ಪೂಜ್ಯಪಾದ
ಸ್ವಾಮಿಯ ವಾಣೀವಿಲಾಸಮಾಗಭಿಮತಮಂ ||೨೪||

ಕವಿಕುಲಪತಿ ನೇಮಿಗೆ ತ
ನ್ನ ವಾಣಿಯಂ ಕುಡುಗೆ ನೇಮಿನಾಥಂ ತನಗೊ
ಪ್ಪುವ ತೊಡವಂ ಮಾಡಿಸಿದಂ
ಸುವರ್ಣಕಾಱಂಗೆ ಪೊನ್ನನಿಕ್ಕುವ ತೆಱದಿಂ ||೨೫||

ರುಚಿರಕಲಾಧರನಿಂ ನೇ
ಮಿಚಂದ್ರನಿಂ ಸತ್ಕವೀಂದ್ರಚೂಡಾಮಣಿಯಿಂ
ಶುಚಿಪದ ಶರಿಕಾಂತೋತ್ಸಂ
ನಿಚಯಂ ರಸಮೊಸರುತಿರ್ಪ್ಪದೇನಚ್ಚರಿಯೋ ||೨೬||

ಈ ಕೇವಣಿಪನೆ [2]ಜೈ[2]ನ ಕ
ಥಾಕಾರ ಪರಾರ್ಧ್ಯರತ್ನಮಂ ನೇಮಿವಚ.
ಶ್ರೀಕಟಕಂ ರತ್ನತ್ರಯ
ದೈಕಟಕಂ ಕಾಂತಶಬ್ದರುಚಿ ಕಾಂಚನದೊಳ್ ||೨೭||

ರಸಮೊ ರಸಾಯನಮೋ [3]ಶ್ರು[3]ತಿ
ವಸಂತಮೋ ಕಿವಿಗಳಮೃತಮೋ ನೇಮಿಯ ವಾಕ್
ಪ್ರಸರಮದ[4]ಱಿ[4]ಸಕದಿಂ ನಿ
ಪ್ಪೊಸತಾದುದು ಜಗಕೆ ನೇಮಿನಾಥಪುರಾಣಂ ||೨೮||

---

1 ಪ (ಚ) ವೆ (ಡ) 2 ಸುಜೈ (ಚಟ) 3 ಕೃ (ಟ) ಪ್ರಕೃ (ಡ) 4 ದೆ (ಣ) ವರಿ (ಡ)

ಪರಿಭಾವಿಸೆ ಪೂರ್ವಾಪರ
ವಿರೋಧಮಿಲ್ಲದುದೆ ತಾಂ ಪುರಾಣಮದಂ 'ಮಾಂ[1]
ಕರಿಸುವೊಡೇ[2]ನಿ[2]ಟಿ[2]ಗಾಅರ
ಪರಪಿದ ಮಾತುಂ ಪುರಾಣಮಕ್ಕೆಮಗೇನೋ ||೨೯||

ಪ್ರಣುತ ಜಿನಚರಿತಮಂ ಲ
ಕ್ಷಣಮಿಲ್ಲದೆ ಕುಕವಿ ಕಬ್ಬದೊಳ್ ಕಟ್ಟಿ ಮಹಾ
ಮಣಿಯಂ ಕರ್ಬೊನ್ನೊಳೆ ಕೇ
ವಣಿಸಿದ ತೆಱನಕ್ಕುಮಲ್ಲದ[3]ಪ್ಪ[3]ದೆ ಶುಭದಂ ||೩೦||

ಕಡುಕಂಪಂ ಪಿಡಿಕೆಯ್ಸ[4]ಬರ್ಕು[4]ಮೆ ಬಟಿಲ್ದೈತಂದ ತಂಗಾಳಿಯಂ
ಪಿಡಿಯಲ್ ಬ[5]ರ್ಕು[5]ಮೆ ತೃಷ್ಣೆಗೊರ್ಕುಡಿತೆಯಿಂ ಕೊಂಡಚ್ಚವೆಳ್ದಿಂಗಳಂ
ಕುಡಿಯಲ್ ಬ[5]ರ್ಕು[5]ಮೆ ಕೊರ್ವಿತೆಂದು ತರುಣೀಸಂಭೋಗ ಸೌಖ್ಯಂಗಳಂ
ನುಡಿಯಲ್ ಬ[5]ರ್ಕು[5]ಮೆ ಬಾರದಿಂತುಟಿ ವಲಂ ಕಾವ್ಯಾಮೃತಾಸ್ವಾದನಂ ||೩೧||

ಕಮಳಕ್ಕಾವಗಮಲ್ತು ಲಕ್ಷ್ಮಿಯಿರ[6]ವಾ[6]ಸ್ಯಾಬ್ಜಕ್ಕಮುಂಟಗ್ಗದಿಂ
ಪಮದಿರ್ಗಂಗೊಚ್ಚತವಲ್ತು ಮತ್ತಿವರ ಪಾಪ್ತೀಯೂಪಪೂರಕ್ಕಮುಂ
ಟಮರರ್ಗರ್ಪಿತಮಲ್ತು ಸೌಖ್ಯಮಿವರೀ ಸಂಸೇವ್ಯ ಕಾವ್ಯಂಗಳಂ
ಸಮಸಂದಾಲಿಸುವರ್ಗ[7]ಮುಂ[7]ಜನಿಸರ್ಗೆ[7]ಗೊಪ್ಪಂ ಕವೀಂದ್ರೋತ್ತಮರ್ ||೩೨||

ಕುವಳಯ[8]ದ[8]ಲರಂ ಕೌಮುದಿ
ಯ ವಿಭವಮಂ ಕಂಡು ಕೊಂಡು ಕೊನೆಪಂ ಕವಿಯೋ
ರವಿಯೋ ರವಿ ಕಾಣದುದಂ
ಕವಿ ಕಾಣ್ಬನೆನಿಪ್ಪ ವಚನಮೇಂ ತಪ್ಪುಗುಮೇ ||೩೩||

ಶ್ರೀಯನೊಲಿಸುವೊಡೆ ತಾಂ ಕವಿ
ನಾಯಕನೆನಿಸುವೊಡೆ ತನ್ನ ಕೃತಿ ಕಲ್ಪಾಂತ
ಸ್ಥಾಯಿಯೆನಿಸುವೊಡೆ ಬಲ್ಲರ
ಬಾಯಂ ಪೊ[9]ಕ್ಕೋದಿ[9] ಕಲ್ಗೆ ಕವಿ ಸಕಲಮುಮಂ ||೩೪||

---

1 ಮಾ (ಚಟಡ) 2 ಗಿ (ಚಟ) 3 ಕ್ಕು (ಚಟಡ) 4 ಬಕ್ಕು (ಗಡ) ಲಕ್ಕು (ಙ)
5 ಕ್ಕು (ಚಟಡ) 6 ಲಾ (ಚಟಡ) 7 ವಂ (ಙ) 8 ವ (ಚಟಡ) 9 ಕ್ಕುದೀ (ಟ)

ಈ ರಸವತ್ಕೃತಿಯೊಳಹಂ
ಕಾರ ಜರಾಸಂಧ ಕಾ[1]ಲ[2]ನೇಮಿಕುಮಾ[3]ರರ್[4]
ಶ್ರೀರಮಣರ್ ಧೀ[5]ರರ್ ಧೃ[6]ತ
ನೀರಲಲಿತ ವೀರಶಾಂತ ನಿರೋದಾತ್ತರ್ ॥೪೧॥

ಒಡವುಟ್ಟಿದ ಕೌಸ್ತುಭಮಣಿ
ಯೊಡನಿರಲಾಗೆಂದು ಬಿಟ್ಟು ವಿಷ್ಣುವಿನುರಮಂ
ಬಿಡು[7]ವೆ[8]ಸರ್ಗೆ ಪದ್ಮನಾಭನ
ಬೆಡಂಗಿನುರದಲ್ಲಿ ಲಕ್ಷ್ಮಿ ಸಲೆ ನೆಲಸಿರ್ಪಳ್ ॥೪೨॥

ವದನಂ ಚಂದ್ರಪ್ರಭಂ ವಿಕ್ರಮುಭುಜಮಜಿತಂ ಪಾಣಿ ಪದ್ಮಪ್ರಭಂ ಸಂ
ಪದನೊಂದುಂ ವರ್ಧಮಾನಂ ಗುಣತತಿ ವಿಮಳಂ ತನ್ನ ಸಂಪ್ರೊಂದನಂತಂ
ಹೃದಯಂ ಸ್ವಾಧೀನಧರ್ಮಂ ಮತಿ ಪುರುಚರಿತಂ ಶೀತಲಂ ಸುವ್ರತಂ ತಾ
ನವಜಿಂ ಪ್ರತ್ಯಕ್ಷತೀರ್ಥೇಶ್ವರನೆನೆ ನೆಗಳ್ದಂ ಪದ್ಮನಾಭಪ್ರಧಾನಂ ॥೪೩॥

ಆ ಪದ್ಮನಾಭದೇವಂ
ಶ್ರೀಪತಿ ಪುಣ್ಯಪ್ರಭಾವದಿಂ ನೇಮಿ[9]ಯ[10] ವಿ
ದ್ಯಾಪೃಥುಳಜಲಧಿ ಭವಕ್ಕ[11]ತಿ[12]
ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ ॥೪೪॥

ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ
ಬೆಲೆಗೊ[13]ಟ್ಟು ತಾರ ಮಧುವಂ[14]
ಮಲಯಾನಿಲನಂ ಮನೋಜನಂ ಕೌಮುದಿಯುಂ ॥೪೫॥

ಕವಿ ಕಾಂಚನಕಣಿಕೆಗೆ ಮಾ
ಱುವನೇಕೆಂದಿನ ನುಡಿಗನಳಿಗೆ ಮಾಣಿಕಮಂ ಮಾ
ಱುವ[illegible] ಚತುರ್ದಶ
ಭುವನಮ ನಿಲಿಸಿನಿ[illegible] ಕೃತಿಯನಮಳಾಕ್ಷರಿಯಂ ॥೪೬॥

---

1 ಮ (ಜದ) 2 ದ (ಜ) (?ಬ) 3 ರದ್ದರ್ (ಜ) ರೋಧೃ (?ಬ) 4 ವಿ (ಜ) 5 ದಗಿನಷು (ದ) 6 ಯಾ (ಜ) 7 ತ (ಜ) 8 ಬ್ಬಿಗಳ ಮುಕುರಂ (ಜ) ಲ್ಪಾಕಾರವಧುವಂ (ಡ)

ಎಣಿ[1]ಸ[1]ದೆ ಗುಣಮಂ [2]ಕಾಜಿ[2]ನ
ಮಣಿಯಂ ಮಾಱುವವೊಲಹಹ ನಿನಗಂ ತನಗಂ
ಪಣಕೆ ಕೃತಿಯೆಂಬ ಚಿಂತಾ
ಮಣಿಯಂ ಮಾಱುವನ ಬುದ್ಧಿಗಾಂ ಬೆಱಗಾದೆಂ ||೪೭||

ಒಡವೆ ತನಗಪ್ಪೊಡೆಂತಾ
ದೊಡಮಾದಪುದಿನ್ನ[3]ದರ್ಕೆ[3] ಕಬ್ಬಂಬೇೞ್ದುಂ
ಜಡಮತಿಗಳ ಕ[4]ರ್ಚ[4]ದ ಕಾ
ಲ್ವಿಡಿಯಲ್ವೇೞ್ಕುಮೆ ಬುಧಂಗೆ ವಿದ್ವತ್ಸಭೆಯೊಳ್ ||೪೮||

ನಿಧಿ ದೊರೆಕೊಂಡೊಡಂ [5]ಜರಗುಗಚ್ಚು[5]ವರೇ ಮಿಗೆ ಮುಗ್ಧರುಂ ಸುಧಾಂ
ಬುಧಿ ದೊರೆಕೊಂಡೊಡೇನೊಱವುದೋಡುವರೇ ಸಕಲಾರ್ಥಸಂಭವಾ
ವಧಿ ಜಿನರಾಜರಾಜಿತ ಕಥಾಕಥನಂ ದೊರೆಕೊಂಡೊಡಂ ಪಣ
ಕ್ಕಧಮರನಣ್ಣ ಬಣ್ಣಿಪರೆ ಚಾರುವಿಚಾರಪರರ್ [6]ಕವೀಶ್ವರರ್ ||೪೯||

ಇದನಱದು ನೇಮಿಚಂದ್ರಂ
ವಿದಗ್ಧ ವಿದ್ಯಾಧರೇಂದ್ರನಖಿಳ ಕಳಾಕೋ
ವಿದನುಚಿತ [6]ಶಬ್ದ[6]ವಿದ್ಯಾ
ಸದನಂ ಕವಿಚಕ್ರವರ್ತಿ ಭುವನಾಭರಣಂ ||೫೦||

* ಸುಕರ ಕವಿಶೇಖರಂ ತಾ
ರ್ಕಿಕತಿಲಕಂ ಮಾನಮೇರು ಜಿನಶಾಸನ ದೀ
ಪಕನಕಳಂಕಂ ಭಾ[7]ವ[7]ಕ
ಮುಕುರಂ ಕವಿರಾಜಮಲ್ಲನಪ್ರತಿಮಲ್ಲಂ ||೫೧||

ಪರಮಾರ್ಥಂ ನೇಮಿನಾಮಗ್ರಹಣಮೆ ಪರಮೈಶ್ವರ್ಯದಂ ತತ್ತ್ರಿಲೋಕೀ
ಗುರುಪುಣ್ಯಶ್ಲೋಕ ಸಂಕೀರ್ತನಮೆ ತನಗೆನಿಪ್ಪಾತನೈಶ್ವರ್ಯವಿನ್ನೇ
ವಿರಿಮೊ ಪೇೞಿಂದು ಪಾಪಕ್ಷಯಮನ[8]ಯಲ[8]ತಾ ಕಂಡಮುಂ ಭಕ್ತಿಯಿಂದಂ
ಹರಿವಂಶಕ್ಷತ್ರಚೂಡಾಮಣಿಯ ಚರಿತಮಂ ಪೇೞಲುದ್ಯುಕ್ತನಾದಂ ||೫೨||

---

1 ಸಿ (ಚಟಡ) 2 ಕಾಚಿ (ಗ) ಗಾಜಿ (ಡಣ) 3 ದಿರ್ಕೆ (ಣ) ದಕ್ಕೆ (ಗಚಟಡ)
4 ಟ್ಟ (ಜಡ) 5 ಬರಗುಗಚ್ಚು (ಚಟ) (ಜ) ಬರೆ– ವಿಗಂಜು (ಣ) 6 ಸಬುದ (ಚಟಣ)
ಸಬುಧ (ಡ) 7 ವು (ಣ) 8 ಲಯು (ಜ) * 'ಜ' ಪ್ರತಿಯಲ್ಲಿಲ್ಲ.

ವ|| ಅದೆಂತೆಂದೊಡೆ

ನಿಯತಪ್ರಾಲೇಯ ದೀಪ್ತಿದ್ಯುಮ[1]ಣಿ ಭ[1]ಗಣ ದೀಪ್ರೋಜ್ವಳಾಕೃತ್ರಿಪಾತ್ಕ್ರೋ
ದಯಮಪ್ಪಾಕಾಶಮೆಂಬಾಗಸವ[2]ಳಿಕ[2]ನನಂತೈಕ ಸಂಶುದ್ಧ ಸಿದ್ಧಾ
ಲಯದೊಳ್ ಸಾಮರ್ಥ್ಯದಿಂ ಮುಟ್ಟದೆ ನತಭುವನರ್ ಸಿದ್ಧ[3]ರೇಜಿ[3]ರ್ದ ಪೀಠ
ತ್ರಯಮೆಂಬಂತಿರ್ಪುದವ್ಯಾಹತ ಜಿನಪತಿ ಬೋಧಾವಲೋಕಂ ತ್ರಿಲೋಕಂ ||೫೩||

ಅಂತೆ[4]ಸೆದಿ[4]ರ್ಪುದಧೋಲೋ
ಕಂ ತಿರ್ಯಗ್ಲೋಕಮೂರ್ಧ್ವಲೋಕ[5]ಮದವ[5]ಱಿೞ್
ಕಾಂತಮೆ[6]ನಿಸುವು[6]ದು ನರಲೋ
ಕಂ ತನುಭೃತ್ಪುಣ್ಯ ಪಾಪ ಸಸ್ಯಕ್ಷೇತ್ರಂ ||೫೪||

ವ|| ಆ ಮಧ್ಯಮಲೋಕದ ಮಧ್ಯಪ್ರದೇಶದೊಳ್

ಅಂಬುಧಿಯೊ[7]ಳುದಿ[7]ರ್ದು ತೇಂಕುವು
ದುಂಬರ ಜಂಬುವಿನ ದೋರೆವಣ್ಣ ವೊಲೆಸೆಗುಂ
ಜಂಬೂದ್ವೀಪಂ ಮಂದರ
ಮಂ ಬಲವರ್ಪರುಣ ಕಿರಣದಿಂ ಕಟ್ಟಿಲೆಯಿಂ ||೫೫||

ವ|| ಆ ಶರಧಿ ಸರೋವರಕ್ಕಳಂಕಾರವಾದ ಜಂಬೂದ್ವೀಪಪೆಂಬ ಕಮಲದ ಕರ್ಣಿಕೆಯಂತೆ

ಎನಗುರ್ವೀಧರವೈರಿ ಬಂಧು ಜಯದರ್ ದೇವರ್ಕಳಿನ್ನಲ್ಲಿ ಕಲ್
ಕನಕಂ ಪಾಱುವ ಪಕ್ಕಿ ಭಾನು ಮರನೆಲ್ಲಂ ಬಂದ ಮಂದಾರಮಾ
[8]ವ[8]ನಗಂ ಮತ್ಸಮಮೆಂದು ಬೀಗಿ ಬಳೆದಂತಿರ್ಕುಂ ಜಿನಸ್ನಾನಪಾ
ವನವಾ[9]ರ್ನಿ[9]ರ್ಜರ ನಿರ್ಜರೋಜ್ವಲಮಣಿ ಶ್ರೀಕಂದರಂ ಮಂದರಂ ||೫೬||

[10]ಅದಱಿಂ[10]ಪೂರ್ವಾಪರದೊಳ್
ವಿದೇಹವೆರಡಿರ್ಪುವವಱೊಳೊಂದೊಂದಱೊಳಂ
ಪದಿನಾಱು ನಾಡು ಚಂದ್ರನ
ಪದಿನಾಱುಂ ಕಳೆವೊಲಖಿಳ [11]ನಿರ್ಜರ[11]ಸೇವ್ಯಂ ||೫೭||

---

1 ಣೆ (ಣ) 2 ಳಂಕಿ (ಜ) ಳಿಕಿ (ಟಡ) 3 ರೆಲ್ಲಿ (ಡ) 4 ಸಿಸಿ (ಚಟಡಣ) 5 ಮುವದ (ಚ) ಮುಂವದ (ಟ) ಮವದ (ಣ) 6 ಸೆದಪು (ಣ) 7 ಳಿ (ಗಜಟ) 8 ವು (ಣ) 9 ನಿ (ಜಟ) 10 ಆಧರೆಯು (ಡ) 11 ಜನಪುತ (ಟಡ)

ಪರಭೃತಭೃಂಗ ಕೀರಕಳಹಂಸೆಗಳಲ್ಲದೆ ಕಾಕ ಘೂಕ ಭೀ
ಕರ ಖಗಮಿಲ್ಲ ಮೇಲ್ಕರಗಳಲ್ಲದೆ ಕೀಟ್ಕರನಿಲ್ಲ ಹಸ್ತಿ ಕ
ತ್ತೂರಿ ಮಿಗಮಲ್ಲದುಗ್ರ ಮೃಗಮಿಲ್ಲ[1]ಜಿಮ[1]ಲ್ಲದೆ ಪಾಪಮಿಲ್ಲ ಭಾ
ಸುರ ಜಿನಧರ್ಮಮಲ್ಲದೆ ಕುಧರ್ಮದ ವಾರ್ತೆಯುಮಿಲ್ಲ ದೇಶದೊಳ್ ॥೫೮॥

ಋತಮೆಸೆದಿರ್ಪ ನಿಸ್ಪೃಹತೆಯಿರ್ಪ ದಯಾಗುಣಮಿರ್ಪ ಶೋಭಮಿ
ರ್ಪತಿಶಯ ತೋಷಮಿರ್ಪ ಮತವಿರ್ಪೆಡೆಯೊಳ್ ಪುಸಿಯಿರ್ಪ ಚೌರ್ಯಮಿ
ರ್ಪತಿವಧೆಯಿರ್ಪ ಪಾರದರಮಿರ್ಪ ಪರಿಗ್ರಹಕಾಂಕ್ಷೆಯಿರ್ಪ ಕು
ತ್ಸಿತಮತಮಿರ್ಪುದಲ್ತು ಬೆಳಗಿರ್ಪೆಡೆಯೊಳ್ ತಮಮೆಂದುಮಿರ್ಪುದೇ ॥೫೯॥

ಅಸದಳಮಾಗಿ ಸಂದ ಜಿನಶಾಸನ ವರ್ತನೆಯಿಂ ಜಿನಾಗಮಂ
ಬೆಸಸಿದ ಭಂಗಿಯಿಂ ನೆಗ[2]ೞ್ದ[2] ಶಾಂತಿಕದಿಂ ಸಿರಿ ತುಳ್ಕೆ ಸಂತಸಂ
ಪಸರಿಸೆ ಕೆಯ್ಗೊಳಂ ಕಳವೊಳಂ[3]ಬೆಳೆ[3]ದೊಟ್ಟುವ ಧಾನ್ಯವರ್ಗದಿಂ
ಪುಸಿ ಪುಸಿ[4][ಗಿ]ಟ್ಟಿಯಿ[4]ಟ್ಟಿಗೆ ಬಱಂ ಬಱಕಾದುದು ತನ್ಮಹೀತಳಂ ॥೬೦॥

ವ॥ ಆ ವಿದೇಹಂಗಳೊಳಪರ ವಿದೇಹಮೆ ದೇಹಮಾಗೆ,

ಮೇದಿನಿ ಬೆಂ[5]ಗೆ ಬಿಟ್ಟ[5] ಮುಡಿಯಂತೆಸೆದಿರ್ಪುದು ಪುಷ್ಪಿತಂ ತಟೀ
ಪಾದಪವೀ[6]ಥಿ[6] ಪಂತಿಗುರುಳಂತಿರೆ ಸಂಚಳ ಮೀನ ಸಂಚಯಂ
ಪೂಮಱಿಗಲ್ ತಡಂ ತೊಡರ್ಮ ತೋರ್ಪವೊಲೊಪ್ಪಿರೆ ಕೊಂಕುವೆತ್ತ ಸೀ
ತೋದೆ ಸಡಿಲ್ದು ನೀ[7]ಳ್ದ[7] ಶರದಿಂ ನಿಱಿಗೊಂಡು ಬಟಿಲ್ದ ಭಂಗಿಯಿಂ ॥೬೧॥

ತೆರೆ ಪಲ್ಲೆನೆ ಪಲ್ಲವತರು
ಪರಿವೃತ ದರಿಯಧರವೆನೆ ಪರಾಗದ ಕಂಪಂ
ಪರಪುವೆಲರ್ ನಱುಸುಯ್ಯೆನೆ
ಧರಣಿಯ ಬಾಯ್ದೆಱೆಯ ತೆಱದಿನಾ ತೊಱೆ ಚೆಲ್ವಂ ॥೬೨॥

ವ॥ ಆ ತೊಱೆಯ ಬೆಡಂಗುವಡೆದ ಬಡಗಣ ತೆಂಕಣ್ಣ ತಡಿಯೊಳ್ ಬಾಂದೊಱೆಯ ತಡಿಯ ಪದಿನಾಱುಂ ಸ[8]ಗ್ಗಂ[8]ಗಳಂತಿರ್ಪ ಪದಿ[9]ನಾಱುಂ ನಾಟ್ಕ[9]ಳೊಳಗೆ

---

1 ಯಮಿ (ಕ) ಯಮ (ಜ) ದಯಮ (ಡ) 2 ಳ್ದ (ಣ) 3 ಬಗೆ (ಚಟಡಣ) 4 ಯಿಟ್ಟಿಯಿ (ಚಟಡಣ) ಪಿಟ್ಟಿಪಿ (ಜ) 5 ಗಿಟ್ಟು (ಟ) ಗೆ ಬಿಟ್ಟು (ಡ) 6 ದಿ (ಣ) 7 ಳ್ಡ (ಜಟಣ) 8 ಗ್ಗ (ಟಣ) 9 ನಾಟ್ಗ (ಚಟಡ)

ಬಡಗಣ ತಡಿಯ ವಪ್ರೆ ಸುವಪ್ರೆ ಮಹಾವಪ್ರೆ ವತ್ಸಕಾವತಿ ಗಂ[1]ಧೆ[1] ಸುಗಂ[1]ಧೆ[1] ಗಂಧಿಳೆ ಗಂಧಮಾಳಿನಿಯೆಂಬ ನಾ[2]ಟ್ಕಿ[2]ಳೊಳಗೆ

ತಿಳಿಗೊಳನಬ್ಜಗಂಧಿಯದಜಾರಮೆ ಚಂಪಕಗಂಧಿ ಕಾನನಂ
ಮಳಯಜಗಂಧಿ ಕೇಳಿನಗ[3]ಸಾ[3]ನು ಮೃಗೋದ್ಭವಗಂಧಿ ಕೆಯ್ವೊಲಂ
ಕಳಮ ಕದಂಬಗಂಧಿಯೆನೆ ಸಾರಸುಖಾಮ[4]ರ[4] ಗೇಹಗಂಧಿ ಗಂ
ಧಿಳವಿಷಯಂ ಸಮಸ್ತವಿಷಯಂಗಳ ವಲ್ಲಭನಪ್ಪುದೊಪ್ಪದೇ ॥೬೩॥

ಮದನಂಗುಪ್ಪರವಟ್ಟವಾಗದ ತಳಿರ್ ಕಾಮಂಗೆ ಕೋದಂಡಮಾ
ಗದ ಕರ್ವಂಗಭವಂಗೆ ಭಂಗುರ ಧನುರ್ಜ್ಯಾಲೀಲೆ ತಾನಾಗದು
ನ್ಮದಭೃಂಗಾವಳಿ ಚಿತ್ತಜಂಗೆ ಜಗಮಂ ಗೆಲ್ದೀವ ಬಾಣಂಗಳಾ
ಗದ ಪೂಗಳ್ ಮಱಿದಾಗವೆಂಬ ವಿವಿಧೋದ್ಯಾನಂಗಳಾ ದೇಶದೊಳ್ ॥೬೪॥

ಎಳಸುತ್ತಿರ್ಕುಂ ಪಿಕಾ[5]ಳಾಪೆಯರೆ[5] ಕಳಿಕೆಗೌತ್ಸುಕ್ಯದಿಂದಂ ಶು[6]ಕಸ್ತ್ರಾ[6]
ಮಳೆಯರ್ ಮಾಂಗಾಯ್ಗೆ ಭೃಂಗಾಳಿಕೆಯರರಲ್ಗೆ ಚಂಚಚ್ಚಕೋರಾಕ್ಷಿಯರ್ ತಾ
ಮೆಳೆ[7]ನೀರ್ವೆ[7]ಳ್ದಿಂಗಳೊಳ್ ಬೆಂಚಿಗೆ ಸಮದ ಮರಾಳಾಂಗನಾಯಾನೆಯರ್ ಪೂ
ಗೊಳಕುದ್ಯಾನಂಗಳೊಳ್ ಬರ್ಹಿಣಕಚಭರೆಯರ್ ಕೇಳಿಪೇಳಕ್ಕೆ ನಿಚ್ಚಂ ॥೬೫॥

ಎಳನೀರಂ ಜಿನಮಜ್ಜನಕ್ಕೆ ಜಿನಪಾದಾಬ್ಜಕ್ಕೆ ಪೂವಂ ಫಳಾ
ವಳಿಯಂ ಪೂಜೆಗೆ ತೋರಣಕ್ಕೆ ತಳಿರಂ ತಾಮಿತ್ತು ಪುಣ್ಯಪ್ರಭಾ
ಫಳಮಂ ಪೇಱಿದ ನಾ[8]ಡ[8] ನಂದನವನಂ ಸಗ್ಗಕ್ಕೆ ಪೋದಂತೆ ಕ
ಣ್ಗೊಳಿಕುಂ ನಂದನಮಲ್ಲದಂದು ಬನಕಂ ಸಗ್ಗಕ್ಕಮೇಂ ಸಂವಾದಂ ॥೬೬॥

ವ॥ ಎನೆ ಸೊಗಯಿಸುವ ಸುಗಂಧಿಳ ವಿಷಯಕ್ಕೆ ಭೂಷಣಮಾಗಿ

ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಲಳೊಳ್
ಪತ್ತಿದ ಪೋಲ್ವೆಯಂ ಪಡೆವ ಗೋಪುರ ಪಂಚಕ[9]ಮಾಸ್ಯ[9]ಮಾ[10]ಗೆ[10] ಮೈ
ವೆತ್ತಿರೆ ಪಾಯ್ದು ಕುಂಭಿನಿಯ ಮೇಲೆ ಸುಧಾಧವಳಂ ಪ್ರತಾಪಮಂ
ಪೊತ್ತುದದೊಂದು ಸಿಂಹಪುರಮೆಂಬ ಪುರಂ [11]ಘ[11]ನಘೋಷಗರ್ಜಿತಂ ॥೬೭॥

---

1 ಧಿ (ಜ) 2 ಳ್ಗ (ಚಟ) ಪುಗ (ಡ) 3 ಸೂ (ಜ) 4 ಳ (ಣ) 5 ಳಿಪ್ರತತಿ (ಗಟ) ಳಿಪ್ರಿಯರೆ (ಚ) ಳಾಪೆಯರೆ (ಜ) 6 ಕಾವ್ಯಾ (ಚಟಡ) 7 ನೀರ್ಬೆ (ಚಣ) 8 ದ (ಣ) 9 ಶೂನ್ಯ (ಜ) 10 ಗಿ (ಣ) 11 ಜ (ಚಟಡಣ)

ಸುರತದ ಸುಗ್ಗಿ ಕಾಮನ ಸರಲ್ಗಳ ಪೂವಿನ ಪೊೞ್ತು ಮುತ್ತಿನಾ
ಭರಣದ ಜೊನ್ನಮುಮ್ಮಳಿಪ ನೀಲದ ಕಾಳದ ಮರ್ವು ಬೆಟ್ಟದೊಂ
ದುರಿಗಳ ಬೆಟ್ಟ ಬೇಸಗೆ ಸುರಾಗರಸಂಗಳ ಕಾರ ಮುಂಬು ತ
ತ್ಪುರವರದಲ್ಲಿ ಸಾತ್ವಿಕದ ಮೈಸಡುಕಂಗಳ ಮಾಗಿಯಾಗಳುಂ ||೧೮||

ವ|| ಆ ಪುರದ ಪರಮೇಶ್ವರನ ಪರಮ ಪುರುಷೋತ್ತಮಾವತಾರನಪಾರಪಾರ ಗಂಭೀರನಪಾರಪುರುಷಾರ್ಥಪ್ರಸೂ[1]ತ[1]ಶೀತಳನಭಸ್ಥಳ ತಿಳಕ ತುಷಾ[2]ರಕರ[2] ಶಿಶಿರ ಶರದಭ್ರವಿಭ್ರಮ ದಶದಿಶಾ ಮುಖಮಂಡಲಮಂಡನೀಭೂತ ವಿಶದ ಯಶಃಪ್ರಹಾಸನ ನರ್ಹದ್ದಾಸನೆಂಬೊಂ

ಮದನಂ ರೂಪಿಂಗೆ ದಾಸಂ ಮನೆಗೆ ನೃಪನ ಪುಣ್ಯೋದಯಂ ದಾಸನರ್ಕಂ
ಮದನಸ್ತ್ರೀ[3]ಜಕ್ಕೆ[3] ದಾಸಂ ವಿಧು ವದನ ಯಶಃಶ್ರೀಗೆ ದಾಸಂ ಕೃತಾಂತಂ
ಕದನ ಕ್ರೋಧಕ್ಕೆ ದಾಸಂ ಗುರುಭುಜಕೆ ಜಯಂ ದಾಸನೆಂದಂದದಿನ್ನಾ
ರ್ಪು[4]ದೆನೆ[4]ರ್ಹದ್ದಾಸ ಭೂಸಂಗರಸರೆಸಕದಿಂದಾಸೆಯಿಂ ದಾಸರಾದರ್ ||೧೯||

ಪೂಸಲ್ ಮೆಯ್ಗರ್ಹದಂಘ್ರಿದ್ವಯ ಪರಿಚಯ ಪೂ[5]ತೋ[5]ತ್ತಮಂ ದಿವ್ಯಗಂಧಂ
ಸೇಸಿಕ್ಕಲ್ ಗಂಧಶಾಲ್ಯಕ್ಷತ ಶ[6]ತ[6]ಮನಿಶಂ ಪುಷ್ಪದಾಮಂ ತುಱುಂಬಲ್
ಸೀನಕ್ಕಂಬಾದುದೆಂಬಂದೆಲೆ ಕುಲವಟಿಯಿಂ ಬಂದ ದಾಸತ್ವಮರ್ಹ
ದ್ದಾಸಂಗೇನಣ್ಣ ನಾಬ್ವಿರ್ತನಮೆ ಸಕಲ ಪೃಥ್ವೀಪತಿಪ್ರಾರ್ಥನೀಯಂ ||೨೦||

ಜಿನಪತಿಯ ಪೆರ್ಮೆಗವನೊ
ರ್ವನೆ ದಾಸನೆ ದಾಸನಲ್ಲದವರಾರ್ ಜಗದೊಳ್
ಜಿನನುಂಡೊಲ್ಲದೆ ಬಿಸುಟಿಂ
ದ್ರ ನರೇಂದ್ರಾದ್ಯಖಿಳ ರಾಜ್ಯ[7]ಸು[7]ಖ[8]ಮುಣ್ಬ[8]ವರೊಳ್ ||೨೧||

ನಿರಹಾಸಂ ಕುಚಕಂಜಕುಟ್ಮಲಯುಗಂ ಮುಗ್ಧಾನನಂ ವರ್ಜಿತಾಂ
ತರಹಾಸಂ ಕುಸುಮಚ್ಯುತಂ ಕಚಭರಂ ಕರ್ಣಂ ಕನತ್ಕರ್ಣಿಕಾಂ
ಬುರುಹಂ ಭ್ರಷ್ಟಮೆನಲ್ಕೆ ಶೋಕತ[9]ಪ[9]ಮಂ ನಿಷ್ಕೋಶ ನಿರ್ಗ್ರಂಥಮಿ
ರ್ದರುಹದ್ದಾಸನ ಖಡ್ಗಮಾವುದು ರಿಪುಸ್ತ್ರೀಯರ್ಗೆ [10]ಕಾ[10]ರುಣ್ಯದೊಳ್ ||೨೨||

1 ತಾ (ಚಟದ) 2 ಕರ (ಜ) 3 ಜಂಗೆ (ಚಟಡಣ) 4 ದದ (ಣ) ದೆದ (ಚಟಡ)
5 ರೋ (ಜ) 6 ರ (ಜ) 7 ಮು (ಚಟಡ) 8 ಮೆಂಬಿ (ಜ) 9 ಮ (ಣ) 10 ತಾ (ಜ)

ಜಿನದತ್ತೆಯೆಂಬಳಾ ಭೂ
ಪನ ಕುಲವಧು ತನ್ನ ದಾಸನೆಂದೊಸೆದು ಕರಂ
ಜಿನನಿತ್ತ ಪುಣ್ಯಲಕ್ಷ್ಮಿಯ
ನನುಕರಿಸುವಳೆಸೆಯೆ ಸಿರಿಯೊಳಂ [1]ಶೀಲಮೊ[1]ಳಂ ||೭೩||

ಮೊಲೆಬಿಣ್ಪಿಂ ಮುಱಿದಪು[2]ದೀ[2]
ಲಲನೆಯ ಬಡನಡುವಿ[3]ದೆಂ[3]ದು ಕುಸುಮಶರಂ ಕೈ
ವಲದಾಂಕೆಗೊಟ್ಟ ನೀಲದ
ಸಲಿಗೆಯಿದೆನೆ ರೋಮರಾಜಿ ರಾಜಿಸಿ ತೋರ್ಕುಂ ||೭೪||

ಅಲರಾಗಿ ನಿರೀಕ್ಷಿಸಿ ಕಾ
ದಲನಂ ಮುಗುಳಾಗಿ ಸೋಂಕಿದೆಡೆಯೊಳ್ ಕಾಮಂ
ಗಲಸದೆ ಸರಳಾಗಿ ಪಟಿಂ
ಚಲೆವುದು [4]ತೊಳವ[4]ವಳಪಾಂಗವಲರ್ಗಳ ಪಾಂಗಂ ||೭೫||

ಪೋ ವ್ರತಮಾವ ಪೆಂಡಿರೊಳಮಿರ್ದೊಡಮೇನೊ ವಿಳಾಸವಾಂತ ನಿ
ತ್ಯವ್ರತವಾಕೆಯೊಳ್ ಸೊಬಗುವೆತ್ತ ಗುಣವ್ರತಮಂ ಜಗಂ ವಿಳಾ
ಸವ್ರತಿ ಕೊಂಡವೇ[5]ಸವಿರತಿವ್ರತಮಾ ನೃಪನೆತ್ತಿದೇಕಪ
ತ್ನೀವ್ರತಮೆಯ್ದೆ ಸೂಚಿಸವೆ ಕಾಂತೆಯ ರೂಪಿನ ಪೆಂಪಿನೊಳ್ಪೆಯಂ ||೭೬||

ಮಂದಾರಮೊಂದು ಪುಟ್ಟುವ
ಮಂದರಮುಂ ವಾರ್ಧಿವೇಲೆಯುಂ ಮಾಣಿಕಮೊ
ಲ್ದೊಂದೊಗೆವ ರೋಹಣಾ[6]ದ್ರಿಯ[6]
ಮುಂ ಧರೆಯುಂ ದೊರೆಗೆ ವಂದ ಪತಿಯುಂ ಸತಿಯುಂ ||೭೭||

ವ|| [6]ಅಂತಿ[6]ಷ್ಟವಿಷಯಕಾಮಭೋಗಂಗಳನನುಭವಿ[7]ಸುತ್ತುಮಿ[7]ರ್ಪಿನಮೊಂದು ದಿವಸಂ

ಮುನಿಚರ್ಯಾಕಾಲಮಿಾ ಧಾರ್ಮಿಕ [8]ಜಿನಗೃಹ[8]ಮಂ ಪುಣ್ಯಮೆಯ್ತುರ್ಪ ಕಾಲಂ
ಜಿನದತ್ತಾದೇವಿ ದಾನಂಗುಡುವ [9]ಬ[9]ವಸೆಯೊಳ್ಕಾಲಮಿಾ ಕಾಲ[10]ಮಾ[10]ರುಂ
ಮನೆಯೊಳ್ ಸೂನಂಗಳಂ ಸಂಧಿ[11]ಸಿಡೆ ತಿಮಿತೆ[11]ಮಾಚಾರದಿಂದೆಂದು ಪೃಥ್ವೀ
ಜನಕೆಲ್ಲಂ ಸಾಱುವಂತೇನೊಗೆದುದೊ ಮಿಗೆ ಮಧ್ಯಾಹ್ನ ಶಂಖಪ್ರಣಾದಂ ||೭೮||

---

1 ರೂಪಿನೊ (ಙ) 2 ವೀ (ಜ) 3 ದೊಂ (ಚಟಡಣ) 4 ಪೊಳೆವ (ಜ) ತೊಳಪ (ಙ) 5 ಚಳ (ಜ) 6 ಇ (ಜ) 7 ಸಿ (ಚಟಡಣ) 8 ಜನಗೃಹ (ಗಜ) ಜನಗುಣ (ಙ) 9 ಬೆ (ಚಟಡಣ) 10 ವಾ (ಙ) 11 ಸಿದಿತಿಮಿರೆ (ಕ) ಸದಿಮಿಾರಿ (ಜ)

ಸದಮಳ ಪಾತ್ರಕ್ಷೇತ್ರದೊ
ಳಿದು ಬಿತ್ತುವ ಪದದ ಪೊೞ್ತು ಗೃಹಮೇಧಿಗದೇ
ವುದೊ ಮಧ್ಯಾಹ್ನದ ಪೊೞ್ತಿ
ಲ್ಲದ ಪೊ[1]ೞ್ತು[1] ಬಂಜೆವೊೞ್ತು ತಾನದು ಪೊೞ್ತೇ ||೭೯||

ವ|| ಅದಂ ಕೇಳ್ದು ಕಾರ ಮೊೞಗಂ ಕೇಳ್ದ ನವಿಲಂತೆ ನಲಿದು ಯತಿ[2]ಗಳ[2] ಪಾವನ[3]ಪದಪ[3]ದ್ಮಂಗಳಂಗಣಮಂ ಮೆಟ್ಟೆ ಪವಿತ್ರಂ ಮಾೞ್ಪ ಪೊೞ್ತಾದುದೆಂದು ಬೇಗ ಮುಬ್ಬಿಗಳಂ [4]ಬಂ[4]ದಿಸಿ ಬಸದಿಯಂ ಪೊಱಮಟ್ಟರಸುನೆಯ ಬಾಗಿಲ್ವಾಡದೊಳ್ ವಿಭವಂ ಬೆರಸು ಬಂದಿರ್ದಳನ್ನೆಗಂ

ಹರಿಯುಂ ಕರಿಯುಂ ಪುಲಿಯುಂ
[5]ಹ[5]ರಿಣಿಯುಮೊಂದಾಗಿ ಮುಚ್ಚಿ ಬೆಚ್ಚದೆ ಬೆನ್ನೊಳ್
ಬರೆ ಗಡಣದೊಳಾ ನಗರ
ಕ್ಕರಣ್ಯದಿಂ ಚರಿಗೆಗೊಟ್ಟಸಂಗಜಮಲ್ಲಂ ||೮೦||

ಪೆಗಲೊಳ್ ದಕ್ಷಿಣಹಸ್ತಮೊಪ್ಪೆ ಸಸಿನಂ ವಾಮಂ ಕರಂ ತಾಗೆ ಗುಂ
ಡಿಗೆಯಂ ವೃಷ್ಟಿಯುಗ ಪ್ರಮಾಣ ಪ[6]ಥ[6]ದೊಳ್ ಮತ್ತೆತ್ತಲುಂ ಸೂಸದೊ
ಳ್ಪುಗೆ ನಿಷ್ಪಂದಮೆನಲ್ಕೆ ಪೂರ್ವತ[7]ಮ ಕಣ್ಣಂ[7] ಮುಟ್ಟುವಂತೊಯ್ಯಗೊ
ಯ್ಯಗೆ ಕಾಲ್ಗಳ್ ನೆಲಮುಟ್ಟೆ ಚಂದ್ರಗತಿಯಿಂ ಬಂದಂ ಮುನೀಂದ್ರೋತ್ತಮಂ ||೮೧||

ಒಂದುಂ[8]ಪ್ರಾಣಿಗೆ[8] ಭಯಮುಂ
ದಂದುಗಮುಂ ನೋವುಮೆಯ್ದೆ ಬಾರದ ತೆಱದಿಂ
ಬಂದಂ ಚರಿಗೆಗೆ ಬನದಿಂ
ಮಂದಾನಿಲನಂತೆ ಕುಕ್ಕುಟಾಸನದೇವಂ ||೮೨||

ಬೞಿಸಂದು ಮುಂದೆ ಕಂಪಿಂ
ಗೆೞಲೆ ಮನಂ ಮೇಲೆ ನೆಗೆದ ಮಲಧಾರಿಗೆ ಮೆಯ್
ಸೆೞಲಾದಳಿತತಿ ಪೀಲಿಯ
[9]ತ[9]ೞಿ[10]ಯಂಬರ[10]ದಲ್ಲಿ ಬರ್ಪ ತೆಱನಾಯ್ತಾಗಳ್ ||೮೩||

1 ೞ್ತುಂ (ಚಟ) ಳ್ದು (ಜ) 2 ಯುಗಳ (ಜ) 3 ಪ (ಚಜಣ) 4 ವಂ (ಚಟಡ)
5 ಕ (ಣ) 6 ಥ (ಜ) 7 ನು ಕಣ್ಣಂ (ಜ) ಮುಖಂಣಂ (ಣ) 8 ಪಾಣ್ತಿಗೆ (ಕ) ಪಾಣಿಗೆ (ಡ)
9 ಕ (ಚಟಡಣ) 10 ಯೆಂಬರ (ಗಚಟ) ಯಂಭರ (ಣ)

ಅಡಿಗೆಱಪ ಜನಕ್ಕಾಗಳೆ
ಕುಡ[1]ಲೆ[1] ಸಹಸ್ರಾಕ್ಷಪದವಿಯಂ ಮುನಿ ಕಯ್ಯೊಳ್
ಪಿಡಿದಿರ್ಪಂತೆವೊಲೆಸೆದ
ತ್ತಿಡಿದೊಪ್ಪುವ ಪಲವು ಕಣ್ಣ ಪೀಲಿಯ ಕುಂಚಂ ||೮೪||

ಕಾಣಲ್ಬಾರದ ಸೂಕ್ಷ್ಮ
ಪ್ರಾಣಿಗಳಂ ನೋಡಿ ನಡೆಯಲೆಂದಾ ಜೀವ
ತ್ರಾಣನ ಕಾ[2]ಲ್ಗಂ[2] ಕಣ್ಗಳೆ
ಮಾಣಿಕದಂತಾದುವೆನಿಸಿ ತೊಳಗಿದುವುಗುರ್ಗಳ್ ||೮೫||

ಮುನಿಪತಿಯ ತೋರ್ಪ[3]ಬರಿ[3]ಯೆ
ಲ್ವಿನ ಪುದುವಿಂ ಬೂದಿ[4]ವಾ[4]ಱುತಿ[5]ರ್ಪಿರಪಿಂ[5] ಕಾ
ಮನ ಸುಟ್ಟ ಕಾಡಿ[6]ದೆ[6]ನೆ ಕ
ರ್ಗನೆ [7]ಗ[7]ನಿತುದು ಮಲದ ಮಸಿಯ ಮ[8]ಸ[8]ಕದಿಸಂಗಂ ||೮೬||

ಉಲಿವ ದಯಾತರಂಗಿಣಿಯ ಪಾವಸೆ ಕರ್ಬುರ ಕಾಯದೀಪಕೆ
ಜ್ವಲನಮುಮರ್ದಪ್ಪಿಕೊಂಡಸಮಲಕ್ಷ್ಮಿಯ ಮಯ್ಯ ಮೃಗೋದ್ಭವಂ ತಪೋ
ನಲ ನವಧೂಮಲೇಖೆ ಧೃತಿಪರ್ವತ ಲಗ್ನಘನಾಳಿ ಪಾಱಪ್ಪೋ
ಗಲೆ ಪೊಱಮಟ್ಟ ಪಾಪಮೆನಿಸಿತ್ತು ಮಲಂ ಮಲಧಾರಿದೇವನಾ ||೮೭||

*ವ|| ಅಂತು ತನ್ನ ಪುಣ್ಯಮೆ ಬರ್ಪಂತೆ ಬರ್ಪ ಪರಮ[9]ರ್ಷಿಯರಂ[9] ಕಂ[10]ಡೇಟ್ಟಿ[10]ರ್ಪ ನಿಧಾನಮಂ ಕಂಡಂತೆ ಕೃತಾರ್ಥೆಯಾಗಿ

*[11]ನ[11]ಡೆಮುಡಿ ಗಂಧವಕ್ಷತೆ ಫಲಾವಲಿ ಪೂವಿನಮಾಲೆ ಮುತ್ತು ಕ
ನ್ನಡಿ ಕಳಸಂ ವಿಲಾಸಿನಿಯರರ್ಚನೆ ಮಂಗಳಗೀತ ಭೇರಿ ಬೆ
ಳ್ಗೊಡೆ ಗುಡಿ ತೋರಣಂ [12]ತೊಡಿ[12]ಗೆ ಸೀಗುರಿ ಚಾಮರಮೆಂಬಿವೊಪ್ಪಮಂ
ಕುಡೆ ಜಿನದತ್ತೆಯೇಂ ನಡೆದಳೋ ನಿಲಿಸಲ್ ಮಲಧಾರಿದೇವನಂ ||೮೮||

* ವ|| ಆ ಪ್ರಸ್ತಾವದೊಳ್

---

1 ರೆ (ಜ) 2 ಲಂ (ಜಣ) 3 ಪಿರಿ (ಜ) 4 ಪಾ (ಜ) 5 ರ್ಪರಲಿಂ (ಗ) ರ್ಪರಪಿಂ (ಟ) 6 ಗೆ (ಣ) 7 ಕ (ಣ) 8 ಳ (ಚಟಡ) ಣ (ಣ) 9 ಋಷಿಯರಂ (ಚ) ರುಷಿಯಂ (ಜ) 10 ಡಿದಿರೊಳ್ಪ (ಜ) 11 ಕ (ಜ) 12 ತುಡು (ಜ) * 'ಗಟ' ಪ್ರತಿಗಳಲ್ಲಿಲ್ಲ.

* ಮಱಿದುಮದೊರ್ಮೆ ಲೌಕಿಕದ ವಾರ್ತೆಯನಾಡ[1]ದೆ[1] ಕೆತ್ತ ಬಾಗಿಲಂ
ತೆಱೆಯ[1]ದೆ[1] ಭಾನುವಸ್ತಮಿತನಾದೊಡೆ ಪೋಗದೆ ಮೆಯ್ಯನೊರ್ಮೆಯುಂ
ತುಱಿಸದೆ ಕುಕ್ಕುಟಾಸನಕೆ ಸೋಲದ ಗಂಡವಿಮುಕ್ತವೃತ್ತಿಯಂ
ಮೆಱೆಯದ ಘೋರ ದುರ್ಧರ ತಪಶ್ಚರಣಂ ಮಲಧಾರಿದೇವನಾ ||೮೯||

ಮುನಿಪಂ ಚರ್ಯೆಗೆ ಪೋಗುತಿರ್ಪ ಪದದೊಳ್ ಮೆಯ್ಯಲ್ಲಿ [2]ಪ[2]ತ್ತಿರ್ದ ಪು
ತ್ತಿನ ಪೋ[3]ರಿಂ[3] ಪೊಱಮ[4]ಟ್ಟು[4] ಪೋದ ಮಧುಪಂ ತನ್ನಿಂದೆ ತಾನಾಗಿ ಬ
ರ್ಪಿನಮೇೞಿಂಟು ದಿನಂಬರಂ ಕರುಣದಿಂ ಕೈಯಿಕ್ಕಿಕೊಂಡಿ[5]ರ್ದ[5] ಯೋ
ಗನಿಯೋಗಂ ಮಲಧಾರಿದೇವ ಮುನಿಪಂಗಕ್ಕುಂ ಪೆಱರ್ಗಕ್ಕುಮೇ ||೯೦||

ವ|| ಎಂದೋದುವ ಮಂಗಳಪಾಠಕರ್ಗೆ ಮಂಗಳಭೂಷಣಂಗಳಂ ಮೆಚ್ಚುಗೊಟ್ಟು ತಚ್ಚರಣ ಕಮಲಂಗಳಂ ವಿಮಲವಿಲೋಚನಮರೀಚಿ[6]ಚ್ಛಟಾ[6]ಚಂದನ ಚರ್ಚೆಗಳಿನರ್ಚಿ ಸುತ್ತುಮಿದಿರ್ವಂದು

ಅಱಿಯದೆ ಗೆಯ್ದನೆನ್ನಿನಿಯನಾತ[7]ನ[7] ಮಾಡಿದ ದುರ್ವಿನೀತಿಯಂ
ಮಱೆ[8][ದೆ][8]ನಗಟ್ಟಿಱಿಂ ಪುರುಷಭೈಕ್ಷವನಿಕ್ಕು ದಯಾಪರತ್ವಮಂ
ಮೆಱೆ[9] ಮಱುಮಾತು ಬೇಡ ಗ[9]ಡ[9]ಮೆಂದು ಮನೋಜನ ಕಾಂತೆ [10]ಬೆರ್ಚೆ[10] ಬಂ
ದೆಱಗುವ ಪಾಂಗಿನಿಂದೆಱಗಿದಳ್ ಮಲಧಾರಿಯ ಪಾದಪದ್ಮದೊಳ್ ||೯೧||

ವ|| ಅಂತು ನಿಧಾನಕ್ಕೆಱಗುವ ದೀಪವರ್ತಿಯಂತೆಱಗಿ ತುಱುಗಿದರ್ಚನೆಗಳಿಂ ದರ್ಚಿಸಿ ಗುರುಭಕ್ತಿಪೂರ್ವಕಂ ಬಂದಿಸಿ ನಿರ್ಮಲವಪ್ಪ ನಿಮ್ಮಡಿಗಳೆಂಬರುಣಾಂಬುಜ ಗಳೆನ್ನ ಸದನಸರೋವರದೊಳೊಂದು ಸಿರಿಯಂ ನಿಲಿಸಲ್ವೇಟ್ಟುಮೆಂದು ದರಹಸಿತ ವದ ನಾರವಿಂದೆಯಾಗಿ

ನಿಲಿಸುವೊಡೆ ನಿನ್ನ ಪುರುಷಂ
ನಿಲಿಸುಗೆ ಮೇ[11]ಣ್[11] ನಿನ್ನ[11] ಪುತ್ರರುಳ್ಳೊಡವರ್ ಮೇಣ್
ನಿಲಿಸುಗೆ ಪೆಂಡಿರ ಕಯ್ಯೊಳ್
ನಿಲಲಱಿವರೆ ಪೇೞಿಮು[12][ಬ್ಬೆ][12] ಗಂಡವಿಮುಕ್ತರ್ ||೯೨||

---

1 ದ (ಚಟಡಣ) 2 ಪು (ಗಟ) 3 ಲಿಂ (ಡ) ದಿಂ (ಣ) 4 ಟ್ಟ (ಚಟಣ) 5 ದ್ರ್ (ಕ)
6 ಚ್ಛಟ (ಚಟ) ಚಂದನಚ್ಛಟಾ (ಜ) 7 ನು (ಚಟ) 8 ಮೆ (ಚಟಡಣ) ಯೆ (ಜ) 9 ಡಿ (ಜಟಡ)
10 ಕೂರ್ತು (ಜ) 11 ಣ್ನನಗೆ (ಜ) 12 ಬ್ಬ (ಚಜಟಡಣ) * ಗಟ ಪ್ರತಿಗಳಲ್ಲಿಲ್ಲ.

ವ|| ಎಂದು ಪರಮ[1]ಋಷಿ[1]ಯರ್ *ಪರಸಿ ಪೋಪುದುಮಾ ಮಹಾಭಾಗ್ಯೆಗೆ ಭೋಗಾಂತರಾ[2]ಯಂ[2] ಮಾಡಿದ ನೋವುಂ ಮಕ್ಕಳ್ಪಡೆಯದ ನೋವುಂ ಅಟಲನೊದವಿಸೆ[3]ಮನಮಿಕ್ಕಿ ಮನ್ನುಮಿಕ್ಕು[3] ಮಗುಳ್ದು ಬರ್ಪಾಗಳ್ ಮೊಗಂಮುರಿದು ಮೊಲೆಯೂಡಲಡ್ಡಸಾರ್ಚಿದ ಪುಲ್ಲೆಯಿರ್ದಂತೆ ಪರಿಚಯಕ್ಕೆ ಪರಿತಂದು ಕಡೆವಾಯ ಪಾಲಂ ತೊಡೆಯೊಳ್ ತಡೆಗಾಲ್ವೊಡೆದು ಕೊಣಕಿಡುವ ಕೊಣಸುಗಳಂ ಓಡಿದು ಮುದ್ದಾಡಿಸುತ್ತುಂ ತಾಯ ಬಾಯ ಕುಡುಕಂ ಕೊಂಡು ನೇವುರದ ನುಣ್ಚರಕ್ಕೆ ಮರ[4]ಳ್ವ[4] ಪಾರಾವತಶಾಬಕಂಗಳ ಮೊಗದೊಳ್ ಮುಗುಳ್ನಗೆವಾಲಂ ಚೆಲ್ಲಿ ಚೆಲ್ಲವಾಡುತ್ತುಂ ಸಪಿಲ್ವಾರಿಯ ಬೆನ್ನನೇಱಿ ಮಂಡೆಯ ಚಂಡಿಕೆಯಂ ಕರ್ಚಿ ಸೆಳೆವ ಸೋಗೆಯ ಪಱಿಯ ಮುದ್ದುತನಮಂ ಮುದ್ದು[5]ಗಣ್ಣ[5]ಳ ಬೆಳಗೆಂಬೆಳಮಿಂಚಿನ ಗೊಂಚಲಿಂ ಮುಂಡಾಡುತ್ತುಂ ಮು[6]ನಿಯಾಡಿದ[6] ಮಾತಿಂ ಮೊಳೆತುದೆನಿಪ ಪುತ್ರದೋಹಳದಿಂ ಸಮುಸಿಸಿದುದ್ದೀಪನ ಭಾರವೆಂಬಮರ್ದಿನ ಮಱಿಯಿಂ ಪಡಲ್ತು ನನೆಕೊನೆ[7][ವೋಗಿ][7] ರಾಜಾಂಗಣದ ಕೆಲದ ಕುಲಚೈತ್ಯಾಲಯಮಂ ಬಳಸಿದ ಬನದೊಳಗಣ ಮಲ್ಲಿಕಾ ಮಂ[8]ಡ[8]ಪದ ಮುಂದಣ ತ[9]ವಂ[9]ಗದ ಲೋವೆಯ ಮುತ್ತಿನ ಮತ್ತವಾರಣದೊಳ್ ಕುಳ್ಳಿರ್ದು ಕಳಾಧರೆಯೆಂಬ ಕೆಳದಿಗಿಂತೆಂದಳ್

ಇವೆ ಬಾಯ್ದೆಱೆಯಿಂ ಮುತ್ತುಂ
ಪವಳಮುಮಿಾಯಸಿಯ ನುಡಿಯೆ ಸುರಿದಪುವೆಂಬಂ
ತೆವೊಲಬಲೆ ನುಡಿಯೆ ಪಲ್ಗಳ
ಚವಿ[10]ಯುಂ[10] ತುಟಿದಳಿರ ಕೆಂಪು[11]ಮೇಂ[11] ಕೆದಱಿದುದೋ ||೯೩||

ಒಡನೆಯ ಚಕ್ರವಾಕಿ ಪೊಸವಾಣತಿ ಕೋಗಿಲೆ[12]ಯಿಾ[12]ಱಿಲಿಂದು ಕೇ
ಳ್ಗಡ ಗಿಳಿವೆ[13]ಣ್ಗ[13]ಪೊತ್ತಿನೊಳಗೆಯ್ದೆ ನವಿಲ್ ಮನೆದೀವಿ ಮಕ್ಕಳಂ
ಪಡೆದುದು ನೋಡ ಶಾರಿಕೆಯ ಚೊಚ್ಚಲ ಶಾಬಕನೋದಿದಪ್ಪುದೀ
ನಡೆದುದೆ ತಾಯ ಬೆನ್ನೊಳೆ ತಳರ್ನಡೆ[14]ಯಿಂ[14] ಕಳಹಂಸಪೋತಕಂ ||೯೪||

ಎನ್ನೋರಗೆಯಂಗನೆಯರ್
ಕನ್ನಡಿಯಂ ನೋಡುವಂದದಿಂ ನೋಡಿದಪರ್
ಪೊನ್ನ ಸಸಿಯಂತೆ ಮಿಸುಗುವ
ರನ್ನದ ಮೊಳೆಯಂತೆ ತೊಳಪ ಮಕ್ಕಳ ಮೊಗಮಂ ||೯೫||

---

1 ಷಿ (ಣ) 2 ಯಮಂ (ಜ) 3 ಮನವಿಕ್ಕಿ ಮನುಮಿಕ್ಕಿ (ಚ) ಮನವಿಕ್ಕಿ ಮನುವಿಕ್ಕಿ (ಡ) ಮನಮಿಕ್ಕಿ ಮನ್ನುಮಿಕ್ಕಿ (ಜಟಣ) 4 ಳ್ದು (ಚಟಡಣ) 5 ಗುಣಂಗ (ಚಟಡಣ) 6 ಗಿಯದ (ಕ) ನಿಯ (ಜ) 7 ಯೋಗಿ (ಚಜಟಡ) ವೋಗಿ (ಣ) 8 ಟ (ಜಟಣ) 9 ದಾ (ಗಟಡ) 10 ಯಿಂ (ಗ) ಯಂ (ಣ) 11 ಮಾಂ (ಜ) ಮಂ (ಣ) 12 ಯೆ (ಜ) ಯೋ (ಟ) 13 ಣ್ಣ (ಚ) 14 ಯಂ (ಜಡ)

ಮರ್ವಿನ ಭಾಗ್ಯದಿಂ ಹಿಮಕರಾಭ್ಯುದಯಂ ತಡವಾದ ಕೇಡಿನಾ
ಶಾರ್ವರಿ ಲೋಕಮಂ ಪೊರೆವ ಸಸ್ಯಸಮುದ್ಭವ[1]ದೊಳ್[1] ವಿಳಂಬಮಾ
ದುರ್ವರೆ ವಿಕ್ಕ ಮೌಕ್ತಿಕಭವಂ ವ್ಯವಧಾನಮನಾಳ್ದು [2]ಶುಕ್ತಿಯೆ
ನ್ನೋ[2]ರ್ವಳಿ ಕಾಲಮೊಳ್ ಫಲಕೆ ಬಾರದ ವಲ್ಲರಿಯಾದೆನೇಕೆಯೋ ||೯೬||

ಪರಿಕಿಪೊಡಿದೆನ್ನ ತನುವ
ಲ್ಲರಿ ವಲ್ಲರಿಯಂತೆ ಪುಷ್ಪವತಿಯಾಗಿಯುಮೊ
ಪ್ಪಿರೆ ಫಲಕೆ ಬಾರದಂತಿದು
ಸುರ[3]ಗಿ[3]ಯೊ ಸಂಪಗೆಯೊ ಮೊಲ್ಲೆಯೋ ಮಲ್ಲಿಗೆಯೋ ||೯೭||

ಕಾಳಿಗನಾಗನಂತೆ ಮುಡಿ ಬಂದುದು ತುಂಗಕಟೀತಟಂಬರಂ
ಬಾಳೆಗಳಂತೆ ಕಣ್ಪರಿದು ಬಂದುದು ಕೆನ್ನೆವರಂ ತೊಳಪ್ಪಿನಂ
ತೋಳ ಪೊವಲ್ಪರಂ ಮುಸಕದಿಂ ಮೊಲೆ ಬಂದುವಿದೆನ್ನ ಬೆಂಬರಂ
ಬಾಳಕಗರ್ಭಮಪ್ಪ ಬಸಿಱಿಕೆಯೊ ಬಾರದು ವಾರಿಜಾನನೇ ||೯೮||

ಪನಿತ ಮೊಲೆವಾಲ ಬಂಬ
ಲ್ವನಿಗಳೊ ನಸುನಗೆಯೊ ಮೊಳೆಗಳೋ ಪೊಳೆದಪ್ಪುವೆಂ
ಬಿನಮೊಗೆದ ಪಲ್ಲಿನೊಪ್ಪುವ
ತನಯನ ನಗೆಮೊಗಮನೆಂದು ಪೇೞ್ ಕಂಡಪೆನೋ ||೯೯||

ನಿಱಿಯ ಸೆಱಂಗನೋಸರಿಸಿ ಕೆಂದಳದಿಂದಮೆ [4]ಕ[4]ರ್ಚಿಕೊಂಡು ತೊ
ಡೆಱಿಮೊಗೆದಟ್ಟಿಱಿಂದೊಗೆದ ಪೆರ್ಮೊಲೆ[5]ಯಂ[5] ಬೆರಲಿಂದವುಂಕಿ ಬಾ
[6]ಯ್ದೆಱೆ[6]ಗಿದಿರೀಯೆ ಪಾಲ್ಪೊರೆದ ನುಣ್ಬೆರಲಂ ಮೊಲೆಗಿತ್ತು ಪೀರ್ದು ಕ
ಣ್ದೆಱೆಯದ ಕಂದನೆಂದೆನಗೆ ಕ[7]ಣ್ದೆ[7]ಱೆಯಿಪ್ಪನೊ ಮಂದಹಾಸಮಂ ||೧೦೦||

ಬಱಿದಿ[8]ರ್ದು[8] ಮೊಲೆಯನೊಲ್ಲದೆ
ಸೆಱೆವಿಡಿ[9]ದೆ[9]ನ್ನೊಂದು ಮೊಲೆಯ ಮೇ[10]ಲೆ ನೆಱೆದ್ದಿ[10]
ನ್ನೆಱೆಯನ ಕರಕಿಸಲಯಮಂ
ಕೆಱಮುಗನೆಂದ[11]ಟ್ಟಿ[11] ನೂಂಕಿ ಮೊಲೆಯುಂಡಪನೋ ||೧೦೧||

---

1 ವಂ (ಕ) 2 ಶಕ್ತಿಯಾನೊ (ಜ) ಸೂಕ್ತಿಯನೊ (ಟ) ಶೂಕ್ತಿಯನ್ನೊ (ಡ) 3 ಯಿ (ಜಡ) 4 ಬೆ (ಜ) 5 ಯಿಂ (ಚಟಜ) 6 ಯೆಱ (ಜ) 7 ಣ್ಣ (ಗಟಡ) 8 ರ್ದ (ಜ) 9 ದಿ (ಗಟ) 10 ಲ್ ನೆರೆದಿರ್ದ (ಚಟ) ಲ್ನೆಱೆದಿರ್ದ (ಜ) 11 ಟ್ಟು (ಕ) ಳುಕೆ (ಜ).

ಜಕ್ಕುಲಿಸಿ ನೂಂಕಿ ನಗುತೆ ಕೆ
ಲಕ್ಕಾರಮನುಣುತೆ ಮೊಲೆಯ[1]ನುಣುತೆ[1]ನ್ನ ಕುಚಾ
ಗ್ರಕ್ಕೆ ತಳತಳಿಸಿ ತೊಳಗುವ
ಮಕ್ಕಳ ಮಾಣಿಕವದೆಂದು ತೊಡವಾದಪುದೋ ||೧೦೨||

ಇದಿರ್ವರೆ ಗೆಜ್ಜೆಗಳುಲಿಗೊಡ
ವಿದ ಕಂಕಣದುಲಿಗ[2]ಳಿ[2]ಸೆಯೆ ಬರ್ಪಾತ್ಮಜನಂ
ಮದಧಿಪನೆನ್ನಂ ತರ್ಕೈ
ಸಿದ ತೋಳಂ ತೆಗೆದದೆಂದು ತಟಿಕ್ಕೈಸುಗುಮೋ ||೧೦೩||

ನಮುಗೋದಲಿಟ್ಟ ದಿವಸಮೆ
ಕುಮರಂ ತೋರ್ಪಂತೆ ತನ್ನ ಮಾತಿಯಂ ಸಿದ್ಧಂ
ನಮ ಸಿದ್ಧಂ ನಮ ಸಿದ್ಧಂ
ನಮ ಎಂಪೆಂದೆನ್ನ ಮುಂದೆ [3]ಬರೆ[3]ದೋದುಗು[4]ಮೋ[4] ||೧೦೪||

ಪೊಲೆವೆಣ್ಣಿ ನಿಪೆನ[5]ಗೆಂ[5]ದುಂ
ನಿಲಲೊಲ್ಲದೆ ತೊಲಗಿ ಪೋಪ ಗಂಡವಿಮುಕ್ತರ್
ಮಲಧಾರಿ ಸ್ವಾಮಿಗಳಂ
ನಿಲಿಸುವ ಸತ್ಪುತ್ರನೆನಗಡೆಂದಾದಪನೋ || ೧೦೫ ||

ವ|| ಗರ್ಭದ ಬಯಕೆಯುಂತಿರ್ಕೆ ಗರ್ಭವನೆ ಬಯಸುವಂತಾದುದೆಂದ ಜಿನದತ್ತೆಗೆ ಕಳಾಧರೆಯಿಂತೆಂದಳ್.

ನಂದನರೆನ್ನಯ [6]ಹರ[6]ಯದ
ಸೌಂದರಿಯರ್ಗಾದರಾಗರೆನಗೆನ್ನದಿರಿ
ನ್ನೊಂದಿರುಳೊಳ್ ತಡೆದುದಯಿಪ
ನ್ನೊಂದಿರುಳೊಳ್ ತಡೆಯದುದಯಿಪಂ ತುಹಿನಕರಂ ||೧೦೬ ||

ವ|| ಇದನಾಚಾರ್ಯರಂ ಬೆಸಗೊಳ್ವಂ ಬಿಜಯಂಗೆಯ್ಯಿಮೆನೆ ಬಸದಿಗೆ ಪೋಗಿ ದೇವರುಮನಾಚಾರ್ಯರುಮಂ ಬಂದಿಸಿ ಬಟಿಯಂ ನಿಮಿತ್ತ ಜ್ಯೋತಿಗಳ್ಗೆ ಕೈಗಳಂ ಮುಗಿದು

---

1 ಸೂಲಿದೆ (ಜ) 2 ಳ್ದಿ (ಗಟ) 3 ಯೆ಼ಂ (ಜ) 4 ಮೇ (ಙ) 5 ಗೊಂ (ಕ) 6 ಹರಿ (ಗಚಟ) ಹರೆ (ಙಡ)

ಎಮ್ಮ ಕುಲಕ್ಕೆ ವೀರವೃಜಿನಂ ಜಿನರಾಜನೆ ದೈವಮಾಗಿಯುಂ
ನಿಮ್ಮಡಿಯನ್ನರುಂ ಗುರುಗಳಾಗಿಯುಮುತ್ತಮಪಾತ್ರದಾನದೊಳ್
ಸಮ್ಮದಶೀಲ[1]ನ[1]ಪ್ಪ ಜಿನಶಾಸನದೀಪಕನಪ್ಪ ಲಕ್ಷ್ಮಿಯೊಳ್
ಸಮ್ಮತನಪ್ಪ ಪುತ್ರನೆನಗಾಗದ ಕಾರಣಮೇಂ ಮುನೀಶ್ವರಾ ||೧೦೭||

ವ|| ಎಂದ ಜಿನದತ್ತಿಗೆ ಮುಗುಳ್ನಗೆ ನಗುತ್ತುಮವರಿಂತೆಂದರ್

ತಪದಿಂ ಗುಣದಿಂ ಪುಣ್ಯಮ
ನುಪಾರ್ಜಿಪರ್ ಪಲಬರಾದರವರ್ಗೆಂದೀ ಭೂ
ಮಿಪ ದಿವಿಜಭವನಮವರ
ಲ್ಲಿ ಪುಟ್ಟದಿನ್ನೆಲ್ಲಿ ಪುಟ್ಟು[2]ಗುಂ[2] ಪುತ್ರವತೀ ||೧೦೮||

*ಇನಿತೇಕೆ ನಿಮ್ಮ ಮಱುಕಂ
ತನಯಂ ನಿನಗಾಗಲೆಂದು ತಪಮಂ ಮಾಡಿಟ್ಟಾ
ತನ ಮಱುಕಮೆ ಸಾಲದೆ ಪೇ
ೞ್ವೆನನಂ ಪೂರ್ವಾಶೆ ಪಡೆಯಲೇಂ ಮಱುಗುಗುಮೇ ||೧೦೯||

ವ|| ಇದನೀಗ[3] ಳಿಂತೆ[3] ನಿನ್ನರಸನರುಹದ್ದಾಸ[4]ನುಂ[4] ಬೆಸಗೊಂಡೊಡೆ ಪೇೞ್ದಿವು, ಪೋಗಿ ಬೆಸಗೊಳ್ಳೆಂಬುದುಂ ಮಹಾಪ್ರಸಾದಮೆಂದು ಪೊಡೆಮಟ್ಟು ಪೋಗುತ್ತಮೆ ಕಳಾಧರೆಯಂ ದೇವನನೊಡಗೊಂಡು ಬಾ ಎಂದು ಕಳಿಪಿ ತಾನಂತಃಪುರಮಂ ಪೊಕ್ಕು ವಿಳಾಸ ನಿಳಯದೊಳಗಣ ಮಣಿಮಂಚದ ಕೆಲದ ಕಾಂಚನವಿಷ್ಟರದೊಳ್ ಪರಿವಿಷ್ಟೆಯಾಗಿರ್ದಳನ್ನೆಗಂ

ಪ್ರಿಯನ ಬರ[5]ವುಂ[5]ತೆ ಚಿತ್ತ
ಪ್ರಿಯನಾತನೆ ಬಂದಪಂ ಮನಸ್ತಾಪಮನತಿ
ಶಯದಿಂ ಬಂದಾಱಿಪವೊಲ್
ನಯವೇಱಿ ಬೆಮ[6]ರ್ತ[6] ಮೈಗೆ ದಕ್ಷಿಣಪವನಂ ||೧೧೦||

---

1 ಮ (ಚಟಡ) 2 ವರ್ (ಚಜಟ) ವಂ (ಡ) 3 ಳಂತೆ (ಗಚಜಟ) 4 ನಂ (ಗಚಟ) 5 ವಂ (ಗಚಟ) 6 ರ್ತ (ಗಚಟ) * ಈ ಪದ್ಯದಅನಂತರ 'ಜ' ಪ್ರತಿಯಲ್ಲಿ ಬರುವ ಹೆಚ್ಚಿನ ಪದ್ಯ, ಸ್ವಲ್ಪ ಭಾಗ ಹರಿದುಹೋಗಿದೆ.

....
....ಗಿಪ್ರ
........ಸುರಸಂತಾನಕ್ಕೆ ಬಯಸಿನಾಕವಿ
ಮಾನದ ಪಾಸುಗಳ ಪೊರೆಗಳೇಂ ಬಯಸುಗುವೋ

ವ|| ಎಂಬಿನಮಿನಿಯಳ ಮೊಗಮತ್ತಲೆ ಕಣ್ಣಾಗಿ ಬರುತ್ತುಮರಸಂ ತನ್ನೊಳಿಂತೆಂದಂ

ಕಿಱಿದನುರಾಗಮಂ ಕಿಱಿದು ದುಮ್ಮಾನಮಂ ಕಿಱಿದೊಂದು ಹಾಸಮಂ
ಕಿಱಿ[1]ಯ[1]ಱಿಯಟಿಕ್ಕೆಯುಂ ಕಿಱಿದು ಸಂತಸಮಂ ಕಿಱಿದೊಂದು ಖೇದಮಂ
ಸೆಱೆವಿಡಿದೆನ್ನ ವಲ್ಲಭೆಯ ಮುದ್ದುಮೊಗಂ ವ್ಯಭಿಚಾರವಿ[2]ಶ್ರ[2]ಮಂ
ಮೆಱೆದಪುದೋ ದಿನಾಗಮದ ರಾತ್ರಿವಿರಾಮದ ಪದ್ಮದಂದದಿಂ ||೧೧೧||

ವ|| ಎಂದು ಬಗೆಯು[3]ತ್ತುಂ ಬಂದ[3]ರಸಂ ಸಿರಿಮಂಚಮನಳಂಕರಿಸಿ ಕುಳ್ಳಿರ್ದುಂ ಕಳಾಧರೆ ಮಣಿಮಯಮಾದ ಪೀಠಂ ಬೆಟ್ಟತ್ತೆಂಬಂತಿರ[4]ಗಲೆ[4] ನೂಂಕಿ ಮೆಲ್ಲಿದುವಪ್ಪ ತನ್ನ ನುಣ್ದೊಡೆಗಳನರಸನ ಪಾದಪಲ್ಲವಕ್ಕೆ ಸಾರ್ಚಿ ಪಾಣಿಪಲ್ಲವಂಗಳಿಂ ಪಿಡಿಕೈಸುತ್ತುಮಿರ್ಪುದುಮರಸನಿಂತೆಂದಂ

ಅರಸನ ನುಡಿ ಮುನ್ನಮೆ ಕ
ರ್ಣರಸಾಯನಮದಱ ಮೇಲೆ ಸುತಲಾಭಕಥಾಂ
ತರ[5]ಮೆನೆ ಸರಸೀ[5]ಜಾಸ್ಯೆಗೆ
ಮರುಗಂ ಪೂತತ್ತು ಕರ್ಪು ಪಣ್ತುದು ಪೆಱತೇಂ ||೧೧೨||

ಅರಸಿಯ ವಕ್ತ್ರಪದ್ಮಮಿನಿತೇಕೆಯೊ ಮಾಗಿಯ ಪದ್ಮದಂದದಿಂ
ಕೊರಗಿದುದಿಂತಿದೇಕೆ ಮಧುವಂ ನೆಱೆ ಕಾಱಿದ ನೈದಿಲಂದ[6]ದಿಂ[6]
ನೆರೆದುವು ನೀಳ್ದ ಕಣ್ಬೊಣರ್ಗಳೊಲ್ಲದೆ ತಂಬುಲಮಂ ಪ್ರವಾಳದಂ
ತಿರೆ ಪೊಳೆ[7]ದಪ್ಪುದೊ[7]ಪ್ಪುವರುಣಾಧರಮೇಕೆಯೊ ಪೇೞ್ ಕಳಾಧರೇ ||೧೧೩||

ಬಾಡಿದ ದೇವಿಯ ತನುಲತೆ
ಬಾಡಿಸಿದುದು ನೋಡಿ ಬಾಡುವೆನ್ನಯ ಮೊಗಮಂ
ಬಾಡಿ ಬಸವೞಿದು ಸಸಿಯಂ
ಬಾಡಿಸಿದುತ್ಪಳಿನಿಯಂತೆ ಮುನ್ನೇಸಱನೊಳ್ ||೧೧೪||

[8]ನೀ[8]ರ್ವಡಸಿ ಪಿಡಿದ ಕರಿ[9]ಯಳಿ[9]
ನೀರ್ವೂ[10]ವಂ[10] ಚುಂಬಿಸುತ್ತೆ ನಾರಿಯ ನಾಣಿಂ
ಸಾರ್ವ ಮೊಗಂ ಕಟ್ಟಲೆಯಂ
ಪೀರ್ವಮೃತಕರಂಬೊಲೋಪ[11]ನಂ[11] ನುಡಿಯಲೊಡಂ ||೧೧೫||

---

1 ವ (ಜ) 2 ಭ್ರ (ಜ) 3 ತ್ತುಮಿರ್ದ (ಜ) 4 ಲೆ (ಚಟಡಣ) 5 ಸ ಮೆನೆ ಸರಸಿ (ಟಡಜ) 6 ದೊಳ್ (ಚಟ) 7 ದೊಪ್ಪುವೊ (ಕಜ) 8 ನೇ (ಜ) 9 ಯೊಳ (ಜ) ಯಳೆ (ಟ) ಯೊಳ (ಡಣ) 10 ವುಂ (ಡ) 11 ವಂ (ಜ)

ವ॥ ಎಂದರಸಂಗೆ ಕಳಾಧರೆಯಿಂತೆಂದಳ್

ಮಲಧಾರಿಸ್ವಾಮಿಗಳಂ
ನಿಲಿಸಲ್ವೋದಲ್ಲಿ ದೇವಿಗವರಿಂತೆಂದರ್
ನಿಲಿಸುಗೆ ನಿನ್ನಯ ಪುರುಷಂ
ನಿಲಿಸುಗೆ ಮೇಣ್ ನಿ[1]ನಗೆ[1] ಪುತ್ರ[2]ರುಳ್ವೊಡೆ[2] ಸಾ[3]ಲ್ವಂ[3] ॥೧೧೬॥

ವ॥ ಎಂ[4]ದಾ[4] ಮುನಿವೃಂದಾರಕನ ವಚನದಿನಾದ ಪುತ್ರದೋಹಳದಾಹಂ ದೇಹಮಂ ಕರಗಿಸೆ ಕರಮಟಿಲ್ದು ಬುತ್ತುಂ[5]ಕ[5]ರೆಯುತ್ತುಮುಣ್ಣದೆ ಕುಡಿಯದಾರ್ ಸಂತೈಸಿದೊಡಂ ಸಂತಮಿರದಿರ್ದಪಳದೇಕೆನೆ

ಮುನಿಭಾಸ್ಕರನಿಂದನೆ [6]ಬು
ದ್ಧಿ[6]ನಿಯಮನಸ್ಸೂರ್ಯಕಾಂತದೊಳ್ ಪುಟ್ಟಿದ ನಂ
ದನದೋಹಳದಹನಂ ದೇ
ವನ ವಾಕ್‌ಚಂದ್ರಿಕೆಯಿನಲ್ಲದೇನಾಱುಗುಮೇ ॥೧೧೭॥

ವ॥ ಎಂಬುದುಮರಸನರಸಿಗಿಂತೆಂದಂ

ಎನ್ನ ವಿಷಾದನಲ್ಲವೆ ವಿಚಾರಿಸೆ ನಿನ್ನ ವಿಷಾದವಲ್ಲಿದೇ
ಕೆನ್ನತಿ ಭಿನ್ನವಾಯ್ತು ಮಹಿಭಾರದಿನೆನ್ನ ಭುಜಂ ತನೂಜನೊ
ರ್ವನ್ನಿನಗಾದೊಡಾ ಪೊಱೆಯನೆತ್ತಿ ಸುತಾದ್ರಿಗೆ ಬ[7]ರ್ದೆ[7]ನೆಂದು ತೋ
[8]ಳ[8]ನ್ನಿನಿರ್ದಪ್ಪೆನುಬ್ಬೆಗಮಿದೆನ್ನದೊ ನಿನ್ನದೊ ಪೇೞ್ ಮನಃಪ್ರಿಯೇ ॥೧೧೮॥

ಅರ್ಣವವೃತ ಭೂಭರಮಂ
ನಿರ್ಣಯಿಸುವ ಪುತ್ರನಲ್ಲಿ ಗತಿವಡೆಯ[9]ದೆ[9] ಪೋ
ಪರ್ಣರಪರ ಪುತ್ರಸ್ಯಗ
ತಿರ್ನಾಸ್ತಿಯೆನಿಪ್ಪ ವಾಕ್ಯವಾ[10]ಯ್ತಾ[10]ದುದಱಿಂ ॥೧೧೯॥

ವ॥ಸದ್ಧರ್ಮಲಾಭಮುಂ ಸತ್ಪುತ್ರಲಾಭಮುಮುಭಯಭವಹಿತಕರಮನೆರಡುಮಂ ಪಡೆಯದಾನೆರಡಱಿಂ ಕೆಟ್ಟೆನೆಂದರಡಿಲ್ಲದಾನುಮಿದನೆ ಚಿಂತಿಸಿ ಸೊಡರಿರ್ದಂತೆ ಕಟಿ ಲೆಯಂ ತೊಡುವುದು ಮೂರ್ಖಂಗಮೊಳಗಾಗಿಲೆಂದು [11]ಪೋಗಿ[11] ನಮ್ಮ ಕುಲಗುರು

---

1 ನ್ನ (ಚ) ನ್ನಯ (ಟ) 2 ನುಳ್ವೊಡೆ (ಜ) ರುಳ್ವೊಪೆ (ಡಣ) 3 ಧ್ವೀ (ಜ) 4 ದೆ (ಜ) 5 ಕೆ (ಚಟಡಣ) 6 ಬರ್ದಿ (ಚಣ) ಬದ್ದಿ (ಟಡ) 7 ದ್ದೆ (ಚಟ) 8 ಳ್ನ (ಚಟಡ) –(ಜ) 9 ಲೆ (ಜ) 10 ಯ್ತೋ (ಕ) 11 ಪೇೞಿ (ಕ)

ಗಳಪ್ಪ ನಿಮಿತ್ತಜ್ಯೋತಿಗಳ ಚರಣನಖಜ್ಯೋತಿಗಳ್ಗೆ ಕಟ್ಟಲೆಯಂ ಕಳೆಯೆಂದೆಱಗು ವಂತೆಱಗಿ ಬೆಸಸಿಮೆಂದು ಬೆಸಗೊಂಡೊಡೆ ದತ್ತಾವಧಾನರಾಗಿ ನಮೋಸ್ತುಗಳ್ ನಿಮಿತ್ತಮಂ ನಿ[1]ಶ್ಚ[1]ಯಿಸಿ ನೋಡಿ

ಹರಿವಂಶೋದಿತವಿಕ್ರಮಂ ವಿವಿಧ ವಿದ್ಯಾತೀರ್ಥಹಂಸಂ ಸುಧಾ
ಕರಶೀಲಂ ವಸುದೇವ ಕೇಳಿ ನಿಳಯಂ ನಾನಾ ನಯೋಪಾಯ ಭಾ
ಸುರ ಭಾಗ್ಯೋದಯ ಪದ್ಮನಾಭನಿಭರಾಮಾಕಾರಮಂತ್ರಂ ನಿ[2]ಜಾ
ಚ[2]ರಿತೋಚ್ಚಾ[3]ರಿ[3]ತ ನೇಮಿನಾಥಚರಿತಂ ಸೌಜನ್ಯಜನ್ಮವ್ರತಂ ||೧೨೦||

ಇದು ಮೃದುಪದಬಂಧುರ ಸರಸ್ವತೀ ಸೌಭಾಗ್ಯವ್ಯಂಗ್ಯಭಂ[4]ಗಿ[4] ನಿಧಾನ ದೀಪವರ್ತಿ[5]ಚತುರ್ಭಾಷಾ ಕವಿ[5]ಚಕ್ರವರ್ತಿ ನೇಮಿಚಂದ್ರ ಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳ[6]ದೇವ[6] ಪ್ರಸಾದಾಸಾದಿತ ಮಹಾಪ್ರಧಾನ ಸೆಜ್ಜೆವಳ್ಳ ಪದ್ಮ ನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್

ಪ್ರಥಮಾಶ್ವಾಸಂ
ಸಮಾಪ್ತಂ

---

1 ಚ್ಚ (ಚ) ಟ್ಟ (ಣ) 2 ಜೋಚ್ಚ (ಗ) 3 ಲಿ (ಚಜ) 4 ಗಿನಿ (ಚಟಡ) 5 ಕವಿ. (ಜ)
6 ರಾಯ (ಜ)

ದ್ವಿತೀಯಾಶ್ವಾಸಂ

ಶ್ರೀರಮಣೀಪ್ರಿಯ[1]ನತಿ[1]ಗಂ
ಭೀರಂ ಭುವನೈಕದಾನಿ ಧೀರೋದಾತ್ತಂ
ಸಾರಸ್ವತಪಾರಂ ಶೃಂ
ಗಾರಾಮೃತಸೇತು ಸುಕವಿಕಂಠಾಭರಣಂ ||೧||

ವಿನಯನಿಧಿ ಭಾಗ್ಯವಂತಂ
ಜಿನಶಾಸನದೀಪಕಂ ಪ್ರತಾಪಿ ಸುವಿಜ್ಞಾ
ತನಯನುದಾತ್ತಂ ತಡೆಯದೆ
ನಿನಗಾದಪನೆಂದು ಜೆಸಸಿ[2]ದರ್ಪ[2]ನಜಮುಖೀ ||೨||

ಕರತಳದ ಮುತ್ತನಱಿವಂ
ತಿರೆ ಮುನಿಪಂ ಚಿಹ್ನಲಕ್ಷಣಾಂಗ[3]ದ ಕಲೆ ಸು[3]
ಸ್ವರಭೌಮವ್ಯಂಜನ[4]ಮಂ[4]
ತಱಿಕ್ಷನೆಂಬೀ ನಿಮಿತ್ತಮೆಂಟುಮನಱಿವರ್ ||೩||

ವ|| ಮತ್ತಮು[5]ದರ್ಕೊಂ[5]ದು ಕೂನಮಂ ಪೇಟ್ದರ್ ನಿನ್ನ ಮೊಲೆಗೆಲದೊಳ್ ಚಿನ್ನದಗಲದ ಪೊನ್ನ ಬಣ್ಣದ ಮುತ್ತಿ ಪತ್ತೆನಿಸದೆ ಮೂಡಿದುದು ಗಡ ಕೋಱಿಂದು ನೋಡುವಾಗಳ್

ಉತ್ತುಂಗ ಕುಚಾದ್ರಿಯ ಪೊ
ಮ್ಮತ್ತಿಯ ನೊಳೆ ನೊಳೆತ ಜರಗಿನಂತಿರೆ ಕಾಣ
ಲ್ಬೆತ್ತ ಸತಿಗಾಯ್ತು ಸುತನಂ
ಪೆತ್ತಂತಪ್ಪೊಂದು ಸಂತಸಂ ತತ್‌ಕ್ಷಣದೊಳ್ ||೪||

---

1 ರತಿ (ಕಡ) 2 ದಂಪ (ಡ) 3 ಸ್ವಪ್ನ (ಜ) 4 ಮನಂ (ಚಟಡ) 5 ರದಕೊಂ (ಚ) ರಿದಕ್ಕೊಂ (ಜ) ರದುಕೊಂ (ಡ)

ಪಡೆಯಲರಿದೆನಿಸುವಜಿನಂ
ಪಡೆದಂ ಜಿನನೆಂಬ ಭವ್ಯಚಿಂತಾಮಣಿಯಂ
ಪಡೆದಂ ಮಗ[1]ನೇ[ಗ]ಹನಂ[1]
ಪಡೆ[2]ಯದು[3]ದಿನ್ನೊಂದುಮುಂಟೆ ನಮಗೆಮೃಗಾಕ್ಷೀ ||೫||

ವ|| ನೆಲನಂ ಪೊಯ್ದು ಕಯ್ ತಪ್ಪುಗುಮಾಚಾರ್ಯರ ವಚನಂ ತಪ್ಪದು ಧರ್ಮ ಪರಿಯಾಗಿರೆಂದರಸನಷ್ಟಾಹ್ನಿಕಮನೆತ್ತಿಕೊಂಡಿತ್ತಮಹೇಂದ್ರನುಂ ಮಾಡಲಾಜಿದ ಮಹಾ ಮಹಿಮೆಯಂ ಮಾಡುತ್ತಮಿರ್ದನತ್ತಲ್

ಗುಡಿಯಿಂ ತೋರಣದಿಂ ಕ
ನ್ನಡಿಯಿಂ ಕಳಶದಿನನೇಕ ಚಾಮರದಿಂ ಬೆ
ಳ್ಗೊಡೆಯಿಂ ಮುಡಿಯಿಂ ಮುತ್ತಿನ
ಕಡೆಯಿಂದರ್ಚಿಸಿದಳರಸಿ ಚಂದ್ರಪ್ರಭ[4]ನಂ ||೬||

ಮಳಯಜದಿಂ ಮಲ್ಲಿಗೆಯಿಂ
ದೆಳಮುತ್ತಿಂ ಮಗಮಗಿಪ್ಪ ಕಪ್ಪುರದಿಂದು
ತ್ಪಳಲೋಚನೆಯರ್ಚಿಸಿದಳ್
ತೊಳತೊಳತೊಳಗುತ್ತುಮಿರ್ಪ ಚಂದ್ರಪ್ರಭ[4]ನಂ ||೭||

ಕಳಹಂಸೆಯ ಕರ್ಪೂರದ
ಮಳಯರುಹದ ಬೆಳ್ಪನಿಳಿಪ ಜಿನರಾಜನ ಮೆ
ಯ್ವೆಳಗಿನ ಸುರಭಿಯ ಪಾಲಂ
ಪುಳಕಿತತನು ಪುತ್ರ[5]ಕಾಮ್ಯದಿಂ[6]ದಂ ಮಿಂದಳ್ ||೮||

ವ| ಬಬಿಾಯನಾ ಬಳವಿರೋಧಿಪೂಜಿತನ [6]ಪದ[6]ಪಯೋಜಂಗ[7]ಳ್ಗ[7]ಜಿ ಸೆಜಿನೊಸಲನೆಜಿಗಿಸಿ

ಸಲಿಯಿಸು ಬಿನ್ನಪಮಂ ಮ
ತ್ಕುಲಪಾಲಕ ಚಂದ್ರನಾಥ ನಿನ್ನ ಸುಧಾನಿ
ರ್ಮಲಮೆನಿಸಿದ ದೇಹದ್ಯುತಿ
ನೊಲೆವಾಲಕ್ಕೆನ್ನ ಸುತಚಕೋರಂಗೆ ಜಿನಾ ||೯||

---

1 ನೆನಗಪನ (ಕ ತಡ) ನೇಗಾಂ (ಜ) ನೇನಹನಂ (ಟಣ) 2 ದು (ಕ) 3 ನಾ (ಚಟಡ) 4 ನಾ (ಚಟಡ) 5 ಒೀಪ್ಪಯಿಂ (ಜ) 6 ಪಯೋದ (ಜ) 7 ಳ್ಗಬ್ಬೇ (ಕ) ಳ್ಗಜೇಜ್ಞಿ ಜೇ (ಜ)

ವ॥ ಅಂತು ಜಿನಪೂಜಾಮಹೋತ್ಸಾಹಂಗಳಂ ಪುಷ್ಪೋತ್ಸವ ನಿಮಿತ್ತಮಾ ಜಿನದತ್ತೆ ಮಾಡುತ್ತುಮಿರ್ಪಿನಮೊಂದುದಿವಸಂ

ಪಾಯ್ವ ಕುಚಂಗಳಂ [1]ಪಿಡಿದು ನೋಡಿ ಕವುಂಕಟಿನೆತ್ತಿ ಕಂಪನಾ
ರಯ್ವುದುಮೊತ್ತುತುಂ ಮೊಡವಿಯಂ ಮೊಗಮಂ ಮೃಗನೇತ್ರೆ ದರ್ಪಣ
ಕ್ಕುಯ್ವುದುಮುಲ್ಲನಂ ಕಳೆದು ಮಾಣಿಕಮಂ ಕನಕಂಗಳಿಂದೆ ಕೈ
ಗೆಯ್ವುದುಮುಂದು ಕೈಗೆ ಸೆಳೆಯಂ ಸಖಿ ಕೊಟ್ಟಳದೇಂ ಪ್ರಗಲ್ಭೆಯೋ ॥೧೦॥

ತೊಳಗುವ ಮೈಗಳೊಳ್ ತಿಮಿರ್ದ ಕುಂಕುಮದಿಂ [2]ತಗೆದು[3]ಟ್ಟ ಮುತ್ತಿನಿಂ[4]
ದಳವಡೆ ತೊಟ್ಟ ಪೊಂದೊಡಿಗೆ[5]ಯಿಂ[6] ಚಳಕೋಮಳಹಸ್ತಶಾಖೆಯೊಳ್
ಸೆಳೆ ಸೆಳೆಗೊಂಬಿನಂತೆ ಪೊಳೆವೊಂದು ವಿಳಾಸದಿನಗ್ಗಳಂ ತಳಿ
ರ್ತೆಳಲತೆಯಂತೆ ತೋಱುವರುಣಾಧರೆ ಪುಷ್ಪಿತೆಯಪ್ಪುದೊಪ್ಪದೇ ॥೧೧॥

ಚಿಕುರಂ ಪ್ರಜ್ವಲಿಸಿಂದ್ರನೀಲನಿಕರಂ ಬಾಯ್ವಿದ್ರುಮಂ ಛಾಯೆ ಮಾ
ರಕತಚ್ಛಾಯೆ ನಖಾಳಿ ವಜ್ರಮುಮಳಂ ದಂತೋತ್ಕರಂ ವ್ಯಕ್ತ ಮೌ
ಕ್ತಿಕಮಾಗಲ್ಕೆ ಪರಾರ್ಧ್ಯವಾಗೆ ನೆಗಟ್ದಾ ಪೆಣ್ಮಾಣಿಕಂ ಮಾಣ ಮಾ
ಣಿಕ[7]ಗೆಂಟೆಂ[7]ದೊಡೆ ಮಾಣ್ದನಂವರಸನಾ ಸ್ತ್ರೀಮಾಯೆಯಂ ಮಿ[8]ರ್ವರಾರ್[9] ॥೧೨॥

ಅಸಿಯ ಸೆಳೆ ತಳಮೊಳತಿರಂ
ಜಿಸೆ ಪುರ್ವವ್ವಳಿಸೆ ಪತ್ತಿಸಾರ್ವವರಂ [6]ತ
ರ್ಜಿ[6]ಸಿ ಕಾಮನ ಪಡಿಯ[7]ಱ[7]ತಿವೊ
ಲೆಸೆದಳ್ ಪೊಸದೇಸೆಕಾರ್ತಿ ಪೊಸಕಿ[8]ಟ್ಟ[8]ಳದೊಳ್ ॥೧೩॥

ವ॥ ಅಂತು ರಜಸ್ವಲೆಯಾಗಿ ಚತುರ್ಥದಿನದೊಳ್ ಬಿಸಿಲಂ ಕಳೆದು ಬೆಳು ದಿಂಗಳಂ [9]ತೊಡು[9]ವ ಗಗನಲಕ್ಷ್ಮಿಯಂತೆ ಕೆಂಪಿನ ಪಸದನಮಂ ಕಳೆದು ತಲೆ ನೀರ್ಮಿಂದು ಬೆಳ್ಪಸದನಂಗೈದು

---

1 ಪಿ (ಊ) 2 ದಮುರ್ದುಟ್ಟಮುಳ್ಪಿಂ (ಕ) ತೆಗೆದಿಟ್ಟ ಮುಳ್ಪಿನಿಂ (ಜ) 3 ಯುಂ (ಕ)
4 ಗೆಟ್ಟಿಂ (ಕಡ) 5 ಱುವರ್ (ಜ) ವರ್ರೇ (ಡ) 6 ಕರ್ಚಿ (ಕಡ) ವರ್ಜಿ (ಜ)
7 ಱಿ (ಊ) ರೀ (ಡ) 8 ಲ್ಧ (ಣ) 9 ತುಡುಕು (ಚಟಡಣ)

ಸನೆಗಣೆ[1]ಯಂ[1] ಸ್ಮರಂ ಪಡೆದ [2][ಪೂಗೊ]ಳದಂ[2] ತೆಪ್ಪೊಲಿರ್ದುದಚ್ಚಮಿಂ
ಚಿನ ಸುಲಿಪಲ್ಗಳಚ್ಚಬಿಳಿದೆಂಬಿನಮುಟ್ಟ ದುಕೂಲಮಚ್ಚಗಂ
ಪಿನ ಸಿರಿಕಂಡದಣ್ಪು ತೊಳಪಚ್ಚ ಬೆಳಂತಿಗೆಯೋಲೆಯುಚ್ಚಮು
ತ್ತಿನ ತೊಡವಚ್ಚಮಲ್ಲಿಗೆಯ ಸೋರ್ಮುಡಿ ಸೋಮಸಮಾನವಕ್ತ್ರೆಯಾ ||೧೪||

ಸುದತಿಯ ದಿವ್ಯಗಂಧತನುಚಂದನಶಾಖೆಯೊಳಂಗಜಾಹಿಯಿ
ಕ್ಕಿದ ಪೊರೆಯಂತಿರುಟ್ಟ ದುಗುಲಂ ಕುಚಕೋಕಯುಗಂಗಳಡ್ಡಗ
ರ್ಚಿದ ಬಿಸದಂತೆ ಹಾರಲತೆ ಕಣ್ಗೆ ಕರಂ ಸುಲಿಪಲ್ಲ ಪಙ್ಕ್ತಿಯೊ
ಪ್ಪಿದುದು ಸುಧಾಂಶುಬಿಂಬ[3]ಪೆ[3]ಳಮುತ್ತನೆ ಮುಕ್ಕುಳಿಸಿರ್ದುದೆಂಬಿನಂ ||೧೫||

ಮಿಗೆ ವಿರಹಿಕರಿಗಳಂ '[4]ಪೊ[4]'
ಯ್ದುಗಿದಂಗಜನಸಿ[5]ಯೊಳಡರಿ[5] ಪತ್ತಿದ ಪೊಸಮು
ತ್ತುಗಳೆನೆ ಸೋರ್ಮುಡಿಯೊಳ್ ಮ
ಲ್ಲಿಗೆಯ ಸರಂ ಕಣ್ಗೆ ವಂದುದಾ ಕಾಮಿನಿಯಾ ||೧೬||

ವ|| ಎಂಬಿನಂ ಕೈಗೆಯ್ದು ಕಾಂತನ ಸೂಟ್ಗಿವರೆ ಸಮರತ ಸಮನಂತರ ಸಮಯ
ದೊಳ್

ಅತಿಶಯ ಸಮಾಧಿವಾ[6]ದ[6]ಕ
ಯತಿಜನ ಘನ ನಿನದ[7]ವೊದವೆ[7] ಬಂದುದು ಚಿಂತಾ
ಗತಿ ಜಿನಹಂಸಂ ತನ್ನೃಪ
ಸತಿಯಮಳಿನ ಗರ್ಭಮಾನಸಕ್ಕತಿಜವದಿಂ ||೧೭||

ವ|| ಆ ಪ್ರಸ್ತಾವದೊಳ್ ಕಾಮಕೇಳೀ ವಿನೋದದಿಂ ಶ್ರಮಂಬೆತ್ತು ಸುಖ
ಸುಪ್ತಿಯಾಗಿ

ಭಾನುವನಿಂಗಡಲಂ ಮದ
ದಾನೆಯನದಟಲೆವಪೊಂಪು ಕೇಸರಿಯಂ ಸಂ
ತಾನದ ಪೂವಿನ ಸರಮಂ
ಸ್ನಾನಂಗೆಯ್ಯುತ್ತುಮಿರ್ಪ ಸಿರಿಯಂ ಕಂಡಳ್ ||೧೮||

---

1 ಯಿಂ (ಜ) 2 ಪೂಗೊರ್ಳದಂ (ಕ) ಪೆಣ್ಮಲರ್ದಂ (ಜ) ಪೆಣ್ಗಳದಂ (ಚಗಟಡ) ಪೊನ್ಗೊಳದಂ (ಣ) 3 ದೆ (ಗಟ) ಮೆ (ಣ) 4 ಪಾ (ಜ) 5 ದೊಳಡಸಿ (ಕ) 6 ಹ (ಜ) 7 ವೊಡನೆ (ಕಡ)

ವ|| ಕಂಡು ತನ್ನ ನಿದ್ರೆಯೊಡನೆ * ಕಟ್ಟಿಲೆ ಪರೆಯುತ್ತುಂ ಕ[1]ಣ್ಮಲರೊ[1]ಡನೆ* ಕಮಲದಳವಲರೆ ತನ್ನ ಪಿಂಡುಗಂಕಣದೊಡನೆ ಕೊಳರ್ವಕ್ಕಿಗಳುಲಿಯೆ ತನ್ನ ಮನೋ ರ[2]ಥ[2]ದೊಡನೆ ರವಿರಥೋದಯಮಾಗೆ ಮಂಗಳಗೇಯಸ್ತುತಿಯುಂ ತಾಗೆ ಸೆಜ್ಜೆಯಿನುಚ್ಚುಗದಿನೆರ್ದು ಶೃಂಗಾರಗೇಹದೊಳ್ ಶೃಂಗಾರಂಗೆಯ್ಯುತ್ತುಮಿರ್ದಳನ್ನೆಗಂ

ಎಡದ ಕರದೊಳ್ಗಂಧಂ ಪೂಮಾಲೆ ಸಿರ್ಪಿನ ಸೇಸೆ ವೊಂ
ಬಡಲಗೆಯೊ[3]ಳೊಂದಂ[3]ದಂ ಚೆಲ್ವಾಗೆ ಗಂಧಜಳಂಗಳಂ
ಪಿಡಿದ ಕಳಸಂ ಕಯ್ಯೊಳ್ಕತ್ತೊಂದಜಿಕೊಳ್ಗಿಗೆ ಶೋಭೆಯಂ
ಪಡೆಯೆ ಪದಪಿಂದೊರ್ವಂ ಬಂದಂ ಪ್ರಗಲ್ಭಪುರೋಹಿತಂ ||೧೯||

ವ|| ಬಂದು ದೇವರ ಬರ[4]ವಂ[4]ಕಾಣ್ಬಂತೆ ತನ್ನ ಬರ[4]ವಂ[4] ಕಂಡಿದಿರೆರ್ದು ಕಯ್ಗಳಂ ಮುಗಿದ ರಾಜವಲ್ಲಭೆಯ ಮುಂವೆ ನಿಂದು

|| ಆಶೀರ್ವಾದ, ಸಂಸ್ಕೃತ ||

ಲಕ್ಷ್ಮೀಶ್ರೀ ಕವ ಪ್ರಧಸು ಪುಣ್ಯಫಲಂ ಪ್ರಸೂತಾಂ
ಶೀತಾಂಶುಲಾಂಛನವ[5]ತಾಂ[5] ವಿತ[6]ತಿ[6]ರ್ನಖಾನಾಂ
ರುಬ್ಮಾಂಜ[7]ರೀ[7]ಚರಣಪಲ್ಲವಪುಲ್ಲಕಾನಾಂ
ಶೋಭಾಜ[8]ನಿ[8]ರ್ಜಿನಪತೇಃ ಫಲಿನ[9]ಶ್ಚ[9] ನಿತ್ಯಂ ||೨೦||

ವ|| ಎಂದೋದಿ ಗಂಧೋದಕಮುಮಂ ಸಿದ್ಧ[10]ಸೇಸೆಯುಮಂ[10] ಕುಡೆ ಕೊಂಡು ಕುಳ್ಳಿರಿಸ[11]ಲ್ಕು[11]ಡಿಸಿ (?) ತನ್ನ ಕಂಡ ಕನಸುಗಳನನುಕ್ರಮದಿಂ ಪೇೞೆ ಕೇಳ್ದು

ಭಾನುವಿನಂತೆ ತೇಜಮೊಡೆಯಂ ಕಡಲಂತೆ ಗಭೀರನಾನೆಯಂ
ತಾನೆತ ಲೋಕದಾನಪತಿ ಕೇಸರಿಯಂತೆ ಪರಾಕ್ರಮಾರ್ಥಿ ಸಂ
ತಾನದ ಪೂವಿನಂತೆ ಲಲಿತಂ ಸಿರಿಯಂತೆ ಸಮಗ್ರಭಾಗ್ಯನು
ತ್ತಾನಯಶೋತ್ತಮಂ ನಿನಗೆ ಪುಟ್ಟಿದಪಂ ಕುಲರತ್ನಭೂಷಣಂ ||೨೧||

ವ|| ಎಂದು ಸ್ವಪ್ನಫಲಮಂ ಪೇೞ್ದು ಪುರೋಹಿತನಂ ಮಣಿಕುಂಡಲಾದಿಗಳಿನರ್ಚಿಸಿ ಪಂಚಪರಮೇಶ್ವರರ ಪೂಜಾಪ್ರಭಾವತತ್ಪರೆಯಾಗಿರೆ ಕೆಲವಾನುಂ ದಿವಸದಿಂ

---

1 ಲ್ಮರರೊ (ಚ) ಣ್ಮರಲೊ (ಟಣ) 2 ಥೋದಯ (ಜ) 3 ಳಂದೊಂ (ಕ) ಳೊಂದೊಂ (ಗಜಟ) 4 ವಂ (ಚಟಡ) 5 ರಾಂ (ಜ) 6 ತೆ (ಜ) 7 ಲೀ (ಚಟ) 8 ನಂ (ಕಡ) ನ (ಚಟ) 9 ಸ್ಸ (ಚಜಟಡ) 10 ಶೇಷವುಂ (ಡ) 11 ಲ್ಕೂ (ಣ) * ಗಟ ಪ್ರತಿಗಳಲಿಲ್ಲ.

ಸೆಳೆನಡುವನುಡಿವ ಭರದಿಂ
ಬಳೆವಂತಿರೆ ಬಳೆಯೆ ಮೊಲೆಗಳವಱಯೆ ಚಲದಿಂ
ಬಳೆವಂತೆ ಬಳೆಯೆ ನಡುವು
ಮ್ಮಳಿಸಿದವೋಲ್ ಕರ್ಗಿಕೊಂಡುವವಱ ಮೊಗಂಗಳ್ ॥೨೨॥

ನೆಗೆದ ಪಯೋಧರದ್ವಯದೊಳಾಕೆಯ ಗರ್ಭದ ರಾಜಪುತ್ರನಾ
ರೊಗಿಸುವ ಪಾಲ್ಗಳಂ ಮಡ[1]ಗಿ[1] ಮು[2]ದ್ರಿ[2]ಸಿದಂತೆ ವಿಧಾತ್ರನೊಯ್ಯ[3]ಗೊ[3]
ಯ್ಯಗೆ ಕುಚಚೂಚುಕಂಗಳೊಳೆ ಕಣ್ಗೊಳೆಂಗನೆಯೆಚ್ಚಿಕೊಳ್ವ ಕಾ
ಡಿಗೆಯುದಿರ್ದಂತೆ ಕರ್ಪುರ್ಗಕವದಿಂಪಡಿಯಿಟ್ಟುದು ಭೃಂಗಭಾಸುರಂ ॥೨೩॥

ವ॥ 'ಅಂತುಮಲ್ಲದೆ'

ಬಿದಿ ಸಜ್ಜೆಯ ಕಾವಿನ ನೀ
ಲದ ಕಳಸದ ಸವಡಿಗೊಡೆಯನಾ ವನಿತೆಯ ಗ
ರ್ಭದ ಬಾಳಂಗೆತ್ತಿದನೆನಿ
ಸಿದುದು ಸರೋವಮಾಳಿ ಕುಚಯುಗಂ ಕೃಷ್ಣಮುಖಂ ॥೨೪॥

ಕಾಪ್ಪಿರವೇ[4]ೞ[4] ಪಾಲನುಯಿಪುಂ[5]ಜಸ[5]ಮುಂ ಜಿನಮಜ್ಜನಂಗಳಂ
ಮಾಳ್ಪ ಜಿನೇಂದ್ರಪೂಜೆಯು[6]ನೆ[6] ಮಾಳ್ಪ ಜಿನಾಲಯ ಸಂಕುಲಂಗಳಂ
ಮಾಳ್ಪ ಜಿನಪ್ರತಿಷ್ಠೆಯನೆ ಮಾಳ್ಪ ಚತುರ್ವಿಧಮಪ್ಪ ದಾನಮಂ
ಮಾಳ್ಪ ಬಯಕೆಯಾಯ್ತು ಜಿನದತ್ತೆಗೆ ಭವ್ಯನಮೇರುಗರ್ಭದೊಳ್ ॥೨೫॥

ಜಿನತೀರ್ಥಾತಿಶಯಮುಮಂ
ಜಿನಜನನೀಗರ್ಭದೋಹಳಾತಿಶಯಮುಮಂ
ಜಿನಧರ್ಮಾತಿಶಯಮುಮಂ
ಜಿನದತ್ತಾದೇವಿ ಕೇಳಲಟ್ಟಿಗೆಯಾದಳ್ ॥೨೬॥

ವ॥ ಅಂತು ಬಯಸಲ್ತಕ್ಕ ಬಯಕೆಗಳಿಂ ನವಮಾಸಂ ತೀವೆ

ಮಣಿಮಯ ಪುತ್ರಿಕೆ ಚಿಂತಾ
ಮಣಿಯಂ ಲತೆ ಪಾರಿಜಾತಮಂ ಕನ್ನಡಿ ಪಾ
ರ್ವ[7]ಣ[7] ಶಶಿಯಂ ದೀಪಿಕೆ ದಿನ
ಮಣಿಯಂ ಪಡೆವಂತೆ ಪಡೆದಳಾ ಸತಿ ಸುತನಂ ॥೨೭॥

1 ದಿ (ಚಟಢ) 2 ದ್ರಿ (ಜ) 3 ನೊ (ಚಣ) 4 – (ಚಟ) 5 ಳು (ಜ) 6 ನಿಜ (ಕಡ)
7 ವ (ಚಟಢ) 8 ಣಿ (ಜ)

ಆ ಜಯಪತಿ ಪುಟ್ಟಲೊಡಂ
ತೇಜಮನಿಂಬಿಟ್ಟು ಬಂದು ಪೊಡೆವಟ್ಟ ಸುಹೃ
ದ್ರಾಜಕಮು[1]ಗಿ[1]ದಾತಂಗಪ
ರಾಜಿತನೆಂದಿಟ್ಟರಮರ್ದಿನೊಸರಂ ಪೆಸರಂ ॥೨೮॥

ಮಂದಪಿನೊಳೆ ಮಾಣಿಕಮಿ
ರ್ಪಂದದಿನತಿಶಯ ಮ[2]ರಾಳವಾ[2]ಳೋದರದೊಳ್ (?)
ಮಂದಾರದ [3]ಪಸಿ[3]ಯೆಸೆದಿ
ರ್ಪಂದದಿನಭಿಮಾನ ಮೇರು ತೊಟ್ಟಿಲೊ[4]ಳಿಸೆದಂ[4] ॥೨೯॥

ತೂಗುವ ತೊಟ್ಟಲೊಳಾಡಿದ
ನಾ ಗುಣಸಿಧಿ ಪೊಳೆದು ಪಾಱಿ ಪೆಱಗಾದೆಂ ಚಿಂ
ತಾಗತಿ ಖಚರನೆ[5]ಸೆಂ[5]ದು ನ
ಭೋಗತಿಯುಂ ನಭದೊಳಾಡಿ ತೋಱುವ ತೆಱದಿಂ ॥೩೦॥

ನಡೆಗಲ್ವಂದೆ ತಳರ್ನಡೆ
ನಡೆಯಿಸಿದಂ ನೃಪಕುಮಾರ[6]ನೆಳೆ[6]ಯಂ [7]ಬಿಣ್ಪಿಂ[7]
ನುಡಿಗಲ್ವಂದೆ ತೊದಳ್ನುಡಿ
[8]ನುಡಿಯಿಸಿ[8]ದಂ ತನಗೆ [9]ಸೋ[9]ಲ್ತ ವಾಕ್ಕನ್ನಿಕೆಯಂ ॥೩೧॥

ಗರ್ವಾರಿಗೆ ಷಟ್ಪ್ರತ್ಯಯ
ನಿರ್ವಾಹಂ ಛಂದದೊಳ್ ಸ್ವರಜ್ಞಾನಂ ಗಾಂ
ಧರ್ವದೊಳನುಭವಚರಮಾ
ಯು[10]ರ್ವೇ[10]ದದೊಳಾದುದಿನ್ನ[11]ರಾರ್[11] ನೃಪತನಯರ್ ॥೩೨॥

ವೀರಶ್ರೀಯಂ ನಿಡುದೋಳ್
ಕೂರಿಸಿದುದು ಕೈದು[12]ಗಲ್ತು[12] ಜಸ[13]ವೆ[13]ಣ್ಣಂ ದಿ
ಗ್ವಾರಣಮನೇಱ[14]ಸಿತ್ತು[14] ಗ
ಜಾರೂಢಪ್ರೌಢಿ ರಾಜರಾಜಾತ್ಮಜನಾ ॥೩೩॥

---

1 ನಿ (ಚಟಡ) 2 ದಾಳನಾ (ಜ) 3 ಶಶಿ (ಚಟ) 4 ಳಿರ್ದಂ (ಒ) 5 ಯೆಂ (ಗಚಟಡ)
6 ನಗೆ (ಚಟಚ) 7 ಬಲ್ಪಿಂ (ಜ) 8 ನಡೆಯಿಸೆ (ಕಗ) 9 ಪೋ (ಚಟಡಞ) 10 ರ್ವ(ಜ)
11 ರಾ (ಜಡ) 12 ಗೆಲ್ತು (ಜ) 13 ಲ (ಜ) 14 ಸುತ್ತೆ (ಕಗ) ಸುತ್ತ (ಚಟಡ)

ಆ ಕುವರಂಗೆ ಬಾಜನೆ [1]ಲಿಪಿ[1]ವ್ರಜದೊಳ್ ಪದಸಿದ್ಧಿ ಪಾಠ[[2]ಮಾ[2]]
ವ್ಯಾಕರಣಂಗಳೊಳ್ ಮತಿಯಳಂಕೃತಿಯೊಳ್ ಪರಪಕ್ಷ ದೂಷಣಾ
ಲೋಕನವು[3]ರ್ಕು[3] ತರ್ಕದೊಳಭಿಜ್ಞತೆಯಾಗನುದೊಳ್ ಪ್ರಸನ್ನ ಲೀ
ಲಾಕವಿತಾಗುಣಂ ಸಕಲ ಭಾಷೆಯೊಳಾದುದು [4]ತಜ್ಞ[4]ರಂಜನಂ ||೩೪||

ವ|| ಅಂತು ಸಕಳ ಶಾಸ್ತ್ರ ಶಸ್ತ್ರಾಭ್ಯಾಸನ ತ್ರಾಣ ಶ್ರೇಣಿಕ[5]ರ್ಷ[5]ಣ ನಿರತಿಶಯ್ಯ ನಿಶಿತ ಪ್ರ[6]ಗಲ್ಭ[6] ಪರಾಕ್ರಮನುಂ ಚಿರಾರೂಢ ಯೌವನನುಮಪ್ಪ ಮಗನಂ ಕಂಡು ತದೀಯ ಪಾಣಿಪಲ್ಲವನುನನುರೂಪ ಕನ್ಯಾ [7]ಕ[7]ರ ಕಿಸಲಯದೊಳ್ ತೊಡರ್ಚಲ್ ಬಗೆದು ಭಗವದರ್ಹತ್ಪೂಜಾ[8]ಪೂರ್ವಕಮರ್ಹದ್ದಾಸನಪೂರ್ವ ನಿವಾಸನಂ[8] ಪೂರ್ವಭವ ಪ್ರೇಮ ಪ್ರೇರಿತಮತಿಯಪ್ಪ ಪ್ರೀತಿಮತಿಯೆಂಬ ರಾಜಕುಮಾರಿಯೊಡನೆ ಮಹೋತ್ಸವದಿಂ ಮದುವೆಮಾ[9]ಡಿ[9]

ಅಂಗಜಮಂತ್ರ ಸಿದ್ಧಿವಡೆದಂತಿರೆ ಮಿಾಂಚೊಣರಾಗಿ [10]ಬಾಳ[10]ಜಾ
ಳಂಗಳ ಸಿಲ್ಕುಗಂಡುವು ಕುಮಾರಿಯ ಕಣ್ ಮಱಿದುಂಬಿಯಾಗಿ ಸೊ
ರ್ಕಿಂಗೆ ಸರೋಜದೊಂದು ಸವಿಗಂಡುವು ಬಾಳಚಕೋರವಾಗಿ ಬೆ
ಳ್ದಿಂಗಳ ಸುಗ್ಗಿಗಂಡುವು ಕುಮಾರನ ಕಾಂತಿ ಮುಖೇಕ್ಷಣಂಗಳೊಳ್ ||೩೫||

ತುಱುಗಿವೆ ನಿಂದು ನೋಡೆ ಕಡೆಗಣ್ಣಿದಿರ್ಗೊ[11]ಳ್ವ ಳಿ[11]ಪಾಡೆ ಪೊಕ್ಕು ಸೈ
ಪೆಱಗಿದಿರ್ಗೊಳ್ವ ಸೋಂಕು ನಳಿತೋಳಿದಿರ್ಗೊಳ್ವ ಕೊಡಂಕಿ[12]ನ[12]ಪ್ಪು ಬಾ
ಯ್ದೆಱೆಯಿದಿರ್ಗೊಳ್ವ ಚುಂಬನಮಲಂಪಿದಿರ್ಗೊ[13]ಳ್ವಗಿ (?) ಮೇರೆ[13]ದಪ್ಪಿ ಕಾ
ಳ್ಕೊಱೆ(?)ಯಿದಿರ್ಗೊಳ್ವ ಲಲ್ಲೆಯಿದಿರ್ಗೊಂಡುದು ಕೂಟದ ಕಾಯ್ಪುವೋಪರಾ||೩೬||

ವ|| ಅದಲ್ಲದೆಯುಂ

ಅರಮಗನಿರ್ಪನೋಲಗದೊಳೋಲಗಕಾರ್ತಿಯರೞ್ತಿಗಿಟ್ಟ ಕ
ಪ್ಪುರದ ಪರಲ್ಗೆ ಬಿ[14]ರ್ದರಲ್ಗೆ[14] ಸೂಸಿದ ಕುಂಕುಮರೇಣುಗೊಕ್ಕ ಕ
ಸ್ತುರಿಯ ರಜಕ್ಕೆ ಸಾಯಲೆಡೆಯಿಲ್ಲದ [15]ಕರ್ಪು[15] ಕೆರ[16]ಳ್ದು[16] ದರ್ಪಕಂ
ತಿರಿಪುವ ಚಕ್ರದಂತೆ ತಿರಿಯುತ್ತಿರೆ ಮೇಲೆ ಮದಾಳಿಮಾಳೆಗಳ್ ||೩೭||

---

1 ನವಿ (ಜ) 2 ಮಂ (ಚಜಟಡಣ) 3 ರ್ಕ (ಚಟಡ) 4 ತಜ್ಜ (ಜ) ತರ್ದಜ್ಞ (ಣ) 5 ಷ (ಜಡ) 6 ಜ್ಞ (ಜ) 7 ಕಾ (ಚಟಡ) 8-(ಜ) 9 ಡೆ (ಜ) 10 ಜಾಳ್ವ (ಜಟ) 11 ಳ್ದಿಡ (ಜ) 12 ಸೊ (ಜ) 13 ಳ್ವಳ್ವದುಮಿರೆ (ಚಣ) ಳ್ವದುಮಿ.ರೆ (ಟಡ) 14 ಳ್ದಲರ್ಗೆ (ಜ) 15 ಕಂಪು (ಜ) 16 ಳ್ಪಿ (ಚಟಡ)

ಕನಕಾಂಗಚ್ಛವಿ ಪದ್ಮರಾಗಚರಣಂ ನೀಳಾಳಕಂ ಜಾತಿವ
ಜ್ರನಖಂ ಮೌಕ್ತಿಕಕಾಂತಿದಂತನಿಕರಂ ಬಾಳಪ್ರವಾಳಾಧರಂ
ವನಿತಾಸಂಕುಲಮೊ[1]ಪ್ಪೆ[1] ಕಣ್ಣ ಬೆಳಗಿಂ ಕಣ್ಗೊಪ್ಪುಗುಂ ಕಾಮದೇ
ವನ ಭಂಡಾರದ ಬಾಗಿಲಂ ತೆಱೆದವೋಲ್ ಭೂಪಾಲಕೇಳೀಗೃಹಂ ||೩೮||

ವ|| ಅದಂ ಕಂಡರ್ಹದ್ದಾಸವೇಶಂ ಕಾಮದೇವಂಗೆ ಪಟ್ಟಂಗಟ್ಟಿ ಕೊಟ್ಟ ರಾಗ ರಾಜ್ಯಕ್ಕೆ ತೆಲ್ಲಂಟಿಯಾಗಿ

ಮುದದೆಸೆದಿರ್ಪ ಬದ್ದವಣಮುದ್ದವಣಂ ರಿ[2]ಚೆ[2] ಪಾಟಿವಾಟಿ[3]ವೆ[3]
ತ್ತಿದ ಗುಡಿ ತೋರಣಂ ಸಸಿ ಮೊಸರ್ ಪಸೆ ಸೇಸೆ ವಿಳಾಸಿನೀಜನಂ
ಚದುಕಮಿ[4]ಪ್ಪೊ[4]ಡ್ಡುಗ[5]ಟ್ಟಿ[5] ಮುದಮಂ ರಿಪುವಾರಣನೆತ್ತಿ ಕ[5]ಟ್ಟಿ[5] ಕ
ಟ್ಟಿದನವರಾಜಿತಂಗೆ ಪರಮೋತ್ಸವದಿಂ ಯುವರಾಜಪಟ್ಟಮಂ ||೩೯||

ಒಂದಡಿಯಿಟ್ಟುದು ಸಿರಿ ನೃಪ
ನಿಂದಪರಾಜಿತನೊಳೆಸೆವ ಪೊಸ ಜವ್ವನದೊಳ್
ಬಂದ ಬಂಸಂತನೊಳಡಿಯಿಡು
ವಂದದಿನುತ್ಸವದೊಳಿರ್ದ ಸಿರಿ ಸರಸಿಜದೊಳ್ ||೪೦||

ವ|| ಅಂತು ಸುತವಿಭಕ್ತ ರಾ[6]ಜ್ಯ[6]ಭಾರನುಂ ಕಾಲವಿಭಕ್ತ ವಯೋಭಾರನುಮಾಗಿ ಪಂಜರದಿಂದಲೆನುಸುಪ್ಪ ಶಕುಂತನಂತೆ ಭೂಕಾಂತನಿರ್ಪಿನಮೊಂದು ದಿವಸಂ

ತಂದಿಳಿಗಜಿನೆಂಬಮರ್ದಿನ
ತಂದಲನುಗುಬುತ್ತುಮೊಂದು ಜಳಧರಪಟಳಂ
ಬಂದುದೆನೆ ಸಮವಸರಣಂ
ಬಂದುದು ಘೋರೆಂದು ವಿಮಲವಾಹನ ಜಿನ[7]ನಾ[7] ||೪೧||

ನೀಲದ ನೆಲಗಟ್ಟುಂ ಮಣಿ
ಧೂಲೀಸಾಳಂ ಪ್ರಲಂಬಪಲ್ಲವಮೆಸೆಗುಂ
ಭೂಲಲನೆಗೆ ಬಿದಿಯೆತ್ತಿದ
ಪೀಲಿಯ ಕೊಡೆಯಂತೆ ಸಮವಸೃತಿ ಜಿನಪತಿಯಾ ||೪೨||

---

1 ಪ್ಪಿ (ಚಟಡ) 2 ಜೆ (ಚಟಡಣ) 3 ಮೆ (ಟಣ) ದೆ (ಡ) 4 ದೊ (ಚಟಡಣ) 5 ಟ್ಟ (ಚಟ)
6 ಜ್ಯನುಂ(ಜ) 7 ನಂ (ಚಡ)

ವ॥ ಆ ಸಮವಸರಣಕ್ಕರ್ಹದ್ಭಟ್ಟಾರಕನುಂ ವಂದನಾಭಕ್ತಿ ನಿಮಿತ್ತಂ ಪುತ್ರ ಮಿತ್ರ ಸಮೇತನಾಗಿ ಪೋಗಿ ವಿಮಲವಾಹನ ಜಿನಪತಿಯಂ ಪ್ರದಕ್ಷಿಣಂಗೆಯ್ದು ಪೂಜಿಸಿ ಪೊಡೆವಟ್ಟು [1]ಧರ್ಮ[1]ಮಂ ಕೇಳ್ದು ಸಂಸಾರಶರೀರನಿರ್ವೇಗದಿಂ ಬೇಗಮಪರಾಜಿ ತಂಗೆ ರಾಜ್ಯಮಂ ಕೊಟ್ಟಯ್ನೂರ್ವರರಸುಮಕ್ಕಳ್ವೆರಸು ತ[2]ಪೋಂ[2]ಗನಾಲಿಂಗಿತನಾದನದರ್ಕೆ ಪುರುಡಿಸಿದಂತೆ ಜಿನದತ್ತೆಯುಂ ಸಂಯಮದ[3]ತ್ತ ಚಿತ್ತೆಯಾದಳ್[3]ಪರಾಜಿತನುಂಸಮ್ಯಗ್ದರ್ಶನಾದಿ ಶ್ರಾವಕವ್ರತಂಗಳಿನಳಂಕೃತನಾಗಿ ಪೊಳಲ್ಗೆ ವಂದು[4]ಪರಿಜನದ ಮನಕ್ಕೆ ವಂದು ತಂತ್ರಾವಾಪದೊಳ್ (?) ಭರಂಗೆಯ್ದು[4] ಪೃಥ್ವೀಪಾಲನಮನಪ್ಪುಕೆಯ್ಯೆ

ತೀಡುವ ಗಾಳಿಯುಂ [5]ಸೆ[5]ಳೆಯಲಣ್ಮದು ಮೇಲುದನಂಜಿ ಪ[6]ಣ್ಗ[6]ಳಂ
ಕೋಡಗಮಿಕ್ಕಿದಲ್ಲದೆ ಕರ್ದುಂಕದು ಪೆಂಡಿರ ಪೊನ್ನಮಾಲೆಯಂ
ಸೂಡಿಯೆ [7]ಬಟ್ಟೆವೋಪಳಗಿ[7]ದನ್ಯ ರಥಾಂಗಿಕೆಯೊಳ್ ರಥಾಂಗಮುಂ
ಕೂಡದೆನಿಪ್ಪುದಾಜ್ಞೆಯಪರಾಜಿತಭೂಪನ ರಾಜ್ಯಲಕ್ಷ್ಮಿ[8]ಯಾ[8] ॥೪೩॥

ನರಪತಿಯಾಜ್ಞೆಗೆ ಬಿಸಿಲೋ
ಸರಿಸಿರ್ದುದು ಕೊಲ್ಲದಂಧಕಾರಮನೆನೆ ಕೆಂ
ಬರಲ ರುಚಿ ನೀಲರುಚಿಯೊಳ್
ಬೆರಸಿರ್ಪುದು ದೇಶದೊಳಗೆ ತನ್ನೃಪಸುತನಾ ॥೪೪॥

ತಲ್ಲಣಿಸಿ ನೆಗಟ್ದ [9]ಪಾಣ್ಬ[9]ರ
ಮಲ್ಲಿನ ತೇಜಕ್ಕೆ ತನ್ನ ಕರಮುಂ ವಸುಧಾ
ವಲ್ಲಭನ ದೇಶದೊಳ್ ದಿನ
ವಲ್ಲಭನಿಡಲಣ್ಮನನುದಿನಂ ಕುಮುದಿನಿಯೊಳ್ ॥೪೫॥

ವ॥ ಎನಿಸಗ್ಗಳವೊಗೞ್ತೆಗೆ ನೆಲೆಯಾ[10]ಗೆ ಪ್ರೀತಿ[10]ಮತಿ ಪ್ರೇಮಪರ ವಶಾಪಾಂಗ[11]ನಪ[11]ರಾಜಿತಂ ರಾಜ್ಯಲಕ್ಷ್ಮೀವಿರಾಜಿತನಾಗಿರ್ಪನ್ನೆಗಂ ವಿಮಲವಾಹನನುಮರ್ಹದ್ಭಟ್ಟಾರಕನುಂ ನಿರ್ಮೂಲಿತಕರ್ಮರಾಗಿ

ಎರಡಳಿಯೆಕ್ಕೆಯ ಪೂವಿನೊ
ಳಿರಲೊಲ್ಲದೆ ಬಿಟ್ಟು ಪಾಱಿ ಪಿರಿದೆನಿಸಿದ ಪಾ
ವರಿಯ ತುದಿಗೊಂಬಿನಿಂಬಿನ
ಬಿರಿಮುಗುಳೊಡನೆಱಗುವಂತೆ ಮುಕ್ತಿಗೆ ಸಂದರ್ ॥೪೬॥

---

1 ದಮ್ಮ (ಙ) 2 ಪಾಂ (ಚಜಟಡ) 3 ತ್ತೆಯುಂ ಅ (ಚಟಡಙ) 4 ತಂತ್ರಾವಾಪದೊಳ್ (ಙ) 5 ಪೆ (ಜ) 6 ಙ್ಗ (ಬ) 7 ಬಟ್ಟವೋಪಳಗಿ (ಗ) ಬಟ್ಟೆವೋಪಳ (ಚ) ಬಟ್ಟೆದೋಪರಗಿ (ಜ) 8 ಯಿಂ (ಚಟ) ಯಂ (ಜಡ) 9 ಪಾಂಬ (ಜ) 10 ಗಿ ಪೃಥ್ವೀ (ಚಟಡಙ) 11 ಪ (ಜ)

ಅವರಿರ್ವರುಮೊರ್ವಳೆ ಮು
ಕ್ತಿವ[1]ಧು[1]ಗೆ ಕಡುಗೂರ್ತು ಕೂಡಿ ಪೋದೊಡಮದನೆಂ
ದವರಾರೆಱಿಗಿದುದವರ್ಗೀ
ಭುವನಜನಂ ಸಮೆದುದರ್ಕೆ ಶಾಸ್ತ್ರಮುಮುಂಟೇ ||೪೭||

ವ|| ಆ ಪ್ರಸ್ತಾವದೊಳ್

ಜನಪಂ ತದ್ಯಜನಕ್ಕೆ ಪೋಪ ಸುರಭೇರೀನಾದಮಂ ಕೇಳ್ದಿದೇ
ನೆನೆ ಪೋದಂ ಗಡ ! ಮುಕ್ತಿಗರ್ಹನೊಡನರ್ಹದ್ದಾಸನುಂ ಕೇಳಿಮೆಂ
[2]ದೆನೆ[2] ಮಾತಿಂದನೆ ಮುನ್ನಮುನ್ನತಗುರು ಶ್ರೀಪಾದಮಂ ಮ[3]ರ್ಚಿ[3] ಬೆ
ನ್ನನೆ ಪೋದಂತಿರೆ ಮೂರ್ಛೆವೋದನರಸಂ ವ್ಯಾಮೋಹಮೇಗೆಯ್ಯದೋ ||೪೮||

ವ|| ಇನಿಸಾನುಂ ಬೇಗಕ್ಕೆ ಮೂರ್ಛೆದಿಳಿದುಂ ಮೋಹಮೂರ್ಛೆ ತಿಳಿಯದಿರೆ ತಳವೆಳಗಾಗಿ ತನ್ನೊಳ್ತಾನೆ ಬಗೆದು

ನೆಲೆಮಾಡಂಗ[4]ಳೇಱಿ ನೋೞ್ಪ ತೆಱದಿಂ ನಿಶ್ರೇಣಿಯಂ ಕಾಂಚನಾ
ಚಲದಿಂ ನಾಕಮನೇಱಿ ನೋೞ್ಪಿನಡೆವರ್ಗಂ ಗ್ರೈವೇಯಕಕ್ಕೆಯ್ದುವೆಂ
ಲಲಿತಾನುತ್ತರೆಗಳ್ಗೆ ಪೋಪೆನವಱಿಂ ಸರ್ವಾರ್ಥಸಂಸಿದ್ಧಿಗಂ
ಬಲಗೊಳ್ವೆಂ ಬೞಿಕೆನ್ನ ಸದ್ಗುರುಗಳಂ ಸನ್ಮೋಕ್ಷದೊಳ್ ಮೋಕ್ಷದೊಳ್ ||೪೯||

ವ|| ಇದು ‘[5]ನಿನಗೆ’ನ್ನೇೞನೆಯ ಭವಕ್ಕಾದಪುದೆಂದಾಕಾಶವಚನಮನವಕರ್ಣಿ[6]ಸಿ[6] ಮತ್ತಮಿಂತೆಂದಂ

ವಿಧುವೊಂದು ಪೊೞ್ತು ವರವಾ
ರಿಧಿಯಲ್ಲಿಗೆ ಪೋಪುದಾಗಿ ಸುಖಮಿ‘ರ್ಕುಂ’ ವಾ
ರಿಧಿ ಮುಕ್ತಿಗೆ ಪೋದೊಡೆ ಪೇೞ್
ವಿಧು ಪೆಱಗೆಂತಿರ್ಕುಮೆಂತು ಸೈರಿಸಲಾರ್ಕುಂ ||೫೦||

---

1 ಡೆ (ಗಟ) 2 ದನ (ಜಡ) ದೆನ (ಟ) 3 ಚ್ಚಿ (ಚಟ) 4 ನಿ (ಜ) ದಿನ ನಿ(ಡ) 5 ನಿನೋಡಿ (ಜ) 6 ಕೇರ (ಚಟಡಜ)

ತಂದೆ ತಪಕ್ಕೆ ಪೋದೊಡೊಳಗಂ [1]ಪೊಱಗಂ ಸುಡುತಿರ್ಪ[1] ತಾಪಮಂ
[2]ನಂ[2]ದಿಸುತಿರ್ದುದಿನ್ನೆವರಮೆನ್ನ ಮನಂಗೊಳುತಿರ್ಪ ತದ್ವಚ
ಶ್ಚಂದನದಣ್ಪುಮೆನ್ನ ತನು[3]ವಾ[3]ರ್ವಿನಮಿ[4]ಕ್ಕೆಮ ತ[4]ತ್ಪದಾರ್ಚನಾ
ಚಂದನದಣ್ಪುಮಿನ್ನೆನಗೆ ಸಾಯದೆ ಸೈರಿಸುವಾಸೆ ಯಾವುದೋ ||೫೧||

ಪೂಜ್ಯರುಮೇಕೆ [5]ಪೇ[5]ಟ್ಟಿಸುಗೆದಪ್ಪುವರಾ ಪುರುಷಾರ್ಥಸಂಗ್ರ[6]ಹಂ[6]
[7]ಪ್ರಾಜ್ಯ[7]ಮಿದೆನ್ನದಾಂ ಪಿರಿದುಮೊಲ್ಲದೊಡಂಬಡೆ ಬೇಡಿಕೊಂಡು ಸಾ
ಮ್ರಾಜ್ಯಮನಿತ್ತವೋಲೆನಗೆ ತನ್ನ ಜಗತ್ತ್ರಯ ಪೂಜ್ಯಮಂ ತಪೋ
ರಾಜ್ಯಮ[8]ನೋವು[8]ದಂ ಕುಡದೆ ಪೋಪುದು ಮಜ್ಜನಕಂಗೆ ಮಾರ್ಗಮೇ ||೫೨||

ಬರವೇಟ್ಟಿತ್ತಿಯನೆಯ್ದೆ ಪೂಡಿ ತರವೇಟ್ಟಿತ್ತೇರೆಲ್ಲಮಂ ಪಣ್ಣವೇಟ್ಟ್
ಕರಿಯಂ ಭೋಂಕನೆ ಕಟ್ಟವೇಟ್ಟುದುರೆಯಂ ಸೂಳೈ[9]ಸ[9]ವೇಟ್ಟೇರಿಯಂ
ಭರದಿಂ[10]ದಾಂ[10] ನಡೆದಿಂದೆ ಧಾತ್ರಿ ಬಿಡುವಂತೀ ಸ್ಥೈರ್ಯಮಂ ಶೌರ್ಯಮಂ
ಸುರರಾಜಂ ಬಿಡುವಂತು ಬೀಡುವಿಡುವೆಂ ದೇವಾಚಳಪ್ರಸ್ಥದೊಳ್ ||೫೩||

ವ|| ಎಂದಾಸ್ಥಾನದಿನೆರ್ದು [11]ಎನ್ನ ಪೆತ್ತ[11] ತಂದೆಯುಮಂ [12]ಜಾ[12]ಣಂ ಪೆತ್ತ ತಂದೆಯುಮಂ ಕಂಡು ಪ[13]ರಕೆಗೊಂ[13]ಡಲ್ಲದಾಹಾರಂಗೊಳ್ಳೆನೆಂದಪರಾಜಿತನ ಮರಗಿರಿಗೆತ್ತಿ ನಡೆಯೆ ಪಡೆಯ ಪದಘಟ್ಟಣೆಯಿಂ ಪ್ರೊಡವಿಯಿಂ ನೆಗೆದ ಕುಂಕುಮದ ಪುಡಿಯಂತಪ್ಪ ಪುಡಿ ಕಣ್ಣಂ ಪುಗೆ ಪುರಂದರಂ [14]ಪರಿನಿಮಿಲಿತ ನಯನನಾಗಿ[14] ಬೆರ್ಚಿ ಬೆಗಡುಗೊಂಡಿದೇನೆಂದು ಬಗೆದು ನೋಡಿ ನಸುನಕ್ಕು ಕುಬೇರನಂ [15]ಬರಿ[15]ಸಿ ಬೆಸಸೆ

ನಂಬಿಸಲೆಂದು ಮಾಗಿಯೊಳೆ ಪೂಟದ ಮಲ್ಲಿಗೆವೂಗಳಂ ಮರು
ಳ್ದುಂಬಿಗೆ ತೋರ್ಪವೋಲ್ವಿಕಳನಾದಪರಾಜಿತ ರಾಜಶೇಖರಂ
ಗಂಬರದೊಳ್ ಸಭಾಸಹಿತಮಾ ಜಿನರಾಜ ಮಹರ್ಷಿರಾಜರಂ
ಶಂಬರನಂತೆ ಮಾಯೆಯೊಳೆ ತೋಱಿದನಾ ಧನ[16]ದೈಂ[16]ದ್ರಜಾಲಿಕಂ ||೫೪||

---

1 ಸುಡುತಿರ್ಪ ನಿಮೋಹ (ಜ) 2 ವಂ (ಟ) 3 ಶಾ (ಡಣ) 4 ಕೈವತ (ಚಟಡ) ಕ್ಕಿನನ (ಜ) 5 ಕೇ (ಜ) 6 ಶಾ (ಚಟ) ಹ (ಜ) 7 ಪ್ರಾಜ (ಜ) ಪೂಜ್ಯ (ಡ) 8 ನೊಲ್ವು (ಚಟಡಣ) 9 ಪ (ಗ) 10 ದಂ (ಚಟಡಣ) 11 ಳ್ದೆನ್ನ (ಜ) 12 ಚಾ (ಕ) 13 ದಕ್ಕೆ ಕೊಂ (ಕ) 14 ನಿಮಿಳನತನಾಗಿ (ಜ) ಪರಿನಿಮಿಾಲಿತ ನಯನಾಕ (ಡ) ಪರ ನಿಮಿಾಲಿತ ನಯನನಾಗಿ (ಚಟ) 15 ಕರಿ (ಕ) ಕರೆ (ಚಟಣ) ತರಿ (ಡ) 16 ದೇಂ (ಜ)

ಸುರರಾಜಂ ಬಿಡುವಂತು ಬೀಡುವಿಡುವೆಂ ದೇವಾಚಳಪೃಷ್ಠದೊಳ್

ವ|| ಅಪರಾಜಿತಂ ಕಂಡು ಕೃತಾರ್ಥನಾದೆನೆಂದು ಬಂದಿಸಿ ಬಂದು ಪರಿಣಾಮದಿಂ ಪಾ[1]ರಿ[1]ಸಿ ತನ್ನ ಗುರುಗಳ ರೂಪನೆ ಕರುವಿಡಿಸುವ ಕಡೆಯಿಸು[2]ವ ಕಂಡರಿಸುವ[3]ಬೆಸನೆ ಬ[3]ಸನ[3]ಮಾಗಿ

ಜಿನನ ಮತವೆನ್ನ ಮನವದು
ಜಿನನಾಕೃತಿಯೆನ್ನ ನಯನವದು ಪರಮಾರ್ಥಂ
ಜಿನನ ನುಡಿಯೆನ್ನ ಕಿವಿಯದು
ಜಿನನಡಿ[4]ಗಳಿವೆ[4]ನ್ನ ನೊಸಲದೇಂ ವಿಸ್ಮಯಮೋ ||೫೫||

ವ|| ಎಂದು ತನ್ನಯ ತನ್ಮನೋರೂಪನಾಗಿ ಸುಖದಿನಿರೆ

ನನೆ[5]ಯಂ ಷಟ್ಪ[5]ದ ಧೂಪಧೂಮಲತೆಯಂ ಚೂತಂ ಫಲವ್ರಾತಮಂ
ಪನಸಂ ಕುಟ್ಮಲ ದೀಪಿಕಾ ಪ್ರಕರಮಂ ಚಾಂಪೇಯ*ಮಂ* ಪೊತ್ತು[6]ತ[6]
ಣ್ಬನಿಯಂ ಚಂದನ ಗಂಧಮಂ ಮ[7]ಲೆಯೆ[7]ರಲ್ತಂದೀಯೆ ಬಂದತ್ತು ಫಾ
ಲ್ಗುನ ನಂದೀಶ್ವರಮರ್ಹದೀಶ್ವರನ ಪೂಜೋತ್ಸಾಹದಿಂ ಬರ್ಪವೋಲ್ ||೫೬||

ಪಿಡಿಗಿಕ್ಕಿತ್ತು ಮೃಣಾಳಮಂ ವನಗಜಂ ಪೊಕ್ಕತ್ತು ತುಂಡಾಗ್ರದಿಂ
ದೊಡೆದಂಭೋಜದ ಮೊಗ್ಗೆಯಂ ಮಧುಕರಂ ಧಾರಾಗೃಹಕ್ಕಾ[8]ಗಿ[8] ಸ
ಯ್ತಡಿಯೆತ್ತಿತ್ತು ನವಿಲ್ ಮರಾಳಿ ಪರಿಕಾಲೊಳ್ ಕಾಲನಿಟ್ಟತ್ತು ನೀ
ರ್ಗುಡಿಯಲ್ಬೇಡಿದುದಂದು ಪಂಜರಶುಕಂ ಶುಷ್ಕೀಭವತ್ತಾಲುಕಂ ||೫೭||

ವ|| ಆ ಪರ್ವತಕ್ಕಪೂರ್ವ ಪುರಂದರನತಿಪ್ರೀತಿಮ[9]ತಿ[9] ಪ್ರಮುಖಾಂತಃಪು[10]ರ[10]ಪರೀತನಾಗಿ ಪೋಗಿ ಮನೋಹರೋದ್ಯಾನದೊಳಗೆ ನಿಜಜನಕಂ ಮಾಡಿಸಿದ ತ್ರಿಭುವನ ತಿಳಕಮೆಂಬ [11]ಪೊನ್ನ[11] ಬಸದಿಯಂ ಬಳವಿರೋಧಿ ಪೊಂಬೆಟ್ಟಮಂ ಬಲಗೊಳ್ವಂತೆ ಬಲಗೊಳುತ್ತುಮಿರ್ಪಾಗಳ್

ಇದು ಬಾನಿಂ ಬರ್ಪ ಪೊಮ್ಮಿಾಂಬೊಣರ ತೆಱನಿದ[12]ಲ್ತೊಂ[ದಮಳ್ಕಿಂ[12]]ಚು
ಮಿಂ[13]ಚ[13]

ಲ್ಲದಿವರ್ಚಂದ್ರಾರ್ಕರೇನೀ ಯುಗಳಮಿಱಿವ ಚಂದ್ರಾರ್ಕರೇ ಖೇಚರದ್ವಂ
ದ್ವದ ಕೆಯ್ತಂ ಖೇಚರದ್ವಂದ್ವಮೆ ಪುಸಿ ಪೊಸತೀ ಚಾರಣದ್ವಂದ್ವಮೆಂದು
ವಿರ್ದಲಂಪಿಂ ನೋಡೆ ಭೂಪಂ ಗಗನದಿನಿೞಿದರ್ಚಾರಣರ್ಚಾರುರೂಪರ್ ||೫೮||

1 ಲಿ (ಕಡ) ರಿ (ಚಟಣ) 2 ವ (ಡಣ) 3 ಸ (ಟಣ) 4 ದಳಿರೆ (ಜ) (ಜ) 5 ಯಂ ಪುಷ್ಪ (ಕಡ) ಯಂಷಡ್ಪ (ಜ) 6 ಕ (ಕಗಚಟಡ) 7 ಲಯು (ಜಡ) ಲೆಯು (ಚಟ) 8 ದಿ (ಚ) 9 ತಿಯಂ ಪ್ರೀತಿಮತಿ (ಜ) 10 ರು(ಜ) 11 ನಿಜ (ಕಡ) 12 ಲ್ತೊಂದು ಮೇಣ್ಮಿಂ (ಚಟಣ) ಲ್ತೊಂದಮಣ್ಮಿಂ (ಜ) ಲ್ಲೊಂದುಮಣ್ಮಿಂ (ಡ) 13 ಚ (ಟಣ) *ಮಾ (ಸಂ.)

ದೊರೆಗೆಡೆ ತಮ್ಮ ವಿಯೋಗದೊ
ಳರಸಂಗಾದಟಿಲನಾಱಸಲ್ಕುಕ್ತಿಯಿನಾ
ಗುರುಯುಗಳಮಿೞಿದು ಬಂದಂ
ತಿರೆ ನಭದಿಂದಿೞಿದು ಬರ್ಪ ಚಾರಣಯುಗಳಂ ||೫೯||

ವ|| ವಿನಮಿತ ಮೌಳಿಮರೀಚಿ ಮಂಜರೀ ನೀರಾಜನದಿನಪರಾಜಿತನಿದಿರ್ಗೊಂಡು ಮನೋಮಣಿಪೀರಮೊ ೯ಂ ಮೇಣಾಂಕಮಣಿಪೀರದೊಳಂ ಮೋಹವ್ಯಕ್ತ [1]ಭ[2]ಕ್ತಿಯಿಂ ಕುಳ್ಳಿರೆ ಕುಳ್ಳಿರಿಸಿದಾಗಳ್

ಎಲೆಯೊ ಸ್ವಸ್ತಿದ ಮುನಿಗೆ
ಯುಲರಂ ಕಂಪಿಂದಮುಳಿಯ ಮೃಗಱವನ್ರೊಲಾ
ಲಲಿತ[3]ನ ಮನದ ಱಿದು ದು ಕ
ಣ್ಮಲರಱಯುವೆ ನೋತ್ಪಲದಿನಾ ಚಾರಣರಂ ||೬೦||

ವ|| ಅಂತ ಕತ್ತಿಕೆ ಂಗಳ್ ೧ ಱಯು ೧ ೧ೀದೊಡಮಿನಿಯರಂ ಮನಕ್ಕೆ ಸೋಂಕಱಪ್ರಸಂ[4] ಮೋಹನುಱಿದ ಮನದ '[5]ಬ[6]ಚ್ಚ ಬಱಯಱವು ಬಱಯ ಬೆಱಗನೆ ನೋಟವೆೊ್ [5]ನಾಟಿಸಿ ಕಿಱದುಬೇಗಂ ಬೆಱಗಾಗಿರ್ದುಮಿರಲಾಱದೆ ಭಾವಕಮುಕುರಂ ಮುಕುಳಿತಕರಕಮ ನ ಗಿ ನಿಮ್ಮಡಿಗಳಂ ಕಾಣಲೊಡನೆ ಎನ್ನ ಮನ ಮನಾಕ್ಷಲಂಪುಮುಱಂ [6]ನಿನ್ನ ನ ಗ್ಗಿವಾನುಂ ಕಂಡಱವಂತಾಡಿಪುದೆಲ್ಲಿ ಕಂಡೆಂ ಬೆಸಸಿಮೆ ೧ ನ ಸುಗೊಂತ ಮ ನಿ ೯ೆೀ ವುಮ್ಮಿರಪ್ಪ ಮುನಿಗಳ್ ಕಯ್ಗ ಳೊಳಗೆ ಬಲಗಳ್ ಜಿ[7]ಕ್ಕೆ ವರ್ಣಂ[7] ವಿಸಪ್ಪು ಗುರ್ರದಂತೆನೆ

ಸೊಡರವ್ರೊ ಲಿಕ್ಕ್ರಾಂ ಕಾಡಿಗೆ
ಗುಡಿಯೆನೆ ಮುಗಿತಿ ಸಿ ೨೪ಿ ಬೀಟಿ ಪತಂಗಂ
ಕಡುಬೆಳ್ಗಿ ಪುಸ್ಕರ ರ್ಧವ
ಪಡುವಣ ದೆಸೆ ಮುಂದುಗೊಂಡ ಮಂದರಶೈಲಂ ||೬೧||

ಮಂದರಶೈಲದ ಪಡುವಲ್
ನಂದನವಳಿೞಿ ಕೆೊ ನೆ ೧ [8]ಕ್ಕುಟಿ[ತ್ತೆ]ರೆ ಕಣ್
ಕುಂದಂ ಕುಪಸಿನೆ ವಸುದಾ
ಸುಂದರಿಯ ಸುಪೇಹಮಿನಿಪ್ಪದಪರವಿದೇಹಂ ||೬೨||

---

1 ಳಂ (ಜ) 2 ವ (ಜ) 3 ಮನವಱಯ ದು (ಚಟಡಣ) ಮನವಱಯದಂ (ಡ) 4 ಬೆ (ಚಟಡಣ) ಚೆ (ಡ) 5 ನಾಟಿಸ (ಜ) ಕಾಡಿಸಿ (ಡ) ನಾಟಿಸಿ (ಣ) 6 ನಿಂತುವೆ (ಚಟಡಣ) 7 ಲಕ್ಕುಂ (ಣ) 8 ಕುಕ್ಕುಟ ಕುಕ್ಕುಟ (ಚಟಡಣ) ಕ್ಕುಟಿಕ್ಕಿಱತಿ ಕಣ್ (ಜ)

ಅಪರವಿದೇಹೋದ್ಭವೆ ನೀ
ಳಪರ್ವತಂ ಘನಗುಹೋದ[1]ಶಾ[1]ಸ್ಯ ನೆಱೆತಗೆ
ಯ್ಯೆ ಪಯೋನಿಧಿಯಂ ಪುಯ್ಯು
ಲ್ಚಿ ಪಾಯ್ದು ಸೀತೋದೆ ಸೀತೆಯಂ ್ಪೋಲಿಸಗುಂ || ೬೩ ||

ಭಯದಾಯಿ ಪಜ್ರಿಯೇಂ ವ
ಜ್ರಿ[2]ಯ[2] ಮುತ್ತನುಮಕ್ಕೆ ಬಕ್ಕೆಗ ೆಾದವೆನೆಂದ
ದ್ರಿಯ ತಲೆಯೊಳಿಟ್ಟ ವಾರಾ
ಸಿಯ ಕಯ್ಯೆನೆ ರಯ್ಯಪಾದುಡ ನವಿ [3]ನೀ[3]ಳ್ಪಂ || ೬೪ ||

ಆ ತೊಱೆಯ ಬಡಗದಡಿಯೊಳ್
ಪೂತೊಱಗಿದ ಗಿಡುಗಳಿಂದ ಕಾಯ್ತೊಱಗಿದ ಭೂ
ಜಾತದೊದವಿಂದೆ ಸಿರಿ ಕರ
ಮೋತೆಱಗಿದ ವಿಷಯಮುಂಟು ಗಂಧಿಲವಿಷಯಂ || ೬೫ ||

ಕೆಳೆಗೊಂಡಿರ್ಪುವು ಕೇಳಿಮಾ ವಿಷಯದೊಳ್ ಕಾಮಾಗ್ನಿಯುಂ ನಂದನಾ
ವಳಿಯುಂ ಕಾಮಕರೇಣುವುಂ ಕಮಳಮುಂ ಕಾಮಾಂಧಕಾರಂಗಳುಂ
ತೊಳಗುತ್ತಿರ್ಪ ಸುಧಾಂಶುಬಿಂಬರುಚಿಯುಂ ಕಾಮಾಹಿಯುಂ [4]ಶೀ[4]ತಳಾ
ನಿಳನುಂ ಕಾಮನಿಕಾಮರಾಗರಸಮುಂ ತೃಷ್ಣಾಗ್ನಿಯುದ್ರೇಕಮುಂ ||೬೬||

ನುಡಿವಂತಿರ್ಪುವು ಕೀರ ಕೋಕಿಲಕಲಧ್ವಾನಂಗಳಿಂ ಕಣ್ಗಳಂ
ಬಿಡುವಂತಿರ್ಪುವರಲ್ವರಲ್ದುಱುಗಲಿಂದ[5]ಲ್ಲೆ[5]ಕ್ಕ ಪೂವಿಂದ ಕಾ .
ಲಿಡಲಿಂಬಿಲ್ಲದೆ ಮೆಟ್ಟಲಾಗದಿವನೆಂಬಂತಂಘ್ರಿಪವ್ರಾತಮುಂ
ನಡೆಯಂ ನೀಗಿಯೆ ನಿಂ[6]ದು[6]ವೇಂ ಪ್ರಚುರಮೋ ಜೈನವ್ರತಂ ದೇಶದೊಳ್ ||೬೭||

ಎನಿಸಿದ ನಾಡ ನಟ್ಟನಡುವಿರ್ಪುದು ಪುಣ್ಯದ ಪುಂಜದಂತೆ ಪೂ
ವಿನ ಕೊಳನೆಂದು ನಟ್ಟನಡುವಿರ್ಪವಿಕಸಿತಪದ್ಮದಂತೆ ಬೆಳ್ಪ
ನೆ ನಭದೊಂದು ನಟ್ಟನಡುವಿರ್ಪ ಸುಧಾಕರಬಿಂಬದಂತ ಸಂ
ಜನಿತ ಸಮಸ್ತ ಪರ್ವತ ಯಶೋವಿಜಯಂ ವಿಜಯಾರ್ಧಪರ್ವತಂ ||೬೮||

---

1 ಸಾ (ಚಟ) ಸೊ (ಡ) ರಾ (ಣ) 2 ಯಿ (ಚಟಡಣ) 3 ಗೀ (ಚ) 4 ಸೀ (ಟಚ)
5 ಲ್ಪೊ (ಚಟ) 6 ದ (ಚಟ)

ಅರವಿಂದಾಕರರೇಣು ಪಿಂಜ[1]ರತೆಯಂ[1] ಪೆಣ್ಣಂಚೆಗಳ್ [2]ಬೇಗದೊಳ್[2]
ಪೊರೆದಂಭೋಜದ ಕರ್ಪ್ಪುನುದ್ಗತ ನಖಾನೀಕಂ ಚರತ್ಖೇಚರೀ
ಚರಣಾಲಕ್ತಕರಾಗಮಂ ತೊಡೆಯಲೆನ್ಮೊಳ್ ಪಾಯ್ದು[3]ವೋ[3] ತಾರಕಾಂ
ಕುರ ತಾರಾಧಿಪತಾರಳಪ್ರಭೆಗಳಿಂ ತಾರಾಚಳಪ್ರಸ್ಥದೊಳ್ ||೧೯||

ಗಂಗೆ ಬಟಲ್ದವೋಲ್ನೆಲಕೆ ಬೆಳ್ಳಿಯ ಬೆಟ್ಟದ ಬಳ್ಳಿವೆಳ್ಪು ಬೆ
ಳ್ಳಂಗೆಡೆದೊಪ್ಪೆ ತಪ್ಪಲ ಫಲಾ[4]ರು[4]ಣದರ್ಥತ*ಟಾಕ ಸಂಕುಳಂ
ತಿಂಗಳ ತೋಟದಂತೆ ಬಳೆದೊಪ್ಪುವ ನೇರೆಯ ಕೆಯ್ಗಳಚ್ಚವೆ*
ಳ್ದಿಂಗಳ ಕೆಯ್ಗಳಂತೆ ನಡೆನೋಟ್ಪರ ಕಣ್ಗೆ ಕರಂ ಮನೋಹರಂ ||೨೦||

ಪನಸಾಮ್ರಾತಕ ಮಾತುಳುಂಗ ಕದಳೀ ಖರ್ಜೂರ ನಾರಂಗ ಪೀ
ತನ ಜಂಬೂ ಸಹಕಾರ ದಾಡಿಮ ಫಲವ್ರಾಂತಂಗಳಿಂದಾಗಳುಂ
ತನಿಗಂಪಂ ಮೊಗೆದೆತ್ತಿ ತೀಡುವೆಲ[5]ರೊಂದಿಂಪಿಂಗೆ[5] ಪೊಂಗೂರ್ತು ಮೆ
ಲ್ಲನೆ ಬಾಯಂ ಪೊಳಕುತ್ತೆ ನೋಟ್ಪರಮರರ್ ತಾರಾಚಳೋದ್ಯಾನದೊಳ್ ||೨೧||

ಎರಲಿಂದೆ ಪಾಱಿದಾ [6]ಪನ[6]
ತರು[7]ನಿಕರದ ಕುಸುಮ[7]ರೇಣು ಪರಮಾಣುಗಳಿಂ
ಸುರಲೋಕದ ವನವಾಯ್ತೆಂ
ದರಗಿಳಿಯೋದುವುವು ನಗದ ವನವರ್ಣನಮಂ ||೨೨||

ಸಲ್ಗೆಯೊಳಲ್ಲಿಯ ಕೋಡುಂ
ಗಲ್ಗಳ್ ಖೇಚರತೆವಡೆದು ಪಾಱುವ ತೆಱದಿಂ
ಮೆಲ್ಗಾಳಿ[8]ಯ[8]ಲೆಯೆ ಬಿಳಿಯ ಮು
ಗಿಲ್ಗಳ್ ಪಾಱುವುವು ಖಚರಗಿರಿವನತಟದೊಳ್ ||೨೩||

ನಡೆವುವು ನಭಕ್ಕೆ ಮಿಂಚುವ
ನಿಡುಮುಗಿಲಮರಿಯರ ಕಣ್ಗೆ ಕುಡಲೆಂ[9]ದಗದೊಳ್[9] (?)
ಬಿಡದೋದುವ ಖೇಚರಿಯರ
ಕಡೆಗಣ್ಗಳ ಬೆಳಗನೇಱಿ [10]ಪೇಱಿ[10]ದ ತೆಱದಿಂ ||೨೪||

---

1 ತೆಯಿರಂ (ಚ) ತೆಯಿರಲ್ (ಟಡ) ರತೆಯಿಂ (ಣ) 2 ಮಿಂಚುಗಳ್ (ಜ) 3 ವೋ (ಚಟ) 4 ಗು (ಚಟಡಣ) 5 ರಿಂದಾಪಂಗೆ (ಗ)ರಿಂದಿಪಿಂಗೆ (ಚ) ....(ಜ) ರಿಂದಾಪಿಂಗೆ (ಟ) 6 ನವ (ಕಚಟ) 7 ಕೆವಿಳ ನಿಕರವ (ಕಡ) 8 ಯೊ (ಗಟಡ) 9 ದಾಗಳ್ (ಗಚಟ) 10 ತೋರಣ (ಕಡ) ತೋಱಿ (ಚಣ)

* ಈ ಭಾಗ 'ಜ' ಪ್ರತಿಯಲ್ಲಿ ಲುಪ್ತವಾಗಿದೆ.

ಕಿಡುನೆರೆದ ಖಚರಿಯರ್ ನೀ
ರಡಸಲೊಡಂ ಕರಿಯ ಕಿಱಿಯ ಮುಗಿಲಂ ಖಚರರ್
ಪಿಡಿದು ಪೊರೆಯೆತ್ತಿ ಮಿಂಚಿನ
ಪುಡಿಕೆಗಳಂ ತೆಱೆದ ತೆಱ[1]ದೆ[1] ತೋರ್ಪುವು ನಗದೊಳ್ ||೭೫||

ಜಿನಬಾಳಕನೆನೆ ಮಧ್ಯಂ
ದಿನದಿನನವ್ಯಕ್ತಭಗಣ ನಯನಸಹಸ್ರಂ
ಜಿನನ ಸವನಕ್ಕೆ ಗಗನೇಂ
ದ್ರನೇಱಿದೈರಾವತಂಬೊಲಿ[2]ರ್ದು[2]ದಗೇಂದ್ರಂ ||೭೬||

ಜಿನರಾಜಂ ಕಾಮನಂ ಮರ್ದಿಸಿದ ಬಿರುದಿನೊ[3]ಳ್ ವಿ[3]ಕ್ರಮಂದಪ್ಪದಿಂಪುಂ
ದನಿಯುಂ ಕೈಕೊಳ್ವಿನಂ ಬೀಣೆಯ ಕಳರವಮುಂ ತತ್ಕಥಾ ನಾಟಕಾಲೋ
ಕನ 'ಸುಪ್ರಸ್ಥಾನ'ದೊಳ್ ಪಾಡುವ ಖಚರಿಯ ರಂಗಸ್ಥಿತಂ ಕೇಳ್ದು[5]ಕೇಳ್ದೊ[5]
ಯ್ಯನೆ ಲಜ್ಜಾಭಾರದಿಂ ಕುತ್ತಿದ ತಲೆಯನಣಂ ಕುತ್ತುವಂತೆತ್ತಲಾಱಂ ||೭೭||

ಸ್ಮರರಾಗಾಮೃತಮಂ ತುಳುಂಕೆ ಖಚರೀನೇತ್ರತ್ರಿಭಾಗೇಕ್ಷಣಂ
ಪರಮಾನಂದಮನೆಂದುಮಿರಾಯೆ ಜಿನಪೂಜಾಲೋಕನಂ ಪುಣ್ಯದಿಂ
ದೆರಡುಂ ನಾಕದ ಮೋಕ್ಷದೇಪಸುಖಮೊಂದಾದಂತೆ ತಾರಾದ್ರಿಗಾ
ದೆರಡುಂ ಪಕ್ಕದೊಳೊಪ್ಪಿ ತೋರ್ಪುವೆರಡುಂ ವಿದ್ಯಾಧರಶ್ರೇಣಿಗಳ್ ||೭೮||

ವ|| ಅವಱೊಳುತ್ತರ ಶ್ರೇಣಿಗಲಂಕಾರವಾಗಿ

ದೀಪ್ರಸುವರ್ಣ ವಪ್ರವಿ[6]ಪು[6]ಳಪ್ರಭೆಗಳ್ ಬಳಿದುಂಟುಮಾಡೆ ಸೂ
ರ್ಯಪ್ರಭೆಯುಕ್ಕಿದುಕ್ಕನಿರುಳುಂ ಪಗಲುಂ ಶರದಭ್ರಶುಭ್ರಸೌ
ಧಪ್ರಭೆಗಳ್ [7]ಶಶಿ[7]ಪ್ರಭೆಯ ಮಾಡಿದ ಮಾಟಮನುಂಟುಮಾ[8]ಡೆ[8] ಸೂ
ರ್ಯಪ್ರಭಮೆಂಬುದೊಂದು ಪೊಲಲುಂಟು ಪೊಲಲ್ ಕೃತಕೌತುಕಂಗ*ಳಿಂ* ||೭೯||

ಗಿರಿಶಿಖರದೊಳಾಡುವ ಖೇ
ಚರಿಯರ್ ಪುರವರದ ಪೊನ್ನಕೋಂಟೆಯಘಿರಡ
ಚ್ಚರಿವಟ್ಟು ಸೂರ್ಯಬಿಂಬದ
ಪರಿವೇಷಮೆಗೆತ್ತು ನೋಡುವರ್ ನಡುವಗಲೊಳ್ ||೮೦||

---

1 ದಿ (ಚಟಐ) 3 ರ್ಪು (ಜ) 3 ಳಿ (ಜ) 4 ಪುತ್ರಸ್ಥಾನ (ಕಡ) ಸುಪ್ರಸ್ಥಾವ (ಜ) 5 ಗೇಳೊ (ಜಟ) 6 ಮ (ಙ) 7 ಸತಿ (ಜ) 8 ಡಿ (ಜ) *ಳಾ (ಸಂ)

ಬಿಳಿಯ ಮನೆಯೆನಿಸಿ ತಮ್ಮಯ
ಬೆಳಗಿಂ ಪೊಱಲುಱಿದ ಮನೆ ಸಮುಜ್ವಳ ರಜತಾ
ಚಳಮಿಕ್ಕಿದ ತತ್ತಿಗಳೆನೆ
ತೊಳತೊಳ ತೊಳಗುವುವು ಸೌಧ ಸದನಾವಳಿಗಳ್ ||೮೧||

ಆದನಾಳ್ವಂ ಸದನಂ ಜಸಕ್ಕೆ ಮದನಂ ಕಾಂತಾಜನಕ್ಕುಲ್ಲಸ
ದ್ವದನಂ ನೀತಿವಿಶೋಚನಕ್ಕೆ ಮದಮುದ್ಯದ್ವಿಕ್ರಮೇಭ[1]ಕ್ಕಿ[1]ರ
ಮ್ಮದಮುಗ್ರಾರಿಗೆ ಸಂಮುದಂ [2]ಗಿ[2]ರಿಗೆ ಸಂಸ್ತುತ್ಯೋದಯಂ ವಾಗ್ವಧೂ
ಹೃದಯಂ ಜಾತದ[3]ಯಾ[3] ಖಗಾದ್ರಿಶರಭಂ ಸೂರ್ಯಪ್ರಭಂ ಸುಪ್ರಭಂ ||೮೨||

ಜಗಳಂಬೊಕ್ಕವರೊಳ್ ಕೆಲರ್ ಪೆಱಸರಾಗಿರ್ದರ್ ಜವಂಗೆಟ್ಟು ವಾ
ಙುಗಳನ್ನಾದ್ರಿಗೆ ಪಾಱಿ ಪೋಗಿ ಕೆಲಬರ್ ಬೆಳ್ದಿಂಗಳಂ ಪೀರ್ವ ಪ
ಕ್ಕಿಗಳಂತಿರ್ಪರಳುರ್ಕೆಗೆಟ್ಟು ಕೆಲಬರ್ ಸೂರ್ಯಪ್ರಭಂಗಳ್ಕಿ ಗೂ
ಗೆಗಳಂತಿರ್ಪರದಭ್ರ[4]ಗಹ್ವ[4]ರ ತಸೋ[5]ಮುಗ್ನರ್[5] ಖಗಾಧೀಶ್ವರರ್ ||೮೩||

ಅಪ್ರತಿರಥ ತೇಜಕ್ಕೆ ಖ
ಗಪ್ರಭುಗಳ ಕಣ್ಗಳಿಂದುಮೇ[6]ನಳ್ಕಿ[6]ಮೆ ಸೂ
ರ್ಯಪ್ರಭನ ತೊಳಪ ಕರವಾ
ಳಪ್ರಭೆಗಳ್ಕುವುವು ಕಣ್ಗ[7]ಳಂ[7] ಖಗ[[8]ಕೆ[8]]ರಣಂ ||೮೪||

ಆ ಗಗನಚರನ ಜಗದೊಳ್
ಮೇಗಿಲ್ಲದೆ ವಿಕ್ರಮಕ್ಕೆ ರಿಪುಖಗಪತಿಗಳ್
ಕೂಗಡಗಿ ಬೀತ ಮಾವಿನ
ಕೋಗಿಲೆಯೊಲ್ ಕೊಂಬುಗೊಂಡು ಕುಂಬುತ್ತಿರ್ಪರ್ ||೮೫||

ವ|| ಆ ಮಹಾರಾಜನೆಂಬ ಮಹಾವ[9]ರಾ[9]ಹನ ದೋರ್ದಂಡಮೆಂಬ **ದಾಡೆಯಂ** ನೆಮ್ಮಿ

ಕುಂತಳಪಱ್ತಿ ಬಂದ ಬನದಂತಿರೆ ಪೆರ್ಮೊಲೆ ಪರ್ವತಂಗಳೆಂ
ಬಂತಿರೆ ವಕ್ತ್ರ[10]ಮ[10]ಬ್ಜವನದಂತಿರೆ ತನ್ನುಡೆ ವಾರ್ಧಿ ಸುತ್ತಿಕೊಂ
ಡಂತಿರೆ ಕಾಮನಾಳ್ವರಸನಂತಿರೆ ಮೆಯ್ವೆಳಗಾತನೊಂದು [11]ತೇ[11]
ಜಂ ತೊಳಪಂತಿರೀಕ್ಷಣಕೆ ಧಾರಿಣಿ ಧಾರಿಣಿಯಂತಿರೊಪ್ಪುಗುಂ ||೮೬||

---

1 ಕ್ಕ (ಚಟ) 2 ಸಿ(ಣ) 3 ಯೆಂ (ಜ) 4 ಗೊಪ್ಪ(ಜ) 5 ಮಾಗರ್ (ಚಟಡ) ಮಾಗ - ರ್(ಣ)
6 ನುಣ್ಮು (ಚಜಡಣ) 7 ಳುಂ (ಣ) 8 ಕ (ಚಜಟತಣ) 9 ಗಾ (ಚ) 10 ವ (ಜಟಡ)
11 ಗೋ (ಜ) (ಟೀಕು–೮೩–ಇರ್ದ ಮದ=ಮಿಂಚು (ಣ)

ತಲ್ಲಲನೆಯ ಲುಳಿತಾಳಕ
ಮೆಲ್ಲಂ ನಿಜಕಾಂತಿಯಿಂದಮುದಟಲೆಯೆ ಕರಂ
ತಲ್ಲಣಿಸಿ ಸೋಲ್ತು ನೀಲಂ
ಪುಲ್ಲಂ ಕರ್ಚಿದುದು ಭೀತಿ ಬಾಟಿಸದಾರಂ ||೮೭||

ಅಂತೆನಿಸಿದ ಸೂರ್ಯಪ್ರಭ
ಕಾಂತಂಗಂ ನೆಗಟ್ದ ಧಾರಿಣೀಕಾಂತೆಗವಾ
ಡಂ ತನಯನಚಿಂತ್ಯಗುಣಂ
ಚಿಂತಾಗತಿಯೆಂಬೊನಖಿಳ ವಿದ್ಯಾಳಂಬಂ ||೮೮||

ಅಮೃತಾಂಶುಗೆ ಕಳೆ ಸಿರ್ಪಿಂ
ಗೆ ಮೌಕ್ತಿಕಂ ಪುಟ್ಟತೆನಿಸದೆಸೆದಿರೆ ಪುಟ್ಟಿ
ತ್ತಮೃತಾರ್ಣವಕ್ಕೆ ಕಲ್ಪ
ದ್ರುಮವೆನಿಸಿದರಾ ಖಗೇಂದ್ರನುಂ ತತ್ಸುತನುಂ ||೮೯||

ಮೇಗೆನಿಸಿ ಜಗನ್ಮಂಗಳ
ನಾಗಲೊಡಂ ಧಾರಿಣೀಸುತಂ ನೆಗಟ್ದಾ ಚಿಂ
ತಾಗತಿಗೆ ತೇಜದಿಂ ಮುಂ
ತಾಗಿರಲಾದಿತ್ಯ ಸೋಮರನುಚರರಾದರ್ ||೯೦||

ಅಭಿನವ ಜಲಧರ ತತಿಗಳ್
ನಭಕ್ಕೆ ನೆಗೆ[1]ವುವು[1] ಖಗಾದ್ರಿಯಣೆಯಿಂ ಸೂರ್ಯ
ಪ್ರಭತನಯನತುಳ ಭುಜಬಲ
ವಿಭವಂ ಪೊಡೆಸೆಂಡುವೊಯ್ದ ಬೆಟ್ಟಂಗಳವೋಲ್ ||೯೧||

ಕರುಣಿಸುವುದೆನ್ನ ತೇಜ
ಸ್ಫುರಣೆಗೆ ನೀನೆಂದು [2]ಬೆ[2]ರ್ಚಿ ಬೆಸ[3]ಕೆಯ್ವ[3]ವೊಲೇಂ
ಕರುಮಾಡಕ್ಕೋಲಗಿಪನೊ
ಖರಕರನಾ ಖಚರ ಚಕ್ರವರ್ತಿಯ ಸುತನಂ ||೯೨||

---

1 ವರ್ (ಜ) 2 ಪೆ (ಜ) 3 ಕೈದ (ಜ)

ಸಂತಸಮಂ ಕೀರ್ತಿಯ ಬೆಳ
[1]ಗಂ[1] ತೃಪ್ತಿಯನಮರ ಫಣಿ ನರಾಳಿಗೆ ಕುಡುವೀ
ಚಿಂತಾಗತಿಯೆ ಜಗತ್ರಯ
ಚಿಂತಾಮಣಿಯೆನ್ನದೆಂಬನಿನ್ನೇನೆಂಬಂ ||೯೩||

ಘನಕೇಶಂ ದರಹಾಸವರ್ಷವದನಂ ತಾಮ್ರಾಧರಂ ಲೋಳಲೋ
ಚನವಾಜಾನುವಿಳಂಬಿ ಬಾಹು ಸುವಿಶಾಳೋರಸ್ಥಳಂ ತಪ್ತಕಾಂ
ಚನವರ್ಣಂ ತನುಮಧ್ಯನಾತನತನುಪ್ರಾಯಂ ನವಾರೂಢಯೌ
ವನವೇಂ ನೋಡಿಸಿದತ್ತೊ ಮುಗ್ಧಖಚರೀನೇತ್ರತ್ರಿಭಾಗಂಗಳಂ ||೯೪||

ಮಿಂಚಿನ ತಟ್ಟೆ[2]ಯಂ[2] ಬಳಸಿದಂತಿರೆ ಕಣ್ಗಳ ಮಿಂಚು ಮೇಗೆ ಪೂ
ಗೊಂಚಲ ಪಂದರಂ ಪಡೆಯೆ ಪೆಂಡಿರ ವಕ್ತ್ರಸಹಸ್ರಕಾಂತಿ ಚ
ಲ್ಲಂ ಚಳೆಯಂಗುಡುತ್ತುಮಿರೆ ರಾಗರಸಾಮೃತದಿಂ ವಿನೋದಮಂ
ವಂಚಿಸದೋಲಗಂಗುಡುವನಂಬರದೊಳ್ ಖಚರೇಂದ್ರನಂದನಂ ||೯೫||

ರಸಮಂ ಸೂಸೆ ಮುಖೇಂದು ಕೈ ಮದನನಂ ಕೈವೀಸೆ ಬೆಳ್ದಿಂಗಳಂ
ಪೊಸತಂ ಪುಟ್ಟಿಸೆ ದೃಷ್ಟಿ ಮೈ ಪೊಳೆವ ಮಿಂಚಂ ಪೋಲೆ ಚೆಲ್ವಾಗೆ ಬ
ಣ್ಣಸರಂ ಕಾಟ್ಪುರವೇಟಿ[3] ಕಾಕಳಿ ನಭೋರಂಗಾಗ್ರದೊಳ್ನಿಚ್ಚಲಾ
ಡಿಸುವಂ ಪಾಡಿಸುವಂ ವಿಯಚ್ಚರಿಯರಂ ವಾ[3]ಗ್ಗೇಯ[3] ವಿದ್ಯಾಧರಂ ||೯೬||

ಇವನೆಮ್ಮಾಳ್ದನನಿಕ್ಕಿ ಸಾಧುವಿನವೋಲ್ ತಾನಲ್ಲದಂತಿಲ್ಲಿ ಪೋ
ಕವಿದಿರ್ಪಂ ಜಿನನೆಂದು ಪೊಂಬಸದಿಯಂ ಪುಷ್ಪಾಸ್ತ್ರ[4]ಸೇನಾಳಿ[4] ಮು
[5]ತ್ತುವ[5]ವೋಲ್ ಪೆಂಡಿರ ತಂಡನೊ[6]ಪ್ಪೆ[6] ಬಲಗೊಂಡಷ್ಟಾಹ್ನಿಕಾರ್ಚಾ ಮಹೋ
ತ್ಸವಮಂ ಮಾಡುವನಿಂದ್ರನಾಗಿ ಮುದದಿಂ ವಿದ್ಯಾವಧೂವಲ್ಲಭಂ ||೯೭||

ಇದು ಮೃದುಪದಬಂಧುರ ಸರಸ್ವತೀ ಸೌಭಾಗ್ಯವ್ಯಂಗ್ಯಭಂ[7]ಗಿ[7] ನಿಧಾನ ದೀಪವರ್ತಿ [8]ಚತುರ್ಭಾಷಾ ಕವಿ[8]ಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್

ದ್ವಿತೀಯಾಶ್ವಾಸಂ
ಸಮಾಪ್ತಂ

---

1 ಗಿಂ (ಣ) 2 ಯೆಂ (ಚಟಣ) 3 ಗೇಯು (ಜ) ಗ್ಗೇಯೆ (ಚಟಡಣ) 4 ನಾಳೀಯು (ಚಟಡಣ) 5 ತ್ತುವು (ಚಟ) 6 ಪ್ಪಿ (? ಟಡ) 7 ಗಿಸಿ (ಜಟ) 8 ಕವಿ (ಜ)

ಚೆಂಕಾಗತಿಗಾದರ್ಕೆಳ ಮನೋಗತಿಯುಂ ಚಪಳಗತಿಯುಮೆಂಬನುಜಾತರ್

ತೃತೀಯಾಶ್ವಾಸಂ

ಶ್ರೀಯೆನ[1]ಗನು[1]ರದ ಮುತ್ತಿನೆ
[2]ಕೇ[2]ಯೂರಂ ಬೀರಸಿರಿಯ ಕಣ್ಬೆಳಗೆನೆ ಕೆಂ
ಬಾ[3]ಯುಮ[3]ಜನ ಸತಿ[4]ಯೆಂದೆ[4]ನೆ
ಜೀಯೆನಿಸಿದನಮಳಮೂರ್ತಿ ಕೀರ್ತಿಪತಾಕಂ ||೧||

ಸಲೆ ಚಿಂತಾಗತಿ ತನ್ನಚಿಂತ್ಯಮಹಿಮಾವಷ್ಟಂಭವಿದ್ಯಾಸಮು
ಜ್ವಲತೇಜಃಪ್ರಭೆಯಿಂದೆ ತನ್ನ ರುಚಿಮತ್ತಾರಾದ್ರಿಯಂ ಕಾಂಚನಾ
ಚಲಮಂ ಮಾಡಿಯೆ ಕಾಂಚನಾಚಲಮುಮಂ ತಾರಾದ್ರಿಯಂ ಮಾಡಿದಂ
ನೆಲೆಗೊಂಡೊಪ್ಪುವ ಕೀರ್ತಿಕೌಮುದಿ[5]ಯಿ[5]ನಿನ್ನೇನೆಂಬ ಸಾಮರ್ಥ್ಯಮೋ ||೨||

ರಾಗಕ್ಕೊಡವುಟ್ಟುವವೋಲ್
ಭೋಗಮುಮುಪಭೋಗಮುಂ ಶುಭೋದಯ[6]ದಿಂ[6] ಚಿಂ
ತಾಗತಿಗಾದರ್ಕೆಳ ಮ
ನೋಗತಿಯುಂ ಚಪಳಗತಿಯುಮೆಂಬನುಜಾತರ್ ||೩||

ವ|| ಅಪ್ಪುದುಮಾಸುರಮಪ್ಪ ಸಿರಿಯನೊರ್ವನೆ ನಿರ್ವಂದದಿನಂತವಂ ತವೆ ಯುಣಲಾಱದೆ ಬಹುರೂಪಿಣೀವಿದ್ಯೆಯಿಂ ಮತ್ತೆರಡು ರೂಪಾದಂತೆ ತಮ್ಮಂದಿರಿರ್ವರ್ವೆರಸು ಚಿಂತಾಗತಿ ಖೇಚರ ರಾಜ್ಯಮನನುಭವಿಸುತ್ತುಮಿರ್ಪಿನಮಾಶ್ರೇಢಿಯರಿಂದಮ ಪುರಮನಾಳ್ವ[7]ರಿಂ[7]ಜಯಖಚರ ಪತಿಗ[8]ಮಾತನ[8] ಸತಿಯಜಿತಸೇನಾದೇವಿಗಂ ವಿಳಾಸವತಿಯೆಂಬ ಮಗಳಾಗಿ

ರತಿಯಂ ರೂಪಿಂಗೆ ಮೆಚ್ಚಳ್ ಸಿರಿಗೆ ಸಿರಿಯುಮಂ ಪುಲ್ಗೆ ಕೈಕೊಳ್ಳಳಾ ಭಾ
ರತಿಯಂ ವಿದ್ಯಾಗುಣಕ್ಕೊಂದಡಕೆಗಮೆಣಿಸಳ್ ಕೇಳಿಮುತ್ತ್ಸೇಕಮುಂ ಪಾ
ರ್ವತಿಯಂ ತ[9]ನ್ನೊಂ[9]ದು [10]ಪೆಂಪಿಂಗರೆ[10]ಗವಡಿಕೆ[11]ಯಂ[11]ಕೊಳ್ಳಳೇವೇೞ್ವೆನುದ್ವಲ
ತ್ತಾತೆಯಂ ಸೌಭಾಗ್ಯಸಂಪತ್ತಿಗೆ ಖಗನ ಮಗಳ್ ರಂಬೆಯಂ ಸಿಂ[12]ಬೆ[12]ಯೆಂಬಳ್ ||೪||

---

1 ಗೆ ಉ (ಚಜಟಡ) 2 ಕೈ (ಜಟ) 3 ಯವ (ಚಟಡ) ಯಚೆಲುವ (ಜ) 4 ಯೆ (ಜ) 5 ಯ (ಚಜಟಡ) 6 ವುಂ (ಜ) 7 ಮರಿಂ (ಜ) 8 ಳುವಮಾತನ (ಚಟ) ಳು (ಡ) ಳ್ಗಮಾತನ (ಜ) 9 ನ್ನೊಂ (ಚಟಡ) 10 ಭೋಗಕ್ಕರ (ಜ) 11 ಗಂ (ಜ) 12 ಬಿ(ಜ)

*ತೊಡರ್ದಿ಼ೕ ಗಾಣದ ಗೂಳಿಯಂತೆ ತಿರಿಯುತ್ತಿಂತಿರ್ಪರೇ ಮೆಟ್ಟಿದೊಂ
ದೆಡೆಯಂ ಮೆಟ್ಟಿ ತರಸ್ವಿಗಳ್ ಬಡಗಣಿಂ ತೆಂಕಣ್ಗೆ ಮೇಣ್ತೆಂಕಣಿಂ
ಬಡಗಣ್ಗಾಯೆರಡಿರ್ಕೆ ಮೇಣ್ಪಡುವಣಿಂ ಮೂಡಣ್ಗೆ ತಾಂ ಪಾಱಲಾ
ರ್ಪೊಡೆ ಬಂದೆನ್ನೊಡವಾಱುಗೆಂದು ನುಡಿವಳ್ಕ್ರತ್ತಾಕೆ ಮಾರ್ತಂಡನಂ ||೫||

[1]ಗಂ[1]ಡರ ಕೇಡಂ ಪೆಂಡಿರ
[2]ತಂಡಂ ಮಾಡುತಿರಿರ್ಕೆಮ ಖಚರರ[2]ವಳ್ಗೀ
ಭಂಡಂ ಬಾಂಬರಿಯೊಳ್ ಮಾ
ರ್ತಂಡನುಮಂ ಪುಲ್ಲಕಡ್ಡಿಗಂ ಕೈಕೊಳ್ಳಳ್ ||೬||

ಮೇಗಿಲ್ಲಿನ್ನೀಕೆಗಾರುಂ ಗಗನಗತಿಯೊಳಿಂಬೊಂದೆ ಹೃದ್ಗರ್ವಮೇ ವಿ
ದ್ಯಾಗರ್ವಂ ಪ್ರಾಯಗರ್ವಂ ಕುಲದ ಚಲದ ಗರ್ವಂ ಕಳಾಪ್ರೌಢಿಗರ್ವಂ
ಶ್ರೀಗರ್ವಂ ರೂಪಗರ್ವಂ ಪ್ರಬಳ ಸಹಜಸೌಭಾಗ್ಯಗರ್ವಂ ಜಯಶ್ರೀ
ಡಾಗರ್ವಂ ಕೂ[3]ಡೆ[3] ವಿದ್ಯಾಧರಿಗೆ ಪಡೆದುವೇಟಿಂಟು ಸೊರ್ಕಿಂಗೆ ಸೊರ್ಕಂ ||೭||

ಗಾಡಿಗೆ ಮರುಳ್ದು ತನ್ನಂ
ಬೇಡಲೆ ಸಲೆ ಬಂದ ಖಚರರಂ ಗತಿಯೊಳ್ ಕೇ
ಟ್ಮಾಡಿ ಕೊಱಚಾಡಿ ಕಿವಿಗಳ
ನಾಡಿಸಿ ಬಿಡುವಳ್ ವಿನೋದಮಿದು ಖೇಚರಿಯಾ ||೮||

ಅಮರಗಿರಿಶಿಖರದಿಂ ಪು
ಷ್ಪಮಾಲೆಯಂ ಬಿಟ್ಟು ಮೂಮೆ ಬಲಗೊಂಡಾ ಶೈ
ಲಮುನವ[4]ಳಿ[4]ಳಿ ಮುಟ್ಟದ ಮು
ನ್ನಮೆ ಮಾಲೆಯನೆಯ್ದಿ ಪಿಡಿವಳೆನ್ನ[5]ದೊ[5] ವೇಗಂ ||೯||

ಬಾ[6]ಳಕರುಮುಂ[6]ತೆ ಪಾಱುಂ
ಬಾಳಂ ಮಸೆವಂತೆ ಪಾಱುತನಮಿಂತಾಯ್ತಾ
ಕೇಳಿನ್ನೇನುಮ[7]ನೇನಂ[7]
ಗಾಳಿಗೆ ಗಱಿ ಮೂಡಿದಂತೆ ಮೋನಂಗೊ[8]ಳ್ವಂ[8] ||೧೦||

---

1 ಕಂ (ಡ) 2 ತಂಡದ ಮಾತಂತಿರಿರ್ಕೆ ಖೇಚರನ (ಚ) ಮಾತಂತದಿರ್ಕೆ ಖಚರರ (ಜ) ತಂಡಂ ಮಾತಂತಿರ್ಕೆ ನೋಡೆ ತಾಂ ಖೇಚರನ (?ಟ) 3 ಡಿ (ಜಡ) 4 ಳೆ (ಜ) 5 ಮ (ಚಟಡಣ) 6 ಳಕರುವಂ (ಚ) ಳಕೆರವುಂ (ಜ) 7 ನೆನ್ನಂ (ಜ) 8 ಳ್ವಂ (ಡಣ)

* 'ಜ' ಪ್ರತಿಯಲ್ಲಿ ೬ ನೆಯ ಪದ್ಯದ ಅನಂತರ ಬಂದಿದೆ.

ವ॥ ಅಂತು ಖಚರಲೋ[1]ಕ[1] ಕೋಳಾಹಳಮಾದ ತನ್ನ ಮಗಳ ಗಗನ ಗಮನ ವೇಗಾತಿಶಯಮುಮನಭಿನವ ಯೌವನಾತಿಶಯಮುಮನೆಂತಪ್ಪರುಮಂ ಮೆಚ್ಚದ ರೂಪಾತಿಶಯಮುಮನರಿಂಜಯಂ ಕಂಡು ಕೇವಣಿ[2]ಸ[2]ದ ಮಾಣಿಕಮುಂ [3]ಕು[3]ಡದ ಕೊಸುಮಿನ್ನಾ[4]ರ್ಗೋಸುಗಂ ನಾಲ[4]ಗೆಯುಮಂ ನಲ್ಲನುಮನೊಲ್ಲದ [5]ಪ[5]ಣ್ಣ ಸವಿಯುಂ ಪೆಣ್ಣರೂಪುಮೇಂ ಬಾಟ್ತಿ ವಸಂತಮಾ[6]ಳಿ[6] ನೆರೆಯದ ಚೂತಲತೆಯುಂ ಕಾಂತ ನೊಳ್ ನೆರೆಯದ ತನುಲತೆಯುಂ ಸಹಜಸೌಂದರ್ಯಮುಳ್ಳೊಡಮೆನಿತೊಪ್ಪಲಾರ್ಪು ದೆಂದಂಬರಗತಿ ಸ್ವಯಂಬರಮಂ ಮಾಡಲ್ಕನಂದಂದು ವಿಜಯಾರ್ಧಪರ್ವತಾಗ್ರವನ ದೊಳಗೆ ನಳನಳಿಸುವ ಕೆಂದಳಿರ ಕಾವಣಂಗಳುಮಂ ಮಿಳಿರ್ವ ಮಲ್ಲಿಕಾಮಂಟಪಂಗ ಳುಮಂ ಬಳ್ವಳ ಬೆಳೆದ ಬಾಳಚೂತದ ಬಾಟ್ಜೊಂಪಂಗಳುಮಂ ಲಲಿತಲತಾ ನಿಳಯ ಮನೊಳಗುಮಾಡಿ ಪಲವುಂ ನೆಲೆಯ ಚೌಪಳಿಕೆಗಳನಿಕ್ಕಿಸಿ ಕಾಯ್ತು ಒಳ್ಳಿಗೌಂಗಿನ ಪಸುರ್ವಂದ[7]ರಂ[7] ಪ[8]ಣ್ತ್[8] ಮಧುರದ್ರಾಕ್ಷೆಯ ಬಾಟ್ವಂದರುಮನಿರ್ಕೆಲದೊಳ[9]ಕ್ಕಿ[9] ನಡೆಪೂವಿನ ಪಂದರುಮಂ ವಿವಾಹವೇದಿಕೆಯುಮಂ ಸವೆಯಿಸಿ ಖಚರಕುಮಾರರೆಲ್ಲಂ ವಿಳಾಸವತಿ [10]ಸ್ವ[10]ಯಂಬರಕ್ಕೆ ಪೂವಿನ ಮಾಲೆಯಂ ಪಿಡಿದು ತಡೆಯದೆ ಬರ್ಪು ದೆಂದುಭಯಶ್ರೇ[11]ಣಿ[11]ಯೊಳಂ ಗೋಸಣೆಯಿಡಿಸಲೊಡನೆ

ಬಿರುದಂಕಂ ಸಂದ ವಿದ್ಯಾಧರಿಯ ಮನಮದಂ ಸಾ[12]ಧಿ[12]ಸಲ್ ಚಂದ್ರನೊರ್ವಂ
ಸ್ಮರನೊರ್ವಂ ಚೈತ್ರನೊರ್ವಂ ನೆಱೆಯದೆ ನೆಱೆದೇಂ ಬಂದುದೋ ಚಂದ್ರಸೈನ್ಯಂ
ಸ್ಮರಸೈನ್ಯಂ ಚೈತ್ರಸೈನ್ಯಂ ಪಿರಿದುಮೆನಿಸಿ ಬಂದತ್ತು ವಿದ್ಯಾಧರೌಘಂ
ಸುರಭಿ ಶ್ರೀಖಂಡಶುಭ್ರಂ ಮೃಗಮದಮಳಿನಂ ಮಲ್ಲಿಕಾಮೋ[13]ದ[13] ವಾಹಂ ॥೧೧॥

ಪನಿಯಂ ನುಂಗುತೆ ತುಂಬಿ ಚಾದಗೆ ಚಳದ್ಗಂಧಾನಿಳಂ ಪಾಯ್ದು ಝು
[14]ಲ್ಲ[14]ನೆ ಜಂಝಾನಿಳನಾಗೆ ಖೇಚರಚಮೂಹಸ್ತಾಗ್ರಮಾಳೌಘ ಮೇ
ಘನಿಕಾಯಂಗಳಿನೇಂ ಬ[15]ಟಿ[15]ಲ್ದಿ ಜಗಿತೋ ರೂಪಾದ್ರಿಯೊಳ್ ಪುಷ್ಪನೀ
ರ ನವಾಸಾರ[16]ದಿನಿಂ[16]ದು ಸಾನುತರುಗಳ್ತೀಂಕಾಡುತಿರ್ಪನ್ನೆಗಂ ॥೧೨॥

ವ॥ ಅಲ್ಲಿಗಾ ಚಿಂತಾಗತಿಯುಂ ತನ್ನ ತಮ್ಮಂದಿರಿರ್ವರ್ವೆರಸು ಬಂದಿರ್ದನಾ ಗಳಾ ವಿದ್ಯಾಧರಿ ನೆರೆದ ವಿದ್ಯಾಧರರ್ಗೆ ಬಹುರೂಪಿಣೀ ವಿಶ್ಯೆಯಂ ತಾಳ್ದಿದಂತೆ

---

1 ಕದೆ (ಚಟಙ) 2 ಸಿ (ಚಟಡ) 3 ಕೂ (ಜ) 4 ಗೋಗಸುಗ.ನಾರ್ಬ (ಚಟಡಙ) 5 ಪೆ (ಙ) 6 ಲೆ (ಜ) 7 ರು (ಚಟಡ) ರುವಂ (ಙ) 8 ಙ್ಣ (ಜ) ಙ (ಡ) 9 ಕ್ಕಿಸಿ (ಙ) 10 ಯುರೆಯ್ದು (ಚಟಡಙ) 11 ಧಿ (ಚಟಡಙ) 12 ರಿ (ಚಟಡಙ) 13 ರ (ಚಟ) 14 ಲ್ಲೋ (ಜ) 15 ೪ (ಜ) 16 ವದೊಂ (ಜ)

ಷಮುದಾಳೋಕನದಿಂ ಸಮುನ್ನತ ಕುಚದ್ವಂದ್ವಂಗಳಿಂ ಸ್ಮೇರಚಾ
ರುಮುಖಶ್ರೇಣಿಗಳಿಂ ಬಲಲ್ಮುಡಿಗಳಿಂ ವಿದ್ಯುನ್ಮಯಂ ಚಕ್ರವಾ
ಕಮಯಂ ಚಂದ್ರಮಯಂ ಮಯೂರಮಯಮೆಂಬಂತಭ್ರಮೇನೆಂಬ ವಿ
ಭ್ರಮದಿಂ ಬಂದರೊ ಸುತ್ತಿಮುತ್ತಿ ಸಖಿಯರ್ ಸಾಸಿರ್ವರಾ ಕನ್ನೆಯಂ ||೧೩||

ಪೊದಯಿಸಿದಡ್ಡಣಂಬೊಲಿರೆ ಸುತ್ತಿದ ಸತ್ತಿಗೆ ಡಿಂಡಿಮಸ್ವನಂ
ಕೆದಱಿ ಬೆಡಂ[1]ಗಿನಿ[1]ಟ್ಟ ತಿಳಕಂ ತಿಮಿರೊಪ್ಪಮನೀಯೆ ಕೂರ್ಪ ಕುಂ
ದದ ಕಡೆಗಣ್ಣ ಗೇಣ್ ಪೊಳೆಯೆ [2]ಪಿಲ್ಲಿಸೆ[2] ಕಟ್ಟೆ ಕಳಕ್ಕೆ ವರ್ಪ ದ
ರ್ಪದ ಕುಸುಮಾಸ್ತ್ರನಂಕಮೆನೆ ಖೇಚರಿ ಬಂದಳದೊಂದು ದೇಸೆಯಿಂ ||೧೪||

ವ|| ಬಂದರ್ಚಿಸಿ[3]ರ್ದ ಗತಿಯುದ್ಧ[3] ಶಿಲಾಪಟ್ಟಮಂ ಮೆಟ್ಟಿ ಮಟ್ಟಮಾಗಿ ಪೂಮಾಲೆಯಂ ಪಿಡಿದಾಲೀಢಸ್ಥಾನಮಂ ಕೈಕೊಂಡು ನಿಲ್ವುದುಮಾಕೆಯ ಕೆಳದಿ ಚಂದ್ರಲೇಖೆಯೆಂಬಳಂಬರಚರಕುಮಾರರ್ಗಿಂತೆಂದಳ್ .— ಈ ಕುಮಾರಿಯೊಡನೀ ಗಿರಿಯಿಂ ಮೇರುಗಿರಿಗೆ ಪಾಱ ಜಿನಪತಿಸವನ ಸುಧಾಸಿಂಧುಸಲಿಲಫೇನ ಪಿಂಡ ಪಾಂಡು ರಮಪ್ಪ ಪಾಂಡುಕವನಮಂ ಬಲಗೊಂಡಲ್ಲಿಯ ಜಿನಪ್ರ[4]ತಿಮೆಯ[4] ಪಾದಪದ್ಮಂಗಳನೆರ ಡುಂ ಕಯ್ಯ ಬಾಸಿಗಂಗಳಿನರ್ಚಿಸಿ ಮುನ್ನಮರ್ಚಿಸಿರ್ದ ಮಂದಾರಮಾಲೆಯಂ ಕಳೆದು ಕೊಂಡೀಕೆಯಂ ಮಿಕ್ಕು ಬಂದ ಮಹಾಭಾ[5]ಗನೀ[5]ಪೂವಿನ ಪಂ[6]ದರೊ[6]ಳೀ ಪಂಕಜ ಮುಖಿಯೊಳ್ ಮದುವೆನಿಲ್ವನೆಂಬುದುಂ ಎಮಗೆ ತಮಗೆಂಬ ವಿದ್ಯಾಧರರಂ ನೀಮನ್ನೆಗ ಮಿರಿಮೆಂದು ತಾನುಮೊರ್ವ ತನ್ನ ತಮ್ಮಂದಿರಾಕೆಗೆ ಸೋಲ್ತು ಸಿಗ್ಗಾಗಿ ಬಂದ ಪರಿ ಭವಮಂ ಪರಿಭಾವಿಸಿ ಚಿಂತಾಗತಿಯುಂ ಗತಿಯುದ್ಧ ಶಿಲಾತಳದೊಳ್ ಪ್ರತ್ಯಾಲೀಢ ಸ್ಥಾ[7]ನ[7]ಮಂ ಕಳೆದುಕೊಂಡು

ನಿಲ್ತ ತನು ನಿಂದ ನಿಲವಂ
ಪೋಲ್ತಾತನ ಗಾಡಿಗಿವಳ ಕಣ್ಣುಂ ಮನಮುಂ
ಸೋಲ್ತುವು ಘನಪದಗತಿಯೊಳ್
ಸೋಲ್ತಪಳಿವಳೆಂದು ಸೂಚಿಸಂತೆವೊಲಾಗಳ್ ||೧೫||

ನೋಡಿರೆ ಕೇಳ್ದವರೆಲ್ಲಂ
ನೋಡಲ್ಬಯಸುವ ವಿವೇಕವಿದ್ಯಾಧರನಂ
ನೋಡಿದ ಕಣ್ಗಳ್ [8]ಪೆಱ[8]ರಂ
ನೋ[9]ಡವು[9] ವೀಕ್ಷಣ ವಿ[10]ವೇಕ ವಿದ್ಯಾಧರಿಯಾ[10] ||೧೬||

---

1 ಗನಿ (ಜ) ಗುಗಿ (ಟ) 2 ಪೆಲ್ಲಿಸಿ (ಜ) ಪೆಲ್ಲಿಸೆ (ಡ) 3 ದ ಗತಿಯುದ (ಚಟ)
4 ತುಮೆಗಳ 5 ಗಿನೀ (ಜ) ಗಗೀ (ಚಟ) 6 ದೊರೊ (ಚಣ) ದರದೊ (ಜ) 7 ನಕ (ಜ)
8 ಪರ (ಟಡ) 9 ಡೆವೆ (?) ಡುವೆ (ಚಟ) ಡವೆ (ಜಡ) 10 ದಗ್ಧ ವಿದ್ಯಾಧರನಾ (ಚಟಡಣ)

ಪೂಮಾಲೆಯಂ ಪಿಡಿದಾಲೀಢಸ್ಥಾನಮಂ ಕೈಕೊಂಡು.

ವ|| ಅಂತು ವಿಳಾಸವತಿಯುಂ ಕೆಳದರ್ಱ ಗತಿಯುದ್ಧಕ್ಕೆ ಕಳನೇಱಿ ನಿಲ್ವುದುಂ
ಉಭಯಪಕ್ಷದೊಳ್ ಸೂಳೈಸುವ ದುಂದುಭಿಗಳ ಪೊಡೆವ ಪಟಹ ಡಕ್ಕೆಗಳ ಬೊಬ್ಬಿ
ಱಿ[1]ವ ಖೇಚರರ ಕಳಕಳಿಸುವ[1] ಖೇಚರಿಯರ ತುಮುಳ ರವದೊ[2]ಳ್ ಕೊ[2]ಡದರ್ಱ
ಪರಿವಂತೆ ಮನದೊಳ್ತ್ರಚ್ಚರಿಸಿ ಪಾಱುವಂತೆ ನುಸು[3]ಳಂ[3] ನೊಪ್ಪುಮನಪ್ಪುಕೆಯ್ದು

ನಸು[4]ಮ[4]ಸುಳ್ದಂಗಲೇೞೆ ಪೊಱಮ[5]ಟ್ಟಿಡೆಗಾ[5]ಲ್ ಪೊಱವಾಱಮೇಲೆ ಪ
ತ್ತಿಸಿದ ಮಡಂ ಕರದ್ವಯದೆ ಬಿದ್ದೆಸ[6]ದೆ[6]ತ್ತಿದ ಮಾಲೆ[7]ಮಂ[7]ಡನಂ
ಕಿಸುವ ಮುಖೇಂದು [8]ಮುಂ[8]ಚಲನುಗೆಯ್ದು ಕುಚಂ ಮುರಿ [9]ಕಲ್ಪ[9]ಭಂಗಿ ಕ
ಣ್ಗೆಸೆದಿರೆ ಪಾಱಿದಳ್ ಪೊಳೆದು ಖೇಚರಿ ಮಿಂಚಿನ ಬೊಂಬೆಯೆಂಬಿನಂ ||೧೭||

ಸಱಿಗಲ್ಲಂ ದಬ್ಬುಕದಿಂ
ದಿಱಿದೊಡೆ ಕಿಡಿ ಹಾಱುವಂತೆ ಮುಂತೊಗೆದ ಮುಗಿ
ಲ್ದುಱುಗಲನೆ ಖಚರಿ ಕುಚದಿಂ
ದಿಱಿದಳ್ ಕಿಱುಮಿಂಚು ನುಚ್ಚುನುಱಿಯಪ್ಪಿನೆಗಂ ||೧೮||

ವ|| ಚಿಂತಾಗತಿಯುಂ ತನ್ನ ಪೆಸರಂ ನನ್ನಿಮಾಡಿ ತರುಣಿಗೆ ತಕ್ಕುಗೊಟ್ಟು ಪೆಱಗೆ
ಪಾಱಿ ಪೋಗಿ ಮಿಡಿದನಿತು ಬೇಗಕ್ಕೆ ಮಂದರಮನೆಯ್ದಿ ಪಾಂಡುಕ ಶಿಲಾತಳಮಂ
ತ್ರಿಃಪ್ರದಕ್ಷಿಣಂಗೆಯ್ದಲ್ಲಿಯ ಪರಮೇಶ್ವರ ಪ್ರತಿಬಿಂಬದ ಪಾದಾಂಭೋಜಕ್ಕೆ
ಕಯ್ಯ ಕುಸುಮದಾಮಮನೇಱಿಸಿ ನೊಸಲೊಳಿಟ್ಟು ಪೊಡೆವಟ್ಟು ರೂಪಸ್ತವ ವಸ್ತು
ಸ್ತವ ಗುಣಸ್ತವಂಗಳಿಂ ಸ್ತುತಿಯಿಸಿ ಪಂಚಗುರುಭಕ್ತಿಪೂರ್ವಕಂ ಪಿರಿದು ಪೊೞ್ತು
ದೇವರಂ ಕಂಡು ದೇವರ್ಕಳರ್ಹದ್ದೇವನ ದಿವ್ಯಶ್ರೀ ಪಾದಪದ್ಮದ ಮೇ[10]ಗೆ[10] ಮಂದ
ಮಾಗೊಟ್ಟಿದ ಮಂದಾರಮಾಲೆಯುಮಂ ಚಂದನಕರ್ದಮುಮಂ ಮುತ್ತಿನ ಸ[11]ಲ[11]ಗೆ
ಯಂತೆ ನವಮಾಳಿಕೆಯ ನನೆಗಳಂತೆ ನಿಡಿಯವುಂ ಕಮ್ಮಿದುವುಮಪ್ಪ ಕಳಮಾಕ್ಷ
ತಂಗಳುಮಂ ತುಱುಬಿ ತಿಳಕಮಿಕ್ಕಿ ತನ್ನ ಗೆಲವಿಂಗೆ ಸೇಸೆಗೊಳ್ವಂತೆ ಸೇಸೆಗೊಂಡು
ಹರ್ಷೋತ್ಕರ್ಷಚಿತ್ತನುಂ ರೋಮಾಂಚಕಂಚುಕಿತ ಶರೀರನುಮಾಗಿ ಬೞಿಕಮಕೃತ್ರಿಮ
ಚೈತ್ಯಾಲಯಂಗಳೆಲ್ಲಮಂ ಬಂದಿಸಿ ದೇವಗಿರಿಯಂ ದೇವನಂತೆ ಮಗಮಗಿಸಿ
ಮಗುಳ್ದು ಬರುತ್ತುಂ ತನ್ನೊಳಿಂತೆಂದನಮರ್ದಂ ಮರ್ದುವೇೞ್ದಂತೆಯುಂ ಮಲರಮೇಲೆ
ಮದಾಳಿಗೆ ದಾೞಿವೇೞ್ದಂತೆಯು[12][ಮಿ][12]ನ್ನೆವರಮೆನ್ನ ಪುರುಳ್ಕೆಟ್ಟು ದುರಾಗ್ರಹಂ
ದುರಿತಹರಮಾದುದು ಲತೆಯೆನಿತ್ತು ಬಲ್ಲಿತ್ತಾದೊಡಂ ಮರದಿಂ ಬಲ್ಲಿತ್ತಲ್ತು ಪಾರ್ವೊಡೆ

---

1 ಹ (ಚಟಡಣ) 2 ಳಗೊ (ಜ) 3 ಳು (ಜ) 4 ಮು (ಜ) 5 ಟ್ಟಿರೆಗೊ (ಚಟಡಣ) 6 ಗೆ (ಜ) 7 ವಱಂ (ಜಡ) 8 ಮಂ (ಚಟಡಣ) 9 ದೇಳ್ವ (ಜ) 10 ಲೆ (ಡಣ) 11 ತ್ತಿ (ಚಟ) ● (ಡ) 12 ಮ (ಚಜಟಡಣ)

ಪೂಮಾಲೆಗಂ ಪಾಶಕ್ಕಮುಜಗಜಾಂತರಂ ಚಪಳಪ್ರಕೃತಿಯಪ್ಪ ಪೆಂಡಿರ್ಗೆತ್ತಾನು ಮೊಂದು ಗುಣಲವಂ[1]ಘು[1]ಣಾಕ್ಷರ ನ್ಯಾಯದಿನಾದುದಾದೊಡ[ದ]ನಗು[2]ರ್ವು[2] ಮಾಡಿ ಕೊಂಡು ಕೊನೆದು ಕೊ[3]ಣ[3]ಕಿಟ್ಟು ಕೋಣ[4]ನನೇಱ[4]ದ ಭಗವತಿಯಂತೆ ಬಿಜ್ರನೆ ಬೀಗಿ ಯದನೆ ಮುಂದೇಂಗೊಡಿರ್ಪರೆಂದು ನಸುನಗುತ್ತುಂ ಮೆಲ್ಲಮೆಲ್ಲನೆ ಖಚರಗಿರಿಗೆ ವಂದು ಗತಿ ಯುದ್ಧ ಶಿಲಾತಳಮನೇಱಲೊಡನೆ

ಪೂವಿನ ಮೞೆ[5]ಯಂ[5] ಸುರಿದರ್
ದೇವರ್ಕಳ್ ದೇವದುಂದುಭಿಧ್ವನಿ ನಭಮಂ
ತೀವಿದುದು ಪೇಗರುಂ ಖಚ
ರಾವಳಿ ಪೊಗೞ್ದುದು ವಿವೇಕ ವಿದ್ಯಾಧರನಾ ||೧೯||

ದೊರೆವೆ[6]ತ್ತ್ರೀ[6] ವ್ಯೋಮಯಾನೋನ್ನತಿವಿತರಣ ವಿದ್ಯಾಧರಂಗಿಂದು ತಾನೊಂ
ದರಿದಲ್ಲೀ ಪೇೞ್ದ ಪುಣ್ಯಾಂಬುಧಿಯೆ ವಿಬುಧನೃಂಪಸ್ತುತಂ ನೇಮಿನಾಮಾ
[7]ಚ[7]ರಣಂ ತಾನಾಗಿ ಶುಂಭತ್ಸಮವಸೃತಿ ಸಭಾಸಂಯುತಂ ಶೋಭಿಪೆತ್ತಂ
ಬರಯಾನಶ್ರೀಯ ಪೆಂಪಂ ತ್ರಿಭುವನ ಜನಕಾಶ್ಚರ್ಯಮಪ್ಪಂತು ತೋರ್ಪಂ ||೨೦||

ವ|| ಎಂಮೊಂದೆ ಕೊರಲಿಂ ವೃಂದಾರಕವೃಂದಂ [8]ಪೊಂ[8]ಗಿ ಪೊಗೞುತ್ತುಮಿರ್ಪಂ ತನ್ನೆಗಮುರ್ಧಮಾರ್ಗದೊಳ್ ಪುಗುೞ್ದ

[9]ಪಿಂ[9]ತೆನೆ ಬಂದಳಾಕೆ ಮದನಾನಳನುರ್ವೆ ಕರಂ ಬೞ[10]ಲ್ದು[10] ತ
ನ್ನಂ ತೆಗೆದೆತ್ತಿಕೊಂಡು ನವಿಲುಂ ಪೊಣರ್ವಕ್ಕಿ[11]ಯು ಮೇರೆ[11] ಪಾಱ ಬ
ರ್ಪಂತೆವೊಲೊಪ್ಪೆ ಬಿಟ್ಟ ಮುಡಿಯುಂ ಮೊಲೆಯುಂ ವಧು ನಾಡೆಯೋಡೆ ಬೆ
ನ್ನಂ ತಗುೞ್ದಿೞ್ಚ ಕಾಮನಲರಂಬಿನ ಬಾಯೊಳೆ ಬಂದಳೆಂಬಿನಂ ||೨೧||

ಬೆಮರಂ ವ್ಯೋಮಪ್ರಯಾಣಂ ಪಡೆದ ಬೆಮರ್ಗಳೊಳ್ ಬಾಷ್ಪಮಂ ಸೋಲ್ತ ಸಿಗ್ಗಿಂ
ದ[12]ಮೆ[12] ಪೂರಂಬಾಯ್ವ ಬಾಷ್ಪಂಗಳೊಳೆ ಸಮಶರಂ ಮಾಡಿದುಚ್ಛ್ವಾಸ ಖಿನ್ನ
ಶ್ರಮಮಂ ಪ್ರೋದ್ದೀ ನ[13]ದೀ[13]ನಶ್ರಮದೊಳೊಗೆದ ರೋಮಾಂಚಮಂ ಶೀತವಾತ
ಸ್ತಿಮಿತೋಪಸ್ಪರ್ಶ ರೋಮಾಂಚದೊಳೆ ಬೆರಸಿದಳ್ಕನ್ನೆಗೇಕಿನ್ನವಂದಂ ||೨೨||

---

1 ಘು (ಚಜ) ಘ್ರಾ (ಡ) 2 ರ್ವ (ಚಟಡಣ) 3 ಟ (ಜ) 4 ನಿಜು (ಚ) ನಿತ್ತಿ (ಡ) ನನಿಱು (ಣ) 5 ಯಿಂ (ಣ) 6 ತ್ರೆ (ಚಟಡ) ತ್ರಾ (ಣ) 7 ಭ (ಜ) 8 ಪೋ: (ಚಟಡ) 9 ಅಂ (ಚಟದಣ) 10 ೞ್ಲ (ಣ) 11 ಯು ಮೇಲೆ (ಚದಣ) ಯುನೋಱ3 (ಜ) 12 ವ (ಚಡ) 13 ಡೀ (ಣ)

ಈ ಗೆಲವನ್ನ ತಮ್ಮಂದಿರ ಸೋಲವಲ್ಲದೆನ್ನ ಗೆಲವಲ್ಲ

ಎಡೆಗಿಱಿದಬಲೆಯ ಮೊಲೆಯಿ
ಟ್ಟೆಡೆಯೊಳ್ [1]ಕೆಳೆ[1]ಗೊಂಡು ನಿಂದುವಲ್ಲದೆ ನುಸುಳಲ್
ಪಡೆಯವು ಮದನಾಸ್ತ್ರಗಳಿಂ
ದೊಡೆ ಮುತ್ತಿನ ಹಾರಮೆಂತು ಪೇೞ್ನುಸುಳ್ದಪುದೇ ||೨೩||

ಜವದಿಂ ವಿದ್ಯಾಧರಿಯಂ
ವಿವೇಕ ವಿದ್ಯಾಧರಾಂಕನೇಂ ಗೆಲ್ದನೆ ಕೈ
ತವದಿಂ ಬಟಲಿಸಿ ಗೆಲಿಸಿದ
ನಿವನೆನೆ ಕಾಮಂ ವಿಕಾರ[2]ಭ[2]ರಮಂ ಪಡೆದಂ ||೨೪||

ವ|| ಅಂತಾಕೆ ಯಾವ ಮೆಯ್ಯೊಳಂ ಸೋಲ್ತು ಚಿಂತಾಗತಿಗೆ ಜಿನಪೂಜೆಗೆಂದು ಪಿಡಿದು ಪೋದ ಪೂವಮಾಲೆಯನಿದಕ್ಕೆ ಮತ್ತಾವನುಂ ಯೋಗ್ಯನಲ್ಲಂ ಭಾವಿ ಜಿನನಪ್ಪ ನೀನೇ ಯೋಗ್ಯನೆಂಬಂತೆ ಮಾಲೆಸೂಡಲೆತ್ತಿದೊಡೆ ಪಾವಂ ಕೊರಲೊಳ್[3]ಕ್ಕಲೆತ್ತಿ[3]ದಂತಗಿದು ಪಾಱಿ ಪೆಱಮೆಟ್ಟಲೊಡನೆ

*ಮುರಿದಿಸುವಂತೆ ಮೊಲ್ಲೆಯೆಸಳಿಂ ಮಿಗೆ ಸೆಲ್ಲಿಸುವಂತೆ ಕಾಂತೆ ತಾ
ವರೆಯೆಸಳಿಂದೆ ಕೇದಗೆಯ ಕೂರೆಸಳಿಂದವನೊಲ್ಲದೇವದಿಂ
ಸುರಿಗಿಱಿವಂತೆ ನೆಯ್ದಿಲೆಸಳಿಂದಂತೆ ನವೀನ ಕಾಂತಿ ನೀ(?)
ಳ್ದಿರೆ ಕಡೆಗಣ್ಣ ಕಕ್ಕಡೆಯಿನೇಂ ಮುನಿದಿಟ್ಟಳೊ ಮಾನವೇಂದ್ರನಂ ||೨೫||

ಅವನೀ ಭರ್ತಾರನ ಚಿ
ತ್ತವಜ್ರಮುಂ ತಾಗಿತಾಗಿ ತರಳಾಪಾಂಗಂ
ಸಿವುಱಿ[5]ದ್ದಂತೆವೊಲೆಸೆದುವು
ಯುವತಿಯ ನವಕರ್ಣಪೂರಕುವಲಯದಲರ್ಗಳ್ ||೨೬||

ವ|| ಆಕೆಯ ನೋಟಕ್ಕೆ ನಸುನಗುತ್ತುಮಿಾ ಗೆಲವೆನ್ನ ತಮ್ಮಂದಿರ ಸೋಲ ವಲ್ಲದೆನ್ನ ಗೆಲವಲ್ಲದಿವರಿರ್ವರೊಳಾವಂ ನಿನ್ನ ಮನಕ್ಕೆ ವಂದ[4]ಪನ[4]ವಂಗೆ ಮಾಲೆಯಂ ಸೂಡೆನೆ ಸಿಗ್ಗಾಗಿ ವಿಳಾಸವತಿಯಿಂತೆಂದಳ್

ನೀರೇ[5]ಜ[5]ನಿಯೆನಿತಲರ್ದೇಂ
ಸಾರದೆ ಪೋದಂ ದಿನೇಶನಂತೆನಗಂ ನೀಂ
[6]ದೂ[6]ರಪ್ರಿಯನಾದೈ ಸಂ
ಸಾರಂ ವೃಥೆಯಾದುದೆಂದು ಬೆಚ್ಚನೆ ಸುಯ್ದಳ್ ||೨೭||

---

1 ಕೊಳ (ಚಟಡಣ) 2 ಬ (ಚಟಡಣ) 3 ಕ್ಕ (ಚಟಡಣ) 4 ನ (ಚಟಡಣ) 5 ಜ (ಚಟಡಣ) 6 ಸಾ (ಜ)

* 'ಜ' ಪ್ರತಿಯಲ್ಲಿ ಮಾತ್ರ ಇದೆ.

ನಿನ್ನೊಂದೆ ನೋ[1]ಟ[1]ಗುಣದಿಂ
ನಿನ್ನಿಂದಮುಮುಱುವ [2]ಮದ[2]ವನೊಳ್ ಮದುವೆಯುನಿಂ
ದಾನ್ನಿಲ್ಲದಂತು ತಪ್ಪೆಂ
[3]ನನ್ನಿ[3]ಗೆ ಪುಸಿದಂದು ನಗಿಸದೇ ಷತ್ಕುಲಮಂ ||೨೮||

ವ|| [4]ಉತ್ತುಂಗ[4] ನಿನಗಾಂ ಮುನಿಯಲೇಕೆ ಪಸೆಯೊಳ್ ಪಾವು ಕೊಂಡುದೆಂ ಬಂತೆನಗೆ ನಿನ್ನಂತಪ್ಪ ಪುರುಷ[6]ನಂ[6] ದೊರೆಕೊಳಿಸಿ ಕಳಿಂಚುಮಾಡಿ ಕಳೆದ ದುರ್ವಿದಗ್ಧ ವಿಧಾತ್ರಂಗೆ, ಮುನಿನೆನಾಂ ಮುನ್ನಂ ಬೇಱೆ [5]ನೋಂತೆನಿಲ್ಲ[5]ಕ್ಕುಮರ್ಹದ್ದೇವನೊಂದು ಚರಣಕ್ಕೆ ಪೂವಂ ಮಿಗೆಯೇಱಿಸಿ ಮತ್ತೊಂದು ಚರಣಕ್ಕೆ ಏಱಿಸಲ್ಮಱದೆನಕ್ಕುಮೆಂದಾ ನಿರ್ವೇಗದೊಳೆ ಬೇಗಂ ಪೋಗಿ ಮುನ್ನಂ ತನ್ನ ಮದುವೆಗಿಕ್ಕಿದ ಪೂವಿನ ಪಂದರೊಳ್ ತಪಮೆಂಬ ಮದವನಿಗನೊಳ್ಮದುವೆ ಸಿಲಲ್ಬಗೆದು ಪಾಸಿದ ಪಸೆಯ ಮೇಲೆ [7]ಮಲ್ಲಂತಿಗಿಱಿದಱಿಮು[7] ಕುಳ್ಳಿರ್ದು ಕಯ್ಯಿಕ್ಕಿಕೊಂಡಿರ್ಪುದುಮಾ ಉನ್ಮೀಲಿತ ಲೋಚ[8]ನೆ[8] ಲೋಚಂಮಾಡಲೆಂದು [9]ರಾಮಾ[9]ರ್ಜಿಕಾಕರೇಣು ಕರ[10]ಕೋ[10]ಮಲಾಂಗುಲಿ ಗಳಗಳಿಸಿಯಳಿಕುಳಮಳಿನಮಪ್ಪ ಕುಂತಳಕಮಳವನದೊಳಗೆ ಪುಗುವಾಗಳ್

ಅಳಕೆಯ ಕಂಪಿಂಗೆಱಗಿ
ದಳಿಗಳ್ ಪಾಱಿದುವು ಕುಸುಮಕೋಮಳೆಯೇನಾ
ರ್ಪಳೆ ಕೀೞಿ ಸೈರಿಸ[11]ಲ್ಕೆಂ[11]
ದಳಕಂಗಳ್ ತಮಗೆ ತಾಮೆ ಪಾಱುವ ತೆಱದಿಂ ||೨೯||

ಬೆದಱಿ [12]ಕಡುತಪ[12]ದ ಕಿರ್ಚ
ರ್ಮದನನೀಕ್ಷಿಸಿ ಪಿಡಿದು ರತಿಯ ಕಯ್ಯಂ ಮಿಗೆ ತೀ
ವಿದ ಮನೆ ತೀವಿರ್ದಂದದೆ
ಮದನಂ ತ[13]ದ್ರೂಪ[13]ಭವನದಿಂ ಪೊಱಮಟ್ಟಂ ||೩೦||

ವ|| ಅಂತು ತನ್ನೊಡವಂದ ಸಾಸಿರ್ವರ್ಸರ್ಖಿಯರ್ವೆರಸು ತಪಂಬಟ್ಟು ಮು[14]ನ್ನೆ[14] ತನ್ನ ಕುಚ[15]ಕ[15]ಚ[16]ವಿ[16]ಳೋಚನಾದ್ಯವಯಂಗಳ್ಗೆಱಗದಾತನ ನಿಜಚರಣಕ್ಕೆಱ[17]ಗಿಸಿ[17]ದ ಖಚರಿಯ ಪರಿಚ್ಛೇದಕ್ಕೆ ಮೆಚ್ಚಿ

---

1 ಡ (ಜ) 2 ದೇ (ಜ) 3 ನ (ಜ) 4 ಅಂತುಂ (ಗಡ) ಉಂತು (ಜ) ಉತ್ತುಂಗ (ಣ)
5 ನುಂ (ಚಟಡ) 6 ಸಿಲ್ತ (ಜ) 7 ಮಾಲಂತಿಗಿಱಿದು (ಗಚಟ) (ಜ) ಮಾಲ್ಕಂತಿಸಿಱಿದು (ಡ) ಪುಲ್ಲಂತಿಱಿದು (ಣ) 8 ನೆಗೆ (ಜ) 9 ರೋಮಾ (ಜ) ಪಾಮಾ (ಣ) 10 ಣ (ಜ)
11 ಲ್ಕಿಂ (ಜಪ) ಲೆಂ (ಜ) 12 ಕುಡುಪದ (ಚಟಡಣ) 13 ವೃಷ (ಡ) 14 ನ್ನ (ಜ)
15 ಪಳ (?ಟಡ) 16 ವಿಮ (ಣ) 17 ಗಿ (ಚಟಡಣ)

ಆ ಗುಣವತಿಯ ತಪಂ ನಿ
ರ್ವೇಗಕ್ಕೆ ನಿಮಿತ್ತಮಾಗೆ ನಿಶ್ಚಿಂತಂ ಚಿಂ
ತಾಗತಿಯನುಜ[1]ಸಮೇತಂ[1]
ಭೋಗಮನಿಂಬಿಟ್ಟು ದೀಕ್ಷೆಯಂ ಕೈಕೊಂಡಂ ॥೩೧॥

ಅಸಿಯಳ್ ಖೇಚರನೊಲ್ಲದಿರ್ದೊಡೆ ತಪಂಬಟ್ಟಂದದಿಂದಾ ಬುಧಂ
ಬಿಸುಟುರ್ವೀವಧು ಭೂಮಿಭೃದ್ಭುಜವನಕ್ಕೇಟ್ಟೆಂದು ವೈರಾಗ್ಯದಿಂ
ದಸಿಧಾರಾವ್ರತಮಂ ನೆಗಟ್ಟಿ ತಳೆದಳ್ತಾನುಂ ಕ್ಷಮಾರೂಪಮಂ
ಮೆ[2]ಸೆದಂ ಕಲ್ಪಿ[2]ಸವೇಟ್ಟುದೇ ಪುರುಡಿನೊಳ್ ಪೆಂಡಿರ್ಗೆ ಪಾಂಡಿತ್ಯಮಂ ॥೩೨॥

ವ॥ ಅಂತು ಮೂವರುಮೊರ್ವರೊಳೆ ಮದುವೆ[3]ಂದು[3]ನಿಜಾಯುರವಸಾನ ದೊಳ್ ಮಹೇಂದ್ರಕಲ್ಪದೊಳ್ ಸಾಮಾನಿಕ ನಿಳಿಂಪರಾದರ್

ಆ ಚಿಂತಾಗತಿಯೈ ನೀಂ
ಭೂಚರಪತಿ ಮಕುಟಮಣಿಗಣಗಣಾರ್ಚಿತ ಪದಕಮ
ಳಾಚಪಳಗತಿ ವಿಯಚ್ಚರ
ನೀ ಚಾಗಣತಿಲಕನಾಂ ಮನೋಗತಿಯೆಂ[4]ಬೆಂ[4] ॥೩೩॥

ವ॥ ಅಲ್ಲಿ ಸಪ್ತಸಾಗರ ಜೀವನಮಂ [5]ಜೀ[5]ವನೆಂಬಗಸ್ತ್ಯನೀಂಟೆ ನೀಂ ಬಂದಪ ರಾಜಿತನಾ[6]ದೆಯಾ[6]ವಿರ್ವರುಂ ಮುಂಬಂದು ಜಂಬೂದ್ವೀಪದ ಪೂರ್ವ ವಿದೇಹದ ಪುಷ್ಕಳಾವತೀ ವಿಷಯದ ವಿಜಯಾರ್ಧದುತ್ತರಶ್ರೇಢಿಯ ಗಗನ ವಲ್ಲಭನಗರಮನಾಳ್ವ ಗಗನಚಂದ್ರಖಚರೇಂದ್ರಂಗಂ ಗಗನಸೌಂದರಿಗಮಮಿತಗತಿಯುಮಮಿತರಾಜನು ಮೆಂಬ ತನುಜರೆವಾಗಿ ಪುಂಡರೀಕಿಣಿಯೊಳ್ ಪುಂಡರೀಕತ್ರಯಾದಿ ವಿಭವ ವಿಭ್ರಾಜಿತ ನಾಗಿರ್ದ ಸ್ವಯಂಪ್ರಭ ಜಿನಪ್ರಭುವಂ ಪೂಜಿಸಲ್ಪೋಗಿ ಭವದೀಯ ಭವತ್ರಯಮಂ ಜಗತ್ರಯಪತಿಯ ಪಕ್ಕದೊಳ್ಕೇಳ್ದು ಸರ್ವಸಂಗಮುಮಂ ಬಿಸುಟ್ಟು ಸಂಯಮಮಂ [7]ತ[7]ಳೆದುಕೊಂಡು ಸದಾಚರಣದಿಂ ಗಗನಚಾರಣ ಋದ್ಧಿಸಂಪನ್ನರೆವಾಗಿ ನಿನ್ನಂ ನೋಡಲೆಂದು ಬಂದೆವಲ್ಲದೆಯುಂ ನಮ್ಮನ್ಯೋನ್ಯಪ್ರೀತಿ ನಿಮಿತ್ತಮಪ್ಪ ಪೂರ್ವಭವ ಪ್ರಪಂಚಮಂ ಪೇಟ್ಟೊಡೆ

---

1 ಸಂಯುತ (ಚ) ಸಂಯುತಂ (ಡ) ಯುತಂ ಸಂ (ಣ) 2 ಸದೆಂಕೇಳ್ವೆ (ಜ) 3 ನಿಲ್ಲಳೆಂಬ ಚಿಂತಾಗತಿಯುಂ ಮನೋಗತಿಯುಂ ಚಪಳಗತಿಯುಂ ದಮಧರ ಗುರುಗಳಲ್ಲೀಗ ಳೆಂಬ ತಳಿರ್ವಂದರೊಳ ಪೋವದುವಿನೊಳ್ ಮದುವೆ (ಜ) 4 ಬೊಂ (ಜ) 6 ಜ (ಜ) ದೇವಾ (ಕಗಟ) ದೇವಾ (ಚಡ) 7 ಕ (ಚಟಡ)

ಬಳಿದೆಸೆವ ಮಗಧಮಂಡಳ
ದೊಳಗೆಸೆವುದು ಕಾನನಂ ಕಳಂಕಂ ಶಶಿಮಂ
ಡಳದೊಳೆಸೆವಂತೆ ಮೃಗಮದ
ಮಳಿನಂ ವಲ್ಮೀಕ ಮೃಗ ಮಹಾಮಹಿಮಜಯಂ ||೩೪||

ಅದು ಜಂಬೂ ಜಂಭ ರಂಭಾ [1]ಕುಳಕ ಬಕುಳ[1] ಕಂಪಿಲ್ಲ ಸತ್ರಾರ್ಣ ಸಪ್ತ
ಚ್ಛದನಾದೇಯ ಪ್ರಿಯಾಳ ಪ್ರಿಯಕ ಕುರವಕಾಶೋಕ [2]ನಿಂಬಾ[2]ಮ್ರ ಕುಂಭೀ
ಬದರ ನ್ಯಗ್ರೋಧ [3]ಗುಂ[3]ದ್ರಾ ಪಿಚುಳ ನಿಚುಳ ಕಾಶ್ಮರ್ಯ ಮಾ[4]ಲೂರ ಲೋಧ್ರೇಂ[4]
ಗುದಿ ಕಾಕ್ಷಪ್ಲಕ್ಷಪಥ್ಯಾಮಳಕ ತಿಳಕಭೂ[5]ರ್ಜಾ[5]ದಿ ಭೂಜಾವಕೀರ್ಣಂ ||೩೫||

ನವನಿರ್ಮೋಕಗ್ರಹ ವ್ಯಾಕುಳ ನಕುಳ ಕುಳಂ ಫೇರವಸ್ಫಾರಥಕ್ಕಾ
ರವ[6]ವಲ್ಲ[6]ದ್ವಾನರಂ ಮಾರುತ ಚಳಿತ ತಮಾಳಾಹಿತೋತ್ಕಂಠ ಕಂಠೀ
ರವದಂತಿ ಭ್ರಾಂತಿದಾವ[7]ದ್ದ[7]ವ ಕಿಸಲಯ ಜಾಲಾನು ಸಂಸರ್ಪಿಶೂರ್ಪ
ಶ್ರವ ಸಂಭ್ರ[8]ಶ್ಯತ್ಪ[8]ತಂಗಾಶಯ ಶಯುಗಳ[9]ತಾಪತ್ತಿಂತತ್ಕೀರ್ಣ[9] ಪರ್ಣಂ ||೩೬||

ಕದಳೀಪ್ರಿಯಕ ಶಿವಾರ್ಜುನ
ಕದಂಬ ಪುನ್ನಾಗ ತಾಳ ಚಮರಕ ಶಲ್ಯಾ
ಸ್ಪದಮಾಯ್ತು ಪ್ರವಿವ ಪಾದಪ
ಕದಂಬದಿಂ ಮೃಗಕದಂಬದಿಂದಾ ವಿಪಿನಂ ||೩೭||

ಅಳಗರ್ದಮಾಳು ಥಾನಕ
ತಿಳಿಂಪ ನಿರ್ಮುಕ್ತ ಕೇಷಶಯು ವಾಸುಕಿ ರಾ
ಜಿಳಜಾಳ ನಿಕೇತಂ ಕ
ಟ್ಟಿಳಿಪುದು ಫಣಿಲೋಕದಂತೆ ತತ್ಕಾಂತಾರಂ ||೩೮||

ತ್ರಿಪದಿ || [10]ವಾಮಾಳಕ ಪುನ್ನಾಗಗಂತವೆಮೆಂ[10]
ದೀ ನಡೆದಪುವೆ ತಿಮಿರದೊಳೆನಿಪ್ಪವು
ನಾನಾಹಿ[11]ಮಸ್ತಮಣಿದೀಪಾ[11] (?) ||೩೯||

---

1 ಕಕುಭ ಕುಳಕ (ಜ) 2 ಶಾಕಾ (ಜ) 3 ಗ್ಯಂ (ಜ) 4 ಲ್ಲೂರಲೊದ್ರಂ (ಜ) 5 ಜಾ (ಚಜಟ) 6 ವಾಲ (ಚಟ) 7 ದ್ವ (ಜ) 8 ಸ್ಕತ್ಪ್ರ (ಜ) ಸ್ಕತ್ಪ (ಚಟಡ) 9 ದ: ಪದಜ್ಞೀರ್ನ್ನ (ಜ) ತಾಪತ್ತಿತತ್ಕೀರ್ಣ (ಟ) 10 ತಾನೊಳಗೆ ಕನಪುಂಸಾನಗಂತಬ್ಯ (ಜ) ಕಾವೋಳಕ ಪುನ್ನಾಗಗಂತವೆಮೆಂ (ಡ) 11 ಹಸ್ತಿಮಣಿದೀಪಂ (ಜ)

ಕರಟತಟ [1]ಘಟಿ[1]ತ ಮದ ಸುಂ
ದರ ಸುಭಗ ಸಲೀಲಗತಿಗೆ ಸೋಲ್ತು ಕರಂ ಕೇ
ಸರಿಣಿ ನಡೆ ನೋ[2]ಡೆ[2] ರದನಿಗೆ
ಪುರುಡಿಸಿ ಪಾಯ್ವಂತೆ ಪಾಯ್ದುದಲ್ಲಿ ಮೃಗೇಂದ್ರಂ ||೩೯||

ಭೃಂಗ ಮಲಿನೋಪಕಂಠಂ
ತುಂಗ ಶಿಖಾ ಚುಂ[3]ಬಿ[3]ಚಳಿತ ಚಂದ್ರ [4]ಗಿರಿಜೇ
ಶಂ[4]ಗೆಣೆವಂದು[5]ದು ಜಗ[5]ದ ಭು
ಜಂಗಮುವಳಯಾ[6]ದಿ[6]ಭಾಸಿ ಚಂದನನಿವಹಂ ||೪೦||

ಅಡಸಿ ಫಣಿ ಸುತ್ತಿ ಚಂದನ
[7]ದಡಿ[7] ಮೊದಲುಮನೊರಸಿಕೊಳ್ವ ಕೊರಲುಮನೆಳಸೊ
ರ್ಕೊಡೆ[8]ದು[8] ಕಟತಟದಿನಿಬ[9]ತರೆ
ನಡು[9]ಪ[9]ಟ್ಟಿಭಮಲ್ಲಿ ಕಟ್ಟು[10]ವ[10]ಟ್ಟವೊಲಿರ್ಕುಂ ||೪೧||

ಪಿಡಿದು ಕೊ[11]ಲೆ[11] ಜೀವರಾಶಿಯ
ನಡಿಗಡಿಗರೆಯಾದೊಡಾ[12]ಯುಗಳ[12] ಪ್ರಾಣಮನಾ
ಗಡೆ ಪಾಯ್ದು ಕೊಳ್ವ ತೆಱದಿಂ
ಕುಡಿವುವು ಬಾಯ್ದೆಱೆದು ಪವನನಂ ಫಣಿತತಿಗಳ್ ||೪೨||

ಜೆಡೆ[13]ಯಂ ಬಕ್ಕಳೆ[13]ಯುಮನಾ
ಳ್ದಡವಿಯೊಳಿರ್ದೆಲ[14]ನಲ[14]ದೆ ಕೋಟರ ಮುಖದಿಂ
ಕುಡಿವ ವಟವಿಟಪಿಪಟಳಂ
ತುಡುಂಕುವಂತಿರ್ಪುದಾವ ಚೋದ್ಯಮೊ ದಿವಮುಂ ||೪೩||

ನೀರಡಸಿದ ಕಾಸರಪತಿ
ಕೇರಿಯ ನಗದೊಸರೆಗೆತ್ತು ನಕ್ಕುವುದಹಿ[15]ಯುಂ[15]
ಸೈರಿಭದ ಬಾಯ ನೊರೆಯಂ
ಸೈರಿಸಿ ಪಾಲೆಂದು ನಕ್ಕುವುದು ಕಾನನದೊಳ್ ||೪೪||

---

1 ಗಳಿ (ಜ) 2 ಡಿ (ಚಡ) 3 ಬಿತ (ಜಡಣ) 4 ನೀರೇಜಂ (ಜ) 5 ವು ವನ (ಜ) 6 ಬಿ (ಜ) 7 ಕಡೆ (ಡಣ) 8 ದ (ಚಜ) 9 ಪು (ಜ) 10 ಪ (ಜಡ) 11 ಳೆ (ಜ) ಡೆ (ಡ) 12 ಯುಗ (ಗಚಟ) 13 ಯುಂಬ (ಜ) ಯುಂಬಕ್ಕಲೆ (ಡ) 14 ನೊರೆ (ಜ) 15 ಯಂ (ಜಡ)

ತಾರಗೆಯೆನೆ ತೊನೆದೊಟ್ಟಿದ
ಮೂರಿಯ ರೋಮಂಥ ಫೇನ ಮಂಜರಿ ನಿಕರಂ
ಕಾರಿರುಳ ತಿರುಳಿದೆನೆ ಮದ
ಸೈರಿಭಮಿರ್ಪುವು ಚಳತ್ತಮಾಳದ ನೆಟಲೊಳ್ ||೪೫||

ಗಿರಿಗುರುಚಪೇಟ ಪಾಟಿತ
ಕರಿಯಂ ಹರಿಕೊಂಡು ಕೇಱಿ ಪಾಱುವುದರುಣಾ
ತ್ಯರುಣತನು [1]ತರುಚರೇಂ[1]ದ್ರಂ
ಶರಧಿಗೆ ಕೈಬೆಟ್ಟ[2]ವೆ[2]ತ್ತಿ ಪಾಱುವ ತೆಱದಿಂ ||೪೬||

ಬಲಿದುಗುರ್ಗಲ್ಲಿ ಪಲ್ಗಳ
ಬಲಮಿಲ್ಲ ಕಡಂಗಿ ಕಾದುವುವು ಕಾನನದೊಳ್
ತೊಲಗದೆಳಪೆಳಗುಮೆಳಗ
ಟ್ಟಿಲೆಯುಂ ತಲೆ[3]ಯೆತ್ತಪಂ[3]ತೆ ಹರಿಕರಿಶಿಶುಗಳ್ ||೪೭||

ತಮಮಂ ಕಾಡೊಳಕೊಂಡು ಕಾದ ಪಗೆ ತಮ್ಮಿರ್ವರ್ಗಮಂತಾದೊಡಂ
ಸಮಮರ್ಕಂ ಸುಡು[4]ತುಂ[4] ನಿಜಾತ್ಮಶಿಖಿಯಿಂ [5]ದಾ[5]ನಂದಿಪಂ ಚಂದ್ರನಿಂ
[6]ದು[6]ಮಣಿ ಸ್ರೋತದಿನೆಂಬವೊಲ್ ವಿಪಿನದೊಳ್ಕಾದುತ್ಪಳಾನೀಕಮಂ
ಕಮಳಾನೀಕಮನರ್ಕ ಗೃಹ್ಯಕುಲಮಂ ಕೊಲ್ಗುಂ ವನೇಭೋತ್ಕರಂ ||೪೮||

ಆ ವನದೊಳಿರ್ಪುದವ ತಮ
ಸಾವೃತದೊಳದೊಂದು ಶಬರ ಶಿಬಿರಂ ಪಾಪಂ
ತೀವಿದವೊಲ್ಪಾತಾಳದೊ
ಳಾವ[7]ಗ[7]ಮಿರ್ಪಂತೆ ದುಷ್ಟದಾನವಶಿಬಿರಂ ||೪೯||

ಪೊಡೆ[8]ದೆ[8]ತ್ತಂ ಪರಿಯುತ್ತುಮಿರ್ಪ ಪುಱುವಂ ತಿಂಗುಂ ಶಿಶುಶ್ರೇಣಿಗಳ್
ಪಿಡಿದುರ್ಕಿಂ ಪೊಲಗೆಟ್ಟು ಪೊಕ್ಕ ಮೃಗರಾಜಾನೀಕಮಂ ಕೊಂ[9]ದು[9] ಕೇ
ಸಡಗಂ ಸೂಡುವರಲ್ಲಿ ಬಾಲೆಯರೆನಲ್ಕೂರ್ಪತ್ತದಿಂ [10]ಮ[10]ತ್ತವೊಂ
ದೆಡೆಗೇನೀಗುಮೆ ಪೋಗಲುತ್ಕಟ ಮಹಾಪಾಪ[11]ಕ್ಕೆ ತಾಂ[11]ಪಕ್ಕಣಂ ||೫೦||

---

1 ರತುಚಕೇಂ (ಜ) 2 ನೆ (ಜ) 3 ವೆತ್ತುವಂ (ಜ) ಯೆತ್ತದಂ (ಟಣ) 4 ತಂ (ಚಟಡ) 5 ತಾ (ಚಜಟಡ) 6 ದ್ಯು (ಗಟಡ) 7 ನ (ಣ) 8 ದ (ಚಜಡಣ) 9 ಡು (ಚಟಣ) 10 ವೊ (ಜ) 11 ಕ್ಕಣಂ (ಜ)

ಮದಗಜಕುಂಭಕೋಟಿಯ ಕಲಂ ಕ[1]ರಿ[1]ದಂತದ[2]ಕೇ ತ[2]ರಕ್ತು ಚ
ರ್ಮದ ತೆರೆಸುತ್ತು ಕೇಸರಿಯ ದಾಡೆಯ ಜೂದಿನ ದೀಂಟೆ ಪೀಲಿಯಂ
ಪೊದೆಸಿದ ಪಂದರಾಳಿಯಲರಾನೆಯ ಮುತ್ತಿನ ರಾಸಿ ಜೇನ ತು
ಪ್ಪದ ಕೆಱೆಯಲ್ಲಿ ನೆತ್ತರ ಕೊಳಂ ಚಮರೀ[3]ವೃ ಗ[3]ವಾಳ ತೋರಣಂ ||೫೧||

ಆ ಪಳ್ಳಿಗಧಿಪನಾದಂ
ಕೋಪದೊಳಿರದರುಣನಾದ ಸಂಗರ ವಿಚಳ
ಚ್ಚಾಪದೊಳರ್ಜುನನಾದಂ
ರೂಪದೊಳತಿಕೃಷ್ಣನಾದ ವಿಂಧ್ಯಕನೆಂಬಂ ||೫೨||

ಪೊಸಕೋಲಂ ಗಱಿಗಟ್ಟುನಂ ಗರುಡ ಪಕ್ಷಚ್ಛೇದದಿಂ ತಿರ್ದುವಂ
ಪ್ರಸರದ್ದಂತಿಯ ದಂತದೊಳ್ ಹರಿಯ ದಂಷ್ಟ್ರಾಲೇಖೆಯಂ ಕೆಟ್ಟು ತೆ
ತ್ತಿಸುವಂ ಲೀಲೆಯೊಳರ್ಧಚಂದ್ರಶರಮಂ ಮಾಟ್ಪಿಟ್ಟಿಯಿಂ[4]ದಣ್ಮು ದ[4]
ಳ್ಳಿಸೆ ಸಿಂಹೀ[5]ಶ[5]ತ ನೇತ್ರದತ್ತ ಪ[6]ತಿ[6]ಶೋಕಾ[7]ವೃಂದ[7]ಕಂ ವಿಂಧ್ಯಕಂ ||೫೩||

ಜಯವಡೆದಾ ಪುಳಿಂ[8]ದ[8]ಪತಿಯಾಡುವ ಬೇಂಟೆಗೆ ಬೆರ್ಚಿಪೋಗಿ ಚಂ
ಡಿಯ ಮಱೆಯಂ ಮೃಗಾರಿ ಮು[9]ರವೈ[9]ರಿಯ ಮೈಮಱೆಯಂ ಖಗೇಂದ್ರನು
ರ್ವಿಯ ಮಱೆಯಂ ಮಹಾಪ್ರಳಯದಾದಿ ವರಾಹನಿದದ್ಭುತಂ ದಿಶಾ
ಳಿಯ ಮಱೆಯಂ ಗಡಿನ್ನುಮವೆ ಪೊಕ್ಕುಳದಿ[10]ರ್ದಪು[10]ವಷ್ಟದಂತಿಗಳ್ ||೫೪||

ಆ ವನಚರನ ಮನಃಪ್ರಿಯೆ
ಪೂವಿನಬಿಲ್ಲಾತನವಳ ಯೌವನ [11]ಸಲ್ಲ[11]
ಕ್ಷ್ಮೀವನಚರನೆನೆ ದೃಕ್ ಶಫ
ರೀವಾಗು[12]ರೆ[12] ಪೆಸರೊಳಾಕೆ ವಾಗು[12]ರೆ[12]ಯೆಂಬಳ್ ||೫೫||

ವಾಗುರಿಕೆಯ ಮೊಲೆವೆಟ್ಟದ
ಮೇಗಣ ಪರಿಪಕ್ವ ಬಿಂಬ ಫಲರಸಮಂ ಪೀ
ರ್ದಾಗ[13]ಳುಮೆ[13]ರ್ದೆ ತಣ್ಣನೆ ತಣಿ
[14]ದೋಗಡಿ[14]ಸಿರಲುಱಿದ ಪಣ್ಣಸೊಲ್ಲಂ ಭಿಲ್ಲಂ ||೫೬||

---

1 ಗಿ (ಚಟಡಣ) 2 ಕೆತ್ತ (ಜ) ಕಾತ (ಣ) 3 ವೃಕ (ಚಟಡಣ) 4 ದಣ್ಮುವ (ಜ) 5 ಸು (ಚಟಣ) 6 ವಿ (ಜ) 7 ವಂಧ್ಯ (ಚಜಟಡಣ) 8 ದಿ (ಡಣ) 9 ರಾ (ಚಟಡ) 10 ರ್ದಪ (ಜ) ರ್ದಾವು (ಣ) 11 ಲ (ಚಟಡ) ವನಲ (ಜ) 12 ರಿ (ಚಟಡಣ) 13 ಳೆ (ಚಟಡಣ) 14 ದೀಗಡಿ (ಚ) ದೀಗಡ (ಟಡಣ)

ಎನಿ[1]ತುಂ ಕಟ್ಟಿಲಿ[1]ಸಿದೊಡಂ
ವನೇಚರಂ ನಡೆವನಡರೆ ಪೊಳೆದಡಗದ ಮಿಂ
ಚಿನ ಗೊಂಚಲಂತೆ ಮಿಂಚುವ
ವನೇಚರಿಯ ಬಿಳಿಯ ಕಣ್ಣ ಬೆಳಗಿಂ ಬನದೊಳ್ ||೫೭||

† ಧವಳವಿಲೋಚನಂ ಪೊಳೆವ ಪೂವನೆ ಪೀನಕುಚಂ ಪ್ರಗಲ್ಭಗು
ತ್ಸವ[2]ಮನೆ ನಮ್ರ[3]ಬಾಹು ಸೆಳೆಗೊಂಬನೆ ಜಾತ್ಯ[4]ರು[5]ಣಾಧರಾಂಶು ಪ
ಲ್ಲವಮನೆ ಪೋಲೆ ವಿಂಧ್ಯಕನ ಬೆಂಬೞಯಂ ವನಲಕ್ಷ್ಮಿ ಕೂರ್ತು ಬ
ರ್ಪವೊಲಿರೆ ಬರ್ಪಳಾ ಶಬರಿ ಸೋರ್ಮುಡಿ ಕ[6]ಟ್ಟಿ[6]ಲಿಸುತ್ತುಮಿರ್ಪಿನಂ ||೫೮||

ವ|| ಅಂತವರ್ ಕೃತಕಕಿರಾತ ಭೂಪತಿಯುಂ ವನಚರೀ ವೇಷ ವಶಗತ ಭವಾ
ನಿಯುಮಿರ್ಪಂತಿರ್ಬರುಮನ್ಯೋನ್ಯ[6]ಸ[6]ಕ್ತರುಮವಿಯುಕ್ತರುಮಾಗಿ ರಾಗದಿಂದಮಿರೆ

* ಕೞಿದುದು ಪೊಲ್ಲ ಮಲ್ಲಿಗೆ ಮುಗುಳ್ತುದು ಕೊಂಚೆಯ ಸಂಕ್ತಿಯಿಂಚರಂ
ಪೞಿಮರವಾದುದುಪ್ಪವಡಸಿತ್ತು ಪಿಕಧ್ವನಿ ಪೋಯ್ತು ನೇಳಲಂ
ಗೊೞಯದೆ ಮಾವು ಬಂದುದದಱಂ ಶಿಶಿರಾಧಮನಂ ಜಡಾತ್ಮನಂ
ದುೞದು ಬಸಂತನಂ ಕರೆದಳಕ್ಕುಮೆ ಭೂವಧು ವೇಶ್ಯೆಯಂದದಿಂ ||೫೯||

||ಸ್ವಾಗತ|| ನೋಡಿ ನೋಡ ರತಿ ಮಲ್ಲಿಗೆಯಂ ಕೈ
ನೀಡಿ ತಾಂ ತಿಱಯಲಾಱದೆ ಕಂಪಿಂ
ದೂಡುತಿರ್ಪಳೆನೆ ಕುಂತಳಮಂ ಸಾ
ರ್ದಾಡುತಿರ್ದುವದಱಿಂದೊಳ್ ಮಧುಪಂಗಳ್ ||೬೦||

ವ|| ಆ ವಸಂತದೊಳಾ ತಮಾಳ ಶ್ಯಾಮಳನಪ್ಪ ವಿಂಧ್ಯಕನೊಂದು ದಿವಸಂ
ಶಾರ್ದೂಲಸ್ನಾಯು ಸಂಜನಿತ [6]ಸಿಂಜಿನೀ[6]ಸಮಾಸ್ಫಾಳನ ವಾಚಾಳ ಚಪಳ
ಚಾಪನುಂ ಕರತ[7]ಳಕಲಿತ[7] ಕಂಕಪತ್ರನುಮಾಗಿ ಮೃಗಯಾ ವಿನೋದದಿಂ ತೊೞಲು
ತಿರ್ಪಾಗಳ್ ಪ್ರಾಗಣಿ[3]ಯನ ಪೆಱಗೆ ಬರ್ಪ ರತಿಯ ರಮಣೀಯಮನೊಳಗುಮಾಡಿ

---

1 ಠಂ ಕಠ್ತ್ರಿ (ಚಟಡಣ) 2 ವೆನೆ ನಿವ್ನು (ಕ) ನೆ ವಿನವ್ನು (ಟ)ನೆ ನಮ್ನು (ಜ)
3 ರ (ಜ). 4 ತ್ತ (ಚಟ) 5 ಶ (ಜ) 6 ಶಿಂಜಿತ (ಚಟಣ) ಸಿಂಜಿತ (ಡ)7 ಳಿತ (ಜ)
† 'ಡ' ಪ್ರತಿಯಲ್ಲಿಲ್ಲ. * 'ಜ' ಪ್ರತಿಯಲ್ಲಿಲ್ಲ.

ತಳಿರುಡೆ ಫುಲ್ಲ ಕಂಕಣಮಶೋಕೆಯ ಬಿಲ್ [1]ಬಿಳಿ[1]ಯಂಬು ಕಾಡಪೂ
ಗಳ ತಲೆಸುತ್ತು ಮಾಂದಳಿರ ಕೈಪೊಡೆ ರಂಜಿಸೆ ಬೇಂಟೆಯಾಡೆ ಚಾ
ಪಳ ಹರಿಣೀವಿಲೋಕನಮನೀಳ್ಕುಱಿಗೊಂಡಳೆನಲ್ಕೆ ಗಾಳುಗ
ಣ್ಪೊಳೆಯೆ ಪುಳಿಂದಿ ಬೀರ ಸಿರಿಯಂತಿರೆ ಬೆನ್ನನೆ ಬಂದಳೋಪನಾ ||೬೧||

ವ|| ಅಲ್ಲಿಂ ಪೆಱಗೆ

[2]ಶಳ[2] ಸೂಚೀಭಿನ್ನವಕ್ಷಂ ಕಿಟರದ[3]ಲಿಖಿ[3]ತ ಗ್ರೀವನಾಪೂತಿ ಶಂಕಾ
ವಿಳಚಿತ್ರೋ[4]ದ್ಘೂ[4]ಣನುತ್ಪ್ರಸ್ರವಣ ಸಮಯ [5]ಸೂತ್ಥಾಪಿತ್ಸೈಕಾಂಘ್ರಿ[5]ವಕ್ತ್ರಾಂ
ಚಳನಾಳಸ್ಪೃ[6]ಷ್ಟನೀ ವೀ[6]ವೃತ ವದನ ವಿನಿಷ್ಕ್ರಾಂತ ಜಿಹ್ವಾಪ್ರವಾಳಂ
ಪೊಳೆದೊಂದೇಂ ಬಂದುದೋ ಬೇಡನ ಬಱಿವಱಿಯಂ ಶ್ವಾನನೇಣಾವಸಾನಂ ||೬೨||

ವ|| [7]ಆ ನಾಯ ಸೊವಡಿಂಗೇವಯಿಸಿ[7]

ಒರಸುತ್ತುಂ ಗ್ರಾವಕೋಣಂಗಳೊಳವಯವಮಂ ಕಂಡು ಕಾಡಾನೆಯಂ ಕೇ
[8]ಕ[8]ರಿಸುತ್ತುಂ ಕಣ್ಗಳಂ ತಾಗುನ ಬಿಸುಗದಿರಂ ಪೊಯ್ಯುತುಂ ಕೋಪದಿಂ ಘು
ರ್ಘುರಿಸುತ್ತುಂ ಗ್ರೀಷ್ಮದೊಳ್ಕೋಟಿಗೆ ಸಱನಱಸುತುಂ ಪೋಗುತಿರ್ದತ್ತು ದಂಷ್ಟ್ರಾಂ
ಕುರಘಾತವ್ಯಸ್ತಮುಸ್ತಾ[9]ಕ್ಷತ[9]ಸುರಭಿತ[10]ದಂಷ್ಟ್ರಾಪ[10]ರೋಹಂ ವರಾಹಂ ||೬೩||

ವ|| [11]ಆ ವರಾಹನನವರೋಹಿಸುವಂತೆ[11]

ವನಗಜಪೊಕ್ಕ[12]ಪೊಲ್ಮ[12]ದದ ಕೊಟಿಗೆ ಸಱಿರೊಳ್ ಕೆಸಱಾಟವಾಡಿ ಸೊ
ರ್ಕಿನ ಸೊವಡಿಂಗೆ ಮುತ್ತಿ ಮಱಿದುಂಬಿಗಳಂಬಿಸೆ ರೋಮವಿಕ್ಕಿ ಬಿ
ಕ್ಕನೆ ಬಿರಿವಂತೆ ಬಂದ [13]ಬಲ[13]ದೊ[14]ಳ್ಪೆಳರ್ವ[14]ಟ್ಟು ಮದಕ್ಕೆ ವಂದ ಕಂ
ಪಿನ ಕಳಭಂಬೊಲಿರ್ದುದತಿದರ್ಪ ರಸಾಕರನೊಂದು ಸೂಕರಂ ||೬೪||

ವ|| ಆ ಪಂದಿಗಳನಾ ನಾಯೆ ಬೆಂಕೊಂಡು ಪೋಗೆ [15]ಮುಂದೊಂದು[15] ಮೇದಿನೀ
ಧರದರೀದೇಶದೊಳ್

---

1 ಬಲಿ (ಜ) 2 ಸಲೆ (ಚಟಡಣ) 3 ಲಿಭ್ಯ (ಜ) 4 ದ್ಘೋ್ರೀ (ಗ) ದ್ಘೂ್ರ (ಚಟಣ) 5 ಸುತಾಪೇ ಕಾಗೀವ (ಗಡ) ಸುತಾಪ್ಯಕಾಂಗ್ರೀವ (ಚ) ಸುತಾಪೇಕಾಂಗ್ರಿವ (ಟ) ಸುತ್ಥಾಪಿ ವೈಕಾಂಘ್ರಿ (ಜ) 6 ಷ್ಟಂವಿ (ಚಟಡ) ಷ್ಟಸ್ರುಷ್ಟಂವಿ (ಜ) 7 —(ಣ) 8 ಸ (ಚಜಟಡಣ) 9 ಕ್ಷುರಿ (ಚಟ) ಕೆತಿ (ಜ) ಕ್ಷುರಿತ (ಡಣ) 10 ರೋತ್ರಾವ (ಜ) ಪ್ರೋವ್ರಾತ (ಚಟಡಣ) 11 — (ಣ) 12 ಪೊಳ್ಮ (ಕ) ಮಳ್ಕ (ಜ) 13 ಭರ (ಚಣ) 14 ಳ್ಪೆಳರ್ನ (ಕ) ಳ್ಪೆಳರ್ವ (ಜ) 15 —(ಜ) (2, 8, 9, 10 ಪಾಠಾಂತರಗಳು ಕಾವ್ಯಸಾಂದವು.)

ಹರಿ ಹೀರೋದ್ರೇಕದಿಂ ಕುಂಜರಗಿರಿಶಿರದೊಳ್ಪಾ[1]ಯ್ವುದುಂ[1] ಪಿಂತೆ ಮೇಗಂ
ಬರದೊಳ್ ಮೇಘವ್ರಜಂ ಘರ್ಜಿಸೆ ಶರಭರವಾಶಂಕೆಯಿಂ ನಟ್ಟ ಕಾಲ್ನ
ಟ್ಟಿರೆ ಬೆನ್ನೊಳ್ಪೊಯ್ದು ಗು[2]ರ್ವಾ[2]ಯ್ದಿರೆ ಬಿದುತಟದೊಳ್ಕಂದದೊಳ್ಪೊಕ್ಕ ಮೆಯ್ ಪೊ
ಕ್ಕಿರೆ ಸೋತ್ಕಂಠಂ ಸಧೀರಂ ಸಚಳಿತಪಟಮೊಂದಾಯ್ತು ಸಿಂಹಾವಲೋಕಂ ||೬೫||

ವ|| ಆ ಸಿಂಹಾವಲೋಕನಮನಾ ಶಬರ ಸಿಂಹನವಜ್ಞೆಯಿನವಲೋಕಿಸುತ್ತುಂ ಸಜಳಜಳಧರ ಮಳಿನ ವೃಥಕರಿನೋತ್ತುಂಗಕಾಯ ಬಳದಿಂ ವಿಂಧ್ಯಕಂ ಮೇಲಪ್ಪ ವಿಂಧ್ಯಕನಂದಿನ ಬೇಂಟೆಯೊಳ್ ಬೆರ್ಚಿ ನೋಡುವ ಪುಳ್ಳಿಗಳೊಳ್ ನಲ್ಲಳ ಕೊಲ್ಲಿ ನೋಟಮುಂ ಕಂಡು ಕೊಲಲೊಲ್ಲದೆಯುಂ ಕಾಡಾನೆಯ ಕುಂಭಸ್ಥಳಂಗಳೊಳ್ ಕಾಮಿನಿಯ ಮೊಲೆಯ [3]ಮಿಸುಪಂ[3] ಕಂ[4]ಡಿ[4]ಸಲೊಲ್ಲದೆಯುಂ ಸೋಗೆ ನವಿಲ್ಗಳೊಳೆ ವಾಗು [5]ರೆ[5]ಯ ಸೋರ್ಮುಡಿಯ ಸಿರಿಯ ಸೊಬಗಂ ಕಂಡಿಡಲೊಲ್ಲದೆಯುಂ ನಡೆನಡೆಯೆ ಮುಂವೆ[6]ವೆಡೆಯೆ[6]ಳೊಂದು ಮಹಾಮಹೀಧರ ಮಸ್ತಕದೊಳ್

ಸಮಪಾದಂ ಪೊರ್ದೆ ಬಲ್ಪಂ ಕರಣಸಮುದಯಂ ತನ್ನೊಳಕ್ಕಾಪೆ ಕಣ್ಗಳ್
ನಿಮಿಷವ್ಯಾಸಂಗಮಂ ಬಿಟ್ಟಿರೆ ಬಳೆಯೆ ಚಿದಾಸ್ವಾದ ಸೌಖ್ಯಂ ನಿದಾಘ
ದ್ಯುಮಣಿ ಪ್ರೌಢಾಂಶುಗಾಸ್ಯಾಂಬುಜಮಲರೆ ಮನಂ ಧ್ಯಾನದೊಳ್ ಸಿಲ್ಕೆ ಕಯ್ಯಿ
ಕ್ಕೆ ಮುನೀಂದ್ರದ್ವಂದ್ವ[7]ಮೊಂ[7]ದಿರ್ದುದು ಗಿರಿಶಿಖರದ್ವಂದ್ವವಿರ್ಪಂದದಿಂದಂ ||೬೬||

ವ|| ಅಂತು ಕ[8]ಲ್ನೆ[8]ಲೆ ನಿಂದ ವಿಮಳಬುದ್ಧಿಯುಮಮಳಬುದ್ಧಿಯುಮೆಂಬ ಮುನಿದಾರಕರಂ ದೂರಾಂತರದೊಳ್ಕಂಡು ವಿಂಧ್ಯಕಂ ವಾಗುರೆಗೆಂದನಾ [9]ತೋರ್ಪ ಪುರುಷಮೃಗಂಗಳಂ ಪಿಡಿಲ್ಪೊಡೆಯೆ [10]ಕೋಡುಂಗ[10]ಲ್ಗಳ್ ಕೆಡೆವಂತೆಯೊಂದೇ ಕೋಲೊಳ್ಕೆಡೆವಿನಮೆಚ್ಚಪೆಂ ಮೆಚ್ಚುಂಟೆಯೆಂಬುದುಮಾಕೆ ನೀಡುಂ ಭಾವಿಸಿ ನೋಡಿ ನಡನಡ ನಡುಗಿ

ಇವರ[11]ನಿ[11]ಸುವಾಗಳೆನ್ನಯ
ಕಿವಿಯೋಲೆಯ [12]ನೊಲ್ಲೆ[12]ಯಕ್ಕುಮೆಂದಾ ರತಿ ಕಂ
ತುವಿನಿಸುವ ಕಯ್ಗೆ ಪಾಯ್ವಂ
ತೆವೊಲಪಳಾ ಶಬರ[13]ನಿ[13]ಸುವ ಕಯ್ಯಂ ಪಿಡಿದಳ್ ||೬೭||

---

1 ಯ್ವುವಮಂ (ಚಟಡ) ಯ್ವುವಮಂ (ಣ) 2 ರ್ಪೊ (ಜ) ರ್ಪಾ (ಚಣ) 3—(ಜ) 4 ದಿ (ಚ) 5 ರಿ (ಚಟಡ) 6 ದು (ಜ) 7 ವಮಂ (ಜ) 8 ಲ್ಮ (ಜ) ಲ್ಮೇ (ಚಟಣ) 9 – (ಜ) 10 ಕೊಂಡಳ (ಜ) 11 ನೆ (ಚಟಡ) 12 ನೋಲೆ (ಕಚಟ) ಮೋಲೆ (ಡಣ) 13 ನೆ (ಚಟಡ)

ಪುರುಷಮೃಗಂಗಳಲ್ಲಮಿವರಪ್ಪೊಡೆ ದಿವ್ಯ ಮುನೀಂದ್ರರಿಜ್ಜೊಡಂ
ಶರವಿದು ತಾಗಲಣ್ಮದಿವರಂ ನಡಲೊಲ್ಲದೆ ಸೂರ್ಯರಶ್ಮಿಯೋ
ಸರಿಸಿಯೆ ಪೋಗುತಿರ್ದಪುದು ನೋಡ ಪದಾಬ್ಜಮನೋಪ ಸಿಂಹಮುಂ
ಶರಭಮುಮೊ[1]ತ್ತು ತಿಪ್ಪು[1]ವಿವಱಿಂ ಬಲವಂತಮೆ ನಿನ್ನ ಸಾಯಕಂ ॥೧೮॥

[2]ಕೆಳರ್ದು[2] ಪರಿತಂದ [3]ಬೇ[3]ಗೆಯು
[4]ಮು[4]ಚುರಲ್ತಾನಳ್ಕಿ ನಿಂದು ಪೆಱಕಾಲೊಳ್ಕಿಂ
ದಳ[5]ರಂ[5] ಕೇರ್ಗಟ್ಟಿದವೋಲ್
ಬಳೆಯಿಸಿ ಮುರಿದಪುದು ನೋಡು ಮುನಿಪುಂಗವ[6]ರಾ[6] ॥೧೯॥

ವ॥ ಸೀನಿವರನೆಂತು ಬಲ್ಲೆಯಪ್ಪೊಡೆ

ಹರಿಶಕ್ತೀ ಭವದಸ್ತ್ರ ಭಿನ್ನ ಕರಿಕುಂಭೋನ್ಮುಕ್ತ ಮುಕ್ತಾಫಲೋ
ತ್ಕರಮಂ ಮಾಱಲೆ ಪೋಗಿ ರಾಜಗೃಹದೊಳ್[7]ಕಾಣ್ಬೆಂ[7] ಗೃಹದ್ವಾರದೊಳ್
ಬ[8]ರ ಪಾದಾರ್ಗ[8]ತ ಭೂಪನಾ ವೃಷಭದತ್ತಂ ಭಕ್ತಿಯಿಂದೀ ಮುನೀ
ಶ್ವರರಂ ತಾನಿದಿರ್ಗೊಂಡು ಕಾಲ್ಗೆಱಗುವಂ ರತ್ನಂಗಳಿಂದರ್ಚಿಪಂ ॥೨೦॥

ಎನೆ ಬಿಲ್ಲುಮನಂಬುಮನಾ
ವನಚರನೀಡಾಡಿ ದಿವಿಜಧನುವಂ ಮಿಂಚಂ
ಘನವಿೞಾಡುವವೋಲ್ ಭೋಂ
ಕನೆ ಶರದದೊಳಮುಳನಾಗಲುದ್ಯುತನಾದಂ ॥೨೧॥

ವ॥ ಆಗಿಯಾ [9]ಬೇ[9]ಗದೊಳುತ್ತರೋತ್ತರ ಸ್ಥಾನಮಂ ತಾನೇಱುವುದನಱಿ
ಪುವಂತೆ ನಗಾಗ್ರಮನೇಱಿ ತಾಮರೆಗಳ್ಗೆ ತಪ್ಪಂ ಮಾಡಿ ಕಾಲ್ವಿಡಿವ ತುಂಬಿಗಳಂತಾ
ಯೋಗಿಯುಗ[10]ಳದ[10] ಪದಯು[11]ಗಳಂಗಳ[11] ಮುಂತೆ ಮೈಯಿಕ್ಕಿರ್ಪುದುಮನ್ನೆಗಮಾ
ಮುನಿಕುಮಾರರ್ ಕಯ್ಯೆತ್ತಿಕೊಂಡು ಲುಬ್ಧಕನ ಕಾಲ ಲಬ್ಧಿಕ್ಷಯೋಪಶಮಮಂ
ಕಂಡು ಕರ್ಸೆಯ್ದಿಲ ಮೇಲೆ ಕುಮುದಪ್ರಿಯನಮೃತಮಯ ಮಯೂಖಮಂ ತಳಿವಂತೆ
ದಯಾಮೃತರಸಮಂ ತಳಿ[12]ದು ದುಃ[12]ಪಾತಕನಂ ಪೂತಂ ಮಾಡಿ

---

1 ತ್ತಿದಪ್ಪು (ಚಟಡಣ) 2 ಕೆಳದು (ಜ) ಕಳಿದು (ಡ) 3 ಬ (ಜಡ) 4 ಮು (ಜ)
5 ರಿಂ (ಜ) 6 ನಾ (ಚಟಡ) 7 ಕೊಂಬೆಂ (ಚಟಡಣ) 8 ರ ಪಾದಾರ್ಗ (ಚಡ) ರೆ ಪಾದರ್ಗ
(ಣ) 9 ವೇ (ಣ) 10 ಳ (ಚಟಡಣ) 11 ಗಂಗಳುಂ (ಜ) ಗಂಗಳ (ಡ) ಗಳಂಗ (ಣ)
12 ಪದು (ಚಟಡ) ವಂತು (ಜ)

ಕೊಲಲಾಗದು ಕಳಲಾಗದು
ಕುಲಟೆಯರೊಳ್ ನೆರೆಯಲಾಗದಾರ್ತದಿನರ್ಥ
ಕ್ಕಲವರಲಣಮಾಗದು ಪುಸಿ
ಯಲಾಗದೀ ಬ್ರತಮನೈದುಮಂ ಪಿಡಿ ಮಗನೇ ||೭೨||

ವ|| ಎನೆ ಮಹಾಪ್ರಸಾದಮೆಂದು

ಶರವದು ಕಯ್ಯೊಳ್ [1]ಪಂಕಂ[1]
ಸರಸಿಜ ಜನಕತ್ವ ಗುಣಮನಳವಡೆ ಕೊಳ್ವಂ
ತಿರೆ ವಿಮಳಮತಿಯ ಕಯ್ಯೊಳ್
ಪರಮವ್ರತಮಂ ಕಿರಾತನೊಲವಿಂ ಕೊಂಡಂ ||೭೩||

ಜಿನ ಸಮಯವ್ರತಮೆತ್ತಲ್
ವನಚರನೆತ್ತಲ್ ವಿರುದ್ಧವೆನಬೇಡ ಜಗ
ಜ್ಜನನುತ ಸಿದ್ಧರಸಂ ಕ
ಬ್ಬುನಮಂ ಪೊನ್ಮಾಡಲಾಯ್ತು [2]ಪೊನ್ನೇನಾಯ್ತೋ[2] ||೭೪||

ವ|| ಅಂತು ಮೇರುವಂ ಸಾರ್ದ ಕಾಗೆ ಪೊಂಬಣ್ಣಮಾದಂತಿರಾ ಜಾತ ರೂಪಧರರಂ ಸಾರ್ದು ಶಬರಂ ಸುವ್ರತ ಸ್ವೀಕಾರಭಾಸುರನಪ್ಪುದುಂ ವಾಗುರೆಯುಂ ಮನಮಲ್ಲದ ಮನದೊಳಾನುಮಿಾವ್ರತಮಂ ಕೈಕೊಂಡೆನೆಂದು ಪೋಪ ಪರಮೇಶ್ವರಂ ಬೞಿಯನವರ್ಮುಗುೞ್ದು ವಲ್ಲಿವರಂ ಪೋಗಿ ಮಗುೞ್ದು ಬಂದು ವಿಪಿನಮಂ ಪೊಕ್ಕು ತನ್ನ ಮುನ್ನೆಗೆಯ್ದ ವಧಭೀಭತ್ಸ ಸ್ಮರಣಮೆ ಕಂದಮೂಳಫಳಾಸ್ವಾದನದೊಳು ಮುಟ್ಟುಪಡಮಂ ಪಡೆವುದುಮದೇನುಮಂ ನೆನೆಯದೆ ಮದನಾರಿಗಳ ಪದನಳಿನಮಂ ನೆನೆಯುತ್ತುಮಿರೆಯಿರೆ

ಸ್ವಗೃಹೀತೆ ಪ್ರತರಕ್ಷಾ
ಪ್ರಗಲ್ಭಮತಿ ಪುಟ್ಟಿ[3]ದತ್ತು[3] ತದ್ವನಚರಸೂ
ನುಗೆ ಕಾಷ್ಠಕ್ಕನಲಂ ಪಂ
ದಿಗೆ ಮುತ್ತುರಗಂಗೆ ಮಾಣಿಕಂ ಪುಟ್ಟುವವೋಲ್ ||೭೫||

---

1 ಪರ (ಜ) 2 ಪೊಂಗೇನಾಯ್ತೋ (ಚಜ) 3 ದಂತು (ಕಗಚಡ)

ವನಚರರಿಲ್ಲದಲ್ಲಿ ಮೃಗದಿಂ ಮೃಗಮಾರಣಮಿಲ್ಲದಲ್ಲಿಯೆ
ಲ್ವಿನ ಕೋಲವಿಲ್ಲದಲ್ಲಿ ಖಗದಿಂ ಖಗಮರ್ದನಮಿಲ್ಲದಲ್ಲಿ ತೋ
ಱನ ಕವಿಯಿಲ್ಲದಲ್ಲಿ ಶಿಬಿರಂ ಫಣಿಹಿಂಸನಮಿಲ್ಲದಲ್ಲಿ ತೊ
ಲ್ವನೆ ಪೊ[1]ಲಸಿ[1]ಲ್ಲದಲ್ಲಿ ಶಬರಂ ಸುಖಮಿರ್ಪನಿದೇಂ ಸುಚಿತ್ರಮೋ ||೭೬||

ಗಿಳಿ ತಿನ್ನದ ಬಿಂಬಫಲಂ
ಗಳ[2]ನನ್ನ[2]ಭೃತಂ ಕ[3]ರ್ದುಂ[3]ಕದಿವ್ಮಾವಿನ ಪ
ಣ್ಗಳನನ್ಯ ಪಕ್ಷಿಯುಣ್ಣದ
ಶಲಾಟು ಸಂಕುಳಮನಾಯ್ದು ಮೆಲುವಂ ಶಬರಂ ||೭೭||

ಜಳಧರ ವಿಮುಕ್ತಧಾರಾ
ಜಳಮಂ ಕುಡಿದಿರ್ಪ ಖಗದವ್ರೊಲ್ಕುಡಿದು ಮಹಾ
ಚಳ ಶಿಖರ[4]ಗ[4]ಳಿತ ನಿರ್ಝರ
ಜಳಮಂ ಸಲೆ ಬೇಡನುಱಿದ ಜಲಮಂ ಬೇಡಂ ||೭೮||

ವ|| ವಾಗುರೆಯೊಡ[5]ನಾಡು[5]ವ ಬೇಡತಿಯರ್ ಮೇಳೆಗೆಡೆದು ಕಂಡುಂ ನೀನುಂ ನಿನ್ನ ಗಂಡನುಂ ಪುಲಿಯಂತಿರ್ದು ನರಿಯಂತಿರೇಕಿರ್ದಪಿರೆನೆ ಕಣ್ಬನಿಯಂ ತೀವಿ ಭಿ[6]ಲ್ಲಿ ಮೆಲ್ಲನಿಂ[6]ತೆಂದಳ್

ತುಡೆ ಕೋಲಂ ಮುನಿಗಳ್ಗೆ ಕಾದ ಫಲಮಂ ಕೈ[7]ಕೆಯ್ಯೊಳುಂ[7]ಡಪ್ಪೆನಾ
ದಡಿಗರ್ ಮಂತ್ರಿಸಿ ಕಟ್ಟಿದರ್ಕ[8]ಲಿ[8]ಯ ಕಯ್ಯಂ ಬಾಯುಮಂ[9] ಕೆಟ್ಟಿ[9]ನಾಂ
ಪಿಡಿಯಂ ಪಕ್ಕಿಗಳಂ ಮೃಗಕ್ಕೆ ಬಿಡಲೊಲ್ಲಂ ನಾಯ್ಗಳಂ ಜೇನುಮಂ
ಬಡಿಯಂ ಗಾಣಮನಿಕ್ಕನೊಕ್ಕ[10]ನಿ[10]ನಿಯಂ ತನ್ನಿಕ್ಕೆಯಂ ಬಾಱಕ್ಕಿಯಂ ||೭೯||

ವ|| ಎಂಬುದುಮಾಕೆಗಳೆಂದರ್ ನೀನೆಮ್ಮ ಮನೆಯೊಳ್ ಬಾಯ್ಗೆ ಬಯಸಿದುದ ನುಂಡು ಮೆಯ್ಗೆ[11] ಮೆ[11]ಚ್ಚಿದಂತಿರು ಬಾಯೆಂ[12]ಬು[12]ದುಂ ವಾಗುರೆ ತಲೆಯನಲುಗಿ ಬೆರಲಂ ಮಿಡಿದು ಮನದೊಳಿರ್ದುದಂ ಮಾತಿನೊಳ್ ಬಱಿಕೆಯ್ದೆನಲ್ಲದೆ ಬೇಱಿಕೊಂ ದರ್ಕೆ ಬಗೆದವಳೆನಲ್ಲೆ[13]ನಿನ್ನೆ[13]ನ್ನ ನಲ್ಲನಪ್ಪುದನಪ್ಪೆನದು ಲೇಸಾದೊಡಂ ಪೊ[14]ಲ್ಲಾ[14]

---

1 ಸೆಯಿ (ಕ) ಸಲಿ (ಚಟಣ) ಸಯಿ (ಡ) 2 ನಿತ್ಯಂಪರ (ಚಡಣ) ನಿತ್ರಿಪರ (ಟ) 3 ರ್ದು (ಡಣ) 4 ದ (ಣ) 5 ನೋದು (ಚಟಡಣ) 6 ಲ್ಲನಿಂ (ಚಟಡ) ಲ್ಲಿಯಿಂ (ಣ) 7 ಗೆಯ್ಯೊಳಂ (ಚಟಡಣ) 8 ರಿ (ಡಣ) 9 ಕಟ್ಟಿ (ಚಟಡಣ) 10 ಗಿ (ಗಟ) 11 ಬೆ (ಚಟಡಣ) 12 ದುಕರೆವು (ಜ) 13 ನೀನೆ (ಚಟಡ) 14 ಲ್ಲ (ಚ)

ದೊಡಮೆನ್ನ ಪುಣ್ಯಮೆಂದು ಪೂಣ್ದಿರ್ದಳಿರ್ಪುದುಮೊಂದು ದಿವಸಂ ವಿಂಧ್ಯಕನೆಲ್ಲಿಯು ಮೊಳ್ಳಿದುವಪ್ಪ ಫಲಂಗಳಂ ಪಡೆಯದಱಸುತ್ತುಂ ಬಂದೊಂದು ಕುಬ್ಜಾಮ್ರಕುಜದ ಬೀೞಿಕೊಂಬಿನ ಪಸುರೆಲೆಯ ಕುಸುಂಕುಱೊಳಗೆ ರಸಾಯನದ ಕುಪ್ಪಿಗೆಯಂತೆ ತೋರ್ಪ ತನಿವಣ್ಣಂ ತಿಱಿಂಗುಲೊಡನೆ

ತರುಣತರು ವಿಷಧರಂ ಕೋ
ಟರಮುಖದಿಂ ನುಂಗಿದಂತಫಪ್ರೇರಣೆಯಿಂ
ಪಿರಿದಪ್ಪ [1]ಪ್ರೇ ೞಲೊಳಗಾ
ಸರಸಫಳಂ ಕೈ[2]ಬರ್ದುಂಕೆ ಬಿರ್ದತ್ತಾಗಳ್ ||೮೦||

ಆ ಪಣ್ಣನಱಸುವಳಿಪಿಂ
ದಾ ಪೋೞಲ್ಗುಯ್ದು ತತ್ಕಿರಾತನ ಕರಮಂ
ಕೋಪದೊಳಹಿ ಕೊಂಡುದು ತರು
ಚಾಪದಿನಂತಕನ ಕಣ್[3]ಯೆ ಕೊಳ್ವ[4]ವೊಲ್[5]ನಸುಂ ||೮೧||

ಅಯ್ಯೊ ! ಫಳಾಮೃತರಸಮಂ
ಕಯ್ಯಿಂದಂ ಪಿಡಿಯೆ ವಿಷಮುದಾ[5]ಯ್ತೇ[6] ಪೇಡಂ
ಗಯ್ಯ ನೃಶಂಸ ಕೃತಾಂತನ
ಕಯ್ಯಡಕಮನಱಿವೆನೆಂಬ ದೇವನುಮೊಳನೇ ||೮೨||

ಪಿಕ ಹಾಹಾಕ್ರಂದನಮಂ
ವಿಕಳೆ ವನಾಗ್ರಸ್ತೆ ಮಾ[5]ಡಿ[6] ಸತಿ ಸತ್ತು ಯಶೋ
ಧಿಕ ವೃಷಭದತ್ತ ವಿಭುಗ
ಭ್ಯಕೇತುವೆಂ[7]ಬಾತ್ಮಜಾತ[7]ನಾದಂ ವ್ಯಾಧಂ ||೮೩||

ವನಚರಿಯುಮೆನಗೆ ಮತ್ಕಾಂ
ತನ ಲೋಕಮೆ ಲೋಕಮೆಂದು ಹಸ್ತಮನಾ ಪಾ
ವಿನ ಪಲ್ಗೆ ಕೊಟ್ಟು ಸತ್ತಾ
ತನ ಪೊಟಲೊಳೆ ಮುಖ್ಯನಪ್ಪ ದೀವ[8]ರ[8]ನಾದಂ ||೮೪||

---

1 ಪಿರಿದ ಪ್ರೊ (ಜ) 2 ಕದುರ್ಗಂಕೆ (ಚಡಣ) ಪಿದ.ಗಂಕೆ (ಟ) 3 ಯ ಕೊಂಡ (ಚಟಡಣ) 4 ಸೆ ಉಂ (ಜ) 5 ಯ್ತನೆ (ಜ) 6 ಡೆ (ಚಟಣ) 7 ದೆಂಬಾತ್ಮಜ (ಚ) ದೆಂಬ ತನುಜ (ಟ) ತೆಂಬ ತನುಜ (ಡ) ಬಾತ್ಮಜ (ಣ) 8 ಳ (ಚಟಡಣ)

ವ॥ ಆ ವೃಷಭದತ್ತ ವೈಶ್ಯೋತ್ತಮನ ವಿಭವಮಂ ಪೇೞ್ವೊಡೆ

ಪಿಂಗದ ಪೊನ್ನರಾಸಿಯ ಬಿಸಿಲ್ಗಳೆ ಮುತ್ತಿನ ಮೊತ್ತದಚ್ಚವೆ
ಳ್ದಿಂಗಳೆ ಮಾಣಿಕಂಗಳೆಳಸಂಜೆಯೆ ನೀಳ್ದೊಗೆದಿಂದ್ರನೀಲಜಾ
ಲಂಗ[1]ಳ[1] ಮರ್ವೆ ವಜ್ರರುಚಿಯೇಟ್ರಿಯೆ ಪಚ್ಚೆಯ ರೋಚಿಯಚ್ಚಜಾ
ಳಂಗಳೆ ಸಂತತಂ ವೃಷಭದತ್ತ ವಣಿಕ್ಪತಿಯೊಂದು ಗೇಹದೊಳ್ ॥೮೫॥

[2]ಉಮು[2]ಬ್ದಿ ಭ[3]ಮದಕರ್ದಮ[3]ಮಂ
ಕ್ರಮದೊಳ್ ಕಾನೀಕಜಾನುದಘ್ನ[4]ಮ[4]ಸೆ ತುರಂ
ಗಮು ಲಾಳಾಜ[5]ಳ[5]ದ ಪೊನಲ್
ತೆಮ[6]ಳ್ದಿ[6] ತೊಳೆವುದು ತದೀಯ ಗೇಹಾಂಗಣದೊಳ್ ॥೮೬॥

ತೆಗೆದತಿವರ್ತಿಗಳಂ ದಂ
ತಿಗಳ ಮೊಗಂಗಾಣದತ್ತ ಕಟ್ಟಿದೊಡೆ ಮೊಗಂ
ಬುಗಲವ್ವಳಿಪುವು ಮಣಿಹ
ರ್ಮ್ಯಗತ ನಿಜಚ್ಛಾಯೆಯೊಳ್ ವಣಿಗ್ವಲ್ಲಭನಾ ॥೮೭॥

ಪರದನ ಪೆರ್ಮನೆಯೊಳ್ ಕ
ರ್ಪ್ಪುರಮಂ ಬೆಳ್ವಟ್ಟದೆಂದು ಚೇಟಿಕೆಯರ್ ಕ
ಸ್ತೂರಿಯಂ ಹರಿನೀಲ ಮನೋ
ಹರ ಕುಟ್ಟಿಮಗಜಮಿದೆಂದು ಪೊಱಗು[7]ತ್ತಿರ್ಪ[7]ರ್ ॥೮೮॥

ಪದ್ಮದ ಸುತನಖಿಳ ಕಳಾ
ಸದ್ಮಂ ಚತುರಾಸ್ಯನಾದ ತೆಱನಂ ತೋಱಿಲ್
ಪದ್ಮಶ್ರೀಯ ಸುತಂ ವಿಪ
ಪದ್ಮರ (?) ಸುತನಿಭ್ಯಕೇತು ಕಳೆಗಳನಾಳ್ದಂ ॥೮೯॥

ಸಮಸಂದಾ ರತಿಯಿಭ್ಯಕೇತುವಿನ ರೂಪಂ ಕಂಡು ಕಣ್ಸೋಲ್ತು ಕೂ
ಡುವ ಕಾಯ್ಪಿಂದಭಿಸಾರಿಕಾ ಪದವಿಗಂದೊಂದಾಸೆಯಂ ಮಾಡುವಳ್
ಭವನಿರ್ನ್ಮೋಮರ್ಮೆ ಮನೋಜನಂ ಮುನಿದುನೋಟ್ಕಿಂದೇನೊಪ್ಪುವಳ್ (?) ವಸಂ
ತ ವಿಳಾಸಕ್ಕೆ ಕನಲ್ವಳೆಂದೊಡೆ ವಣಿಕ್ಕಾಂತಂ ಕರಂ ಕಾಂತನೋ ॥೯೦॥

---

1 ಳೆ (ಜಣ) 2 ಒಮು (ಚಟ) ಒಮುಮು (ಣ) 3 ಕರ್ದಮು (ಚಟಣ) ಕರ್ದ (ಡ) 4 ಮೆ (ಜ) 5 ಸ (ಜ) 6 ಳ್ಚಿ (ಜ) ಳ್ಪಿ (ಟ) 7 ಗುತಿಪ್ಪ (ಜ)

ಶ್ರುತವಧು ಕೂರ್ತು ಕೊಟ್ಟ ತೆಱದಿಂದೆಸೆದಿರ್ಪುದು ನಾಟಕ ಪ್ರವೀ
ಣತೆ ಕೃತಿಭಾವಕೋವಿದತೆ ಶಬ್ದಸಮಗ್ರತೆ ತರ್ಕರೀತ್ಯಭಿ
ಜ್ಞತೆ ನಯವಾಗ್ವಿಚಕ್ಷಣತೆ ವಾದ್ಯವಿದಗ್ಧತೆ ನರ್ತನ ಪ್ರಗ
ಲ್ಭತೆ ರಸಗಾನಮಗ್ನತೆ ವಿಳಾಸರಸಜ್ಞತೆ ವೈಶ್ಯಪುತ್ರನಾ ||೯೧||

ಬಾಧಿಸುವಂ ಮನೋಮೃಗಮನಂಗಜ ದಾ[1]ಮ[1]ಮನಿಕ್ಕಿ ಸೋಲ್ತು ಬಿಂ
ಭಾಧರೆಯರ್ಕಳೊಪ್ಪ[2]ವ ಪಿಣಿಲ್ಗ[2] ವಿಲಂ ಪಿಡಿವಂ ವಿವೇಕವಿ
ದ್ಯಾಧರನಂಗಜಾಳದೊಳೆ ಸಿಲ್ಕಿಸುವಂ ಸಲೆ ಪೋದ ಜನ್ಮ[3]ದಾ
ಪೋ[3]ದನಕೆಯ್ತುಮಂ (?) ಕೆಡಱುವಂತಿರೆ ಲೋಚನ ಮತ್ಸ್ಯಜಾಲಮಂ ||೯೨||

ಅಪ್ರತಿಮ ರಾಜಗೃಹ ನಗ
ರಪ್ರಭು ಜಿತಶತ್ರುವೆಂಬನಾ ಭೂಪಂಗಂ
ಸುಪ್ರಭೆಗಂ ಪುಟ್ಟಿದ ಕನ್ಯೆ
ಳಪ್ರಭೆ ರೂಪಾತಿಶಯದ ಸಿರಿಯಂ ಪಡೆದಳ್ ||೯೩||

ವ|| ಆಕೆಯ ನೂತನ ತನು[4]ವ[4]ನಕ್ಕೆ ವಸಂತದಂತೆ ಬಂದ ಪ್ರಸಜವ್ವನಮಂ ಜಿತಶತ್ರು ಮಹಾರಾಜಂ ಕಂಡು ಭೂಮಂಡಲದೊಳುಳ್ಳ ರಾಜಕುಮಾರರಂ ಬರಿಸಿ ಸ್ವಯಂಬರಮಂ[5]ಸ್ಮರ[5] ಬರಮಿತ್ತಂತೆ ಮಹಾವಿಭೂತಿಯಿಂ[6]ಮಾಳ್ಪುದುಂ ವನದೊಳಗೆ ಬಳೆಯುತ್ತುಮಿರ್ಪ ಮಾಸಕೇತುವಿನಂತೆ ನೆಲನುಂ ನೋಡಱುಂ ಕಾಣದಂತು ಮನೆಯೊಳಗೆ ಬಳೆಯುತ್ತುಮಿರ್ದಿಭ್ಯಕೇತುಕುಮಾರಂ ಪಿತನೋದನೆಯುಂ ನಿಜಜನಕನೊಡನೆ ಬಂದು ನೋಡುತ್ತುಮಿರೆ

ಎನಿತಲರ್ಗಳಲರ್ದೊಡಂ ಭೃಂ
ಗನಾಯಕಂ ಜಾ[6]ತಿ[6]ಗೆಱಗುವಂತಿರೆ ನೃಪನಂ
ದನರೆನಿತೆಸೆದಿರ್ದೊಡಮಂ
ಗನೆಯಲರ್ಗಣ್ಣಿಭ್ಯಕೇತುಗೆಱಗಿದುವಳಿಪಿಂ ||೯೪||

ರಾಗದಚುರ್ಕೆಯಿಂ ನೆರೆದ ರಾಜಕುಮಾರರ ಕ[7]ಣ್ಗಳೆಯ್ದೆ[7] ಬಿ
ಗ್ಗಿಗಿರೆ ಕಾಮಿನೀಜನದ ಕ[8]ಣ್ಗಳಿಬಲ್ತ[8]ರೆ ತನ್ನನುರ್ಚಿದಾ
ಪೂಗಣೆ[9]ಪಲ್ಲವಂಬಿಡದು ಮಾಲೆಯನೇಱಿಸಿ ಮೇಲೆ ಸೂಸುವಂ
ತಾಗಿರೆ ವೈಶ್ಯಸೂನುಗೊಲವಿಂ ಕಮಳಪ್ರಭೆ ಮಾಲೆ ಸೂಡಿದಳ್ ||೯೫||

---

1 ವ(ಚಪಡಣ) 2 ಪಿಣಿಲಂ ನ (ಚಟಡಣ) 3 ದಬ್ಬಾ (ಜ) 4 ಮ (ಚಟಡಣ) 5 ಸ್ವಯಂ (ಪ) 6 ಜಿ (ಜ) 7 ಣ್ಗೆಸೈದೆ (ಬ) 8 ಣ್ಗಳಲಳ್ತ (ಬ) 9 ಯೆಲ್ಲವಂ ಪಿ (ಜ)

ವೈಶ್ಯಸೂನುಗೊಲವಿಂ ಕಮಳಪ್ರಭೆ ಮಾಲೆ ಸೂಡಿದಳ್

ಅಱಿದು ಜಿತಶತ್ರು ಭೂಪನ
ಕಿಱಿಯರಸಿ ವಸಂತಸೇನೆಯಾ ಕಾಮಿನಿಯ
ಟ್ಕಱ ತನುಜೆ ಮದನಸೌಂದರಿ
ನೆಱೆದಳ್ ನೃತ್ಯದೊಳಮಸಮ ಸಾಹಿತ್ಯದೊಳಂ ॥೯೬॥

ವನಿತೆಯ ರೂಪುಂ ಪ್ರಸಜ
ವ್ವನಮುಂ ಮೋಹನಮದಿನ್ನುದಂಚಿತ ರಸ ನ
ರ್ತನ ಭಾವಭಾವಿತಂ ಗಡ
ನನೆ ಕಾಮನಮೋಘಬಾಣಮಾದುದು ಪೆಱ[1]ತೇಂ[1] ॥೯೭॥

ವ॥ ಅಂತು ಭುವನ ಭುಂಭುಕಮಾದ ತನ್ನ ಮಗಳ ವಿಚಿತ್ರ ನೃತ್ಯ ವಿದ್ಯಾ ವಿಳಾಸಮಂ ಕಂಡು ಜಿತಶತ್ರು ಮಹಾರಾಜನೀ ವಿದ್ಯೆಗಿಭ್ಯಕೇತುಕುಮಾರನೆ ಬಲ್ಲನಾ ತನಲ್ಲದೆ [2]ಶರ್ವ[2]ನುಮಱಿಯನೆಂದು ವಿವಿಧವಾದ್ಯವಾದನ ವಾಚಾಳಮುಂ ಗಾಯಿಕಾ ಜನ[3]ಸಂಛ[3]ನ್ನಮುಂ ವಾಂಶಿಕಸಂಕುಳ ಸಂಕೀರ್ಣಮುಂ ಶೈಲೂಷಸಮೂಹ ಸಂಮರ್ದ ಮುಂ ಭಾರತಿಕವೃಂದಭರಿತಮುಂ ವಾ[4]ಗ್ಗೇ[4]ಯಕಾರವಿಳಸಿತಮುಂ ಪ್ರಗೀತಪ್ರಕೀರ್ಣ ಮುಂ ತಾಳಧರಾಧಿಷ್ಠಿತಮುಮಪ್ಪ ಮಣಿಮಯ ನೃತ್ಯಮಂಟಪಕ್ಕೆ ಇಭ್ಯಕೇತುಕುಮಾ ರನಂ ಬರಿಸಿ

ಇಕ್ಕಿದ ಮುತ್ತಿನೆಕ್ಕಸರದೋಲೆ ತುಱುಂಬಿದ ಜಾದಿವೂವೆ ತೊ
ಟ್ಟಿಕ್ಕಸರಂ ಕೆಲಕ್ಕೆ ನಸುಕೊಂಕಿನ ಕತ್ತುರಿಯಡ್ಡಬೊಟ್ಟು ತ
ಳ್ತಿಕ್ಕಿದ ಚಂದನಂ ಮುರಿದು ಸುತ್ತಿದ ಚಂಪಕಮಾಲೆ ಕಣ್ಗಳಂ
ಜಕ್ಕುಲಿಸಿತ್ತು ಪಜ್ಜಳಿಪ ವಜ್ರದ ಕಂಕಣಮಾ ಕುಮಾರನಾ ॥೯೮॥

ವ॥ ಅಂತು ಕಂತುವಿನಂತೆ ಬಂದ ಸೌಭಾಗ್ಯಸಕಿಂಚನನಂ ಕಾಂಚನಪೀಠದೊಳ್ಕುಳ್ಳಿರಿಸಿ ಕೇಳಿಕೆಯಂ ಮಾಡೆ

ವನಿತಾಪಾದ ಪಯೋಜಸಂಗಸುಖದಿಂದಂಗಕ್ಕೆ ರೋಮಾಂಚಮಾ
ಯ್ತೆನೆ ನಟ್ಟಂತಿರೆ ಸೂಸೆ ಸೂಜಿಗಳನಾ ಪೊಂ[5]ಜಾಜಿ[5]ಯೊಂದೊಂದು ಚೂ
ರ್ಮನೆಗೊಂಡೊಂದಲರಾಯ್ದು [6]ಕೋದ[6] ತೆಱದಿಂದಿರ್ಪಂತು ಫುಲ್ಲಾಂಬುಜಾ
ನನೆ ಪುಷ್ಪಾಂಜಲಿಗೊಟ್ಟಳಂಗಜ [7]ಸುಧಾ[7]ಸಾರಂ ಪೊದಟ್ಟಿಂದದಿಂ ॥೯೯॥

---

1 ತೇ (ಚಟಡಣ) 2 ಸರ್ವಜ್ಞ (ಜ) 3 ಸಚ್ಛ (ಚ) 4 ಗ್ಗಿ (ಚಟಡಣ) 5 ಪೂಜೆ (ಜ) ಜೂಡೆ (ಚಟಡ) 6 ಕೊಯ್ದು (ಚ) ತೋಯ್ದು (ಟಣ) ಐದ (ಡ) 7 ಸುರಾ (ಚ) ಸರಾ (ಜ)

ಬಾಡಿದಲರಱಿಸೆ ಸೆಱಿ ನಂ
ಜೂಡಿದ ಸೂಜಿಗಳನ[1]ಳ[1]ಪಿ [2]ತುಂಬಿ[2]ಯೊಲವ[3]ನೇ[3]
ನಾಡಿದಳೊ ಸೂಜಿಗಳ ಕೂ
ರ್ಪೊಡೆದ ನೊ[4]ಸೆ[4]ಯಲರ ಮೇಲೆ ನಾನಾವಿಧದಿಂ ||೧೦೦||

ಪರೆದ ತಿಳಕಮನೆ ಕಂಡೆಸೆ
ದಿರೆ ಕೊಟ್ಟುದ್ದಂಡಪಾದದುಗ್ರಗರ್ನ್ನದಿಯೊಳ್
ತರಳಾಕ್ಷಿ ತಿರ್ದಿದಳ್ ಚೆ
ಚ್ಚರದಿಂ ಮತ್ತೊಂದು ಪಾದದುಂಗುಟದಿಂದಂ ||೧೦೧||

ವ|| ಅಂತು ಸಮ ವಿಷಮಮೆಂಬೆರಡುಂ ತೆಱದ ನೃತ್ಯಮತ್ಯಂತ ಮನೋಹರಮುಂ ಕೌತುಕಕರಮುಮಾಗೆ ಮಗಧ[5]ಸುಂ[5]ದರಿ ಕಿರಿದುಬೇಗಮಾಡುತ್ತುಮಿರೆ ಪಯ್ಯಱಿದು ನೋಡುತ್ತುಮಿರ್ದು ನಯನಮಂಪಂಗಳ್ಗೆ ಸಮೋಪಕರ್ಣವಯದ ಪಯಂಗಳುಮಂ ಬೆ[6]ಳಂ[6]ಗಿರ್ಪ ಪ್ರೊಳೆಯು[7]ಕ್ಕೆ (?) ಚಾಳಯಮಾದ[7] ಚಾಳಿಯುಂಗಳುಮಂ ಚತುಃಷಷ್ಟಿ ಕರ್ಮಂಗಳಾಲಂಬನಸ್ತಮಾದ ಹಸ್ತಂಗಳುಮಂ ಭಾವರಸಾಶ್ರಿತಂಗಳಾದ ದೃಷ್ಟಿಗಳುಮಂ ಸರಸ್ವತಿಗ[8]ಳಂ[8]ಕರಣಂಗಳಾದ ಕರಣಂಗಳುಮಂ ಶೃಂಗಾರಶ್ರೀಗೆ ಹಾರಮಾದಂಗಹಾರಂಗಳುಮಂ ನರ್ತನಕ್ಕೆ ಚಾರುತ್ವಂಬಡೆದ ಚಾರಿಗಳುಮಂ ನೃತ್ಯವಿದ್ಯಾದೇವತೆಗೆ ಮಂಡನಮಾದ ಮಂಡ[9]ನಂ[9]ಗಳುಮಂ ಸುಲೇಖೆಗೆ ನೆಲೆಯಾದ ನಿಲವುಗಳುಮನ ವರವರ[10]ಬಂ[10]ಡೆಡೆಗಳೊಳೆ ಪ್ರಸಯಿಸಿ ಪೆಸರಿಸು[11]ತಾಳದೊಳ್ತೂ[11]ಗಿದಂತೆ ವಾದ್ಯದೊ[12]ಳ್ಳಳಿ[12]ದಂತೆ ನಿರುಪಮಾದ ನೃತ್ಯಂ ನೃತ್ಯಶಾಸ್ತ್ರಮನಭಿನಯಿಸುವಂತಾದುದೀ ಕಪೋತ[13]ಕರ[13]ವಿಕೀರ್ಣಕನಕ ಸೂ[14]ಚೀ[14]ಸಂಚಯ ಸ್ಥಾಪನ ಕೌತುಕ ಕ್ರಿಯಾಕೌಶಲಮುಮಿಾ ಪುಷ್ಪಾಂಜಲೀಕ್ಷೇಪಣನೈಪುಣ್ಯಮುಮಿಾ ವಿಷಮ ವಿದ್ಯಾಸಾಧನಮುಂ ಸರಸ್ವತಿಗಂ ಸಾರದೆಂದು ಕುಮಾರಂ ಮೆಚ್ಚಿ ಮೆಚ್ಚಿಂಗೆ ಮೆಚ್ಚುಗುಡುವಂತೆ ಮೊಹನಸಾಧನಾ ಕುಮಾರಿಯುಮಂ ಕುಡೆ ಮಹಾವಿಭೂತಿಯಿಂ ಮದುವೆ ನಿಂದು

ಅನುರಾಗಾಂತಂ ವಸಂತಪ್ರಿಯನ ವಿರಹದೊಳ್ ಗ್ರೀಷ್ಮತಾಪಜ್ವರಂ ಮೇ
ದಿನಿಗಾದಂ ಪುಟ್ಟೆ ಮೇಲೇಂ ತಳಿದುದೊ ಮಱೆಯುಂ ಪ್ರಾ[15]ವೃ[15]ಷಂ ಚಂದ್ರಿಕಾ ಚಂ
ದನಮುಂ ಸೂಸುತ್ತುಮೆತ್ತಂ ಶರದಮಿರದೆ ತಂದತ್ತು ಕೆಂಗಾಳಿಯುಂ ಹೈ
ಮನಮುಂ ಹೇಮಂತಮೆತ್ತಂ ಸುರಿದುದು ಶಿಶಿರಶ್ರೀ[16]ತು[16]ಷಾರಂಗ[17]ಳಿರ್ಪ[17] ||೧೦೨||

1 ರಿ (ಚಟಣ) ರು (ಡ) 2 ಕುಂಭಿ (ಚಟಡಣ) 3 ಗೇ (ಚಟ) 4 ಲೆ (ಜ) 5 ಸೌಂ (ಜಡ)
6 ಡಂ (ಚಟಡಣ) 7 ಕರ್ಣಮೂ (ಕಡ) ಕರ್ಣಮೂ ಚಾಳಯಮಾದ (ಚಟಣ) 8 ಳಂತಃ (ಟಡಣ)
9 ಳಂ (ಜ) 10 ಬಲ (ಚಡಣ) 11 ತಾಳದೊಳೆಸೂ (ಚಟಣ) ತಾಳದೊಳ್ ತೂ (ಡ) 12 ಳಿಳ
(ಜ) 13 ಮಗ (ಚಟದಣ) 14 ಜಿ (ಚಟ) 15 ವಿ (ಜಟ) 16 ರು (ಜ) 17 ದಿರ್ಪಂ (ಗಟ)

ನೃತ್ಯಮತ್ಯಂತ ಮನೋಹರಮುಂ ಕೌತುಕಕರಮುಮಾಗೆ

ವ॥ ಅಂತು ಬಂದಾಱುಂ ಋತುಗಳೊಳಾದನು[1]ಭಾ[1]ವೋಚಿತ ಕ್ರೀಡಾರಸಂಗಳ ನಾಱುಂ ರಸಂಗ[2]ಳಿಂ[2] ಸವಿವಂತೆ ಸವಿದು ಸಕಳಕಳಾಸೌಕರ್ಯಕ್ಕಂ ಸೌಭಾಗ್ಯಕ ಮೇಕಪತಿಯಾಗಿ

ಅನುಪಮರಾಜ್ಯನಂದನೆಯರಾ ಕಮಳಪ್ರಭೆಗಂ ವಿಲಿಪ್ತಚಂ
ದನಘನಶೋಭೆಗಂ ಮಗಧಸೌಂದರಿಗಂ ಪತಿಯಾದನಾ ವಣಿ
ಗ್ಜನನಧಿನಾಥನೊಂದೆ ಕೊ[3]ಳನ[3]ಲ್ಲಿಯೆ ಪುಟ್ಟಿ ಸೊಗಯ್ಪಿ ಪೆತ್ತ ಪ
ದ್ಮಿನಿಗಮನಾರತಂ ಸಿತಸರೋಜಸಿಗಂ ದಿನನಾಥನಾದವೋಲ್ ॥೧೦೩॥

ಅಸಿಯಳ ವಿದ್ಯೆ ಕೂರಿಸಿದುದಿಲ್ಲ ನೃಪಾಗ್ರತನೂಜೆಯಿಂದೆ ಕೂ
ರಿಸಿದುದಧೀಶನಂ ಸೆ ಬಗು ಕೂರಿಸುವಂತಿರೆ ವೆಣ್ಣವಿದ್ಯೆ ಕೂ
ರಿಸುಗುಮ ತುಂಬಿ ಮಲ್ಲಿಗೆಗೆ ಕೂರ್ಪವೊಲೊಪ್ಪೆ ವಿಚಿತ್ರಬಂಧದಿಂ
ದೆಸೆದಿರೆ ಕಟ್ಟಿ ತಂದು ಸೊಪಡಿಲ್ಲದ ಮಾಲೆಗೆ ಕೂ[4]ರಲಾ[4]ರ್ಪಮೇ ॥೧೦೪॥

ವ॥ ಅಂತು ಮಗಧಸೌಂದರೀ ವಿವಾಹ ವಿಹಿತಮನಾ ದೀನಮಾನಸೆಯಾದ ಕಮಲಪ್ರಭೆ[5]ಯ[5] ಮುದ್ದುಮೊಗಮಂ ನೋಡಿ

ಹೃದಯಾಧೀಶಂ ಕುರುಳ್ಗವ್ವಳಿಸೆ ನುಡಿಸೆ ಮೇಲ್ವಾಯೆ ಒಲ್ಲೈಸೆ ಮೆಲ್ಪಿಂ
ಮೊದಲೊಳ್ ಸರ್ವಾಕ್ಷಿಪಾತಂ ಬಟಿಕದು ನಯನಾರ್ಧಾವಲೋಕಂ ಬಟಿಕ್ಕೊಂ
ದುದಯಂ ನೇತ್ರತ್ರಿಭಾಗಂ ಬಟಿಕಿಟಿದುದಪಾಂಗೇಕ್ಷಣಂ ತಾಂ ಒಟಿಕ್ಕಾ
ವುದುಮಿಲ್ಲಾಯ್ತಗ್ಗಳಂ ಕಾಮುದಮಿನಿಯಳ ಸನ್ಮಾನದಿಂ ಮಾನಮತ್ತೇ ॥೧೦೫॥

ವ॥ ಎಂಬಿನಂ ಕಮಳಪ್ರಭೆಗಂ ತನಗಂ ಹುರುಡಿಂದಮೇ ಪರಸ್ಪರಾನುರಾಗ ಮಳವಿಗೆಟಿಯೆ

ಪುಳಕಂ ಪಕ್ಕೆಗೆ ಸಾರದಂತು ಬೆಮರೆಂದುಂ ಕುಂದದಂತರ್ಧಕು
ಟ್ಮಳಿತಂಗಳ್ನಯನಂಗಳುಳ್ಳಲರದಂತೊಂದೊಂದಱೊಳ್ ಪತ್ತಿ ಮೆ
ಯ್ಗಳಲಂ[6]ಪಂ[6] ಬಿಡದಂತು ಸ್ವೈಸಮಯ[7]ದಂತಾ[7]ನಂದ ವಾರಾಶಿಯೊಳ್
ಮುಳುಗಿರ್ದಳ್ಪಿರ್ದೆ ಮೂಡದಂತು ಕುವರಂ ಕೂಡಿರ್ದನಬ್ಜಾಕ್ಷಿಯೊಳ್ ॥೧೦೬॥

ವ॥ [8]ಇಕ್ತ[8] ಮಗಧ ಸೌಂದರಿ ತನ್ನ ಪಾಳೆಯದೊಳಂ ವಾಸವಸಜ್ಜಿಕೆಯಾಗಿ

---

1 ಭ (ಚಟಡಣ) 2 ಳಂ (ಚಟಡಣ) 3 ರಳ (ಚಟಡಣ) 4 ಡಲಾ (ಚಡಣ) ಡಲು (ಟ)
5 ಯಾಕನಲ್ಪ (ಚಟಡಣ) 6 ಪಿಂ (ಚಟಡಣ) 7 ದತ್ತಾ (ಚಟಡಣ) 8 ಇಂತು (ಚಟಡಣ)

ಪತಿಚಿತ್ತಾನರ್ದ ನಿದ್ರಾವಿರಹಿತೆಯಿರುಳಿಂತಪ್ಪುದುಂ ಸುಪ್ತಪಾರಾ
[1]ವ[2]ತಮಂ ಬಂದೆತ್ತುವಳ್ ಹಂಸೆಗಳಿರಡೆಮೆಯೊಂದಾಗಲೀಯಳ್ ನವಿಲ್ತಾ
ಣತಿಯಂ ಕಣ್ಮುಚ್ಚಲೀಯಳ್ ಗಟಿಪುವ ಗಿಳಿಯಂ ತೂಂಕಡಂ ಕಾಣಲೀಯಳ್
ಕತೆಯಂ ಪೇಟಿಕಿಂದವಳ್ ಸಾರಿಕೆಯುಮನ[3]ನಿ[3]ವಂಗೆಯ್ದು ಕಣ್ಗೆಯ್ಯಲೀಯಳ್ ॥೧೦೭॥

ಆರಗಿಳಿಯಂ ಮೃಗಾಕ್ಷಿ ಪಿಡಿದೋದಿಸಲ[3]ಣ್ಮಳಿಸುಯ್ಯ[3] ಬೆಂಕೆಯಿಂ
ಕರಿಮುರಿಯಕ್ಕುಮೆಂದು ತೆಗೆದಪ್ಪಲುಮ[4]ಣ್ಮಳ್[4] ಮೆಯ್ಯ ತಾಪದಿಂ
ಕುರವಕಮೆಯ್ದೆ ಸೀದಪುದಿದೆಂದು ಕರಂ ತಿಳಕಾವನೀಜಮಂ
ಕೊರಗುಗುಮೆಂದು ನೋಡಲಣಮ[5]ಣ್ಮಳ್[5] ತಪ್ತ ವಿಲೋಚನಾರ್ಚಿಯಿಂ ॥೧೦೮॥

ಪರಪಿ ನಜುಸುಯ್ಯ ಕಂಪಂ
ಸುರತ ಸುಖಾಸ್ವಾದ ಸುಭಗ ಚಿಂತಾಭರದಿಂ
ಪಿರಿದು ವಿರಹಾರ್ತಿ ಜೇಟದ
ಬಿರಿಮುಗುಳಪ್ರೊಲಿರ್ಪಳಿಕುಳಾಳಕಿ [6]ಬನನೊಳ್[6] ॥೧೦೯॥

ತಡೆದು ಬರೆ ನಲ್ಲನೀಕ್ಷಿಪ
ಮಡದಿಯ ಕ[7]ಟ್ಟಿ[7]ರಿದ ಮೊಗಮುಮುರುನೇಕ್ಷಣಮುಂ
ತೊಡೆದುಂಜನ[8]ಮುಂ ಮ[8]ಱಿದಳ
ವಡೆ (?) ನೀರ್ಗುಂಕುಮುಮನೆಚ್ಚಿಕೆಂಡವೊಲೆಸೆಗುಂ ॥೧೧೦॥

ವ॥ ಆ ಮಗಧ[9]ಸೌಂದರಿಯ ಸೌಂದರ[9]ವಿದ್ಯೆಯ ದೌರ್ಭಾಗ್ಯಮೆ ನಿರ್ವೇಗ ನಿಮಿತ್ತಮಾಗೆ

ಮನಮಂ ವಿರಕ್ತಿಗಿತ್ತೊ
ಲ್ಪಿನ ರಾಜ್ಯಮನಿಭ್ಯಕೇತು ಕುಮರಂಗಿತ್ತಂ
ತನುವಂ ತಪಕ್ಕೆ ಜಿತರ
ತ್ರನೃಪಂ ನಿಯಮಸ್ಥ ಯತಿಯ ಪಾದಾಂತಿಕದೊಳ್ ॥೧೧೧॥

---

1 ಪ (ಜಡ) 2 ವಿ (ಜ) 3 ಮ್ಮಳಿಸುಯ್ಯ (ಚಣ) ಮ್ಮಳಿಸುಯ್ಲು (ಟಡ) 4 ಮ್ಮಳ್ (ಚಟಡಣ) 5 ಮ್ಮಳು (ಟಡ) ಮ್ಮಳ್ (ಣ) 6 ಯುಪಜ್ರಿತೊಳ್ (ಚಟಡಣ) 7 ಜ್ಜು (ಚಜ) ಜ್ಜು (ಟಡ) 8 ಪುಂ ಪೊ (ಜ) 9 ಸುಂದರಿಯ ಸುಂದರ (ಚಟ) ಸೌಂದರಿಯ (ಜ)

|| ದ್ರುತವಿಲಂಬಿತ || ಅವನಿ ಕೀರ್ತಿಸೆ ತಾಳ್ದಿದನಿಭ್ಯಕೇ
ತುವಿನ ತಂದೆಯುಮೊಳ್ತಪಮಂ ಮನೋ
ಭವನನಂಡಲೆದಿಕ್ಕಿದ ಮಂದರ
ಸ್ಥವಿರರೆಂಬ ಮುನೀಂದ್ರರ ಪಕ್ಕದೊಳ್ ||೧೧೨||

ಇನಬಿಂಬಂ ಕೋಂಟೆಯ ಕ
ಟ್ಟಿನ ಕೊತ್ತಳದಂಬುಗಂಡಿಯೊಳ್ನುಸುಳುತ್ತೊ
ಯ್ಯನೆ ಸಿಲ್ಕಿ ಸಿಲ್ಕುದಾ ಪುರ
ವನಿತೆಯ [1]ನನ[1]ಕರ್ಣಪೂರ ಕಮಳದ ತೆಱದಿಂ ||೧೧೩||

ಇಂದುವ ಬಿಂಬಂ ಪಟಯಿಗೆ
[2]ಯೆಂದುಂ[3] ಪಿಡಿವಡೆದು ಕಿಱಿದುಬೇಗಂ ನಗರೀ
ಸೌಂದರಿಯ ಕಯ್ಯ ಕೇಳಿಯ
ಕಂದುಕ[2]ದಂ[3]ತಿರ್ಪುದೊಪ್ಪೆ ಪತನೋತ್ಪತನಂ ||೧೧೪||

ಅವಿರಳ ಕೇತಕ ಪರಿಮಳ
ನವಾಪ್ತ ಶೈತ್ಯಂ ಸ[4]ಮಾಂ[4]ದ್ಯ ನಳಿನೀಕ[5]ಗುಣಂ[5] (?)
ಪವನ ಪವನಾ[6]ಶನೀಂಟು[6]ವು
ದು ವಿಯೋ[7]ಗಿ[7]ಪ್ರಾಣ ಪವನನಂ ಪುರವರದೊಳ್ ||೧೧೫||

ವ|| ಎಂಬ ಪೊಗಟ್ತಿಗೆ ಜನ್ಮಗೃಹಮುಂ ಲಕ್ಷ್ಮಿಗೆ ಕುಳಗೃಹಮುಂ ಕಳಾಧಿ
ದೇವತೆಗೆ ಕೇಳೀಗೃಹಮುಮಪ್ಪ ರಾಜಗೃಹಕ್ಕಧಿರಾಜನಾಗಿ

ಕರ[8]ಸಾ[8]ರಾಸ್ವಾದನಂ (?) ಚುಂಬನ ಮಧುಪ ಸುಹೃತ್ಸಂಗಮಾಲಿಂಗನಂ ವೀ
ರ ರಸಸ್ವೇದಾಂಬು ದೃಪ್ತಾಹತ ಹತಿಸಿತ ಕಾ[9]ಮಾದ[9]ಶಾಗ್ರಕ್ಷತಂ ಕುಂ
ಜರಕುಂಭಾಸ್ಫಾಲನಂ ಪೀವರಕುಚಕಲಶಾಸ್ಫಾಲನಂ ಲೀಲೆಗಾಗು
ತ್ತಿರೆ ರಾಜ್ಯಶ್ರೀಯ ಸಂಭೋಗಮನೊದವಿಸಿದಂ ರಾಜವಿದ್ಯಾವಿಳಾಸಂ ||೧೧೬||

---

1 ರಾ (ಚಟಣ) 2 ಯಿಂದಂ (ಚಟಡಣ) 3 ದಿಂ (ಜ) 4 ಮು (ಚಟಡಣ) 5 ಗಳಂ (ಚಟಡಣ) 6 ಶನಿಂದು (ಚಟಡಣ) 7 ಗ (ಚಟಡಣ) 8 ಧಾ (ಡಣ) 9 ಮಾಂಶು (ಚಟಡಣ)

ಇದು ಮೃದುಪದ ಬಂಧ[1]ಬಂಧುರ[1] ಸರಸ್ವತೀ ಸೌಭಾಗ್ಯ ವ್ಯಂಗ್ಯ [2]ಭಂಗಿ[2] ನಿಧಾನ ದೀಪವರ್ತಿ [3]ಚತುರ್ಭಾಷಾ ಕವಿಚಕ್ರವರ್ತಿ[3] ನೇಮಿಚಂದ್ರ ಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ [4]ಸೆಜ್ಜೆವಳ್ಳ[4] ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣಮೊಳ್

ತೃತೀಯಾಶ್ವಾಸಂ

ಸಮಾಪ್ತಂ

---

1 — (ಜ) 2 ಭಂಗಿನೀ (ಚಜಟಡ) 3 — (ಜ) 4 ಪದವೀ ವಿರಾಜಿತ ಸೆಜ್ಜೆವಳ್ಳ (ಜ)

ಚತುರ್ಥಾಶ್ವಾಸಂ

ಶ್ರೀಪತಿಯುಂ ಸೈಪಿಂ ಪೃ
ಥ್ವೀಪತಿಯುಂ ವೀರಪತಿಯು[1]ಮಪ್ಪು[1]ದುಮಿರದ
ಲ್ತಾ ಪೊ[2]ಟ್ಟು[2]ವಿತ್ತು ಕೀರ್ತಿ
ಶ್ರೀಪತಿಯಾದಂ ಸರಸ್ವತೀ ಶೃಂಗಾರಂ ||೧||

ಪೊಂ ಪಟ್ಟಮಪ್ಪವೊಲ್ಕೂ
ರ್ಖಂ ಪಂಡಿತನಪ್ಪ ಕೆಱದೆ ವಾಣಿಯ ದಯೆಯಿಂ
ದಂ ಪರದನರಸನಾಗಿ
ರ್ದಂ ಪೃಥ್ವಿಗೆ ಸೈಪು ಪಮೆ೦ಗುಲಾಜಿದುದುಂಟೇ ||೨||

ವ|| ಒಂದು ದಿನಸಮಾ ಪ್ರತಾಪಮಾರ್ತಂಡಂ ಮಾರ್ತಂಡೋದಯ ಸಮಯದೊಳೊಡ್ಡೋಲಗಂಗೊಟ್ಟಿರೆ

ಕರಿಕುಂಭದ ಮುತ್ತಂ ಕ
ತ್ತುರಿಮಿಗಮುಂ ಸಿಂಹಶಾಬಮುಂ ದರ್ಶನಮಿ
ತ್ತುರವಣಿಸಿ ಬಂದನಾ ಧೀ
ವರನಾಯಕನಿಭ್ಯಕೇತು ಭೂನಾಯಕ[3]ನಂ[3] ||೩||

ವ|| [4]ಕಾಣ[4]ಲೊಡನಾರ್ಗಂ ಮಾಡದ ಮೋಹಮನವಂಗೆ ಮಾಡಿ ಸೇನಾಪತಿ ಪದವಿಯಂ ಕೊಟ್ಟು ತನಗಾತನೇ ಪರಮ ವಿಶ್ವಾಸ ಭೂಮಿಯುಂ ಪರಮ ಪ್ರೇಮ ಭೂಮಿಯುಮಾಗೆ ಮಳಯಾನಿಳಂಬೆರಸು [5]ಬಸಂತಂ ವನ[5]ರಾಜ್ಯಂಗೆಯ್ವಂತೆ ದೂರಾಯಾತಧೀವರಂ ಬೆರಸು ವಿಳಾಸವಸಂತಂ ರಾಜ್ಯಂಗೆಯುತ್ತುಮಿರ್ದೊಂದು ದಿವಸಮಾ ಮಂದರ [6]ಧೀರಂ[6] ಮಂದರಸ್ಥವಿರಭಟ್ಟಾರಕರ ಸಮಿಪದೊಳ್ ಧರ್ಮಮಂ ಕೇಳುತ್ತುಮಿ[7]ರ್ದ[7] ದೂರ ದೇಶದೊ[8]ಳಿ[8]ರ್ದ ಧೀವರಾ[9]ಖ್ಯ[9]ನಲ್ಲಿಗೆ ಮೆಲ್ಲಗೆ ಪತ್ತೆ ಸಾರ್ದು ಸಾದ್ರ್ರ ಹೃದಯನಾಗಿ ಮನಃಪ್ರಿ[10]ಯ ವ[10]ಚನಾಮೃತಮೆಂ ಕಿವಿಗುಡಿತೆಯಿಂ ಕುಡಿಯುತ್ತುಮಿರ್ಪುದಂ ಕಂಡು

---

1 ಮಿಂಪುೞ (ಚಟಣ) ಮಿಪ್ಪ (ಡ) 2 ತು (ಚಟಡಣ) 3 ನಾ (ಟ) 4 ಕೊಡ (ಕಗ) ಕೊಡ (ಚಟಡ) ಕುಡ (ಣ) 5 ವಸಂತನ (ಚಟಣ) ವಸಂತಂ (ಡ) 6 ಧರ (ಡ) 7 ಶ್ತ (ಜ) 8 ಳುಮಿ (ಚಟಡ) 9 ಜ (ಜ) ಜ್ಞ (ಡ) 10 ಯ ಪ್ರಿಯ ವಚನಮನಾಲಿಸುವ ರಜಸ್ವಲಾಶ್ರವಣದಂತೆ ಮಭಯು (ಜ)

ಎನಗೀ ಮಿಾಂ[1]ಗು[1]ಲಿಗನ ಮೇ
ಗನಿಮಿತ್ತಂ ಪ್ರೇಮಮಣುಗು ಮಗನೊಳಮೊಲ್ವಂ
ಗನೆಯೊಳಮಾಗದುದಾಯ್ತಿದ
ನನುಪಮ ನಿ[[2]ರ್ಬಾಧ[2]]ಬೋಧ ಭಾಸುರ ಬೆಸಸಿಂ ||೪||

ಎನೆ ನಿನ್ನ ಪ್ರೋದ ಭವದಂ
ಗನೆ ವಾಗುರೆಯೆಂಬಳೀತನಾ ಭವದೊಳೆ ನೀಂ
ವನಚರನೆ ಎನಲೊಡಂ ತೆ
ಕ್ಕನೆವೋದಂ ಜನ್ಮನಾಟಕಕ್ಕವನೀಶಂ ||೫||

ಆರೇನಾದಪರೆಂಬುದ
ನಾರಜೀವರೊ ಜಗದೊಳುಳ್ಳ ರೂ[3]ಪು[3]ಗಳಂ ಸಂ
ಸಾರಿಯ[4]ಫೆ[4]ಸೂತ್ರಧಾರ
ಪ್ರೇರಣೆಯಿಂ ಪೊತ್ತು ಸುತ್ತಿ ಕುಣಿಯುತ್ತಿರ್ಪರ್ ||೬||

ವ|| ಎಂದು ಬೇಗದಿಂ ನಿರ್ವೇಗಪರನಾಗಿ ಸುಕೇತುವೆಂಬ ತನ್ನ ತನಯಂಗಿಬ್ಭ ಕೇತು ರಾಜ್ಯಭಾರಮನಿತ್ತು ತಪ್ರೋರಾಜ್ಯಭಾರಮನೆತ್ತಿಕೊಳ್ಳಲೊಡನೆ

ಯುವತಿ ಕಮಳಪ್ರಭೆಯುಮಾ
ತ್ಮವಲ್ಲಭ ಪ್ರೇಮದಿಂ ತಪಂಬಟ್ಟಳ್ ಕಾಂ
ತವಸಂತಂ ಬೀತೊಡೆ ಮಾ
ಧವಿಲತೆಯುಂ ಪಿಂತೆ ಬೀಯದೇನಿರ್ದಪುದೇ ||೭

ಆ ಪ್ರ[5]ತಿ[5]ಪತಿ ಪದಕಮಳ ಮ
ಧ್ರುವತ[6]ನಂ[6]ದಾಗಿ ಧೀವರಂ ಲೋಪಿತ ಪಾ
ಪವ್ರಣನಣುವ್ರತಾದಿ ಗು
ಣವ್ರತ [7]ದೀ[7]ಕ್ಷಾ ವ್ರತಂಗಳಂ ಕೈಕೊಂಡಂ ||೮||

ವ|| ಅಂತು ಮಕರಕೇತುವಿಂಗೆ ಧೂಮಕೇತುವಾಗಿಬ್ಭಕೇತು ದಿವ್ಯ[8]ಕಾಂತಾ[8] ಕಟಾಕ್ಷಧವಳ ದೀಧಿತಿ ಸುಧಾ ಸೌಧಮಪ್ಪ ಸೌಧರ್ಮಕಲ್ಪದ ಶ್ರೀನಿಳಯ ವಿಮಾನ ದೊಳ್ ಶ್ರೀದೇವನೆಂಬ ದೇವನಾದಂ ತಪಸ್ತಪನ ವಿಕಸಿತ ವದನ ಕಮಳಪ್ರಭೆಯಪ್ಪ

---

1 ಬು (ಕಗ) 2 ರ್ವಾದ (ಚಜಟಡಣ) 3 ಪ (ಜ) 4 ಹ (ಡ) 5 ತ (ಚಟಣ) 6 ನೆಂ (ಚಟಡಣ) 7 ಶಿ (ಚಟಡಣ) 8 ಕುಂತಳ (ಚಟಡಣ)

ಕಮಳಪ್ರಭೆಯುಂ ಸುಪ್ರಭವಿಮಾನದೊಳ್ ವಿಮಲಪ್ರಭನೆಂಬ ದೇವನಾದಳ್ ವ್ರತ ಸ್ವರೂಪ ನಿರೂಪಣಾ ಪ್ರವೀಣ ಪರಮಾಗಮ ಶ್ರವಣ ನಿರ್ಮಳ ಭೂತ ಧೀವರನಪ್ಪ ಧೀವ[1]ರನುಂ[1] ವಿದ್ಯುತ್ಪ್ರಭವಿಮಾನದೊಳ್ ಶ್ರುತಪ್ರಭಾಂಕನೆಂಬ ದೇವನಾದಂ [2]ಇಂತಾ[2] ಮೂವರುಂ ಸುರಲೋಕ ಸೌಖ್ಯಮನನುಭವಿಸಿ ಬಂದು

ಶ್ರೀದೇವಂ ಚಿಂತಾಗತಿ
ಯಾದಂ ವಿಮಳಪ್ರಭಂ ಮನೋಗತಿಯುಂ ತಾ
ನಾದಂ ಶ್ರುತಪ್ರಭಾಂಕನು
ವಿಾ ದುರಿತಾರಾತಿ ಚಪಳಗತಿ ತಾನಾದಂ ॥೯॥

ವ॥ ಇದು ನಮ್ಮ ಮುತ್ತಮೂವರ ಭವಸಂಚಕ ಪ್ರಪಂಚಿತ ಪ್ರೀತಿ ನಿಮಿ[3]ತ್ತ[3]ಮೊಂದು ಹಿತೋಪದೇಶಮಂ ಕೇ[4]ಳ್ವೊಡೆ[4]

ಇದಱಿಂದೊಳನಿರುದ್ಧ ನವರಂ
ಧ್ರದೊಳಪಘನ ಘಟದೊಳ[5]ಯ[5]ನ ಶೀಲನ[6]ದಿಂ[6] (?) ಪೋ
ಪುದು ಚೋದ್ಯಮೆ ಇರ್ದಪುದೆಂ
ಬುದೆ ಚೋದ್ಯಂ ಪ್ರಾಣಪವನನನುಚಿತ ಭವನಂ ॥೧೦॥

ಎಡೆಯಾಡುತಿರ್ಪ [7]ವೇ[7]ಣುಪೆ
ಕೆಡೆವಂತಿರೆ ತಂತು ತೀರ್ವುದುಂ ಹತಕಾಯಂ
ಕೆಡೆವುದು ಕಾಣಲ್ಕಲ್ಲದೆ
[8]ಸ[8]ಡಪು[9]ಡ[9]ನಱಿವನ್ನ[10]ನಾ[10]ವನಾಯುವ ತವಿಲಂ ॥೧೧॥

ವ॥ ತಿಂಗಳಂತೆ ನಿನಗೊಂದೇ ತಿಂಗಳಾಯುಷ್ಯಮವಶ್ಯಂ ಪರವಶನಾ[11]ಗಿರದೆ[11] ಪರಲೋಕ ಹಿತಮನೆ ಮನದೆಗೊಳ್ಳೆಂಬುದುಮಪರಾಜಿತನಿಂತೆಂದಂ

ಇಂದುಗಮಿನಂಗ[12]ಮಂಬುದ[12]
ವೃಂದಕ್ಕಂ [13]ಫಳಿನ ಶಾಖಿಗಂ[13] ಮೇದಿನಿಗಂ
ಮಂದಾನಿಳಂಗಮಿ[14]ನ್ನಿ[14]
ಮ್ಮಂದಿಗರ್ಗಂ ಸಲೆ ಪರೋಪಕಾರಮೆ ಶೀಲಂ ॥೧೨॥

---

1 ರಂ (ಜ) 2 ಇತ್ತಾ (ಟ) 3 ತ್ತಂ ಮತ್ತ (ಜ) 4 ಳ್ (ಜ) 5 ಟ (ಚಟಣ) ವು (ಡ) 6 ದೆಂ (ಜ) 7 ವೆನ (ಚಟಡಣ) 8 ನ (ಟಡ) 9 ದ (ಚಜಟಡ) 10 ಗಾ (ಜ) 11 ಗಿ (ಚಟಡಣ) 12 ಮೆಂಬುಧ (ಕಗಚಡ) ಮೆಂಬುದ (ಟ) 13 ಫಳಿನ ಶೋಭೆಗಂ (ಜ) 14 ನ್ನಿ (ಜ)

ಗುಣದಿಂದಂ ಸಹಜಾತ[1]ವಿಾ[1]ಹದ ರಿಣಂ ಬಲ್ಲಿತ್ತು ನೀವಿಾ ಮಹಾ
ಗುಣ[2]ದಿಂ[2]ದಲ್ಲಮ[3]ರ[3]ತ್ವಮಂ ಬಿಸುಟೊಡಂ ತಾಂ ಬಿಟ್ಟುದಿಲ್ಲೆಮ್ಮ ಮೋ
ಗಣ ನಿಮ್ಮೊಂದು ಮಮತ್ವಮಿಂತುಟಿ ರಿಣಂ [4]ಕ್ಷೇತ್ರ[4]ವ್ಯಮೆಂದಂದು ಚಾ
ರಣಯುಗ್ಮಕ್ಕತಿ ಭಕ್ತಿಯಿಂದೆಱಗಿದಂ ವಿದ್ಯಾವಧೂವಲ್ಲಭಂ ||೧೩||

ವ|| ಎಱಗುವುದುಮವರಭ್ಯುದಯ ಪರಂಪರಾಪ್ರಾ[5]ಪ್ತ[5]ನಾಗೆಂದು ಪರಸಿ ಪೋದರಿತ್ತಲಪರಾಜಿತನುಂ ಮುನ್ನಿನಂತೆ ನಿರೀಕ್ಷಣ [6]ವಿಕಾರಮು[6]ಮಹಂಕಾರಮುಮಿಲ್ಲದೆ ಪರಮವ್ರತಿ ಪ್ರೋಟಿಲಂ ಪುಗುವಂತೆ ಪೈಬಲಂ ಪೊಕ್ಕು ನೆರೆಮನೆಗೆ [7]ಬಂದುಪಸರ್ಗ[7]ಕ್ಕೆ ಸಲ್ವ[8]ತ್ತಿ[8]ಗಿವಗಿಲ್ಲದಿವು ಸಲ್ಲ[9]ವೆಂದು[9]ದ್ಯೋಗಿಸು[10]ತ್ತಂ ತ್ಯಾಗದಾನಂ[10]ಗಳೊಳಂ ಸಾಂಯುಗೀನ[11]ಜನಂ[11]ಗಳೊಳಂ ಕಾಲ್ಗುಡದ ಮೋಹಮಂ ಧರ್ಮಧವಳ ದ್ವಿರದನಮನೇಱಿಸಿ ಪವನಜವಸ[12]ತ್ವ[12]ತುರಂಗಮಂಗಳ ಮೇಗಣ ಮನಮನುಚ್ಚೈಶ್ರವಮಪ್ಪ ವೈರಾಗ್ಯವಾಜಿಯ ಬೆಂಗೆವರಿಸಿ ಮುಂದಲೆಯ ಕಸದಂತೆ ಮುಂತಿರ್ದ ಕಸವರಮಂ ಸತ್ಪಾತ್ರದ ಕಯ್ಗೆ ಮಣ್ಣಿಕ್ಕುವಂತಿಕ್ಕಿ

ಪರಿತಾಪಾತಪಮಟ್ಗಿ ದತ್ತೊಗೆದುದುದ್ಬೋಧ ಪ್ರದೀಪಂ ದಮ
ದ್ವಿರದಾರೂಢ[13]ನಿ[13]ನಾದೆನೇಸೆನಿದನೆಂದಂದಾನೃಪಂ ಛತ್ರ ಚಾ
ಮರ ಸಿಂಹಾಸನಮೆಂಬಿವಂ ತ್ವರಿತದಿಂ ಪ್ರೀತಿಂಕರಂಗಿ[14]ತ್ತನೊ
ಲ್ವ[14]ರೆ ಮಿಕ್ಕಚ್ಯುತರಾಜ್ಯಮಂ ಪಡೆವವೊಲ್ ಸಾಮಾನ್ಯ ಸಾಮ್ರಾಜ್ಯಮಂ ||೧೪||

ವ|| ಅಲ್ಲಿಂ ಬೞಿಯ ಭಂಡಾರದ ಪೊನ್ನೆಲ್ಲಮಂ ತೆಗೆಸಿ ತ್ರಿಭುವನಾಭರಣಮೆಂಬ ಜಿನಮಂದಿರದ ಮುಂದೆ ಮಂದರಮಂ ಮಾಡಿಸಿ ಪಂಚರತ್ನ ಸಂಚಯದಿನದಕ್ಕೆ ಕಲ್ಪಕುಜಂಗಳಂ ಕಲ್ಪಿಸಿ ನಕ್ಷತ್ರಮಾಲೆಯೆಂಬ ಹಾರ[15]ಮಂ[15] ಚಂದ್ರಾದಿತ್ಯರೆಂಬ ಮಣಿದರ್ಪ[16]ಣಂಗಳುಮಂ[16] ಬಲವರಿಸಿ

ಅನಘಂ ತಾನೆ ಮಹೇಂದ್ರನಾಗಿ ಮಹನೀಯಾನರ್ಘ್ಯಮಾಣಿಕ್ಯಮಂ
ಡನಮಾಳಾಂಬು ಸಹಸ್ರನೇತ್ರತನುರಾಜೇಂದ್ರಂ ಜಿನೇಂದ್ರಂಗೆ ಮ
ಜ್ಜನಮಂ ನಿರ್ಮಿಸಿ ನಿರ್ಮಳಾಧ್ವರಮನಂದಷ್ಟಾಹ್ನಿಕಂ ಮಾಡಿ ತ
ತ್ಕನಕಾದ್ರೀಂದ್ರಮನಿತ್ತನರ್ದಿ[17]ನಿಕರಕ್ಕಾ ಧೈ[17]ರ್ಯ ವಿದ್ಯಾಧರಂ ||೧೫||

---

1 ಮೋ (ಜ) 2 ಶೆಂ (ಜ) 3 ತ (ಚಟಡಣ) 4 ಕ್ಷಂತ (ಜ) 5 ಪ್ಯ (ಜ) 6 ವಮ (ಚಟಡಣ) 7 ವರ್ಷಂತರ ಮನೆಗೆವಂದುಸಗ್ಗ (ಚಟಡಣ) 8 ಲ್ಲಿಗೆ ಇವ (ಚಟಡಣ) 9 ದು (ಜ) 10 ವಂತ್ಯಾಗನಾಗಂ (ಜ) 11 ಜಗಂ (ಚಣ) ಗಜಂ (ಜ) 12 ತ್ವರ (ಚಟಡಣ) 13 ಗೆ (ಜ) 14 ತ್ತನೊಲ್ವ (ಚಟಡ) ತ್ತನಾಳ್ವ (ಣ) 15 ಮುಂ (ಚಟಡ) 16 ಣಂಗಳುಮುಂ (ಟಶ) ಣಮಂ (ಜ) 17 ನಿಕರಂ ಸೌಂದ (ಚಟ) ನಿಕರಂ ಕಾಂಸೌಂದ (ಡ) ಕರಕ್ಕಾ ಧೈ (ಣ)

ರಸುಣೇರಾಗ ವಿಕಾಸಕೋಶ[1]ಲಪನಾಂ[1]ಭೋಜಾತ ಲಾವಣ್ಯಮಂ
ದ ಮಧೂಚ್ಛಿಷ್ಟಮನುಂಡು ಬೆಂ[2]ಡು[2]ನೆಗೆದಸ್ಪೃಶ್ಯಂಗಳಾಗಿರ್ದ ತ
ನ್ನ ಮನೋನೇತ್ರಮನಾಳಿಗಳ್ಗೆ ಸಮಗಂಗಾಸ್ನಾನದಿಂ ಶುದ್ಧಿಯಂ
ಸಮೆದಾ ಸಂಯಮಬಾಜನಂ ಜಿನಪದಾಂಭೋಜಂಗಳೊಳ್ ಸಾರ್ಚಿದಂ ||೧೬||

ವ|| ಅನಂತರಂ ಬಾಂಧವಬಂಧನಮಂ ಪಱಿದು ಪಂಚಮುಷ್ಟಿಯಿಂ ಕೇಶಪಾ[3]ಶಮಂ[3] ಪಱಿಮಟಿ[4]ದಿಪ್ಪ[4]ತ್ತೆರಡು ದಿವಸಮಂ ಪ್ರಾಯೋಪಯೋಗ ಸಂನ್ಯಸನದಿನಿರ್ಪತ್ತೆರಡು ಸಾಗರೋಪಮಾಯುಷ್ಯಮಂ ಪಡೆದಂ[5]ದಚ್ಯುತಕಲ್ಪದ[5] ಸಾಂತಕರ ವಿಮಾನದೊಳಚ್ಯುತೇಂದ್ರನಾಗಿ

ಭೋಗಾಮೃತಮಂ ಪುಣ್ಯಾನಿ
ಯೋಗವಿಸಿಂ ಪೆತ್ತುಮಿರೆಯು[6]ಮೌರ್ವ[6]ದ ತೃಷ್ಣಾ
[7]ಯೋ[7]ಗಮಿಸೇಂ ದ್ವಾನಿಂಶತಿ
ನಾಗರಜೀನ ಸುಸೀಂಟೆದತ್ತನಿಮಿಷನಾ ||೧೭||

ಇತರರ ಸಂಪತ್ತೇನ
ಚ್ಯುತಕಲ್ಪದಿನಾಯುರಬ್ಧಿಯವಸಾನದೊಳ
ಚ್ಯುತ[8]ನುಂ[8] ಚ್ಯುತನಾದಂ ಯಮ
ಹತಕಂ ಸುಸ್ಥಿ[9]ತರ[9]ನಾರುಮಂ ಸ್ವೈರಿಪನೇ ||೧೮||

ಎಂದುಂ ಕಾಲಕ್ಕೆ ಚಲಂ
ಸಂದುದು ಮೂಜಗದೊಳಚಲಮೆಂದೊಡೆ ನಗುತುಂ
ಬಂದು ತಳರ್ಚುಗುಮಚ್ಯುತ
ನೆಂದೊಡೆ ಕೆಡಪುಗುಮ[10]ಮ[10]ರನೆಂದೊಡೆ ಕೊಲ್ಗುಂ ||೧೯||

ನಿರುಪಮ ಜಂಬೂದ್ವೀಪದ
ಭರತಕ್ಷೇತ್ರಕ್ಕೆ ಸಸ್ಯಸಂಪದಮೆನಿಕುಂ
ಕುರುಜಾಂಗಣ ಜನಪದಮ
ಲ್ಲಿ ರಂಜಿಕುಂ ಹಸ್ತಿನಾಪುರಂ ಪೊಸದೆನೆವೋಲ್ ||೨೦||

---

1 ಫಲನಾಂ (ಚಣ) ಫಲನಂ (ಟಡ) 2 ದು (ಚಟದ) 3 ಶಂಗಳಂ (ಚಟಡಣ) 4 ದೆಪ್ಪ (ಚಟದಣ, 5 ತಚ್ಯುತ (ಚಟಡಣ) 6 ಪಾಱಿ (ಣ) 7 ಪೇ (ಚಟಡಣ) 8 ನು (ಚಡ) ನ (ಟಣ) 9 ರನ (ಜ) 10 ಘಮ (ಚಟಡಣ)

ಮೃಗಮೆತ್ತುನ್ಮೃಗ ಮುಗ್ಧವೀಕ್ಷಿತವ[1]ದೆತ್ತ ಚ್ಚಾಲ[1]ವೆತ್ತೋಷ್ಠಲ
ಕ್ಷ್ಮಿಗೆ ನೋಂತಾಲದ ಪಣ್ಣದೆತ್ತ ಬಱಿಯಾ ಪುತ್ತೆತ್ತ ಕೇಶಾಸಿ[2]ತೋ
ರ[2]ಗವೆತ್ತಂ[3]ಕಮವ[3]ತ್ತ ಪೀವರ್ವಮೃತಪೆತ್ತಂತಾ ಪುರಸ್ತ್ರೀ ಮುಖೇಂ
ದುಗಳಂ ಪೋಲಿಸಿ ಪೊಂಗುವರ್ಸಮ[4]ರತ ಶ್ರಾಂ[4]ತಂಗ[5]ಳಿಂ[5] ತಿಂಗಳಂ ||೨೧||

ನಡೆನೋಟ್ಪಿರ ಕಡೆಗಣ್ಣುಂ
ಕಡುನಲ್ಲರ ಮನವುಮೊಡನೆ ಪೊತ್ತುವು ಪುರದೊಳ್
ಮಡದಿಯರ ನೊಳೆಯನಲ್ಲಮೊ
ಡುಡಿಯುವೆ ಬ[6]ಳು[6]ವಳಿಕೆವಡೆದ ಬಡನಡು ಭರದಿಂ ||೨೨||

ಆ ಪುರಮನಾಳ್ವನಮೃತಾ
ಳಾಸಂ ಯಮಕೋಸನತ್ಯುದಾರಂ ಧೀರಂ
ರೂಪೇಕ್ಷುಚಾಪನನ್ವಯ
ದೀ[7]ಪಂ[7] ಶ್ರೀಚಂದ್ರನವನತಾರಿ ನರೇಂದ್ರಂ ||೨೩||

ದಯಿತೇಕ್ಷಣ ಮುಗ್ನ ಮೃಗಂ
ವಿಯತ್ಪಮೋದ್ಭಾಸಿ ದುರ್ಧಿಕರ್ದಮ ವಲ್ಮೀ
ಕಯುತಂ ಶ್ರೀಚಂದ್ರಮು[8]ಖಿ[8]
ಪ್ರಿಯಚಂದ್ರಂ ಕೀರ್ತಿಚಂದ್ರನೆಸೆವ[9]ಸಿ[9]ಚಂದ್ರಂ ||೨೪||

ಆ ಮಹಿಪತಿಯ ಮನಃಪ್ರಿ[10]ಯ[10]
ಕಾಮಿನಿ ಮಿಕ್ಕಗ್ರಮಹಿಷಿ ಮಾನೆನಿಸಿರ್ದಂ
ಶ್ರೀಮತಿಯೆಂಬಳ್ ದಾನ
ಶ್ರೀಮತಿಯಿಂ ಕಾಮಧೇನುವೆನಿಸಿದಳೆಳೆ[11]ಯಂ[11] ||೨೫||

ಅವಳಂಗಚ್ಛವಿಗೋತು ಪಚ್ಚೆ ಕುರುಳಂದ[12]ಕ್ಕೋತು[12] ನೀಳಂ ನಖ
ಚ್ಛವಿಗೋತುಜ್ವಳವಜ್ರಮೆಲ್ಲ ಸುಲಿಪಲ್ಗೋತಚ್ಛ ಮುಕ್ತಾಫಳಂ
ಪವಳಂ ಬಾಯ್ದೆಱಿಗೋತು ಬಂದು ಸಲೆ ಸೇವಾವೃತ್ತಿಗೆಯ್ವಂತೆ ರ
ತ್ನ ವಿಭೂಷಾವಳಿಯೊರ್ಮೆಯುಂ ತೊಲಗವಂತಾ ಶ್ರೀಮತೀದೇವಿ[13]ಯಂ[13] ||೨೬||

1 ದೆತ್ತ ಜ್ವಾಲ (ಙ) 2 ರೋವು (ಚಟಡಙ) 3 ಕವುದೆ (ಗಚಟ) ಕವುವೆ (ಙ) ಕವುರ್ (ಡ) 4 ತನು ಶ್ರಾ (ಗ) ತರ ಶ್ರಾ (ಚಟಡ) ರತ ಶ್ರಾ (ಙ) 5 ಳಂ (ಜಟ) 6 ಳ (ಟಙ) 7 ಪಃ (ಜ) 8 ಖಂ (ಟ) 9 ಶ್ರೀ (ಡ) 10 ಯೆ (ಚಟಡಙ) 11 ಯಿಂ (ಚಟಡ) 12 ಕ್ಕೊಂದು (ಚಟಡ) 13 ಯಾ (ಜ)

ಆ ನೃಪತಿಗಮಾರಾಜ್ಞಿಗ
ಮಾ ನಾಕಜನೊಸಗೆ ಪುಟ್ಟೆ ಪುಟ್ಟೆ ಮಹಾಪು
ಣ್ಯಾ[1]ನೀಕಂ[1] ಪಡೆದಂ ಶಿಶು
ಭಾನುದ್ಯುತಿ ಸುಪ್ರತಿಷ್ಠನೆಂಬೊಳ್ಪೆಸರಂ ||೨೭||

ಆ ರಾಜಪ್ರಿಯಸೂನು ತನ್ನೆಳವೆಯಂದುದ್ದಾಮ ವಾಗ್ದೇವಿಯಂ
ಧೀರಂ ಯೌವನದಂದು ಸನ್ನುತ ಸುನಂದಾದೇವಿಯಂ ಕ್ಷತ್ರಿಯಾ
ಚಾರಖ್ಯಾತಿ ವಿಧೇಯ ನೀತಿಯಱಿಯಲ್ಕಲ್ತಂದು ಲೋಕಸ್ತುತಂ
ವೀರಶ್ರೀಯನಲಂಪಿನಿಂ ಮದುವೆ ನಿಂದುತ್ಸಾಹಮಂ ತಾಳ್ದಿದಂ ||೨೮||

ಬೇಡ ಕೊಲಲೆಂಬ ತೆಱದಿಂ
ಕ್ರೀಡಾರಸದಿಂದೆ ರಾಜತನಯಂ ಕೊಂಡಂ
ದಾಡೆಯುಮಂ ಕೆಯ್ತ್ತೀನೊಡ
ನಾಡಿಸುವನೊ ಕಾಡ ಕರಿಗಳಂ ಹರಿಗಳುಮಂ ||೨೯||

ವ|| ಅಂತಿಱಿವ ನೆಱ[2]ವ[2] ಪ್ರಾಯದ ಪುತ್ರನಂ ಕಂಡು ಸಂಸಾರದ ಕಡೆಗಂಡಂತೆ ಸಂತೋಷದಂತನೆಯ್ದಿ

ಚಂದ್ರಂ ಬುಧಂಗೆ ಕೊಡುವವೊ
ಲಿಂ[3]ದ್ರ[3]ಪ್ರತಿಮಂಗೆ ಸುಪ್ರತಿಷ್ಠಂಗಾ ಶ್ರೀ
ಚಂದ್ರಂ ರಾಜ್ಯಮನಪಗತ
[4]ತಂ[4]ದ್ರಂ ಕೊಟ್ಟೊಳ್ದಪಕ್ಕೆ ಕಚನುಂ ಕೊಟ್ಟಂ ||೩೦||

ಮಂದರಕುಧರ ಸಮಾನ ಸು
ಮಂದಿರ ಗುರುಪಾದ ಸೇವೆಗೆಯ್ದಾಚರಿಸು
ತ್ತಂದಂದಿಂಗಕಳಂಕಂ
ಕುಂದಿದನುತ್ತಮ ತಪಶ್ರಿ[5]ತ್[5] ಶ್ರೀಚಂದ್ರಂ ||೩೧||

ವಿಗತ ವಸನಾಂಶು[6]ವಿಸರಂ[6]
ಪ್ರಗಲ್ಭ ನಿಷ್ಕಪಟವೃತ್ತಿರಹಿತಂ ವಿಪುಲ
ಪ್ರಗುಣನುಪಶಾಂತ ಕಾಮಂ
ಪೊಗಸಿನ ಚಂದ್ರಂಬೊಲಿರ್ದನು ಶ್ರೀಚಂದ್ರಂ ||೩೨||

---

1 ನನ್ವಿತ (ಗಟ) ನನಿತ (ಚ) ನೀಕಂ (ಜ) ನನ್ವಿತಂ (ಡ) 2 ದ (ಜಟಡ) 3 ದ್ರಂ (ಜಟ) 4 ಜಂ (ಜ) 5 ತಂ (ಚಟಡಣ) 6 ವಿರಸಂ (ಚಡಣ)

ಇತ್ತ ಪಿತೃವಿತ್ತ ರಾಜ್ಯಮ
ನಿತ್ತು ಭುಜಕ್ಕಾಜ್ಞೆಯಂ ವಿರೋಧಿಗಳ ನೊಸ
ಲ್ಗಿತ್ತರಸುಗೆಯ್ದನಾತ್ಮಾ
ಯತ್ತಂ ಕಲಿ ಸುಪ್ರತಿಷ್ಠನಯನಯ[1]ನಿ[1]ಷ್ಠಂ ॥೩೩॥

ಧೃತಿವೆತ್ತಾ ತಪವಿಗ್ರಯೋದ್ಯಮ ಭವದ್ವೈರೀ ಪ್ರಣಾದಕ್ಕೆ ಕಂ
ಪಿತಮಪ್ಪಾದಿಯ ಕೂರ್ಮನಂ ಫಣಿಪನಂ ದಿಗ್ದಂತಿಯಂ ಗೋತ್ರಪ
ರ್ವತಮಂ ಭೂಮಿ ಬಿಸುಟ್ಟು ಬಂದು ಪಿಡಿದುಂ ನಿಶ್ಚಿಂತದಿಂ ಸು
ಪ್ರತಿಷ್ಠಿತಮಾಗಿರ್ಪುದು ಸುಪ್ರತಿ[2]ಷ್ಠನ ಪಟಿಷ್ಠೋ[2]ದ್ದಂಡ ದೋರ್ದಂಡದೊಳ್ ॥೩೪॥

ಮಾನಂ ಸದ್ಧೈರ್ಯ ದೀಕ್ಷಾಗುರು ಸುರಗಿರಿಗಂ ಕಲ್ಪವೃಕ್ಷಕ್ಕೆ ಹಸ್ತಂ
ದಾನೋಪಾಧ್ಯಾಯನಾತ್ಮಾಕೃತಿಯ ತನುಗೆ ಬಿಲ್ಲೋಜನೋಜಃ ಪ್ರಸಾದಾ
ಧೀನಂ ತನ್ನುಕ್ತಿ ವಾಗ್ನರ್ತಕಿಗಖಿಳ ಕ[3]ಳಾಲಾ[3]ಸ್ಯ ಶೈಲೂಷನಾಗ
ಲ್ತಾನಾಯ್ತೆಂಬನ್ನಮಾದಂ ಜಗಮನೆಱಗಿಸಲ್ ಸುಪ್ರತಿಷ್ಠಂ ಗರಿಷ್ಠಂ ॥೩೫॥

ಆದತ್ತು ಸುಪ್ರತಿಷ್ಠ ಧ
ರಾದಯಿತಂಗಧಿಕದೃಷ್ಟಿಯೆನೆ ಮೇದಿನಿ ಭಾ
ಗ್ಯೋದಯಮಂ ಪಡೆದ ಸುನಂ
ದಾದೇವಿ ಸುದೃಷ್ಟನೆಂಬ ಮಗನಂ [4]ಪಡೆ[4]ದಳ್ ॥೩೬॥

ಉಕ್ಕೆವಡೆ[5]ಲೆ[5] ಮಾಯದ ಕೊಳ
[6]ರ್ವ[6]ಕ್ಕಿಯ ಗೆ[7]ಳೆ[7] ತಿಳಕಮಿಡುವ ಪೊಳೆ ಪುಸಿಯ ಪುಣಿಲ್
[8]ಟ[8]ಕ್ಕಿನ ಬಿಸಲತೆ ಮುತ್ತಂ
ಮುಕ್ಕುಳಿಸಿದ ಪವಳ[9]ಮವಳ[9] ಮರುಳಿಸುವಂಗಂ ॥೩೭॥

ಊಡುವ ಪೊಸದಳಿರಲರಂ
ಸೂಡಿರ್ಪಳಿ ಕಂಪನಱೆವ ಸಂಪಗೆ ನಯದಿಂ
ನೋಡುವ ನಿಡುಸ್ಸೈದಿಲ್ಗಾ
ತಾಡುವ ತಾವರೆ ವಿರಾಜಿಕುಂ ನೃಪಸತಿಯಾ ॥೩೮॥

---

1 ವಿ (ಜ) 2 ಷ್ಠಿತ ಪಟಿಷ್ಠೊ (ಚ) ಷ್ಠಿತ ಪಟಿಷ್ಠೋ (ಟಙ) 3 ಳೋಲ್ಲಾ (ಟಡ)
4 ಪಿಡಿ (ಜ) 5 ಳೆ (ಚಖ) 6 ವ (ಜ) 7 ಡೆ (ಜ) 8 ಉ (ಜ) 9 ದಂತೆ (ಚಟಡಙ)

ಪ್ರಭೆ[1]ಯಿಂ[1] ಚಿಂತಾಮಣಿ ಕ
ಲ್ಪಭೂರುಹಂ ಪುಷ್ಪಮಂಜರಿಯಿನೆಸೆವವೊಲಾ
ತ್ರಿಭುವನ ಭೂಷಣನೆಸೆದಂ
ಶುಭನಂದನೆಯಿಂ ಸುನಂದೆಯಿಂದನವರತಂ ||೩೯||

ಪಡೆದು ಯಶೋಧರ ಯತಿಪತಿ
ಯಡಿದಳಿರ್ಗಳನೆಱಗಿ ಕಯ್ಯೊಳಿಕ್ಕಲ್ಪಡೆದಾ
ಗಡೆ ಪಂಚಾಶ್ಚರ್ಯಮುಮಂ
ಪಡೆದಂ ಸತ್ಪಾತ್ರದಾನಿ ಪಡೆಯದುದುಂಟೇ ||೪೦||

ಪಡೆಯಲೆ ಬರ್ಪುದಾ ಪರುಷವೇದಿಯನಿಂದ್ರನರೇಂದ್ರಲಕ್ಷ್ಮಿಯಂ
ಪಡೆಯಲೆ ಬರ್ಪುದಾರಯೆ ಸುಪಾತ್ರಮನೊಂದನೆ ಯೋಗ್ಯಕಾಲದೊಳ್
ಪಡೆಯ[2]ಲೆ[2] ಬಾರದಲ್ಲಿ[3]ದೆ[3]ಡೆಗೀವವನೇವ[4]ಡೆ[ವಂ][4] ಸುಪಾತ್ರಮಂ
ಪಡೆದನೆ ವಸ್ತುವಂ ಪಡೆದನಾತನ ಪುಣ್ಯಮೆ ಪುಣ್ಯಕಾರಣಂ ||೪೧||

ಪಡೆದುಂ ಪಣ[5]ಮುಂ[5] ಪಾತ್ರಂ
ಬಡೆಯದೊಡದು ನಿಃಫಲಂ ಫಲಾರ್ಥಿಗೆ ಪಾತ್ರಂ
ಬಡೆವುದೆ ಪುಣ್ಯಂ ಪಣಮಂ
ಪಡೆವುದು ಪುಣ್ಯಮೆ ಪಣಂ ಮಹಾಹಿಗಮಿಲ್ಲಾ ||೪೨||

ತಡೆಯದೆ ಮುಗಿಲ್ಗೆ ಕುಡುವುದು
ಕಡಲಿತರ ಜನಕ್ಕೆ ಕೈಪೆಯಪ್ಪುದು ಕುಡಲು
ಳ್ಪೊಡೆ ಪಾತ್ರಮಱಿದು ಮಾಣದೆ
ಕುಡುವುದಪಾತ್ರಕ್ಕೆ ಕೊಟ್ಟೊಡೇಂ ಪುರುಳುಂಟೇ ||೪೩||

ಸ್ವಾತಿಯ ಮುಗಿಲ್ಗೆ ತಾನಿ
ತ್ತಾ ತೋಯಂ ರತ್ನಮಾಗೆ ರತ್ನಾಕರಮಾ
ಯ್ತಾ ತೋಯದಿನೆಡೆಯಱಿಯದೆ
ಪಾತಾಳಕ್ಕಿತ್ತ ತೋಯಮೇನಾಯ್ತುಱಿ[6]ಯಾ[6] ||೪೪||

---

1 ಯಂ (ಚಟಡಣ) 2 ದೆ (ಟ) 3 ದೊ (ಜ) 4 ಡನೆಂ (ಚಟಡ) ಡೆದಂ (ಜಣ) 5 ವುಂ (ಚಟಡ) 6 ಯೆಂ (ಜ)

ದೇವರ್ಗಲ್ಲ[1]ದೆ[1] ಕಳೆಯಂ
ಜೈವಾತೃಕನೀಯದಂತಿರುತ್ತಮ ಪಾತ್ರ
ಕ್ಕೀವುದು ಧನಮಂ ಸೌಖ್ಯಮ
ನೀವುದದುಂ ತವೆಯದಾ ಯು[2]ಗಾಂ[2]ತಂಬರೆಗಂ ||೪೫||

ತರಳಜಳಬಿಂದು ಮೌಕ್ತಿಕ
ಭರಮಪ್ಪವೊಲುದಧಿ ಶುಕ್ತಿಪತಿತಂ ನೀರುಂ
ಪಿರಿದಪ್ಪ ಪುಣ್ಯಮಕ್ಕುಂ
ಪರಮ ತಪೋಧನರ ಪಾಣಿಸಂಪುಟ ಪತಿತಂ ||೪೬||

ಕುಡುವಾತನ[3]ರ್ಥಿ[3]ಯಪ್ಪಂ
ತೊಡರದೆ ಕೊಳ್ವಾತನುತ್ತಮ ಪ್ರಭುವಪ್ಪಂ
ಕಡೆಗಣಿಸಿ ಧರ್ಮಪಾತ್ರಂ
ಪಡೆದುನ್ನತಿಯಂ ಸುರಾದ್ರಿಯುಂ ಪಡೆದಪುದೇ ||೪೭||

ಓವಿ [4]ಫ[4]ಳತರುಗೆ ನೀರ್ಗಳ
ನೀವುದು[5]ಮಂ[5] ಬೈತು ಬಿತ್ತನೊಲವಿಂ ಬೆ[6]ಳಗೈ
ಗೀ[6]ವುದುಮಂ ಸತ್ಪಾತ್ರ
ಕ್ಕೀವುದುಮಂ ದಾನಮೆಂಬ ನಾ[7]ಣ್ಚಿ[7]ಕೆಯುಂಟೇ ||೪೮||

ಬಿಡುಮುತ್ತಂ ಮಾಣಿಕಮಂ
[8]ಪಿಡಿ[8]ದೊಡ್ಡಿದ ಯತಿಯ ಕಯ್ಯೊಳಿಕ್ಕಿದಪಳೆಯೊ
ರ್ಪಿಡಿಗೂಟನಿಕ್ಕಿ ಸಗ್ಗಂ
ಬಡೆಯದ ನರನೆಗ್ಗನಲ್ತೆ ಭುವನಾಭರಣಾ ||೪೯||

ವ|| ಎಂದು ಪೇೞ್ವ ಧರ್ಮೋಪಾಧ್ಯಾಯರ ವಚನಾಮೃತದಿಂ ಮೂಡಿ ಮಡಲ ದಾನಬುದ್ಧಿಕಲ್ಪಕುಜಂ ಸತ್ಪಾ[9]ತ್ರ[9] ಪೋಷಣಮಾಗೆ ಧರ್ಮವಿಜಯಿಯಾಗಿ ರಾಜ್ಯಂಗೆಯ್ಯುತ್ತುಮಿರೆ

1 ದ (ಚಟ) 2 ಗಾ (ಜ) 3 ಥಿ (ಜ) 4 ಫ (ಜ) 5 ಮುಂ (ಜ) 6 ಳಗೆಯ್ಗೀ (ಚಡಣ) ಳಗೈದಿ (ಟ) 7 ಚಿ (ಚಟಡಣ) 8 ಬಿಡ (ಜ) ತ್ರಿ (ಚಜಟ) 9 ತ್ರಿಪೊಸ (ಡ) ತ್ರ (ಣ)

ಅತಿ ಸಂಗ್ರಾಹ್ಯಮೊ ಮಲ್ಲಿಕಾಪರಿಮಳಂ ಮಾಕಂದದಾಮೋದಮೊ
ಳ್ಪಿತೊ ವಾಸಂತಿಯ ಕಂಪು ಲೇಸೊ ಸುರಭಿ ಶ್ರೀಸೌರಭಂ ಯೋಗ್ಯಮೋ
ಸ್ತುತಮೋ ಪಾಟಳಗಂಧಮೆಂದು ಪಿಡಿಯಲ್ಬರ್ಪಂತೆ ಬಂದತ್ತು ಪಂ
ಡಿತಶೀಲಂ ಮಳಯಾನಿಳಂ ಮಲಯಜಾಮೋದೈಕ ಸಂಸಕ್ತ[1]ನೋ[1] ||೫೦||

ವ|| ಆ ಬಂದ ಮಂ[2]ದಮಳಯಾ[2]ನಿಳನನಿದಿರ್ಗೊಳಲೆಂದೊಂದಿರುಳಾ ಮಾನವೇಂದ್ರನಿಂ[3]ದ್ರ[3] ವಿಮಾನವನೇಱುವುದನನುಕರಿಸುವಂತೆ ಕರುಮಾಡಮನೇಱಿ ಪಾಸಿನ ಪೊರೆಯೊ[4]ಳ್ಪ[4]ಟ್ಟಿರ್ಪುದನಭಿನಯಿಸುವಂತೆ ಪರಾಂಗಣದೊಳ್ ಪಚ್ಚವಡಿಸಿರ್ದಮೃತಾರ್ಣವ ತರಂಗ ಸ್ಥೂಲ ಹಂಸತೂಳತಳ್ಪ[5]ದೊಳ್[5] ಮಗ್ನಮೂರ್ತಿಯಾಗಿ ಕುಳ್ಳಿರ್ದ ಬಲೆಯ ಕಣ್ಣ[6]ಬೆ[6]ಳಗಿಂಗೆ ಬೆದಱಿ ಕಟ್ಟಿಲೆಯ ಮೊ[7]ಗ್ಗ[7]ರಂ [8]ಮಗುಳ್ದು ಮೂ[8]ದಲಿಸಿ ಕವಿವಂತೆ ಕನಕಕೇತಕೀ ದೀರ್ಘದಳದಾಮಾನುಲೇಪನ ಕರ್ಪೂರ ತಾಂಬೂಲ ಬಹಳ ಪರಿಮಳಕ್ಕೆ ಪರಿತಂದು ಮುಸುಱಿ ಮುತ್ತುವ [9]ಮತ್ತ ಮ[9]ಧುಕರ ನಿಕರಮಂ ಲೀಲಾಕಮಲದಿಂ [10]ಸೋಂ[10]ದು [11]ಸೇದೆ[11]ವಡುವ ಸುನಂದಾದೇವಿಯ ಮುದ್ದುಮೊಗಮಂ ನಸುನಗೆವೆರಸು ನೋಡುತ್ತುಮಿರೆ

ಬಿರಿವನ್ನಂ ತಮಮೆಂಬ ನೀಳಗಿರಿಯಂ ತಾರಾಸಹಸ್ರಾಕ್ಷ[12]ನಂ[12]
ಬ[13]ರ[13] ಗೋತ್ರಾಂತಕನಿಟ್ಟ ವಜ್ರವೆನಸುಂ ಬೀಟ್ವಂತೆ ಕ[14]ಣ್ಣುಳ್ಕೆ[14] ಕ
ಣ್ಮರಲಂ ಪೆಣ್ಬಡೆ ಮುಚ್ಚಿ ಭೂಪ[15]ನರಸೆಂ[15]ಬೊಳ್ಪಿಲ್ಲಮೇಲೊಂದು ದ
ಳ್ಳುರಿ ಬೀಟ್ವಂತೆವೊಲಳ್ಕಿ ಬಿರ್ದುದು ನೃಪಂ ಬೆಂಬೀೞೆ ನಿರ್ವೇ[16]ಗ[16]ದಿಂ ||೫೧||

ಅದಟಲೆವ ಕೊಳ್ಳಿಯಂತು
[17]ಳ್ಕದ[17] ಕೊಳ್ಳಿ ಕನಲ್ದು ಬಿಟ್ದುದಂ ಕಂಡು ಕರಂ
ಬೆದಱಿ ಮಿಗೆ ಕೊಳ್ಳಿ[18]ಯಿಂ[18] ಕು
ತ್ತಿದವೊಲ್ಕಱುಗಿತ್ತು ಚಿತ್ತಮವನೀಪತಿಯಾ ||೫೨||

ವ|| ಎಂದು ತನ್ನೊಳಿಂತೆಂದಂ

---

1 ನೇ (ಚಜಟಡ) 2 ದಾ (ಜ) 3 ದ್ರಂ (ಣ) 4 ಳ್ಪ (ಚಜಟಡ) 5 ಕರದೊಳ್ (ಜ) 6 ಬೆಳಗಿಂ ಬೆ (ಜ) 7 ಗ (ಜ) 8 ಮೂ (ಜ) ಮಗುಳ್ವಮೂ (ಟ) 9 ಮ (ಚಟ) 10 ಸೋ (ಜ) 11 ಸೆಡೆ (ಚಜಟಡ) ಸೆಡೆ (ಚಜಟಡ) 12 ನುಂ (ಣ) 13 ರೆ (ಚಟಡಣ) 14 ಣ್ಣುಗ್ಕೆ (ಚಟಡಣ) 15 ವರನೆಂ (ಚಣ) 16 ದ (ಜ) 17 (ಳ್ಕಿನಜ) 18 ಯಂ (ಚಟಡಣ)

ಏಕು[1]ಳ್ಳಂ[1] ಪೊಲ್ಲೆಂಬುದೊ
ಲೋಕಂ ಪೋಯ್ತೆನ್ನ ಮನದ ಮೋಹಧ್ವಾಂತಾ
ನೀಕಂ ಪ್ರಯೋಜನಾರ್ಥಾ
ಲೋಕನಮುಳ್ಳಾಪ್ರದೀಪದಿಂದಾಯ್ತಾಗಳ್ ||೫೩||

ತೇಜಂ ಬಾಡಿಸುತಿರ್ಪ ರೇಖೆಯೊ ಚಿರಂ ಬಾಬ್ಬಾಸೆಯಿಂದೀ ಮಹಾ
ರಾಜರ್ನೋಡುವ ತೀವ್ರತೇಜದ ಮಹಾಸಪ್ತಾರ್ಚಿಗಂಡುಂ ಮಹಾ
ತೇಜಂ ಭಾಸ್ಕರನಸ್ತದೊಳ್ಕಿಡೆವು[2]ದಂ[2] ಕಂಡುಂ ಮಹೋ[3]ಳ್ಕಂ[3]ಜ್ವಳ
ತ್ತೇಜಂ ಬೀಟ್ಟು[4]ದು[4]ಗಂಡುಮು[5]ದ್ಧ[5]ತ ಮಹಾ ಮೋಹಾಂಧಕಾರಾಂಧಕರ್ ||೫೪||

ಪುಟ್ಟುಂಗುರುಡಂ ಕಾಣ್ಬನೆ
ಬಟ್ಟೆಯನಮಳಾಕ್ಷನಂತೆ ಸದ್ದೃಷ್ಟಿಯೆ ಬಾ
ಯ್ಕುಟ್ಟದೆ [6]ಕಾಣ್ಗುಂ[6] ಧರ್ಮದ
ಬಟ್ಟೆಯ ನೆಱೆ ಕಾಣಲಱಿವನಕ್ಕು ಮದಾಂಧಂ ||೫೫||

ವ|| ಆ ಪ್ರಸ್ತಾವದೊಳ್

ಕಂದಿಸೆ ಭಾಮಂಡಲರುಚಿ
ಸಂದೋಹಂ ಮೂಡುತಿರ್ಪ ರವಿಮಂಡಲಮೆನೆ
ಬಂದುದು ತನ್ನಗರಕ್ಕೆ ಸು
ಮಂದಿರ ಜಿನಪತಿಯ ಸಮವಸೃತಿ ಜಿತದುರಿತಂ ||೫೬||

ವ|| ಸುಪ್ರತಿ[7]ಷ್ಠಂ[7] ಚಾದಗೆಯ ಭಿನ್ನ[8]ಘನಧ್ವ[8]ನಿಯಿಂ ಪ್ರಾವೃಡಾಗಮ ನಮನಱಿವಂತೆ ದೇವದುಂದುಭಿಧ್ವನಿಯಿನಱಿದಱಿಲ್ಕೊಂಡನ ಮೇಲೆ [9]ತೊಱೆ ಬಂದತ್ತೆಂ[9]ದು ಸಂತಸಂಬಟ್ಟು ಪಾಪಪ್ರತಿವ್ಯೂಹಭೀತಿಯಿಂ ಸಮವಸರಣ ದುರ್ಗಮಂ ಶರಣ್ಬೊಕ್ಕಂ

ಎನಸುಂ ಭಿನ್ನಘಟಕ್ಕೆ ತೂಂತಿಡುವುವೇ ನದ್ಯಾದಿಗಳ್ ಭಿನ್ನಭಾ
ಜನ[10]ವಾ[10]ದಂದಱ[11]ಯೆಂ[11] ನಿಜಾಮೃತಮಯ ಶ್ರೀ ಧರ್ಮತೀರ್ಥಕ್ಕೆ ಬಂ
[12]ದಿನಿಸಂ[12] ಸದ್ಗುಣ ಭಾಜನಂ ಸುಲಭನುಂ ಪುಣ್ಯಾಂಬುವಂ ತನ್ನಕೊ
ಳ್ವನಿ[13]ತಂ[13] ಕೊಳ್ಳದೆ ಪೋದ ಕಾಲವೊಳವೇ ನಿರ್ಬಾಧ ಬೋಧಾಂಬುಧೀ ||೫೭||

1 ಳ್ಕಂ (ಱ) 2 ದುಂ (ಚಟ) 3 ಳ್ಕಂ (ಜ) 4 ದ (ಚಟಡಣ) 5 ಗ್ಧ (ಟಡ) ದ್ಧ (ಣ) 6 ಕಣ್ಬುಂ (ಜ) 7 ಷ್ಠಾ (ಚಡ) ಷ್ಠಾ (ಟಣ) 8 ಧ್ವ (ಜ) 9 ತೋಱಿ ಬಂದು ತಾಯಿತೆಂ (ಜ) 10 ವೋ (ಚಟ) ದೊಂ (ಡ) ವೊಂ (ಣ) 11 ಯುಂ (ಚಟಣ) 12 ದಿನಿಸುಂ (ಚಟ) ದರಸಂ (ಜಡ) 13 ತುಂ (ಚಡ)

ವ॥ ಎಂದು ದೇವಾದಿದೇವನಂ ಸ್ತುತಿಯಿಸಿ

ಆ ಜಿನನ ದಿವ್ಯಪಾದಪ
ಯೋಜಾಂತಿಕದಲ್ಲಿ ದೀಕ್ಷೆಗೊಂಡನಿಳೇಶಂ
ಬೀಜಂಗೊಳ್ವಂತಿರೆ ವಿ
ಭ್ರಾಜಿಸುವಾರ್ಹಂತ್ಯ ವಿಪುಳಫಳಮಂ ಪಡೆಯಲ್ ॥೫೮॥

ವ್ಯಾಲೋಲರಾಜ್ಯ ವಿಭವ ವಿ
ಶಾಲ ವಿಭೂಷಣ. ಕಳಾಪಮಂ ಕಳೆದೊಲವಿಂ
ದೋಲಾಡುತಿರ್ದನುಪಶಮ
ಲೀಲಾರಸದೊಳ್ ಸರಸ್ವತೀ ಶೃಂಗಾರಂ ॥೫೯॥

ವ॥ ಆ ತಪೋಧನರ ತಪೋರಾಜ್ಯಯೋಗಕ್ಕೆ ಯೋಗಿಯಾಗಿ
ನಲಿದು ನವಿಲ್ [1]ಜಗ[1]ರ್ತುದು ಪಿಕಧ್ವನಿ ಪಣ್ತುದು ಮಿಂಚು ಕಣ್ಗಳೊಳ್
ಮೊಳೆತುದು ಶಕ್ರಚಾಪಲತೆ ಪೊಣ್ಮಿ ಪಸುರ್ತುದು ಮುಗ್ಧ ಚಾ[2]ತಕಂ[2]
ಗಳ [3]ಸಿತ[3]ಚಂಚುವುಳ್ಳಲರ್ದುದಂಬರಮೆಂಬ ತಮಾಳಮೀಗಳೀ
ಗಳೆ ಮುಗಿಲಂ ತಳರ್ತುದೆಲೆ ತೀಡಿದುದಕ್ಕುಮೆ ಪಶ್ಚಿಮಾನಿಳಂ ॥೬೦॥

ವ॥ ಆ ಘನಾಗಮದೊಳ್

ಸಿಡಿಲ ಸರಿ ಮೊಬಗುಗಳ [4]ಮ[4]ಟಿ
ಕುಡುಮಿಂಚಿನ ಸೋ[5]ನೆ[5]ಯಾಲಿಗಳ ಬೆ[6]ಳ್ಸ[6]ರಿಗಳ್
ಬಿಡದ [7]ರಜನಿ[7]ಗಳ ಮಟಿಯೊಳ್
ಮಿಡುಕದೆ ಮರಮೊದಲೊಳಿರ್ದನಿರ್ಪವೊಲಚಳಂ ॥೬೧॥

ಶಾಳಿಯ ಕಂಪನೊಟ್ಟೆ ನಳಿನಂಗಳನಳ್ಕಿಸಿ ಬೆಳ್ಮುಗಿಲ್ಗಳಂ
ತೂಳಮನೆತ್ತುವಂ[8]ತೆ[8]ಳೆದು ಸೋಗೆಯ ಹೀಲಿಯ ಬೇರನೆತ್ತಿ ಹಂ
ಸಾಳಿಯ ತು[9]ಪ್ಪುಟಿಂ[9] ತುಟಿದು ಪಶ್ಚಿಮದಿಂ ಬಡವಾಗಿ ಬರ್ಪ [10]ಮೇ
ಘಾ[10]ಳಿಯನೊತ್ತಿ ತೀಡಿದುದು ಮೂಡಣ ಗಾಳಿ ಹಿಮಪ್ರ[[11]ವೇ[11]]ಶದೊಳ್ ॥೬೨॥

ವ॥ ಆ ಹಿಮಾ[12]ಗಮ[12]ದೊಳ್

---

1 ಬಿಗು (ಜ) ಜಗು (ಡ) 2 ದಗಂ (ಜ) 3 ಚಳ (ಜ) 4 ಮೊ (ಚಟಡಣ) 5 ಲೆ (ಜ)
6 ಳ್ಸಿ (ಜ) 7 ಜನಿ (ಚಟಣ) ಜ್ಞಾಗಿ (ಡ) 8 ತೆ (ಜ) 9 ಪ್ಪದಂ (ಡ) 10 ವೆಯ್ಯಾ (ಜ)
ಘೋಗಾ (ಚಟ) 11 ದೇ (ಚಜಟಡಣ) 12 ಗ (ಜ)

ರಂಗತ್ತರಂಗ ಸೀಕರ
ಮಂ ಗಾಳಿಗಳೊಟ್ಟೆ ಕರಗಿ ಸುರಿದಂತಿರೆ ಬೆ
ಳ್ದಿಂಗಳ[1]ಮೆಲ್ಕೆ ಕಿಲ್[1] ಬೆ
ಳ್ಗಂಗೆಡೆವಿರೆ ಯೋಗಿ ಬೆಳ್ಪವಾಸಮನಿರ್ದಂ ||೬೩||

ಪರಿ[2]ಮರಿ[2]ಯಾಡಿ ದಾವದುರಿಗಾಳಿಗ[3]ಳೊಳ್ಪಿಸಿಲೊಳ್ಕ[3]ನಲ್ವ ಕ
[4]ಲ್ಬು[4]ರಿಯುರಿಯುಯ್ಯಲಾಡಿ ಪುಡಿಯಾಟಮನಾಡಿ ಚರಾಚ[5]ರಂ[5]ಗಳಂ
ಕರಿಮುರಿಯಪ್ಪಿನಂ ಹುರಿವ ಹಂಚು[6]ಪೊಲಿ[6]ರ್ದೆಳೆಯೊಳ್ ಕೃತಾಂತನೆ
ಚ್ಚುರಿ[7]ಗ[7]ಣೆಯಂತೆ ಬಂದುದು ಲಯಾ[8]ನಿ[8]ಳ ಕಲ್ಪನಿದಾಘಜಾನಿಳಂ (?) ||೬೪||

ವ|| ಆ ಸಮುಗ್ರೋಷ್ಮಗ್ರೀಷ್ಮಾಗಮದೊಳ್

ಕೆಳರ್ದುರಿವ ಬಿಸಿಲ ಕೇಸುರಿ
ಗ[9]ಳ್[9] ಕಿಡಿಗಳುಮನುಗುಳ್ವ ಕಿಚ್ಚಿನ ಸರಿಯಂ
ತಳರ್ದು ತಳತಳಿಪ ತಪನೋ
ಪಳದೊಳ್ ಶಾಂತ್ಯಮೃತ ಜಳಧಿ ಕ[10]ಲ್ನಿ[10]ಲೆ ನಿಂದಂ ||೬೫||

ವ|| ಅಂತು ತನ್ನ ತಪಂ ತ್ರಿಕಾಲಮಂ ಗೆಲೆ ತನ್ನ ಬೋಧಂ ತ್ರಿಭುವನಮನೊಳಗು ಮಾಡೆ ತನ್ನ ದರ್ಶನಂ ತ್ರಿದರ್ಶ[11]ನಮ[11]ನಧಃಕರಿಸೆ ಸುಪ್ರತಿಷ್ಠ[12]ಪ್ರ[12]ತಿಪನನುಕ್ರಮ ದಿನೇಕಾದಶಾಂ[13]ಗಧರ[13]ನಾಗಿ ಸಮ್ಯಕ್ತ್ವಾದಿ ಷೋಡಶ ಭಾವನೆಗಳಂ ಭಾವಿಸಿ ಸದ್ಗುಣಂಗಳಿಂ ತೀರ್ಥಕರ ಪುಣ್ಯಮಂ ಕಟ್ಟಿಕೊಂಡು ಒಡನಹಮಿಂದ್ರತ್ವಮಂ ಕುಡೆಂದು ಜಿನೇಂದ್ರಂಗೆ ಪಾಟಿಂಬಡುವಂತೆ[14]ತಿಂ[14]ಗಳ್ ಸನ್ಯಸನಮಿರ್ದೊಡಲನೀಡಾಡಿ ಯುತ್ತರ[15]ವೈಜಯಂತಿ ವಿ[15]ಮಾನದೊಳಹಮಿಂದ್ರನಾಗಿ ತ್ರಯ[16]ಸ್ತ್ರಿಂ[16]ಶತ್ಸಾಗರೋಪಮಾಯುಷ್ಯನುಮೇಕರ[17]ತ್ನಿ[17]ಪ್ರಮಾಣನುಂ ಶುಕ್ಲಲೇಶ್ಯಾ ಪರಿಣಾಮನುಂ ಸಾ[18]ರ್ಧ[18] ಷೋಡಶಮಾಸ ನಿಶ್ವಾಸನುಂ ತ್ರಯ[19]ಸ್ತ್ರಿಂ[19]ಶದ್ವರ್ಷಸಹಸ್ರಾಂತೋಪ ಭುಕ್ತಾಮೃತಾಹಾರನುಂ ನಿಃಪ್ರವೀಚಾರ ಸುಖನುಂ ಸಪ್ರವೀಚಾರಾಂತಗುಣನುಂ ಲೋಕ[20]ನಾಡಿ[20]ಕಾಭ್ಯಂತರ ಗತಾವಧಿಜ್ಞಾನನುಂ ಸ್ವಾವಧಿಕ್ಷೇತ್ರಬಳ ಪ್ರಕಾ[21]ಶ[21] ಶರೀರ ವಿ[22]ಕ್ರಿ[22]ಯಾದಿ ಗುಣಾಲಂಕೃತನುಮಾಗಿ ದಿವ್ಯಸುಖಮನಾಸ್ವಾದಿಸುತ್ತುಮಿರ್ದಂ

---

1 ಪೊಲೆಯಲ್ಕಲು (ಚಟಡಣ) 2 ಮಾಜ್ರಿ (ಜ) 3 ದೊಳ್ಪಿಸಿಲೊಳ್ಕ (ಜ) ಳಲ್ಲಿಕ (ಟ) ೞೊಲ್ಲಳ್ಕ (ಡ) 4 ಬ್ಬ (ಚ) ಬ್ಬಬ (ಟ) 5 ಳ (ಚಟಡಣ) 6 ವಿವಿ (ಚಟಡಣ) 7 ಗೆ (ಜ) 8 ವಿ (ಜ) 9 ಳುಮಂ (ಜ) ಳ್ಳಂ (ಣ) 10 ಲ್ಲ (ಜ) 11 ನಂಗಳ (ಜ) 12 ಪ್ರ (ಜ) 13 ಗ (ಜ) 14 ಮೂಜ್ಱು ತಿಂ (ಜ) 15 ಜಯಂತಿ ಮಿ (ಜ) 16 ತ್ರಿಂ (ಜ) 17 ತ್ನ (ಜ) 18 ದ್ರ್ಧ (ಕ) ರ್ದ್ಧ (ಜ) 19 ತ್ರಿಂ (ಜ) 20 ನಾ (ಜ) 21 ರೆ (ಚಜಡ) 22 ಕ್ರೈ (ಚಟಣ) ಕ್ರ (ಡ)

ನೞುಸುಯ್ಗಂಪಿನಲಂಪಿಂ
ದೞುದಿಂಗಳ್ಗೊಮ್ಮೆ ಪೀರ್ದು ತಣಿದಿರ್ಪಳಿವೋಲ್
ಮಿಱುಗೆ ನಿಜನೀಲಭೂಷಣ
ಮಱುದಿಂಗಳ್ಗೊಮ್ಮೆ ಸುಯ್ವನೆಸೆವಹಮಿಂದ್ರಂ ||೬೬||

ಅಹಮಹಮಿಕೆಯೆಂತತಿಶಯ
ಸಹಜಾಳಂಕರಣಗಳಮಹಂ ಪೂರ್ವಿಕೆಯಿಂ
ಬಹು ಭೋಗಮುಹಂಕೃತಿಯಿಂ
ದಹಮಿಂದ್ರಂಗಪ್ಪು[1]ದ[1]ಪ್ರವೀಚಾರಸುಖಂ (?) ||೬೭||

ಮೇದಿನಿಯೊಳ್ ವಿನೂತ [2]ವನ[2]ವರ್ಣನಮಾಗೆ ವಸಂತವರ್ಣನಂ
ಸ್ವಾದಮೆನಿಕ್ಕುಮಲ್ತೆ ನೆಗೞ್ದೀ ಕೃತಿಯೊಳ್ ಕೃತಿನಾಥ ನೇಮಿನಾ
[3]ಥೋ[3]ದಯ ವಸ್ತುವರ್ಣನಮೆ ಮುಖ್ಯತೆವೆತ್ತೊಡಮಾದಿಯೊಳ್ ಪೊದ
ಱ್ದಾದರಣೀಯಮಾದುದೆನಗಾತನ ವಿ[4]ಶ್ರು[4]ತ ವಂಶವರ್ಣನಂ (?) ||೬೮||

ವ|| ಅದೆಂತೆಂದೊಡೆ ಫುಲ್ಲಶರನ ಶಸ್ತ್ರಶಾಲೆಯಂತಿರ್ಪ ಪುಷ್ಪವಾಟಿಗಳಿಂ ಮನೋಜರಾಜನ ರಾಣಿವಾಸದಂತಿರ್ಪೆಳಲತೆಯ ಬಳ್ಳಿಗಾವಣಂಗಳಿಂ ಅಂಗಜನ ರಾಜಗೃಹಂಗ[5]ಳಂ[5]ತಿರ್ಪ ನಾಗವಲ್ಲಿಗಳಿಂ ಶೃಂಗಾರ ಸೂ[6]ತಿ[6]ಯ ಶೃಂಗಾರಭವನದಂತಿರ್ಪ ಮಲ್ಲಿಕಾಭವನಂಗಳಿಂ ಲಕ್ಷ್ಮೀಸುತನ [7]ಸೂತಿಕಾಗಾರ[7]ದಂತಿರ್ಪ [8]ಕದಳಿಯ ಸುತ್ತಿನಿಂ ನನೆಗಣೆಯನ ಗರುಡಿಯಂತಿರ್ಪ ಪೂವಿನ ಪುಡಿಯ ಪುಟ[9]ಲ್ಗಳಿನಲರ್ಗೋಲನೋಲಗ ಸಾಲೆಯಂತಿರ್ಪ ಜಾ[8]ದಿಯ ಪಂದರಿಂ ಕಂತುವಿನ [9]ಕ್ರೀಡಕುಟ[9]ಯಂತಿರ್ಪ ಕ್ರೀಡಾರಸಂಗಳಿಂ ರತಿಯ ರತಿಗೃ[10]ಹಂಗಳಂ[10]ತಿರ್ಪ ಬಾಳ್ಗೊಂಪಂಗಳಿಂ ರತಿಯ ನೃತ್ಯ ಮಂಡಪ[11]ಗಳಂ[11]ತಿರ್ಪ ನವಮಾಳಿಕಾ ಮಂಡಪಂಗಳಿಂ ಕಂತುಕಾಂತೆಯ ಕಳಕೂಜನದ ಗುಣಾಣಿಯಂತಿರ್ಪ ಸಾರಸ[12]ರಸಿತ[12]ಕಮಳಕುವಳಯ ಷಂಡಂಗಳಿಂ ಅನಂಗನ ವನಿತೆಯ ವಿನೋದದಳಿಯ ಗಿಳಿಯ ಕೋಗಿಲೆಯ ಕಾಪಿನಾಕೆಗಳಂತಿರ್ಪ ಚೂತಲತೆಗಳಿಂ ರತಿಪತಿಯ ಪಡಿಯಱತಿಯರಂತೆ [13]ತಳಿತ ತುಱುಗಲೊಳ್[13]ಮೆಯ್ಗರೆದು ಕರೆವ ಕೋಗಿಲೆಯ ದನಿಯಿಂ ಪು[14]ಗಿಲ್ಪುಗಿ[14]ಲೆಂಬ ಸಹಕಾರವಲ್ಲರಿಗಳಿಂ ಮನ್ಮಥನ ಮೆಯ್ಗಾಪಿನಾಕೆಗಳಂತೆ ಸುಕುಮಾರ ಶಾಖಾಭುಜಾಗ್ರ ಭೀಷಣ ಭುಜಂಗ[15]ಮ ಜಂಗಮ[15]ಲತೆಗಳಂ

1 ದೆ (ಜ) 2 ನದೆ (ಚಟಡ) ನದ (ಣ) 3 ವೋ (ಜ) 4 ಶ್ರ (ಚಜಟಡ) 5 ಳಿನಂ (ಗಚಟಡ) 6 ಕ್ತ(ಣ) 7 ಸುತಕಾರ (ಚಜಟಡ) 8 ಜಾ (ಜ) 9 ಖೇಡನುಡಿ (ಚ) ಖೇಡಾಕುಳಿ (ಟಡಣ) 10 ಹದಂ (ಜ) 11 ದಂ (ಚಟಡಣ) 12 ಸರಸಿತ (ಚಟ) ರಸಿಕ (ಡಣ) 13 ತೆರಳಿ ತರುಗಳೊಳ್ (ಚಟಡ) ಕೆರಳಿ ತರುಗಳೊಳ್ (ಣ) 14 ಗಲ್ಪುಗ (ಜ) 15 ಮಾ (ಜಡ)

ತಳೆದ ಚಂದನಲತೆಗಳಿಂ ದರ್ಪಕನ ದೀಪೋತ್ಸವದ ದೀಪಮಾಲೆಗಳಂತೆ ಪೂತು ಸೊಗಯಿಸುವ ಸಂಪಿಗೆಗಳಿಂ ಮನಸಿಜಂಗೆ ಮೀನಕೇತುವನೆತ್ತುವಂತೆ ನೀರ ಮೇಗೆ ನೆಗೆದ ನಿಡಿಯ ನಾಳದ ನಳಿ[1]ನದರಲೊಳ್[1] ಪೊಳೆದು ಪಾಜ಼ು ಬೀಟ್ವ ಬಾಳೆಮೀನಿಂ ತೊಳಪ ತಿಳಿಗೊಳಂಗಳಿಂ ನೀರ ಮೇಲೆ ಪರಿವ ರತಿವಲ್ಲಭನ ವಾಜಿಕುಳದಂತೆ ತೊಡಗಿ ಸುವ ಜಕ್ಕವಕ್ಕಿಗಳಿಂ ಚಿತ್ತಭವಚಕ್ರವರ್ತಿಯ ನಡುಪಟ್ಟ ಪಟ್ಟದಾನೆಯಂತೆ ಮಗ ಮಗಿಸುವ ಮದಮದದ [2]ಸೋ[2]ನೆಯಂ ಬಿಡುವ ಬಾಳರಸಾಳಂಗಳಿಂ ಕಾಮ ದೇವನ ದೀವದ ಪಿಂಡಿನಂತಿರ್ಪ ಕಳಹಂಸೆಗಳಿಂ ಸ್ಮರನ [3]ಸಿರಿ[3]ಗೆ ಸೀಗುರಿಯ [4]ನಿಕ್ಕು[4]ವಂತಿರ್ಪ ಸೋಗೆನವಿಲ್ಗಳಿಂ ಅವಳ್ಗೆ ಪೊನ್ನ ಬಟ್ಟಲೊಳ್ಕತ್ತುರಿಯುರುಳಿಯಂ ಪಿಡಿದಿರ್ಪಂತೆ ತುಂಬಿ ಪಾಯ್ವ ಕುಸುಮಂಗಳಿನೆಸೆವ ಕೊಸಗುಗಳಿನಾಕೆಗೆ ಕುಂಕುಮ ದುರುಳಿಯನವಟೈಸುವ ಘಟ್ಟಿವಟ್ತಿಯರಂತೆ ಪಣ್ತ ನಾರಂಗವಲ್ಲಿಗಳಿನುದ್ಯಾನದೇಶ ಮನಾಳಲೆಂದು ಕಾಮನ ಕಯ್ಯೊಳ್ ತೊಳ್[5]ಗಿ[5]ದ ಪತ್ತಳೆಯಂ ಕೊಂಡು [6]ಜಾದಂ ತೊ[6]ಡೆ ದಂತೆ ತಳಿರ್ತ[7]ಸು[7]ಕೆಗಳಿಂ ಪಂಚಶರನ ಪಾ[8]ಯ್ದಾ[8]ಳನಂತೆ ಚಂಚರೀಕದ ಕುಂಜಮ ನೆತ್ತಿ ಕಿಂಜಲ್ಕದ ಕೆಂದೂಳಿಯೊಳ್ಪೊರೆದು ಮಕರಂದ ಬಿಂದುವೆಂಬ ಬೆಮರಂಪೇಱಿ [9]ಪರಿತರ್ಪ[9] ತಣ್ಣೆಲರಿಂ ಶಂಬರ ಹರನ [10]ಬಿರುದಂ ಪಾಡುವಂತೆ ಮೊರೆವ ಮಧುಕರ ವೃಂದಂಗಳಿಂ ಮಕರಧ್ವಜನ ಸಂಧಿವಿಗ್ರಹಿಗಳಂತಾತನಂಕಮಾಲೆಯನೋದುವರಗಿಳಿ ಗಳಿಂ ಕುಸುಮಶರ ಸಿರಿಕರಣದಂತಿರ*ಸ್ಥಿತಿಕರಣ ತರುಪತ್ರಂಗಳನನಿಳ*ಚಳಿತದೀರ್ಘ ದಳಾಂಗುಳಿ ಕಳಿತ[10] (?) ಕಂಗಳಿಂ ಬರೆವ ಕೇದಗೆಗಳಿಂ ವಸಂತಸಖನ ನಿಸೃಷ್ಟಾರ್ಥ ದೂತಿ [11]ಯಂತಿರ್ಪ ವಸಂತ ದೂತಿಯಿಂ ಮದನ ಮಹಾರಾಜನ ಸಮನೆಯಂತಿರ್ಪರಮನೆ [11]ಯಿಂ ಮನಂಗೊಳಿಸಿ ಕಂದರ್ಪನಾದೇಶಂಗಳಂತಿರ್ಪ ದೇಶಂಗಳಿಂ ಭರಿತಮಾದ ಭರತಕ್ಷೇತ್ರದೊಳ್

ಉಂಟು ಕೃ[12]ತಾ[12]ರ್ಥಮೆಂಬ ವಿಷಯಂ [13]ವಿಷಯ ದ್ವಿಷ[13]ರಪ್ಪಿನಂತೆ ನಿ
ಷ್ಕಂಟಕಮಲ್ಲಿ ಶೌರ್ಯಪುರಮುಂಟು ಸುರೇಂದ್ರಪುರೋಪಮಂ ಪ್ರಭಾ
ಲುಂಟಿತ ಶೂರ ಸಾರ ಗುಣನಾಳ್ವನದಂ ಕಲಿ ಶೂರಸೇನನಾಂ
ತೆಂಟುಮಿಭಂಗಳಾಂತ ಧರೆಯಂ ದೃಢದಕ್ಷಿಣ ಬಾಹುದಂಡದಿಂ ॥೬೯॥

---

1 ನಾದರದೊಳ ಪೊಳೆ (ಡ) 2 ಸೊನೆ ಸೊ (ಚಟಡಣ) 3 ರಸಿ (ಣ) 4 ನೆಕ್ಕು (ಜ) 5 ಗಿಳ (ಕಗಟ) 6 ಜಾದಂ ಕು (ಚಟಣ) 7 ಕೋ (ಚಟಡಣ) 8 ಯಾ (ಜ) ಯ್ದು (ಡ) 9 ಪಿರಿದಪ್ಪ(ಜ) 10 ಗುಳಿಗಳಿಕ ಕಂಟ(ಚಟಡಣ) 11 ಯಂತಿರ್ಪಾರಮೆ (ಜ) 12 ಷಾ (ಜ) 13 ವಿಷಯು (ಚಟಣ) ವಿಷವಿಷಯ (ಡ) *ಸಂತಿ ಕರಣ ತರುಪತ್ರಂಗಳ ನಿಳ (ಚ[illegible]ಣ)

ಸುರನಿಭ ಶೂರಸೇನನ ಸುತಂ ಸ್ಮರಸನ್ನಿಭ ಶೂರವೀರನಾ
ನರಪತಿಯಂ ಪತಿಂವರೆಗೆ ಧಾರಿಣಿಗಂಧಕವೃಷ್ಣಿಯೆಂಬನುಂ
ನರಪತಿವೃಷ್ಣಿಯೆಂಬನು[1]ಮುದಾತ್ತ[1]ರಸಾಢ್ಯ ಫಲಪ್ರದ[2]ತ್ವ[2]ಮುಂ
ಭರ ಸಹಸತ್ವಮುಂ ನೆಗಟ್ದಿ ಧಾರಿಣಿಗಾದವೊಲಾ ಧರಾತ್ಮಜರ್ ॥೨೦॥

ಆ ವಿಜಿಗೀಷುವಿಂಗೆ ವಧುವಂಧಕವೃಷ್ಣಿಗೆ ವಿಷ್ಣುವಿಂಗೆ ಲ
ಕ್ಷ್ಮೀವಧುವೋಲ್ ಸುಭದ್ರೆ [3]ಶುಭ[3]ಲಕ್ಷಣೆಯಾದಳುಮಾವರಂಗುಮಾ
ದೇವಿವೊಲಾ ನರಾಧಿಪತಿ ವೃಷ್ಣಿಗೆ ಪದ್ಮದಳಾಯತಾಕ್ಷಿ ಪ
ದ್ಮಾವತಿಯಾದಳಂತು ನೆಗಟ್ದಂಧಕವೃಷ್ಣಿಗಮಾ ಸುಭದ್ರೆಗಂ ॥೨೧॥

ನಾಭಿನಿಭಂ ಸಮುದ್ರವಿಜಯಂ ಮೊದಲಾಗೆ ಪದಿಂಬರಾಧರಾ
ಕ್ಷೋಭನುಮು[4]ಕ್ತನುಂ[4] ಸ್ತಿಮಿತ ಸಾಗರನುಂ ಹಿಮವಂತನುಂ ಧೃತೋ
ರ್ವೀಭರ[5]ರಾ[5]ಗಿ ಸಂದ ವಿಜಯಾಚಳಧಾರಣ ಪೂರಣರ್ಕಳುಂ
ಶ್ರೀಭವನಾಭಿ ನಂದನನುಮಾ ವಸುದೇವನುಮೆಂಬ ನಂದನರ್ ॥೨೨॥

ಕ್ರಮಮುಂ ವಿಕ್ರಮಮರ್ಥಮುಂ ವಿತರಣಂ ವಾಗ್ಮಿತ್ವಮುಂ ನನ್ನಿ ತೇ
ಜಮು[6]ವೈ[6]ಶ್ಯಂ ಪ್ರತಿಭಾಸಮುಂ ಸಕಲ ಶಾಸ್ತ್ರಾಭ್ಯಾಸಮಾ[7]ದಾ[7]ಭಿಜಾ
ತ್ಯಮುಮಾಚಾರಮಪಾರ ಸೌಂದರತೆಯುಂ ಸೌಭಾಗ್ಯಮೊಲ್ದಿರ್ದುದೆ ಮೆ
ಚ್ಚಿ ಮರುಳ್ಗೊಂಡವೊ[8]ಲಿರ್ಪು[8]ವೊಪ್ಪಿ ಶಿವದೇವೀಕಾಂತನೊಳ್ಸಂತತಂ ॥೨೩॥

ಅದ್ರಿಗಳಿರ್ಕಚೇತನೆಯೊಳೆಂದು ಧರಾಧರ ಕೂರ್ಮ ಶೇಷದಿ
ಗ್ಭದ್ರಗಜಂಗಳೈದೆ ದಶಭೂಭುಜರಾದರೆನಿಪ್ಪ ತತ್ಪ್ರತಾ
ಪದ್ರವಿಣರ್ಗೆ ನೇ[9]ರ್ಗಿ[9]ಱಿಯ[10]ರಾ[10]ಗಿ ನೆಗಟ್ತೆಗೆ ನೋಂತ ಕೊಂತಿಯುಂ
ಮಾದ್ರಿಯುಮದ್ರಿರಾಜ ಸುತೆಗಂ ಸತಿಗಂ ಸರಿವಂದರೇಟ್ಕಿಯೊಳ್ ॥೨೪॥

ದ್ಯುಮಣಿಪ್ರದ್ಯೋತದಿಂ ಪದ್ಮಿನಿಗೆ ನಗೆಯುಮಾನಂದಮುಂ ಲೀಲೆಯುಂ ಶ್ರೀ
ಯುಮನೂನಂ ಪುಟ್ಟುವಂತಾ ವರನರಪತಿ ವೃಷ್ಣೀಶ[11]ನಿಂ[11]ದುಗ್ರಸೇನೋ
ತ್ತಮನುಂ ಶ್ರೀದೇವಸೇನಾಖ್ಯನುಮೆಸೆವ ಮಹಾಸೇನ ಭೂಮೀಶನುಂ [12]ತ[12]
ತ್ಕ್ರಮದಿಂ ಗಾಂಧಾರಿಯುಂ ಪುಟ್ಟಿದರೆಸೆದಿರೆ ಪದ್ಮಾವತೀದೇವಿಗೊಳ್ಪಿಂ ॥೨೫॥

---

1 ಮುದಾಂತ (ಚಡ) ಮುದಾತ್ಮ (ಜ) ಮುದಾಂತ (ಟ) 2 ತ್ರ (ಚಟಡಣ) 3 ಗೆಸು (ಚಟಡ) 4 ಕ್ತ್ರಮ (ಜ) 5 ನಾ (ಚಟಡಣ) 6 ವೈ (ಚಟಡ) ನ್ಯೈ (ಜ) 7 ದ್ವಾ (ಜ) 8 ಲಪ್ಪಿ (ಚಣ) 9 ಱಿ (ಚಟಡ) 10 ನಾ (ಚಟಡಣ) 11 ಗಿಂ (ಚಟಣ) ನೆಂ (ಡ) 12 ಸ (ಚಟಡಣ)

ವಸುದೇವಂ ಪೊಱಗಾಗೆ ಮಿಕ್ಕಿನರಮಕ್ಕಳ್ಗೊಪ್ಪಿದರ್ಕಾಮುಕೇ
ಳಿ ಸುಖಾಸಕ್ತೆಯರಾಗಿ ಚಂದ್ರಕಳೆಯುಂ ಮಾ[1]ರಾಥ[1]ನುರ್ಲೇಖೆಯುಂ (?)
ಕುಸುಮಾಸ್ತ್ರಾವಳಿಯುಂ ಮನೋಜನ ವಸಂತ ಶ್ರೀಯುಮೋರಂದದಿಂ
ಮಿಸುಗಲ್ಮೀನ ಪತಾಕೆಯುಂ ಮದವತೀ ರೂಪಕ್ಕೆ ಪಕ್ಕಾದವೋಲ್ ||೭೬||

||ಪೃಥ್ವಿ|| ಸುಯುಕ್ತೆ ಶಿವದೇವಿಯುಂ [2]ನ[2]ವಧೃತೀಶ್ವರಾದೇವಿಯುಂ
ಸ್ವಯಂಪ್ರಭೆಯುಮು[3]ದ್ಭ[3]ವಾನ್ವಿತೆ ಸುನೀತೆಯುಂ [ಸೀತೆಯುಂ]
ಪ್ರಿಯಂವದೆಯುಮಾ ಪ್ರಭಾಪತಿಯುಮಂತೆ ಕಾಳಿಂದಿಯುಂ
ಕ್ರಿಯಾನಿಧಿಗಳಂತೆ ಸುಪ್ರಭೆಯುಮೆಂಬರಬ್ಜಾಕ್ಷಿಯರ್ ||೭೭||

ವ|| ಅಂತು ಶೂರಸೇನನನೆಡೆಗೊಂಡು ತನ್ನಿಂದಮೇ ಮೊಳೆವೋಗಿ ವೃಷ್ಣಿಯುಗಳದಿನೀರೆಲೆವೋಗಿ ಸಮುದ್ರ ವಿಜಯೋಗ್ರಸೇನಾದಿಗಳಿಂ ಮಡಲ್ತು ಹರಿವಂಶವಲ್ಲರಿಗೆ ಮೊತ್ತಮೊದಲಾದ ತನ್ನ ಮಹಿಮೆ ಮಹೀತಳಮುಹನೀಯಮಾಗೆ ಶೂರ ವೀರ ಮಹಾರಾಜಂ ರಾಜ್ಯಲತೆಗಡರ್ಪಾ[4]ಗಿರೆ[4] ಮತ್ತಮತ್ತಲ್

ಕುರುವಂಶ ಪ್ರಭುಶಕ್ತಿ[5]ಗಂ[5]ಸವಕೆ[6]ಗಂತಾ[6] ಪುಟ್ಟಿದಂ ಹಸ್ತಿನಾ
ಪುರದೊಳ್ ಸಂದ ಪರಾಶರಂ [7]ಸ[7]ರ ಶಿರಂ ಶೂಲಪ್ರತಾಪಂ ಪರಾ
ಶರನಿಂ ಸತ್ಯಪ[8]ರಾಖ್ಯ[8] ಸತ್ಯವತಿ[9]ಗಾ[9]ದಂ ಮತ್ಸ್ಯರಾಜಾನ್ವಯಾಂ
ಬುರುಹಶ್ರೀಗೆ ಸುತಂ ಜಿತವ್ಯಸನನಾ ವ್ಯಾಸಂ ಯಶೋವಲ್ಲಭಂ (?) ||೭೮||

ಸುತರಾದರಾ ಪರಾಶರ
ಸುತಂಗಮಾ ಸತಿ ಸುಭದ್ರೆಗಂ ಭದ್ರಮು[10]ನಂ[10]
ಧೃತರಾಷ್ಟ್ರಂ ಧೃತರಾಷ್ಟ್ರಂ
ವಿತತಯಶಃ ಪಾಂಡು ಪಾಂಡು ವಿದುರಂ ವಿದುರಂ ||೭೯||

ಅಂತು ಪೊಗೞ್ತೆವೆತ್ತವರೊಳಗ್ಗದ ಪಾಂಡುವಿನಂತರಂಗಮಂ
ಕೊಂತಿಯ ರೂಪು ವರ್ಣಸದ ಮಾತು ಜಗದ್ಗದಿತಂ ಬಱಿಕ್ಕಮಾ
ಕಂತುವ ಪುಷ್ಪಬಾಣನಿಕರಂ ಸುಖಲಬ್ಧಪಥಂ ಬಱಿಕ್ಕಮಾ
ಕಾಂತೆಯ ರೂಪಕಂ ಪೊಳೆದು ಪೊಕ್ಕುದು ಕೆಂಡದ ಬೊಂಬೆಯೆಂಬಿನಂ ||೮೦||

---

1 ರೋದ್ಧ (ಣ) 2 ನು (ಜಡ) 3 ತ್ಪ (ಜ) 4 ಗೆ (ಣ) 5 ಸಂ (ಣ) 6 ತಾಂ (ಚಟಡಣ)
7 ಪ (ಜ) 8 ತಾಕೆ (ಜ) 9 ಗೋ (ಜ) 10 ನ (ಚಜಟಡ)

ಕೆಂಡದ ನೀಳ್ದ ಕೇಸುರಿಯ ಬಣ್ಣದಶೋಕೆಯ ಪುಷ್ಪಪಲ್ಲವಂ
ಪಾಂಡುವಿನಂಗಮಂ ಸುಡುಗೆ ಪಾಸಿದ ಮಲ್ಲಿಗೆಯುಂ ಮೃಣಾಳಮುಂ
ಕೊಂಡುವು ಕಿಚ್ಚಿನಿಂದಣಕವಲ್ಲದೆ ಮೂಡಿದುದೆರ್ದ ಬೂದಿವೋಲ್
ಪಾಂಡುಗೆ ಕಾಮಪಾಂಡುರತೆ ಸಾ[1]ರ್ಥ[1]ಕ ನಾಮಮನುಂಟು ಮಾಳ್ಪವೋಲ್ ||೮೧||

ಸುಡದೆ ಕನಲ್ವ ಕಿಚ್ಚಿನೊಡನಾಡಿದ ಕೆಂಬೆಲರಾತಪಂಗಳಂ
ಕುಡಿವ ಸರೋರುಹಂ ಸುಡವೆ ನುಂಗುವ ಪಾವಿನ ಪಲ್ಲ ನಂಜು ನಿ
ಚ್ಚಡ[2]ದ[2]ಮೃತಾಂಶು ಮಂಡಳಮದೇಂ ಸುಡದೇ ಹಿಮವುಂಡು ಬಾಳ್ವ ತ
ಣ್ಮಡುವಿನ ಪೂವೆ ಸುಟ್ಟಪುದು ಮಾಯ್ದ ವಿಯೋಗಿಯೊಳೆಂತು ಬರ್ದಪರ್ ||೮೨||

ಪರಿಕಿಸೆ ಪಾಂಚ[3]ಭೌ[3]ತಿಕಮಿದೆಂಬುದಸಂಗತಮೇಕ [4]ಭೌತಿ[4]ಕಂ
ವಿರಹಿ ಜನಾಳಿಗೀ ಭುವನಮೆಂತೆನೆ ಸೂಸುವ ಶೀತಳಂ [5]ಜ[5]ಳಂ
ಸುರಭಿ ಸಮೀರಣಂ ಸ್ಮಿತವನೋಲ್ಲಸಿತಂ ವಸುಧಾತಳಂ ಸುಧಾ
ಕರ ಕರಪಾತ ಪಾಂಡುನಭಮಾದುದು ಪಾಂಡುಗೆ ಪಾವಕೋಪಮಂ ||೮೩||

ಶರಶಲ್ಯಮಿನಿತು ಸಿಲ್ಕಿಯು
[6]ಮ[6]ರಿದಸುವಂ ಪಿಡಿಯಲೆರ್ದೆಯಲ್ಲದೆ ನಡೆ ವಿ
ಸ್ಮರಶರತತಿ ಕಿಟಿಲರಿಯವು
ವಿರಹಿಯ [7]ನೋ[7]ವಿಂಗೆ ಸಾಯಲಿಲ್ಲದಱಿಂದಂ ||೮೪||

ವ|| ಅಂತು ಕಂತುರಾಜನ ಕೊಂತದಂತೆ ಕೊಂತಿಯ ರೂಪುಮೆರ್ದೆಯಂ [8]ನಡೆ ನಾ[8]ಡೆಯುಂ ನೊಂದು ಮದನವಾಹದಿಂ ದೇಹಂ ಕೊರ[9]ಗೆ[9] ಮಲ್ಕಲ ಮಱುಗಿ ಮನಮಂ [10]ನಿಲೆ[10]ಪಿಡಿಯಲಾಱದೆ ಪಾಂಡುರಾಜಂ ಪುಂಡರೀಕದಂತೆ ವನಮೆ ಭವನ ಮಾಗಿರ್ಪುದುಮೊಂದು ದಿವಸಮಾ ವಸಂತವಾಸಮೆಂಬ [11]ಭವ[11]ನದ ಮನೋಹರ[12]ತೆ[12] ಮನಮೆಳದುವರಿಯೆ ಮನೋಹರಿಯೆಂಬ ಮನಃಪ್ರಿಯೆವೆರಸು ವಜ್ರಮಾಳಿಯೆಂಬ ವಿದ್ಯಾಧರಂ ಬಂದೊಂದು ಬಂಧುರಮಪ್ಪ ಮಾಧವೀಮಂಡಪದೊಳ್ ಮನೋಭವ ಸುಖಮನನುಭವಿಸಿ ತನ್ನ ಬೆರಲುಂಗುರದ ಕೆಂಬರ[13]ಲುಗೆ ಕಣ್ಪೊತ್ತು[13] ದಾಡಿಂಬದ ಬಿ[14]ತ್ತು[14]ಗೆತ್ತು ಸೋವುವ ಶುಕಶಿಶುಗೆ [15]ಮಣಿ[15]ಮುದ್ರಿಕೆಯಂ ಕಳೆದು ನೀಡಿ ನೀಡಿ

---

1 ರ್ದ (ಜ) 2 ದ (ಜ) 3 ಭೂ (ಚಟಡಣ) 4 ಬೋದಿ (ಚಟಡ) ಭೂತಿ (ಜ) 5 ಗ (ಜ) 6 ಮು (ಜ) 7 ನೊಲ (ಡ) 8 ನಾ (ಚಟಡಣ) 9 ಗಿ (ಜ) 10 ನಿಡಲ (ಚಟಡಣ) 11 ಮ (ಜ) 12 ಕೆ (ಜ) 13 ಲ್ಗೆ ಕಣ್ಬಾತು (ಚಜ) ಲುಗೆ ಕಾಣ್ಬಾತು (ಡ) 14 ತ್ತೈ (ಜ) 15 ಮಣಿಮಯ (ಜ)

ಮೆಱವಾಡಿ ಮಱಿಕಿದೀಡಾಡಿ ಪೋಪುದುಮಾ [1]ಪಥ[1]ದೊಳ್ ಪಾಂಡುರಾಜಂ ಬಂದು ಮನೋ[2]ಜ[2]ಬಾಣಭಿನ್ನಮಪ್ಪ ಬಿರಯಿಯೆರ್ದೆಯಿನುದಿರ್ದ ವಿರಹಾಗ್ನಿಯಂತಿರ್ದುದಂ ಗುರಮಂ ಕಂಡು ನೀಡುಂ ಭಾವಿಸಿ ನೋಡುತ್ತುಮಿರೆ

ಆ ವಜ್ರಮಾಳಿ [3]ಮಣಿ[3]ಮು
ದ್ರಾವಿಚಯನಚಳಿತ ಸಯನನಾಕಾರ ಕಳಾ
ಕೋವಿದನಾತನ ಭಾ[4]ಗ್ಯದ
ದೇವತೆ[4] ಬರ್ಪಂತೆ ಬಂದನತಿ ಸಂಭ್ರಮದಿಂ ||೮೫||

ವ|| ಬರೆ ಕಂಡರಸಂ ದರ್ಶನೇಂಗಿತ[5]ದಿನೀತ[5]ನುಂಗುರಮೆಂದಱಿದು ಕುಡುವುದುಮಾ ವಿವೇಕಕ್ಕೆ ಮೆಚ್ಚಿ ವಿಯಚ್ಚರನಿದು ಕಾಮರೂಪ ಸಾಧನಮೆಂಬುದು ನೀನುಂ ದುರ್ಲಭದಯಿತಾನುರಾಗರಾಶಿಯಾದ ಕೆಱದಿಂ ತೋಱಿದಪ್ಪೆ[6]ಯಿ[6] ಮದೀಯಮುದ್ರಿಕೆ ನಿನ್ನ ಕಯ್ಯೊಳೊಂದೆರಡು ದಿವಸಮಿರ್ದು ಸುರತಸಾರಥಿಯಕ್ಕೆಂದು ಕೊಟ್ಟು ಪೋದನಿತ್ತ ಪಾಂಡುರಾಜ[7]ನುಮಾ[7] ಪೊಟ್ಟೆ ಪೊಟ್ಟಾಗಿ ಕೊಂತಿಯಲ್ಲಿಗೆ ಕೊಟಂಬಡೆವಾಣತಿಗೆಂದು ಮದನಮುದ್ರಿಕೆಯಂ ಕೊಂಡು ಪೋಪಂತೆ ಮಣಿಮುದ್ರಿಕೆಯನಿಟ್ಟದೃಶ್ಯರೂಪನಾಗಿ ಹಸ್ತಿನಾಪುರ[8]ಕ್ಕೆ[8] ಪೋಗಿ ಕನ್ಯಾವ್ರತಭಂಗಭೀತಿ[9]ಯಿಂ ಗಂ[9]ಡುನೊಣಮಡ್ಡಂ ಪಾಱದಂತಾಗಿ ಸುತ್ತಲುಂ ಕಟ್ಟಿದ ಕಟ್ಟಾನೆಗಳಿಂ ಪ್ರತ್ಯಂತ ಪರ್ವತಂಗಳ ಬಳಸಿನಿಂ ಬಗೆಗೊಳಿಸುವ ಕನಕನಗದಂತಿರಭ್ರಂಕ[10]ಷ[10]ಮಾದ ಕೆಂಬೊನ್ನ ಕನ್ನೆಮಾಡದೇಱನೆಯ ನೆಲೆಯೊಳ್ ಸಮಾನವಯೋ ವಿಳಾಸವಿಭ್ರಮ ವಿಭವೆಯರಪ್ಪ ವಿಳಾಸಿನಿಯರ್ವೆರಸು ಕೆಮ್ಮುಗಿಲ ಪೊರೆಯೊಳ್ ಪೊಳೆವೆಳಮಿಂಚಿನ ಗೊಂಚಲಂತೆ ತಳತ್ತಳಿಸಿ ಕೇಳೀ ಕಲಹದಿಂ ಮುಳಿದ ಕಾಮನ ಕಾಲ್ವಿಡಿವ ರತಿಯಂತೆ ಕಾಮದೇವನಂ ಪೂಜಿಸಿ ಪೊಡೆವಡುತ್ತುಮಿರ್ದ ಕೊಂತಿಯಂ ಕಂಡು ಕೂಡಲ್ ಬಯಸಿ ತನ್ನೊಳಿಂತೆಂದಂ

ಗರಗರನಾಗಿ ಭೋಗಿಪೊಡೆ ಮೇಳಿಸಿ ಮುಗ್ಧೆಯನಾಗುಮಾಟ್ಟುದೋ
ಗರದಧರಾಮೃತಂ ತುಳುಕಲಾಗದು ಬೀಸರವಾಗದಪ್ಪು ಕ
ಣ್ಬರಿಯಣಮಾಗ[11]ದಣ್ಣ[11]ೞಿಯ[12]ದೀ[12] ಪ[13]ಕೆ[13]ಯಾಗದಲಂಪು ಮಿಾಸಲಂ
ತಿರೆ ಮನಮಿರ್ಪುದೇಱ[14]ಸಿದ[14] ಲಜ್ಜೆಯ ಲಚ್ಚಣವಂಗಜಾಜ್ಞೆಯಾ ||೮೬||

---

1 ಪುರ (ಚಟಡಣ) 2 ಜವುಳ್ತ (ಜ) 3 ಯುಂ (ಚಟಡಣ) 4 ಗದ ದೇವಂ (ಚಟಡಣ) 5 ದಿಂದೀತ (ಚಡಣ) ದಿತ್ತ (ಟ) 6 ನೀ (ಜ) ಯಾ (ಣ) 7 ನಾ (ಜ) 8 ದಿಂ (ಜ) 9 ಯಂ ಗಂ (ಚ) ಯ ಕಂ (ಣ) 10 ಷ (ಚಟಡ) 11 ಪಣ್ಣ (ಟಣ) ದಂಗೊ (ಡ) 12 ದಿಂ (ಜ) 13 ಗೆ (ಚಟಡಣ) 14 ಸದು (ಚಟಡಣ)

ಸೈರಣೆಗುಂದದತ್ತ ಮೊಗಮಾದೊಡೆ ಬೆಚ್ಚಿ ಮನಕ್ಕೆ ಬೇಸಱಿಂ
ತಾರದೆ ಮಾಱು ಮೈದೆಗೆಯೆ ಮಾಣದೆ ಪೋದೊಡೆ ಪೋಗದಿಚ್ಛೆಯಿಂ
ಗೋರಿಗೆ ತಂದು ಮುಗ್ಧೆಯ ಮನೋಮೃಗಮಂ ನವಸಾಂಪ್ರಯೋಗ ಶೃಂ
ಗಾರಮನಾಳ್ದವಂ ಮದನರಾಜನ ರಾಜ್ಯಮನಾಳ್ದನಲ್ಲನೇ ||೮೭||

ವ|| ಅಂತುಮಲ್ಲದೆ

ವೆಣ್ಣೆಱಗ[1]ದೆ[1] ಕೂರ್ತೆಱಗಿದ
ಕಣ್ಣಱುದುರದಂತೆ ಬಿಡುಗೊಡಂಬಡುಗೆ ನೊಣಂ
ಪುಣ್ಣಂ ಸಾರ್ವವೊಲೊಲ್ಲ[2]ದ[2]
ಪೆಣ್ಣಂ ಸಾರ್ದಹಹ ! ಸಾಸಿಕೊಳ್ವದ ಕೇಳಂ (?) ||೮೮||

ವ|| ಎಂದು ನಿಜಸ್ವರೂಪಮನಾ ತರು[3]ಣಿಗೆ[3] ತೋಱಲೆಂದು ಬಗೆದು

ಉಂಗುರಮಂ ಕಳೆಯಲೊಡಂ
ಪಿಂಗಿದುದು ಶರೀರವಾಯೆ ಕೊಂತಿಯ ಪೂಜಾ
ಸಂಗಕ್ಕೆ ಮೆಚ್ಚಿ ಮೆ[4]ಚ್ಚಿ[4]ದ
ನಂಗಂ ಪ್ರತ್ಯಕ್ಷಮಾದವೋಲ್ ನೃಪನೆಸೆದಂ ||೮೯||

ವ|| ಆಗಳ್

ಗೊಂಚ[5]ಲ್ಲಿ[5]ರೆ ಚಲ್ಲುವ ನಯ
ನಾಂಚಳಮಂ ನಾಣ್ಚಿ ತೆಗೆವ ಕರಿಯಸಿಯಳ್ ಚೆ
ಲ್ವಂ ಚಲ್ಲಿದಳಿನನಿದಿರೊಳ್
ಮಿಂಚುವ ನವಮೇಘಮಾಲೆವೊಲ್ಕಾರಿ[6]ರುಳೊ[6]ಳ್ ||೯೦||

ಚಕಿತಪ್ರಕ್ಷಿಪ್ತ ಪ[7]ಕ್ಷ್ಮಾಂ[7]ತರದೊಳೆಳವೆಯಂ ಮಾಱುದಂತಿ[8]ರ್ಪ[8] ದೀರ್ಘಾಂ
ಬಕ ಶಸ್ತ್ರಾಲೇಖೆಯಂ ತತ್‌ಶ್ರವಣಕುವಳಯ ಶ್ರೇಣಿ[9]ಶಾ[9]ಣಾಗ್ರದೊಳ್ ದ
ರ್ಪಕದೇವಂ ದರ್ಪದಿಂ ಮಿಂಚಡರೆ ಮಸೆವವೋಲ್ ಚೆಲ್ವನಾ[10]ಯ್ತಾಕೆ[10]ಯತ್ಯು
[11]ತ್ಸು[11]ಕಯಾತಾಯಾತ ವಕ್ರೋತ್ತರಳ ತರುಣಿಮಾನೀತ ನೇತ್ರ ತ್ರಿಭಾಗಂ ||೯೧||

---

1 ದ (ಜ) 2 ದೆ (ಚಜಟಡ) 3 ಣಿ (ಚಟಡ) 4 ಚ್ಚ (ಚಟಡಣ) 5 ಲ್ತಿ (ಜ) 6 ದಿರೊ (ಜಡ) 7 ಕ್ಷಾಂ (ಜಡ) 8 ರ್ದ (ಜ) 9 ಶೋ (ಜ) 10 ಯ್ತ್ತಕ್ಕೆ (ಚಟ) 11 ತ್ಸ್ಯ (ಚ) ತ್ಸ (ಟಡ)

ಮದನಂ ಮಧುಮಯ ವರುಣಾ
ಸ್ತ್ರದಿನೆಚ್ಚನೊ ಮದನಮೋಹರಸಮಂಗಜತಾ
ಪದಿನುಕ್ಕಿದತ್ತೊ ಪೇಟಿನೆ
ಸುದತಿ ಬೆಮರ್ತಳ್ ಕುಮಾರನಂ ಕಾಣಲೊಡಂ ||೯೨||

ವ|| ಅಂತು ಚಂದ್ರೋದಯದೊಳ್ ಬಿಂದುವಿಡುವ ಶಶಿಮಣಿಶಲಾಕೆಯಂತಿ ದಾ೯ಕೆಯಂ ಕಂಡು ಮನಂಗೊಂಡು

ಅಳಿ ಮುಗುಳಂ ತು[1]ಡುಂಕಿ ಮದಸೌರ[1]ಭಮಂ ಸವಿವಂತೆ ಗಂಡುಗೋ
ಗಿಲೆ ಪಡೆವಂತೆವೋಲ್ ಕಳಿಕೆಯೊಳ್ ರಸಮಂ ದಿವಸೇಂದ್ರನಬ್ಜಕು
ಟ್ಮಲಮನಲರ್ಚುವಂತೆ ಮಧುಮುಗ್ಧವನಾಂಗನೆಯೊಳ್ ವಿಕಾಸಮ
ಗ್ಗಳಿಸಿರೆ ಕೂಡುವಂತೆ ಗಡ ಕೂಡಿದನಾಗ[2]ಳ್[3] ಪಾಂಡು ಕೊಂತಿಯೊಳ್ ||೯೩||

ವ|| ಕೂಡಿ ಸು[4]ಖ[4]ಸ್ವಪ್ನದಂತದೃಶ್ಯಮಾಗಿ ಪೋ[4]ಗೆ[4] ಕೆಲವಾನುಂ ದಿವಸದಿಂ

ಎಳವಸುಱಾಗೆ ಬಾಳಕಿಗೆ ಬೆಳ್ಪಡರ್ದಂಗಮೊಳಣ್ಪನಿಕ್ಕಿದರ್
ಮಳಯಜಪಂಕದಿಂ ಕಮಳಕುಟ್ಮಳದೊಳ್ ಮಱಿದುಂಬಿ ಪಾಯ್ದವೊಲ್
ತೊಳಪ ಕುಚಂಗಳೊಳ್[5]ತ್ತುದಿಯ[5] ಕತ್ತುರಿಯಂ ತೊಡೆದರ್ವಿದಗ್ಧೆಯರ್
ಕೆಳದಿಯರೊನ್ಮೆಯುಂ ಮಱಿಸಲೆಂದು ಕುಮಾರಿಯ ಗರ್ಭಚಿಹ್ನಮಂ ||೯೪||

ಪಡೆಯೆ ಮಗನಂ ನಿದಾನಮ
ನಿಡುವಂತೆವೊಲಿಟ್ಟು ಪೊನ್ನ ಮಂದಸಿನೊಳಗಾ
ಗಡೆ ಗಡ ಬಿಟ್ಟರ್ಜಗುನೆಯ
ಮಡುವಿನೊಳೀ ಕೆಳದಿಯರ್ಗೆ ಕೊಂತಿಯೆ ನೋಂತಳ್ ||೯೫||

ವ|| ಅದನಾದಿತ್ಯನೆಂಬರಸನಾದಿತ್ಯನುದಯನಗಮನೇಱಿ ನಳಿನವನಮನಲರಿಸುವಂತಿ[6]ರು[6]ತ್ತುಂಗ ಪ್ರಾಸಾದಮನೇಱಿ ಸೌಂದರರಾಜಪುರದ ಸೌಂದರಿಯರ ನಳಿನವನಮನಲರಿಸುತ್ತುಂ ಯಮುನಾ ಮನೋಹರತೆಯಂ ನಿರೀಕ್ಷಿಸುತ್ತುಮಿರ್ದು ಪರಿವ ಕರಿಯ ನಿಱಿಮುಗಿಲ ಮೇಗೆ ಪರಿವ ರವಿಮಂಡಲದಂತೆ ತೆರೆಮಸಗಿ ಪರಿವ

---

1 ಳುಂಕಿ ನವಸಾರ (ಚಟಡಣ) 2 ಡೆ (ಜ) 3 ಫಲ (ಚಟಡಣ) 4 ಗಿ (ಚಟಡಣ)
5 ಳ್ತುದಿಯ ಪೀರಿದ (ಚ) ಳ್ಪುದಿಯೆ ಪೀರಿದ (ಟಡಣ) 6 ದು (ಜ)

ಜಗುನೆಯ ಪೊನಲೊಳ್ ಪೋ[1]ಪ[1] ಪೊನ್ನಮಂದಸಂ ಕಂಡು ತರಿಸಿ ಕಮಳಕುಟ್ಮಳ ದಳಪುಟಮಂ ತೆಱೆವಂತೆ ತಾನೇ ತೆಱೆದು ನಲಿದು ನೋಡಿ ಕೆಲದೊಳ್ಳುಪ್ಪೆಗೊಂಡ ಮಾಣಿಕಂಗಳ ಬೆಳಗಿನೊಡನೆ ಬಾಳಕನ ಮೆಯ್ವೆಳಗು ದಳವೇ[2]ಱೆ[2] ಮಿಳ್ಳಿಸಿ[3]ದೊಡ[3] ಳ್ಳಿ[4]ಱಿದಾಡುತ್ತುಂ[4]

ಕನಕಸರಸೀರುಹದೊಳ್ ಸಿರಿ
ಮನಸಿಜನಂ ಪೆತ್ತು ಬಿಟ್ಟು ಪೋದಂತಿರೆ ಕಾಂ
ಚನ ಮಂಜೂ[5]ಷದೊ[5]ಳೊಪ್ಪುವ
ಜನಪತಿ ಸುತನಂ ನೃಪಾಳ ಕೃಷ್ಣಂ ಕಂಡಂ ||೯೬||

ವ|| ಕಂಡು ಮನಂಗೊಂಡು ಬಾಳಕಂ ನಿಮ್ಮೊಳಾರ ಕಯ್ಗೆ [6]ನಗುತ್ತುಂ[6] ಬಂದ ನವಳ್ಗೆ ಕುಡುವೆನೆಂಬುದುಮರಸಿಯರೆಲ್ಲಮೆಮಗೆ ತಮಗೆಂದು ಗೊಂದಳಿಸಿ ಕರಕಿಸಲಯಂಗಳನಡಸಿ ನೀಡುವುದುಂ ತಳಿರ ತುಱುಗಲಂ ತೊಱೆ[3]ದು ತಾಮರೆಗೆಱಗಲ್ಕೆಱಗುವ ಮಱಿದುಂಬಿಯಂತೆ ಮಂದಸಿನಿಂ ರಾಧೆಯೆಂಬರಸಿಯ ಪಾಣಿಪದ್ಮಕ್ಕೆ ಬಂದು ವಿಶಾಖೆಯಿಂದನೂರಾಧೆಗೆ ಬಂದ ಬಾಳೇಂದುವಿನಂತೆ [7]ಬಾ[7]ಳಕಂ ದರಹಸಿತ ಧವಳದೀಧಿತಿ[8]ಗಳಂ[8] ಪರಪೆ ಪುತ್ರವಿಶೇಷದಿಂದಾಕೆ [9]ಕೋ[9]ಟಲ್ಕೊಗಂಗೊಂಡು ಕೊಂಡಾಡಿ ನಡಪೆ

ಕಿವಿವಿಡಿದು ಪುಟ್ಟೆ ಕನ್ನೆಗೆ
ದಿವಾಕರಂ ರಾಧೆಗೀಯೆ ಮಗನಾದುದಱಿಂ
ದವೆ ಕರ್ಣಂ ಕಾನೀನಂ
ರವಿಜಂ ರಾಧೇಯನೆಂಬ ಪೆಸರಂ ಪಡೆದಂ ||೯೭||

ಅವಿಹಿತ ಕುಮತಕಥಾಂಬು
ಪ್ರವೇಶದಿಂ ಕರ್ಣಶೂಲಮಾರ್ಗಗದೊ ಪೇ
ಟ್ಟಿವಿಯೊಳ್ ಕರ್ಣಂ ಗಡ ಸಂ
ಭವಿಸಿದನಿಂತಪ್ಪ ಪುಸಿಯ ಪೊಟ್ಟಣವೊಳವೇ ||೯೮||

---

1 ದ (ಚಟಡಣ) 2 ಱಿ(ಚಟಡಣ) 3 ದೊ (ಚಟಡ) 4 ಱಿದುನೋಡುತ್ತುಂ (ಚಣ) ರೇಱಿದೊಡತ್ತುಂ (ಟ) ಱಿದೋಡುತ್ತುಂ (ಡ) 5 ಷಯೊ (ಚಟಡಣ) 6 ನೆಗೆದು (ಚಟಣ) 7 ಹ (ಚ) 8 ಗಂ (ಚಟಡ) 9 ತೋ (ಜಡಣ)

ತನ್ನಂ ಪಾಂಡುಗೆ ಕೊಟ್ಟು ಕನ್ನೆ[1]ಯರೊಳಾರ್ಗೀ[1]ಸಾಹಸಂ ಕೂಡಿತೆಂ
ಬನ್ನಂ ಕೂಡಿದ ಕೊಂತಿ ಕಂತುಮನದೊಳ್ತಾಂ ರಚ್ಚೆಯೊಳ್ಪಟ್ಟ ಪೆ
[2]ತ್ತ[2]ನ್ನಂ ತಾನೆನೆ ತಾ[3]ಗಿ[3]ದಾಗಿ ಸುಭಟಂ ಸೌಭಾಗಿನೇಯಂ ದಲೆಂ
ದೆನ್ನಂ ಕೀರ್ತಿಸಸಾರ್ತು ಕೂರ್ತು ಕೃತಭೂಲೋಕರ್ಣನಂ ಕರ್ಣನಂ ||೯೯||

ಧರೆಗಿತ್ತು[4]ದ[4]ಸ್ತನಾದನೆ
ಸಿರಿವಂತಂ ಕೀರ್ತಿಗಂಜುವನೆ ಕಲಿ ಪಿರಿದುಂ
ಪೊರೆದಾಳ್ದನ ಕಾರ್ಯಕ್ಕೋ
ಸರಿಸದೆ ಸತ್ತವನೆ ಬಟ್ದನೆಂಬಂ ಕರ್ಣಂ ||೧೦೦||

ತೊಡರ್ದರಿಯಂ ಕೇಸರಿಯೊಳ್
ತೊಡರ್ದಿಭಮೆಂತಂತೆ ಮಾಡುವಂ ಭುಜಬಳದಿಂ
ಪಡೆದೊಡಮೆಯುಮಂ ಪೆಣ್ಣಂ
ಪಡೆದಂತಿರೆ ಬೇಡಿದವರ್ಗೆ ಕುಡುವಂ ಕರ್ಣಂ ||೧೦೧||

ವ|| ಮ[5]ತ್ತಂ[5] ಕೊಂತಿಯ ಕನ್ನೆಸಾಹಸದಿನಾದ ಕನ್ನೆವೇಟದೊಳ್

ತರುಣಿಯ ಮೆಯ್ಯ ಬೆಂಕೆಯೊಳೆ ಬಿದ್ದಮೃತಾಂಶು ಮರೀಚಿ ಸುಟ್ಟ ಕ
ಪ್ಪುರದವೊಲಾ[6]ಗೆ[6] ಸುಟ್ಟಪು[7]ದಿದ[7]ಲ್ಲದೊಡೆಲ್ಲಿಯದೆಲ್ಲಿಯ ತಾಪವೋ
ಸರಿಸದೆ ಪುಷ್ಪಬಾಣನಿಸೆ ನಾಂಟೆ ಮುರುಂಟದ ಪೂವೆ ಪುಳ್ಳಿಯಾ
ಗಿರೆ ಮನಮೆಯ್ದೆ [8]ಬೆಂ[8]ದಪುದದಿಲ್ಲದೊಡೆಲ್ಲಿಯದಂಗಜಾನಳಂ ||೧೦೨||

[9]ಕಡು[9]ದಣ್ಣೆಲರಲೆಯೆ ಬೆಮ
ರ್ತೊಡೆ ಬೀಸುವರಬ್ಜದಳದಿನಬಳೆಗೆ ಬೆಳ್ಳಂ
ಗೆಡೆದೆಳವೆಳ್ದಿಂಗಳೊಳಂ
ಕೊಡೆಪಿಡಿ[10]ವ[10]ರ್ ಸ[11]ತಿ[11]ಯರಂಗತಾಪಮು[12]ದೆನಿ[12]ತೋ ||೧೦೩||

ವ|| [13]ಅದನೆಱಿದಭಿಮುಖ ಪ್ರಜಾತಪ್ರಜಾಪತ್ಯ ಸಂಬಂಧ ಬಂಧುರಮಪ್ಪ ಬಂದುಭಾವಮೆಸೆಯೆ[13]

---

1 ಯೊಳಗಾಗೀ (ಚಟ) ಯೊಳಗಾದೀ (ಡಣ) 2 ತ್ತ (ಜ) 3 ನೆ (ಜ) 4 ದು (ಜ)
5 ತ್ತಿತ್ತ (ಜ) 6 ಗಿ (ಜಡ) 7 ದದಿ (ಜ) ದತ್ತಿ (ಟ) 8 ಬಂ (ಜ) 9 ಕುಡ (ಚಟಡ)
10 ದ (ಜಟಡ) 11 ಖಿ (ಚಟಡಣ) 12 ದೆಂ (ಚಟಡಣ) 13—(ಜ)

ಸಿಂಧು ಸಿರಿ[1]ಯಂ[1] ವಿಭೂ[2]ತಿ[2]ಯು
ಮಂ ಧರಣಿಧರಂಗೆ ಕೊಟ್ಟವೊಲ್ ಪಾಂಡುನೃಪಂ
ಗಂಧಕವೃಷ್ಣಿನೃಪಂ ಕೊ
ಟ್ಟಂ ಧರೆ ಮಿಗೆ ಪೊಗೞೆ ಕೊಂತಿಯಂ ಮಾದ್ರಿಯುಮಂ ||೧೦೪||

ಅಳಿನೀ ಜ್ಯಾಲೇಖೆ[3]ಯುಂ[3] ಕಾಮ[4]ನ[4] ಕುಸುಮಧನುರ್ಲೇಖೆ[5]ಯುಂ[5] ಪುಷ್ಪ ಬಾಣಾ
ವಳಿಯಂ ಪೆತ್ತಂತೆ ಪಾಂಡುಕ್ಷಿತಿಪನ ಸತಿಯರ್ ಕೊಂತಿಯುಂ ಮಾದ್ರಿಯುಂ ಕೋ
ಮಳೆಯರ್ಕಾಮಾನುರಾಗಂಬಡೆದು ಪಡೆಯೆ ಧರ್ಮಾತ್ಮಜಂ ಭೀಮಸೇನಂ
ಚಳದೊಳ್ತಳ್ತರ್ಜುನಂ ಸಂದ ನಕುಳಸಹದೇವರ್ಕಳೆಂದಾದರೈವರ್ ||೧೦೫||

ಕಡುಗಲಿ ಧೃತರಾಷ್ಟ್ರಂಗಂ
ಕುಡೆ ನರಪತಿ ವೃಷ್ಣಿನೃಪತಿ ನೆಱೆ ನೂಱೆಸಟಿಂ
ಪಡೆವಂತಿರೆ ಪದ್ಮಿನಿ ತಾಂ
ಪಡೆದಳ್ ಗಾಂಧಾರಿ ನೂರ್ವರಂ ನಂದನರಂ ||೧೦೬||

ಸುತರೊಳ್ ದುರ್ಯೋಧನನಧಿ
ಕತೆ ದುಶ್ಶಾಸನನ ದೃಢತೆ ದುರ್ಮರ್ಷಣನು
ದ್ಧತ ಧೃತಿ ದುರ್ಮರ್ಷಣನ
ಪ್ರತಿಮತೆ ಗಾಂಧಾರಿಗಿತ್ತುದತಿ ಸಮ್ಮದ[6]ಮಂ[6] ||೧೦೭||

ವ|| ಅಂತು ಹರಿವಂಶಮುಂ ಕುರುವಂಶಮುಂ ಸಿಂಧುಯುಗಳ ಸಂಭೇದದಂತೆ [7]ಛೇದಿ[7]ಸಲ್ಬಾರದಂತು ಕೂಡಿ ಕೊಪ್ಪಳವಡೆದು ಸುಕೃತಫಲಮುಂ ಪಲಕಾಲಮನು ಭವಿಸುತ್ತುಮಿರೆ ಮತ್ತೊಂದು ದಿವಸಂ ಗಂಧಮಾದನಮೆಂಬುದಯಗಿರಿಯೊಳುದಯಿಸಿದ ಸುಪ್ರತಿಷ್ಠರೆಂಬ ಸೂರಿಸುಧಾಕರರ ಸಮೀಪದೊಳ್ ಸೂರವೀರಂ ಚಕೋರಂ ಪುತ್ರ ಪೌತ್ರಾದಿಗಳ್ವೆರಸು ನಿರ್ಮಳ ಧರ್ಮಾಮೃತಮನೀಂಟೆ ನಿಷ್ಠುರ ಸಂಸಾರ ಪರಿತಾಪ ತೃಷ್ಣೆಯಂ ತೂಳ್ದಿ ಸಂವೇಗಮುಂ ಸಂವರಿಸಿಯಂಧಕವೃಷ್ಣಿ[8]ಯೆಂಬರಸು[8]

ಎತ್ತಿದನಧಿಕೋತ್ಸವದಿಂ
ದುತ್ತಮ ಸ[9]ತ್ತ್ವಂ[9]ಗೆ ರಾಜ್ಯಭರಮಂ ಪ್ರೀತಿಯಿಂ
ಪೊತ್ತಿರ್ಪಂತಿರೆ ಗಾಂ[10]ಪರೆ[10]
ಮತ್ತಾಂಪವರುಳ್ಳೊಡಮಳ ಹರಿಕುಳ ತಿಳಕಂ ||೧೦೮||

1 ಯಂ (ಚಟ) 2 ಷೆ (ಜ) 3 ಯಂ (ಚಟಡ) 4 ದ (ಚಟಣ) 5 ಯಂ (ಚಟತಣ) 6 ದಿಂ (ಜ) 7 ಬಿಡಿ (ಚಡ) ಪಿಡಿ (ಟಣ) 8 ಯಂಬರಿಸಿ (ಜ) 9 ಕ್ಕಂ (ಜ) 10 ಪರಿ (ಟ) ಪಂ (ಣ)

ವ॥ ನರಪತಿವೃಷ್ಣಿಗಂ ಯುವರಾ[1]ಜ್ಯ[1]ಪದವಮಂ ಕೊಟ್ಟು ತಪಂಬಟ್ಟನಲ್ಲಿಂ ಬಟಿ[2]ಯಂ ಪನ್ನೆರಡು [3]ಬರಿಸಂ[3] ಪೋಗೆ

ಶತಪತ್ರಶ್ರೀಯನಿಂದುಪ್ರಭೆಯನಿಳಿಸೆ ವಕ್ತ್ರೇಂದು ಮೆಯ್ ಸೂರ್ಯಕಾಂತ
[3]ದ್ಯು[3]ತಿಯಂ ಚಂದ್ರೋಪಳಚ್ಛಾಯೆ[4]ಯ[4]ನೊಲಿಸೆ ಚಕೋರೌಘಮಂ ಚಕ್ರವಾಕೀ
ತತಿಯಂ ಪಂಚೇಂದ್ರಿಯಂಗಳ್ ಪಗಲುಮಿರುಳುಮೋರಂದದಿಂ ಪೋಲೆ ಪೂತ
ಪ್ರತಿಮಾಯೋಗೈಕನಿಷ್ಠಂ ನೆಲಸಿದನಗವೇಳ್ ಸುಪ್ರತಿಷ್ಠಂ ವರಿಷ್ಠಂ ॥೧೦೯॥

ಆ ಮುನಿಗೆ ಗಜಜಂ ಗರ್ಜಿಸಿ
ಜೀಮೂತಂ ಮೊಟಗಿ ಮುತ್ತುವಂತಿರೆ ಗಿರಿಯಂ
ಭೀಮೋಪಸರ್ಗಮಂ ಗದ
ತಾಮಸದಿಂ ಮಾಡಿದಂ ಸುದರ್ಶನ ದೇವಂ ॥೧೧೦॥

ಆ ರಿಪುವಿನುಪದ್ರವಮಂ
ಸೈರಿ[5]ಸಿ[5]ದಾ ಯತಿಗೆ ಪುಟ್ಟಿ[6]ದ[6]ತ್ತು[6] ತ[6]ಮಸ್ಸ[6]
ಹಾರಕಮಮೃತಂ ಮಥಿತಾಂ
ಭೋರಾಶಿಗೆ ಪುಟ್ಟುವಂತೆ ಕೇವಲಬೋಧಂ ॥೧೧೧॥

ವ॥ ಆಗಳಾ ಗಂಧಮಾದನ ಮೇಖಿಸೀಥರಕ್ಕೆ ಕೇವಳಿಪ್ರಾಜ್ಯ ಪೂಜಾಪರ ಮೋತ್ಸವಮಂ ಮಾಡಲ್ಬರ್ಪ ದೇವನಿಕಾಯ ದುಂದುಭಿಧ್ವಾನಾಹೂತನಾಗಿ ಪುರು ಹೂತನ ಪಿರಿಯರಸಿಪೆರಸಂಧಕವೃಷ್ಣಿಯುಂ ಬಂದು ಭುವನಬಂ[8]ಧುವೆಂದು[8] ದೇವ ದುಂದುಭಿ ದೇವಧ್ವನಿ ಪ್ರಭವ ವಿಭವ ವೈಭವ್ಯರತ್ನಾಕರ ಪ್ರರೋಹಣರೋಹಣ ನಗೇಂದ್ರ ಖಗೇಂದ್ರ ದೇವೇಂದ್ರ ಗಜೇಂದ್ರ ನಾಗೇಂದ್ರ ಸಮಸ್ತಕಪ್ರಕರ್ಷ[9]ಘರ್ಷಣ[9] ವಿಕೀರ್ಣ ಪಾದಪೀಠ ಪ್ರಕೀರ್ಣಮಣಿಗಣಾರುಣ ಕಿರಣರೇ[10]ಣು[10] ಕ್ರೀಡಾನು ರಂಜಿತ ರಾಜಕುಂಜರವೃಂದನಂ ಬಂದಿಸಿ ಮುಂದೆ ಕುಳ್ಳಿರ್ದು ಕಯ್ಗಳಂ ಮುಗಿದು

ಕೇವ[11]ಳಿ[11] ಬಿನ್ನಪಮಿಂತೀ
ದೇವರ್ಕಳ್ ನಿನ್ನನೊಸೆದು ಪೂಜಿಸಿದಪರಾ
ದೇವಂ ಮಾಡಿದನೇಕೆಯೊ
ದೈವಗುರೂ [12]ಪೇಟಿ ನಿನಗು[12] ರೂಪದ್ರವಮಂ ॥೧೧೨॥

---

1 ಜ (ಜ) 2 ವರ್ಷಂ (ಚಟಡ -) 3 ದ್ಧಿ (ಬ) 4 ಯಿ (ಣ) 5 ಸ (ಡಣ) 6 ತ್ತುಂ (ಚ) ದತ್ತುಂ (ಟ) 7 ಮಃ ಸಂ (ಜ) 8 ಘ (ಜ) 9 ಪುರುಷಣ (ಚ) 10 ಣೂ (ಜ) 11 ಳ (ಟಣ) 12 ಪೇಟ್ಟಿ ನಿನಗನು (ಕ) ಪ್ರೇರಣಂ ಗು (ಚಟಣ) ಪ್ರೇರಣಂ ನಿನಗು (ಡ)

ಎನೆ ಜಿನನೆಂದಂ ಕೇಳಾ
ತನೆ [1]ಕ[1]ರಮುಪಕಾರಿಯೆನಗೆ ಪೀಡಿಸಿ[2]ದೊಡೆ[2] ಕಾಂ
ಚನ ಪಾಷಾಣಕಮಂ ಪೊ
ನ್ನನೆ ಮಾಳ್ಪಂ ಪೊಲ್ಲಕೆಯ್ತನಪ್ಪನೆ ನೃಪತೀ ||೧೧೩||

ವ|| ಅದಂ ಪೇೞ್ವೆ ಮೀ ಜಂಬೂದ್ವೀಪದ ಭರತಕ್ಷೇತ್ರದ ಚಂಪಾಪುರದ ಪರದರ್ ಸೂರದತ್ತನುಂ ಸುದತ್ತನುಮೆಂಬರಿರ್ವರುಂ ಪರದು ಪೋಗಿ ಪಿರಿದಪ್ಪೊಡಮೆಯಂ ಪಡೆದು ಪೊೞಲಂ ಪುಗುವಲ್ಲಿ ಸುಂಕಿಗರ್ಕಾಣ್ಗುಮೆಂಬ ಶಂಕೆಯಿಂದುಸಿರಂ ಬಿಡಲಾಱದಸುವಂ ಬಿಡುವಂತಾಪುರದ ಪೇರಡವಿಯೊಳೊಂದು ಪೊ[3]ದ[3]ೞ್ದು ಪರ್ವಿದ ಪೊದಱ ಮೊದಲೊಳ್.

ಎರೆ[4]ದವ[4]ರ್ಗಮನುಗ್ರಹಿಸುವ
ಪರಮ ಕವೀಶ್ವರರ್ಗ[5]ಮಾವ ದಾನಿಗಳೇಂ[5] ಬಂ
ದೆರೆಯದ ನೆಲಕಂ ಪೀಡಿಸು
ವರಸಂಗಂ ಕುಡುವ ಕೃಪಣನಗ್ಗಳವಲ್ತೇ ||೧೧೪||

ವ|| ಎಂಬ ನೀತಿಯಂ [6][ಮಾ]ಣದೆ ಪೂಣ್ದು[6] ಪೋಪುದುಮೊರ್ವಂ ಕಳ್ಳಸಿಗಂ ಕಳ್ಳಂ ಕೊರ್ವಿಸುವ ಬೇರುಂ ಬಿಕ್ಕೆಯುಮಂ [7]ಬೆರಂ[7]ಟುತ್ತುಂ,ಬಂದಾ ಪೊದಱ ಮೊದಲನ ಗುೞ್ದು ನೆಗಪಿ ತನ್ನದೆನ್ನದೆಂದು ನಚ್ಚುವರಂ ನಗುವಂತು ಗಜಗಲಿಸುತ್ತುಮಿರ್ದ ಕಾಂಚನ ಪಂಚರತ್ನ ಸಂಚಯಮಂ ಕಂಡು ಕೊಂಡು ಶೌಂಡಿಕಂ ಧನಶೌಂಡನಾಗಿ ಪೋದನಿತ್ತಲಾ ಪರದರಿರ್ವರುಮಡವಿಯೊಳ್ ಮಡಗಿದೊಡವೆಯಂ ಕಾಣದೆ ಕಾೞ್ಕಿೋಣಂಗಳಂತೆ ಕೆಕ್ಕಳಗೆಳರ್ದು ಕೆಚ್ಚನಾದ ಕ[8]ಣ್ಣಂ[8] ಬಿಚ್ಚನೆ ಬಿಟ್ಟು ಬಿೞ್ವಿನವೊದಱೊಯೊರ್ವರೊರ್ವರಂ ನಂಬದ ಬಗೆಯಿಂ ಕನಕಾಸ್ವಾದಮಿಲ್ಲದೆಯುಂ ಮರುಳ್ಮಸಗಿ ಪಸುಗೆಗೆಟ್ಟು ಪಸಿಯ ಬಡಿಗೆಗಳನೆತ್ತಿಕೊಂಡು

ಮಿದುಳ್ಗ[9]ಳು[9]ಗೆ ತಲೆಯ ಪಿರ್ಪುಗ
[10]ಳು[10]ದಿರೆ ದೃಢಕ್ರೋಧಲೋಭ[11]ಭರ[11]ದಿಂದಂ ಮೋ
[12]ದಿ[12]ದ ಸೂರದತ್ತನುಂ ಕಲಿ
ಸುದತ್ತನುಂ ಸತ್ತು ಮೊದಲ ನರಕಕ್ಕೆಯ್ದಿದರ್ ||೧೧೫||

---

1 ಪ (ಜ) 2 ದ್ಯೆ (ಚಟಡ) ದೊಂ (ಣ) 3 ರ (ಜ) 4 ದ (ಣ) 5 ಮಿವುದಾನಿಗಳುಂ (ಕಗಚಟಡ) ಮಿಾವುದಾನಿಗಳ್ (ಣ) 6 ಪೂಣ್ದೆದೆ ಪೂಣು (ಗಚ) ಪೂಣಡಪೂಳ್ದು (ಜ) ಪೂಣ್ದದೆ ಪೂಣ್ದು (ಟ) ಪೂಣದೆ ಪೂಣ್ದು (ಡಣ) 7 ಬರುಂ (ಜ) ಬೆರುಂ (ಡ) 8 ಣ್ಗಳಂ (ಜ) 9 ಳ (ಕಗಚಟಡ) 10 ಳ (ಜ) 11 ವಶ (ಜ) 12 ಹ (ಚಟಡಣ)

ಆ ನರಕದಿಂದೆ ಬಿಂಜದ
ಕಾನನದೊಳ್ ಬಂದು ತಗರ್ಗಳಾದರ್ ಪರದರ್
ವಾನೇಯ ಮತ್ತವಾರಣ
ಪೀನಂಗಳ್ ಶೃಂಗಕುಲಿಶ ದಲಿತ ನ[1]ಗಂ[1]ಗಳ್ ॥೧೧೬॥

ಅಗಜಗಜಮದಿ[2]ರೆ[2] ಜಳಮುಗೆ
ಮಿಗೆ [3]ಮೇಗೆ ಸಡಿ[3]ಲ್ದೊಡುಣ್ಮಿ ಜಡೆಗೊಂಡುರಿನಾ
ಲಗೆವೊಲಿರೆ ದಹನನೇಱದ
ತಗರಂದದಿನಟ್ಟಿ ತಾಗಿ [[4]ತ[4]]ಗೆದುವು ತಗರ್ಗಳ್ ॥೧೧೭॥

ಮಲೆ[5]ದ[5]ಲೆದು ತಾಗೆ ಕೊಂಬಿನ
ತಲೆಯೊಳ್ ಕೋಡೊಣಗಿ ಸಣಗ[6]ಳಾಗದ ಮಿಗ[6]ಗಳ್
ಗಲಗಲಕೆ ನಲುಗೆ ನಲಿ[7]ದು[7]ಲಿ
ವಲಿವಂ ಕಟ್ಟಿದವೊಲೆಸೆದುದಾ ಮೇಷಯುಗಂ ॥೧೧೮॥

ಕಣ್ಣುರಿ ಮುಟ್ಟೆ ನೆಟ್ಟನೆ ಮುರುಂಟಿದವೊಲ್ಮುರಿ[8]ಗೊಂಡ[8] ಕೋಪು ಮೈ
ಯುಣ್ಮೆ ಕ[9]ಟ[9]ಲ್ವಿನಂ ಕುಡಿದು [10]ಕೆ[10]ತ್ತುವ ಕಂಡದ ಕೊರ್ವು [11]ಸಾ[11]ತೆಯೊ
ಳ್ಪಣ್ಣವೊ[12]ಲು[12]ಬ್ಬರಂ ಬಿರಿಯೆ ರತ್ನಶಿಳಾಳಿ ನೆಟಿಲ್ಗೆ ಪಾಯ್ವ ಪೆ
ರ್ವುಣ್ಣೊಡೆಯುತ್ತುಮಿರ್ಪ ಪಣೆಯದ್ಭುತಮಾದುದುರಭ್ರಯುಗ್ಮದಾ ॥೧೧೯॥

ಅವು [13]ತಾಮಾ[13]ಟ್ಟಸೊಳೊರ್ಮೆ ಕಂಡು ಕಿಡಿ[14]ಯಂ[14] ಕೆಂಡಂಗ[15]ಳಂ[15] ಸೂ[16]ಸಿ ತಾ
ಗುವ[16]ವೊಲ್ ಬೆಟ್ಟಿಸೊಳೊಂದು ಬೆಟ್ಟು ಭವಬದ್ಧಕ್ರೋಧದಿಂ ಕಾಯ್ದು ತಾ
ಗುವುದುಂ ಕಂರದೊಳಾಟಿ ತೋರದಲೆಗಳ್ ಸತ್ತಂದು [17]ಮೇ[17]ಷಂಗಳಾ
ದುವು ಗಂಗಾತಟ ಗೋಕುಲಕ್ಕೆ ಜಿತದಿಂ ಜ್ಞಾನಾಳಿಳ್ಗೂಳಿಗಳ್ ॥೧೨೦॥

ತಳೆದತ್ತುದ್ವೃತ್ತಿಯಂ ತದ್ವೃಷಭಯುಗಳಮಾಲಂಬಿ[18]ಸಾ[18]ಸ್ನಾಸಟಂ ಪಾ
ಟಳನೇತ್ರಂ ವೃದ್ಧವಂ[19]ಶಾಂಕುರ[19] ವಿಷಮ ವಿಷಾಣದ್ವಯಂ ಗೃಧ್ರಪಕ್ಷೋ
ಚ್ಚಳಿತಾದಭ್ರಶ್ರವಂ ದುಂದುಭಿನಿಭನಿನದತ್ಕಂಧರಂ ದೀರ್ಘನೀಲೋ
ತ್ಪಳನಾಳಾಲೋಲ ವಾಳಂ ವಿಪುಳ [20]ಶಫ[20]ಪರಿಸ್ಫೂಳಮಾಭೀಳಶೀಳಂ ॥೧೨೧॥

---

1 ಖಂ (ಚಟಡ) 2 ರ (ಜ) 3 ಮಿಗೆ ಸಿಡಿಲ (ಕಡ) ಮೇಗೆ ಸಿಡಿಲ (ಚ) ಮೇಗೆ ಸಿಡಿ (ಣ)
4 ತೆ (ಚಜಟಡಣ) 5 ದೊ (ಜ) 6 ಲಾದ ಮಿನುಂ (ಜ) 7 ನ (ಚಟಡಣ) 8 ದೊಂದು (ಜ)
9 ನ (ಜ) 10 ಕಿ (ಚಟಡಣ) 11 ಸೋ (ಚಟಡಣ) 12 ಒ (ಚಟಡಣ) 13 ತಾಂಮು (ಜ)
14 ಯುಂ (ಜ) 15 ಳುಂ (ಜ) 16 ಸೆ ಗಂಟುವ (ಚಟ) ಸೆ ಸಂಗಿದ (ಡ) ಸೆ ನಂಟುವ (ಣ)
17 ಮೋ (ಜ) 18 ಸ (ಜ) 19 ಶಂಕುರಂ (ಚಟಡಣ) 20 ಪಳ (ದ) ಪರಿ (ಣ)

ಪಣೆ ವರುಡಲ್ಕೆ ಪರ್ವಿದೆ[1]ರ್ದೆ[1]ಯೊಳ್ ಪೊರೆದಳ್ಗಿಸಱಿಂ ವೃಷಂಗಳೊಳ್
ಪೊಣರ್ದಿಱಿಯಲ್ಕೆ ಪತ್ತಿದರುಣಾಘದಿನಾ ವೃಷಶೃಂಗಯುಗ್ಮಮೊಂ
ದಣಿಯರವಾಯ್ತು ಸಾರ[2]ವಿಸಿ[2] ನೆತ್ತರೊಳೊ[3]ಕ್ಕೞ[3]ದರ್ಚಿಸಿರ್ದ ಪೇ
ರ[4]ಣೆ[4]ಮಣಿಯೆಂಬ ಭೈರವನ ಲಿಂಗದ ಸೀಯದರಂಬೊಲದ್ಭುತಂ ||೧೨೨||

ಪ್ರತಿವೃಷಭ ಶೃಂಗ[5]ಸೀರ[5]
ಕ್ಷಿತಿಲೇಖಾಲಕ್ಷಿತಂ ತದೀಯಕ್ಷೇ[6]ತ್ರ[6]
ಕ್ಷಿತಿಯಾಯ್ತು ದರ್ಪಬೀಜಾ
ಕೃತಮೆನೆ ಬಸವಂಗಳುಕ್ಕದೇನುಬ್ಬಸಮೋ ||೧೨೩||

ವ|| ಆ ಮದಕಳಕ್ರೂರ ಶೂರ ಸೌರ[7]ಭೇಯಂಗ[7]ಳೊಂದು ದಿವಸಮೊಂದೊಂದಱ
ಕೆಲಪಂ ಕೇಳ್ದು ಕೆಳರ್ದು ಕೆಂಗಲ್ಮಸಗಿ ಮೂದಲಿಸಿದಂತೆ ಮಲೆತು ತಾಮಿರ್ದ ಮೊದಲ
ನರ[8]ಕಮಂ[8] ತೆಱೆದು ತೋಱುವಂತೆ ಭೂತಳಮಂ ಕೊಳಗಿಂ ಪರಡುತ್ತುಂ ಮನಂ
ವಾಯುಗೆ ಮಿದಿಲ್ದು ಕಯ್ಯಿಕ್ಕುವ ಸೊರ್ಕಾನೆಗಳಂತೆ ತಲೆಯಿಕ್ಕಿ ತೊಲಗದ ಮನದ
ಕನಲ್ಕೆಯಿಂ ಕಾದಿ [9]ಕೊಂದು[9] ಬಿರ್ದು ಕಂದಂಗಳೊಳ್ ನಡುಕೋಡುವರಂ ನಟ್ಟಕೋಡು
ಗಳಿಂ ಮಿಳಿಯಂ ಕಟ್ಟಿ [10]ಗೋ[10]ಪಾಲಕರ್ ಕೇಟಿಃ ಸತ್ತು ಸಂಮೇದ ಗಿರಿಯ ಕಾಡೊಳ್
ಕೋಡಗಂಗಳಾಗಿ ಪುಟ್ಟಿದುವಿಂತು

ಅವರವಿವೇಕದಿಂ ಕುಱಿಯ ಪೋರಿಗಳಾದರವುಂ ಪರಸ್ಪರಾ
ಹವ ರಸಕಾಂಕ್ಷೆಯಿಂ ಕುಱಿಯ ಪೋರಿಗಳೆತ್ತುಗಳಾದುವೆತ್ತುಗಳ್
ತವದತಿ ಚಂಚಳ ಪ್ರಕೃತಿಪಾಕದಿನಕ್ಕಟ ಮರ್ಕಟಂಗಳಾ
ದುವು ಪಿರಿದುಂ ಶರೀ[11]ರಿ[11]ಗಳ ಪಾಪಮಿದೇಂ ಚರಿತಾನುರೂಪಮೋ ||೧೨೪||

ಪರಿಗತ ನಿರ್ಝರಿಣಿಯೊಳಾ
ಗಿರಿಯೊಳ್ ಕಿಸ[12]ಲಯಿತ[12] ಶಿಖರ ಕಾನನಕುಲದೊಳ್
ಶರನಿಧಿ ಸುತ್ತಿದ ಲಂಕೆಯ
ನುರುಪಿದ ಕಪಿಪತಿವೊಲಿರ್ಪುದಾ ಕಪಿಯುಗಳಂ ||೧೨೫||

---

1 ಡೆ (ಚಟಡಣ) 2 ವಿಸೆ (ಜ) ಬಿಸಿ (ಣ) 3 ಕ್ಕಿರೆ (ಚಟಡಣ) 4 ಣ (ಜಟ)
5 ಖರ (ಗಟ) ಶೀರಾ (ಣ) 6 ತ್ರಂ (ಣ) 7 ಭ್ಯಯಂಗದೊ (ಗಡ) ಭೇಯಂಗದೊ (ಜಟ)
8 ಕಂ (ಚಟಡಣ) 9 ಕೋದು (ಜ) ಕೊಂಡು (ಡ) 10 ಗೋಕುಳ (ಜ) 11 ರ (ಚಜಟ)
12 ಲೈಕ (ಚಟಡಣ)

ವ॥ ಆ ವಿಪುಳ ಫ[1]ಲ[1] ಕುಸುಮ[2]ಕಿಸಲಯ ಕುಳಂ[2]ಗಳುಂ ಕಪಿಕೇಸಂಗಳು ಮಪ್ಪ ಕೇಶಂಗಳುಂ ಶಿಲಾಸಲಿ[3]ಲ[3] ನಿಮಿತ್ತಮುನ್ಮತ್ತ[4]ಪರ[4] ಪುರಾಣ ಪುರುಷ ವ್ಯಾಲೀಕೃತ ಬಾಲಿ ಸುಗ್ರೀವಂಗಳಂತೆ ಸುಗಿಯದಗಿಯದೆ ಸಂಗರಮಂ ಮಾಡಿ

ಒಂದಾಗಳೆ ಸತ್ತುದು ಮ
ತ್ತೊಂದಿರ್ದುದು ಸಾಯಲದಱ ತ[5]ಮ[5]ಮಂ ಕಳೆಯಲ್
ಬಂದುದು ಗಗನದಿನಿೞಿದ ರ
ವೀಂದುಗಳವೊಲಾಗಳಂತೆ ಚಾರಣಯುಗಳಂ ॥೧೨೬॥

ವ॥ ಅಸುರಗುರುಗ[6]ಳುಂ[6] ದೇವಗುರುಗ[7]ಳುಮೆಂ[7]ಬ ಚಾರಣರಾ [8]ಮರಣಾಭಿ[8] ಮುಖನಪ್ಪ ಬಲೀಮ್ಮುಖನಂ ಕಂಡು ಕರುಣಾಜಳಮುಮಂ ಕಮಂಡುಲುಜಲಮುಮಂ ಮೊಗದೊಳ್ ತಳಿಯೆ ಕುಳಿರ್ಕೋಡಿ ಕೋಡಗಂ ಕಣ್ಣಂ ತೆಱೆವುದು ತಲೆಯನೆಱಗಿ ಪೊಡೆವಡೆ ಪರಸಿ [9]ಪದಿರ[9]ದಿಂ (?) ಮಾತಲ್ಲದಿದಿರ ಮಾತಿನೊಳ್ ಧರ್ಮಮಂ ತಿಳಿಪೆ ಪಂಚನಮಸ್ಕಾರಮಂ ಪೇೞೆ ಕೇಳ್ದು ಶುಭಸಂಸ್ಕಾರದಿಂ ಸತ್ತಾ ಸಂಮೇದಗಿರಿತರು ಶಿಖರ ದಿನಾ[10]ಶಾಖಾಚರಂ[10] ಸೌಧರ್ಮಕಲ್ಪತರು ಶಿಖರಕ್ಕೆ ಪಾಯ್ದು ಚಿತ್ರಾಂಗದನೆಂಬ ದೇವ ನಾಗಿ ದಿವ್ಯಸುಖಫಲರಸಮನಾಸ್ವಾದಿಸಿ ಬಂದೀ ಜಂಬೂದ್ವೀಪದ ಭರತಕ್ಷೇತ್ರದ ಸುರಮ್ಯ ವಿಷಯದ ಪೌದನಪುರದರಸಂ ಸುಸ್ಥಿತಂಗಂ ಸುಲಕ್ಷಣಾದೇವಿಗಂ ಸುಪ್ರತಿಷ್ಠ ನೆಂಬೊಂ ಸುತನಾಗಿ ಭೋಗೋಪಭೋಗಂಗಳನುಪಭೋಗಿಸುತ್ತುಮಿರೆ

ಚಿತ್ರಲತಿಕೆ॥ ಕೇದಗೆವೂವಂ ಚಾದಗೆಬಾಯಂ ಬಿಡೆಬಿಡುತಿರೆ ಬಿಡುವನಿ ಕಡವಿಸಿಲಿಂ
ಸೋದು ಬಿಸುರ್ಪಂ ಜಾದಿಯ ಕಂಪಂ ಕಡವಿನ ಕೊಡಸಿಗೆಯಲರ್ಗಳ ಸೊವಡಿಂ
ಕೋದಿದಿಗ್ರೊಳ್ವಾಹ್ಲಾದಕರಂ ಸೋಗೆಯ ದನಿ ಪೊಱಮಡೆ ಪಡುವಣ ದೆಸೆಯಿಂ
ದೂದೆ ಸಮುತ್ಸಹ ಮೋದಮೆಲರ್ಬಂದುದು ಮೊಳೆ [11]ಪಸರಿಸೆ[11] ಪೊಸಮೞೆಗಾಲಂ
॥೧೨೭॥

ವ॥ * ಅಂದು ಸಿತಗಿರಿಯೊಳಾ ಪ್ರಾವೃಷೇಣ್ಯಜಳಧರಧ್ವನಿಗೆ ಮಸಗಿ ಮುಸುಱಿ ಮುತ್ತಿ ಮೊತ್ತಂಗೊಂಡು ಕಾ[12]ಡು[12]ವ ಕೋಡಗಂಗಳಂ ಕಂಡು ಜಿತಸ್ಮಯನುಂ ಸಂಜಾತವಿಸ್ಮಯನುಂ ಜಾತಿಸ್ಮರನುಂ ವೈರಾಗ್ಯಪರನುಮಾಗಿ * ಪೋಗಿ ಸುಧರ್ಮಾ

---

1 ಲಕ (ಚಟಣ) 2 ಕಿಸಲಯ ಕೊಳಂ (ಗಚಟಡ) ಕೋಶಂ (ಜ) 3 ಲಮಪ್ಪ (ಜ) 4 ಪರ (ಗಚಟ) 5 ಪ (ಚಟಡಣ) 6 ಳಂ (ಚಟಡಣ) 7 ಳಿಂ (ಚಟಡಣ) 8 ಭಿ (ಜ) 9 ಪ್ಪ (ಕಗಚಟಡ) ತಿಬ್ಬ (ಣ) 10 ಚರಂ (ಚಟಡಣ) 11 ಪೋಪರೆ (ಜ) 12 ದು (ಚಡ) * ಈ ಭಾಗ 'ಟ' ಪ್ರತಿಯುಲಿಲ್ಲ.

ಚಾರ್ಯರ ಚರಣೋಪಾಂತದೊಳ್ ತಪಶ್ಚರಣಮುಮಂ ಕೈಕೊಂಡನಾ ಸೂರದತ್ತ ಚರರೆ[1]ಮಾದೆವು ಇತ್ತ[1] ಸುವತ್ತ[2]ಚರಾ[2]ಖಾಚರ[3]ನುಮಿಾ[3] ಚರಾಚರ ಸ್ವರೂಪ ಮಪ್ಪ ಸಂಸಾರ ಕಾಂತಾರದೊಳ್ ತಿರಿದು ಬಂದು ಸಿಂಧುತೀರದ ರುಸಿಪಳ್ಳಿಯೊಳ್ ಮೃಗಾಯಣನೆಂಬ ಮುನಿಗಂ ವಿಶಾ[4]ಖೆ[4]ಯೆಂಬ ಗೊರತಿಗಂ ಗೌತಮನೆಂಬ ಮಗ ನಾಗಿ ಪುಟ್ಟಿ ತಪಂಬಟ್ಟು ಬೇಸಗೆಯಾಗೆ

ಭಗ್ನಮನೋರಥಂ ರತಿಸುಖಾಸವ ಸೇವೆಗೆ ಪಂಚಬಾಣ ಪಂ
ಚಾಗ್ನಿತಪಕ್ಕೆ ನಿಲ್ವ ವಿರಹಾತುರನಂತಿರೆ [5]ಕುತ್ಸಿ[5]ತಾಗಮ
ತ್ವಗ್ನಿಳಯಂ ನಿಳಿಂಪ ಸುಖ ಲಂಪ[6]ಟ[6]ನಾಗಿಯೆ ನಿಂದನಂದು ಪಂ
ಚಾಗ್ನಿತಪಕ್ಕೆ ತಾಪಸ ಸಮೂಹ ಮಹೋತ್ತಮನಪ್ಪ ಗೌತಮಂ ||೧೨೮||

ಪಱುಗಱಿದ ಪಾಸಮುಂ ಕೈ
ಗಱಿದ ತಪ್ಪೋನಳನೆ ಸುಡುಗುಮೊಟ್ಟಿದ ಕಿಚ್ಚಿಂ
ತಱಿಪಱಿನೆ ಪುಳ್ಳಿಯೊಳಗಣ
ಪುೞು ಬೇಗಂ ಬೇಗುಮುಗ್ಗ ಬೇಗುಮೆ ದುರಿತಂ ||೧೨೯||

ವ|| ಆತನಾ ತಪಃಫಲದಿಂ ಜ್ಯೋತಿರ್ಗಣದೊಳಗೆ ಸುದರ್ಶನನೆಂಬ ದೇವನೀತ ನಾಗಿ ಪೂರ್ವಜನ್ಮಜನಿತ [7]ಪ[7]ರುಷರೋಷಾವೇಶದಿನೆಮಗೀಯುಪಸರ್ಗಮಂ ಮಾಡಿದ ನೆಂಬುದುಮುದೆಲ್ಲಮನಾ ಸುದರ್ಶನದೇವಂ ಕೇಳ್ದು[8]ಸದ್ದ[8]ರ್ಶನಮಂ ಕೈಕೊಂಡನಂಧಕ ವೃಷ್ಣಿಯುಂ ವಿರಕ್ತನಾಗಿ ಸಮುದ್ರವಿಜಯಂಗೆ ಪಟ್ಟಂಗಟ್ಟಿ ತಪಂಬಟ್ಟು ಮೋಕ್ಷಕ್ಕೆ ಪೋದನಿತ್ತಲ್

ಸೋದರ[9]ರೆಣ್ಬ[9]ರುಂ ಪಸುಗೆಯಂ ಪ್ರತಿಪಾಲಿಸಿ ಲೋಕಪಾಲರಂ
ತಾದರದಿಂ[10]ದೆ ಬೆಚ್ಚು[10] ಬೆಸಕೆಯ್ಯೆ ನಿಜಾ[11]ಜ್ಞೆ[11]ಗೆ ರತ್ನಗರ್ಭೆಯಂ
ಕಾದು ಸುವರ್ಣಯುಕ್ತಿಯೆನೆ ತನ್ನ ಕರಕ್ಕೆ ಸಮುದ್ರಮೇಖಲಾ
ಮೇದಿನಿಯಂ ಸಮುದ್ರವಿಜಯಂ ಮಣಿಮುದ್ರಿಕೆಯಾಗೆ ಮಾಡಿದಂ ||೧೩೦||

ಪೊಸದೇ[12]ಶಿ ಪೊಂಗು ಪೊಂ[12]ಗೆಸೆ
ವೆಸಕಂ ಕಡುಗಾಡಿ [13]ರೂಢಿ[13]ಯೆಂಬಿವಱಿಂದಂ
ವಸುಧೇಶನಣುಗದಮ್ಮಂ
ವಸುದೇವಂ ಧರೆಗೆ ಕ[14]ಣ್ಣು[14]ಮುಳ್ಳಾಗಿರ್ದಂ ||೧೩೧||

---

1 ಮಾದೆವು ಮತ್ತ (ಗ) ಮಾದೆವು ಮತ್ತೆ (ಚಟ) ಮಾವತ್ತ (ಜ) 2 ಶಾ (ಜ) 3 ನುಂಖ (ಜ) 4 ಳೆ (ಜಟಣ) 5 ಕುಸ್ಶಿ (ಚಟಡ) ಪಶ್ಚಿ (ಣ) 6 ಟ (ಣ) 7 ಪು (ಚಜಟ) 8 ಸುದ (ಜಡ) 9 ರಿಬ್ಬ (ಡ) 10 ದಬೆಚ್ಚ (ಚಟ) 11 ಗ್ನಿ (ಜ) 12 ಸೆ ಪೊಂಗು ಪಾಂ (ಜ) 13 ಗರುಡಿ (ಚಟಡಣ) 14 ಣ್ಣ (ಜ)

ಪಡೆದಡಿಯಿಟ್ಟವೊಲ್ ಕುಸುಮದೊಳ್ ಮದನಾಯುಧಲಕ್ಷ್ಮಿ ಬಾಳಚೂ
ತದೊಳೆ ವಸಂತಲಕ್ಷ್ಮಿಯತಿನರ್ತಿಯೊಳುನ್ಮದಲಕ್ಷ್ಮಿ ಚಂದ್ರಬಿಂ
ಬದೊಳತಿ ಪೂರ್ಣ[1]ಲಕ್ಷ್ಮಿ ನವಯೌವನಲಕ್ಷ್ಮಿ ವಿಳಾಸಲಕ್ಷ್ಮಿಯಂ
ದದಿನಡಿಯಿಟ್ಟುದಂದು ವಸುದೇವನ ಚೆಲ್ವಡರ್ದಂಗಯಷ್ಟಿಯೊಳ್ ॥೧೩೨॥

ವ॥ ಅಂತು ಬಂದ ಯೌವನ ವಸಂತದೊಳ್ ವಸುದೇವಕುಮಾರಂ ತನ್ನೋರ ಗೆಯ ಚೆನ್ನಿಗರುಂ ಚದುರರುಮಪ್ಪ ರಾಜಕುಮಾರರುಮಂ ಮಂತ್ರಿಪುತ್ರರುಮಂ [2]ಕೂಡಿಕೊಂಡು ವನಕ್ರೀಡೆಗೆ ವಿನೋದಜಳಕೇಳಿಗಳಂ ಮೊಗಸಲೊಡನೆ

ಅತನುವನತಿಶಯದಿಂ ಖತು
ತತಿಗಳ್ ಬಳಸುವವೊಲೆಳಸಿ ಬಳಸಿದರಂತಾ
ಕ್ಷಿತಿಪತಿಸುತನಂ ವಿಟಸಂ
ಡಿತ ನಟ ಪರಿಹಾಸಕಾದಿ ನರ್ಮಸಹಾಯರ್ ॥೧೩೩॥

ಪರಗುಣಗಣಮಂ ಸೈರಿಸು
ವರಮಗನಂ ಮನುಜರೊಲ್ವರಣಮೆಲ್ಲರ್ ಮ
ಚ್ಚರಿಪನನುಡುನಿಕರಂ ಖರ
ಕರನಂ ಬಿಸುಟಮೃತಕರನನೋಲಗಿಸುವವೊಲ್ ॥೧೩೪॥

ವ॥ ಒಂದು ದಿವಸಂ ಬಂದ ನಂದನವನಮಂ ತಳರ್ದು ಬರ್ಪಂತೆ ತಳ್ತುಪಿಡಿದ ಪೀಲಿಯ ತಟ[3]ಯ ತುಱುಗಲೊಳಗೆ

ಬಳೆದಿರೆ ವೃತ್ತಪಾಠಕ ಶುಕಧ್ವನಿ ತಳ್ತಿರೆ ನುತ್ತಕಾಮಿನೀ
ಕಳಕಳ ಕೋಕಿಳಾವಿರುತಿ ಗರ್ಭಕ ಗಂಧಭರಕ್ಕೆ ತುಂಬಿಗಳ್
ಬಳಸಿರೆ ಪೂವಿನಂತೆ ಮುಗುಳಂತಿರೆ ಕೆಂದಳಿರಂತೆ ಮಾಣಿಕಂ
ಗಳ ತೊಡವೊಪ್ಪೆ ಬರ್ಪನೊಸೆದಾ ವಸುದೇವ ವಸಂತವಲ್ಲಭಂ ॥೧೩೫॥

ವ॥ ಮತ್ತೊಂದು ದಿವಸಂ

ಕುಂಕುಮದಣ್ಪನೆಯ್ದೆ ಕಳೆದಾಗಳೆ ಚಂದನದಣ್ಪನಿಕ್ಕುವಂ
ಸೋಂಕುವ ಬಾಳಕೇಳಿ ಮೃಗಮಂ ತೆಗೆದಪ್ಪಿ ಪಸುಂಗಳಾಂತಿಯಂ
ತಾಂ ಕುಡುಕಿಕ್ಕು[4]ವಂ ಯುವತಿನೇತ್ರಚಕೋರದ ಪಕ್ಕೆ ಭೋಂಕನೇ
ಣಾಂಕನ [4]ಕೆ[4]ಯ್ತದಿಂ ಕೃತಕಕೈಲಮನೇಱ ನರೇಂದ್ರಚಂದ್ರಮಂ ॥೧೩೬॥

---

1 ರ್ಪ (ಜ) 2 ಕೂಡಿಕೊಂಡು ನವ (ಚಟಙ) ಕ್ರೀಡಾವನ (ಜ) 3 ಕುಂ (ಕಜಙ) ಕಂ (ಡ) 4 ಕ (ಚಟಡಙ)

ವ॥ ಮತ್ತೊಂದು ದಿವಸಂ

ಕತ್ತುರಿಯಕ್ಕೆ ಕೆಂದಳಿರ ಕೆಯ್ದೊಡೆ ಕೇವಗೆಯೊತ್ತೆ ಪೂವಿನಿಂ
ದೆತ್ತಿದ ವಿಾನಕೇತನಮಶೋಕೆಯ ಸೋರ್ಮುಡಿಕಟ್ಟು ಕೂಡೆ [1]ತೂ[1]
ಗುತ್ತರಲಂಬನಿಕ್ಷುಧನುವಂ ಗೊಲೆಗೆತ್ತಿ ತೊ[3]ಟಿಲ್ವ[3]ನಂಗನಾ
ಚಿತ್ತದೊಳಂ ಪುರಾಂತರದೊಳಂ ವಸುದೇವ ಕುಮಾರಮನ್ಮಥಂ ॥೧೩೭॥

ಪುಗುವನದೊರ್ಮೆಯುಂ ನಗುವ ದೃಗ್ವನದಂತಿರೆ ತೊಟ್ಟ ಪೂವಿ[3]ನಂ[3]
ಗಿಗೆ ಪೊಳೆದೊಪ್ಪಿ ಕೆಂದಳದೊಳಂಕುಶವಜ್ರವಿಭಾದ್ರಿಭೇದಿ ಮು
ತ್ತುಗಳಗುಳಂ ತಳತ್ತಳಿಸುವೇಱಿದ ದಂತಿ ಸುರೇಂದ್ರದಂತಿಯಂ
ನಗೆ ಸುರರಂತೆ ನೋಡೆ ಜನಮಾ ಪೊಱಲಂ ವಸುದೇವ ವಾಸವಂ ॥೧೩೮॥

ವಿದಳಿತ ಪದ್ಮಲೋಚನ ನಮೋ ಗರುಡಧ್ವಜ ಕಾವುದೆಂದು ಲೋ
ಕದ ಜನಮೆಲ್ಲಮೊಲ್ದೆಱಗೆ ಕಟ್ಟಿದ ಚೌರಿಯೆಱಂಕೆ ಮೂ[4]ಗ[4]ರ
ನ್ನದ ಮೊಗಮು[5]ಟ್ಟ[5]ನಾಂತ ಮೊಗಮಾಗಿರೆ ತಾರ್ಕ್ಷ್ಯನನೇಱುವಂ ಕದ
ಕ್ಕದಿ[6]ಸಿ[6] ನಿರರ್ಗಳಂ ಪೊಳೆದು ಪಾಱುವಿನಂ ವಸುದೇವವಲ್ಲಭಂ (?) ॥೧೩೯॥

ಕಾಜಿನ ಬೀಣೆಯಂ ಕಳೆದುಕೊಂಡು ತಳಂಗಳನೆತ್ತಿಕೊಂಡು [7]ನು
ಣ್ಪೋ[7]ಜೆ ಬೆಡಂಗು ಬಣ್ಣಸರಮೊಪ್ಪೆ ಕರಂ ಯತಿ [8]ಧಾತು[8] ಮೂರ್ಛನಾ
[9]ಬ್ಯಾ[9]ಜದೊಳಾಡೆ ಕೂಡೆ ಕುಡುಪುಂ ಬೆರಲುಂ ಕೃತಕಾದ್ರಿ ಕೂಟದೊಳ್
ಬಾಜಿಸುವಂ ಜಸಂಬಡೆಯೆ ಕಿನ್ನರನಂತೆ ನರೇಂದ್ರನಂದನಂ ॥೧೪೦॥

ವಾರಿಜಮನಿಟ್ಟು ಕಿವಿಯೊಳ್
ವಾರುವಮಂ ಪೀಲಿಯಿಂದೆ ಪಕ್ಕ[10]ರಿ[10]ಸಿ ಮನೋ
ಹಾರಿಯೆನೆ ಮೂಱುಮೊಗದ ಕು
ಮಾರನವೊಲ್ ನೃಪಕುಮಾರನೇಱುವನೊಲವಿಂ ॥೧೪೧॥

ಇಂತು ಕಡುಚೆಲ್ವ[11]ನಾ[11]ತನ
ನಿಂತಾಯ್ತಾದೆಸೆವ[12]ಪಸದ[12]ನಂ ವಸುಮತಿಯಂ
ಕಂ... ಗೆ ನನೆಗಣೆಯಲರ್ವಿ
ಲ್ಲಂ... ಸೋಲಿಸುವುದರ್ಕೆ ಸಂದೆಯಮುಂಟೇ ॥೧೪೨॥

---

1 ಕೂ (ಡಣ) 2 ದಳ್ದ (ಜ) ದಳ್ವ (ಟಡಣ) 3 ನಿಂ (ಣ) 4 ಗು (ಜ) 5 ಟ್ಟು (ಚ) ಟ್ಟಿ (ಜ) 6 ಸಿ (ಜ) 7 ನೋಳ್ಪೋ (ಚಟಡಣ) 8 ದಾರು (ಜ) 9 ವೋ (ಚಟಡಣ) 10 ರ (ಚಟಣ) ಲಿ (ಡ) 11 ನಾಂ (ಚಟಡಣ) 12 ಸದನ (ಚಟಡಣ)

ಆವೊಳ್ಗಾವುದು ಕೆಯ್ತ್ತುಮಟ್ಟಿ ಮತಿಗೆಟ್ಟ್ಯಾವಾಕ್ಕೆ ತೋ[1]ಳ[1]ಪ್ಪಳೊ (?)
ಲ್ದಾವೊಂದಾಕೃತಿಗಾವೊಳಾವೆಸೆವ ನೇಪಥ್ಯಕ್ಕೆ ಕಣ್ಸೋಲ್ವರಾ
ಭಾವಂ ಚೆಲ್ವೆವೊಲಂದ ಮಚ್ಚಿಱಿದವೊಲ್ಶೃಂಗಾರವೊಲ್ದಿರ್ದವೋಲ್
ತೀವಿರ್ದಾ ರತಿರತ್ನ ಮೇರುಗೆ ಮರುಳ್ಗೊಂಡಿರ್ದರಬ್ಜಾಕ್ಷಿಯರ್ ||೧೪೩||

ಅವಳನೆಸುವೆಂ ಕೆಡಪುವೆ
ನಾವಳನಿನ್ನಾವಳಂ ಪೊರಳ್ಚುವೆನೆನುತುಂ
ತೀವಿ ತೆಗೆದಿಕ್ಷುಧನುವಂ
ಕಾವಂ ಕಟಕಕ್ಕೆ ಸು[2]ರಿಗೆ[2]ಗಿಟ್ಟವೊಲಾದಂ ||೧೪೪||

ಅಲ[3]ರ್ಗಣ್ಗಂ[3] ಬಾಳವೆಂದಿಕ್ಷುವ ಧನುಲತೆಯಂ ತುಂಬಿಯಂ ಬಿಟ್ಟು ಪಂಕೇ
ಜಲತಾಜ್ಯಾಲೇಖೆಯಂ ಕೆಂದಳಿರ ತಳಮಿದೇಕೆಂದು ಹಸ್ತಾಗ್ರದೊಳ್ ಪ
ಚ್ಚೆಲೆಯಂ ಕೊಂಡಿಟ್ಟು ಕಟ್ಟುತ್ತೊರೆದು ಸಿಡಿವಿನಂ ಕಯ್ಬೆರಲ್ಪೊಂಗೆ ಮುಂಗೈ
ಸುಲಿವನ್ನಂ ಕಾಮನೆಚ್ಚಂ ಪಡಲಿಡುವಿನೆಗಂ ಪೌರನಾರೀನಿಕಾಯಂ (?) ||೧೪೫||

ಪುಸಿಯೆಂದಾದನದಿರ್ಪ ತಪ್ಪಿಸಿ [4]ಸ[4]ರಲ್ಮತ್ತೊಂದು ತಾಂ ಪೋಗೆ ನು
ಣ್ಬನೆಯಂ ಮುಟ್ಟದೆ ಮತ್ತಮೊಂದು ಕಣೆ ಕಲ್ಲಂ ತಾಗಿದಂತಾಗೆ ಕೊಂ
ಡಸಿಯಂಬೊಂದನೆ ದಡ್ಡವಿರ್ದ ಹೃದಯಂ ಜಾಳಾಂದರಂಬೋಪಿನಂ
ಬೆಸೆವೆಚ್ಚಂ ಕಡುವೇಸಿವೆಂಡಿರ[5]ನ[5]ದೇಂ ಕಾಮಂ ಛಲಗ್ರಾಹಿಯೋ (?) ||೧೪೬||

ಕಡುಗೆಚ್ಚುವಿರ್ದ ಮನಮಂ
ನಡವೊಡೆ ಬಿಸುಟರಲಸರಲನೀರದ ಸರಮಂ
ನಿಡುನನೆಯಂಬಿಂ ಕೆಡೆಕೆಡೆ
ಕೆಡೆಯೆಂದೆಚ್ಚಾದ್ದುರ್ ಕೆಡಪಿದಂ ಡಾಳೆಯರಂ ||೧೪೭||

ಕಂಟಣೆಪಿನಮಲರಿಸಿದಂ
ಕುಂಟಣಿಯರ ಕೊರಡುಗೊಂಡ ಮನಮಂ ಮದನಂ[6]
ಗೆಂಟಾಗಿ ವಿಕಾಸಕ್ಕೆ ಮು
ರುಂಟಿದ ಮಲ್ಲಿಗೆಯನಲರಿಪಂತೆ ವಸಂತಂ ||೧೪೮||

---

1 ಳ್ತ (ಜ) 2 ರಗಿ (ಚಟಡಣ) 3 ರ್ವಲರ್ಗಳ್ (ಜ) ಗರ್ಣ್ಗಳ್ (ಟ) ಗರ್ವಲರ್ಗಳ್ (ಡ) 4 ಸಿ (ಚ) ಶ (ಟಣ) 5 ನಿ (ಚಟಡಣ) 6 ಮಂ (ಜ)

ಕಿಸುರಕಸಗಳೆದು[1]ಮೆ[1]ತ್ತಿಸಿ
[2]ಪೊಸಬಗೆ[2]ಯಂ ಪೂಸಿ ರಾಗರಸದಿಂ ಪೊಕ್ಕಂ
ಪುಸಿದಟ್ಟಿವೆಂಡಿರ ಬೇಟಂ
ಬಿಸುಟಿರ್ದೆಯಂ ಸ್ಮರನೆ ಪುಗುನವೊಲ್ [3]ಪ್ರೊಸಮ[3]ನೆಯಂ ||೧೪೯||

ನಟ್ಟುದು ನೊಂದೆನೆಂದೆರ್ದೆಯನೊತ್ತಿಕೊಳುತ್ತುಮೆ ಬಂದೊಡೇನುಮಂ
ನಿಟ್ಟಿಸಿ ನೋಡಿ ಕಾಣದೆಲೆ ನೋಡವೆ ಮಾಣದೆ ಕೀಱುಮಾರನಂ
ಪುಟ್ಟಿರೆ ಪೆಂಡಿರೆಂತೆನಗೆ ಹೂಹೆಯನೆಚ್ಚಪನೆನ್ನನೆಂದವಳ್
ಕುಟ್ಟನಿ ಕಯ್ಗಳಂ ಮುರಿದು ಬಯ್ದಳನಂಗನನಾ ಪ್ರಸಂಗದೊಳ್ ||೧೫೦||

ಆರಸಂಗೀತಂಗೆ ಕಣ್ಸೋಲ್ತುಬಳೆಯರವರೇನಿರ್ವರೋ ಮೂವರೋ ನಾ
ಲ್ವರೊ ಲೆಕ್ಕಂ ಲಕ್ಕೆಯುಂ ಕೋಟಿಯುಮೆನೆ ವಶವಾದಪ್ಪರೇಗೆಯ್ವೆನೊರ್ವಂ
ಸ್ಮರಕೋಟಾಕೋಟಿಯುಂ ಪೂಣ್ದಿಸಲೆ ಪಡೆವೆನೆಂದಂದು [4]ಪೆತ್ತಂ[4]ಕರಾಬ್ಜಾಂ
ಕುರ ಸತ್ಸಂದರ್ಭದರ್ಭಂ ಧೃತಸಕಲ ಕಲಾಗರ್ಭನಂಭೋಜಗರ್ಭಂ ||೧೫೧||

ವ|| ಅಂತು ಪಡೆಯಲೊಡನೆ

ಜಿನನಂಘ್ರಿದ್ವಂದ್ವದೊಳ್ ಧೂರ್ಜಟಿಯ ಜಡೆಗಳೊಳ್ ಬ್ರಹ್ಮನುತ್ತಂಸದೊಳ್ ಕೃ
ಷ್ಣನ ಕೇ[5]ಶ[5]ದ್ದೇ[6]ಶಮೊಳ್ ಬಂದೆಱಗಿ ತುಱುಗಿ ಪುಷ್ಪೇಷುಚಾರಂ ನಭಂ ಪೂ
ವಿನ ಪಂದರ್ ಭೂತಲಂ ಪೂವಿನ ಪೊಸಪಸೆಗಳ್ ದೇ[5]ಸ[6]ವೆತ್ತಿರ್ಪಿನಂ ಪೂ
ವಿನ ತೇರಂತೆಚ್ಚುವಂತಾ ಪುರವರ ವನಿತಾಸೈನ್ಯಮಂ ಕಾಮಸೈನ್ಯಂ ||೧೫೨||

ಅಂತೆಸುವ ಮದನನಂ ಕಂ
ಡಂತೆಯ್ದಿ ಪೆನಿವರ್ಗೆ ಸರಲನೆನಿತುಂ ನನೆವೂ
ವಂ ತುಱುಗೆ ಪನಸ ಪಿಪ್ಪಲ
ಸಂತತಿಗಳೊಳಂ ವಸಂತರಾಜಂ ಪಡೆದಂ ||೧೫೩||

ನಿಕರಂ ತೆಂಕಣಗಾಳಿ ನಾಗರಿಕನಾಗಲ್ ದರ್ಪಕಂ ಪೀರಮ
ರ್ದಕನಾಗಲ್ ಮಧುಮಾಸನೊಲ್ದು ವಿಟನಾಗಲ್ ಚಂದ್ರಬಿಂಬಂ ವಿದೂ
ಷಕನಾಗಲ್ ಪರಿಹಾಸಕಂ ಕುಮುದಿನೀವೃಂದಕ್ಕೆ ಸೌಭಾಗ್ಯ ನಾ
ಯಕನಾದಂ ಶಠಧೃಷ್ಟ ದಕ್ಷಿಣ ಗುಣಂ ಶೃಂಗಾರ ಕಾರಾಗೃಹಂ ||೧೫೪||

---

1 ಮೊ (ಚಟಡಣ) 2 ಪೊಸ ಬಸೆ (ಚಡ) ಪಸೆಬಸೆ (ಟಣ) 3 ಪಾಟ್ಟಿ (ಚಟಡಣ)
4 ಪಡಾ (ಚಟಡಣ) 5 ದೇ (ಚಟ) ಕೇ (ಡಣ) 6 ಸಿ (ಚಟ)

ಇದು ಮೃದುಪದಬಂಧುರ ಸರಸ್ವತೀ ಸೌಭಾಗ್ಯವ್ಯಂಗ್ಯ ಭಂ'ಗಿ'[1] ನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್ ವಸುದೇವ ಪ್ರತಾಪ ವರ್ಣನಂ

ಚತುರ್ಥಾಶ್ವಾಸಂ

ಸಮಾಪ್ತಂ

1 ಗಿರಿ (ಚಟಡ)

ಪಂಚಮಾಶ್ವಾಸಂ

ಶ್ರೀಯಂ ಸರಸತಿಯಂ ಜಯ
ಜಾಯೆಯನಾ ವೀರಲಕ್ಷ್ಮಿಯಂ ಜಸವೆಣ್ಣಂ
ಜ್ಯಾಯನೆಱಗಿಸಿದ ನೀಱಿಂ
ಸ್ತ್ರೀಯರನೆಱಗಿಸುವುದರಿದೆ ಮನುಜಮನೋಜಂ ॥೧॥

ಅರಸ[1]ನಱ[1]ದಾಳ್ವ[1] ನಗರದ
ತರುಣಿಯರುಡೆಯು[2]ಚ್ಚಿರ್ವೋ[2]ಗೆದೊರ್ವನೆ ಸುಮ[3]ನ
ಶ್ರ[3]ರನೇಂ ಶೂರ[4]ನೆ ಚೇತಃ[4]
ಪುರಮಂ ನಿರ್ಧೂಮಧೂಮಮಾಗಿರೆ ಸುಟ್ಟಂ ॥೨॥

ವ॥ ಎಂಬಿನಮಾ ಕುಮಾರಂ ಕಣ್ಗೆಕ್ಕಿದ ಠಕ್ಕುಂ ಮನಕೆಕ್ಕಿದ ಮೂರ್ಛೆಯುಂ ಸುಗತಿಯರ್ಗೆಕ್ಕಿದ ಸೊರ್ಕುಮೆನೆ ಬರ್ಪುದಂ ಕಂಡು ಸೌಭಾಗ್ಯಕಾರ್ತಿಯರ್[5] ಸೌ[5]ಭಾಗ್ಯಮಂ ಸೇಸಿಕ್ಕೆಯುಂ ಚಲ್ಲಕಾರ್ತಿಯ[6]ರ್ ಚಲ್ಲ[6]ದಿಂ ನಿವಾಳಿಸಿ ನಾಣಂಬಟ್ಟೆದಿೞಾದಿಯುಂ ಸೋಲಕಾರ್ತಿಯ[7]ರ್[7] ಕಣ್ಸೋಲಮಂ ಕಾಣ್ಕೆಗೊಟ್ಟು ಮನಮಂ ನೆಚ್ಚುಗುಡೆಯುಂ ರಾಗರಸದೊಳ್ಮುೞುಗುತ್ತಂತೆ[8]ಸೆಕಾರ್ತಿ[8]ಯರ್ತೆಪ್ಪಂಬಿಡಿವಂತೆ ತಾಪದಿಂ ಮ್ಮನಾಳನಾಳದ ಪೊರಳಯುಂ ಪೊರಳ್ದು ತರ್ಕಯಿಸಿಯುಂ [9]ತ್ರೀ[9]ಯಕಾರ್ತಿಯರ್ತಾಯಿಲ್ಲದ ಕೂಸಿನಂತೆ ಬಾಯಂಬಿಡೆಯುಂ ಕ[10]ಟ್ಟೇ[10]ಯಕಾರ್ತಿಯರ್ಕೆಟ್ಟು ಮನಮನ ಸಱುವಂತೆ ಕಾಮಪಿಶಾಚದಿಂ ಪುಗದೆಡೆಯಂ ಪುಗೆಯುಂ ಪೊಸವೇಟಕಾರ್ತಿಯರ್ತಮ್ಮ ಕನ್ನೆವೇಟ[11]ಮ[11]ವನೊಳಾಗದೆ ಕೆಟ್ಟೆವೆಂದು ಕಟ್ಟುಗೆಡೆಯೆಯುಂ ಜೇಟಿಗನಿತು ಬೇಟ ಮಾಡೊಡಂ ಮನವಾವೆಡೆಗಮೆಯ್ದದೆಂದಲವರಿಸುವ ಕಡುವೇಟಗಾರ್ತಿಯ ಕಾತರಿಕೆಯುಂ ಕಳೆಯಲ್ಪಡೆದೆವೆಮ್ಮ ಮಕ್ಕಳ [12]ಮಕ್ಕಳ್ಗಾವಗ[12]ಮಿಾ ಬೇಟಮೆ ಸಾಲ್ಗುಮೆಂದು ಪ[13]ಟ[13]ವೇಟಮಂ ಪೊಕ್ಕುಱಗೊಕ್ಕು ಪೆಡೆಗೆ ಹಾರಂ ಪೊಸವೇಟಮಂ ಪೊಯ್ದು [14]ಕೊಳ[14]ಲುಂ ಮತ್ತಿನ ಗಂಡರ್ಮೊಱತಿಯಲ್ಲರೆಂದು ಮನದೊಳಗೆ ಬಟ್ಟೀಗರ್ಗುಡಿದ

---

1 ರೆಱದಾಳ್ವ (ಜ) ಡಾಳುವ (ಟಡ) 2 ಚ್ಚಿದೊಂ (ಗಚಟಡ) ಚ್ಚಿರ್ವೋ (ಙ) 3 ನೋಂಶ (ಚಟಡ) ನೇತ (ಙ) 4 ನೊ ಚೇತಃ (ಚಡ) ನೊ ವೀರನೊ (ಜ) 5 [illegible] ಮಂ ಸೌ (ಜ) 6 ರ್ಕಳ ಚೆಲ್ಲ (ಕಗಟಡ) ರ್ ಕಣ್ಣಾಳ (ಜ) 7 ರ್ಕಳ (ಕಗಟಡ) 8 ಸೆ(ಚಟಡಣ) 9 ಆತೀ (ಜ) 10 ಟ್ಟಾ (ಜ) ಟ್ಟ (ಡ) 11 ವಮಿ (ಚಡ) ಮಿ (ಜ) 12 ಮಕ್ಕಳವೆಗ್ಗ (ಚಟಡ) ಕಳ್ತಲೆಗ (ಜ) 13 ಳ (ಜ) 14 ಕೋಟಿ (ಚಟಣ)

ಬದ್ದೆಯರೀ ಭವಮಿಂತೆ ಪೋದುದು ಮಱುಭವದೊಳಾದೊಡಮೀತನೊಳೆ ಬೇಟಮ
ಕ್ಕೆಂದು ಪಱಿಸಿ ಪರಿಚ್ಛೇದಿಸಿ ಕಾಮಾಗ್ನಿ[1]ಯಂ ಪು[1]ಗೆಯುಂ ಸತಿಯರ್ ಪತಿವ್ರತಿಕೆಯಂ
ನಂಬಿಯ[2]ಗಲನಿಕ್ಕಿ ತೂ[2]ಱಿತಿಯೆಯುಂ ಕುಂಟಣಿಯರ್ ಸೋಲ್ತು ಸವಿಗಂಡು ಬೇಟಕ್ಕೆ
ಕಂಟಕರಾದೆವೆಂದು [3]ನೀಕರಿಸೆ[3]ಯುಂ ಪಟಿವೆಂಡಿರೆಮ್ಮ ದಿವಸದೊಳೀತಂ ಪುಟ್ಟದೆ
ಪರಿಜುಂ ಪ್ರಾಯಮುಂ ಸುಸಿಲುಂ ಬಸನಮುಂ ಬಱುದೊಱಿತಿಯೋದುದೆನೆಯಂ ಸಿರಿ
ಯೊಡೆಯರ ಪೆಂಡಿರೆಲ್ಲಂ ಪರಿಚಾರಕಿಯರಂ ಕೂಡಿಕೊಂಡುಜ್ಜುಗಾಪಿನಜ್ವರಂ ಪಿಡಿದು
ರುಳ್ಚಿ ಚಿನ್ನಸಂಕಲೆಯಿಂ ಪೆಡಗೈಗಟ್ಟಿ ಪಲ್ಲಿಲಿವಾಯೊಳ್ ಕ್ರೀಡಾಕಂತುಕಮಂ ತೂಂತಿ
[4]ಕಾಲ್ದುಡು[4]ಗೆಯಂ ಕಳಿದೀಡಾಡಿ ಕಣ್ದೋಱಿತಿ ಮಾಸಿದ ಸೀರೆಯಂ ಮುಸುಂಕಿ ತೊಟ್ಟಿ
ರೊಳಗಣ ತೊಟ್ಟಿರಾಗಿ ಬೀದಿವರಿಯೆಯುಂ ಜೈನೇಯರ್ಜಿನಪತಿಯೆ ದೈವಮೆಂಬ
ನಂಬುಗೆಯೆ ಸಾಲ್ವುದು ಪರಪುರುಷಪರಿತ್ಯಾಗವ್ರತಮಂ ಗುರುಗಳಂ ಬೇಡಿಕೊಂಡು
ಬಿಸುಡಿಕೊಂಡಪ್ಪೆವೆಂದು ಮನಂದ[5]ರೆ[5]ಯುಂ ಲೋಭಗುಂಟಣಿಯರ್ ಗಾಯಿಲೆಯಪ್ಪ
ಮಕ್ಕಳನೋವರಿಯೊಳ್ನೂಂಕಿ ಪಡಿಗೆತ್ತು ಪೊಡೆಕಟ್ಟಂಕಟ್ಟಿ ಮುಸುಂಕಿಟ್ಟು ಕುಳ್ಳಿರೆಯುಂ
ಆಕೆಗಳ ಕೊಯ್ದಿಕ್ಕಿದ ಕುರುಳ್ಗಳಿಂ ತುಂಬಿಯ ಬಣಂಬೆಯನೊಟ್ಟಿದಂತಾಗೆ
ಕಡಿದಿಕ್ಕಿದ ಬೆರಲ ಕಂಡಿಕೆಗಳಿಂ ಪಸಿಯರಸಿನದ ಕೊಂಬನುಡಿದು ಸುಣ್ಣಂದೊಡೆ
ದೀಡಾಡಿದಂತಾಗೆ ಕಿಟ್ಟಿಕ್ಕಿದ ಕೆಂಬಲ್ಗಳಿಂ ದಾಳಿಂಬದ ಬಿತ್ತಂ ರಾಸಿಗೆಯ್ದಂತಾಗೆ
ಕಿಱುವೆರಲ್ಗಳಿಂ ಕಚ್ಚುವ ಮುಖಮುಕುರಂಗಳ್ಚಂದ್ರಮಂಡಲಂ ಪಾವಿನ ಪೆಡೆಯಂ
ನುಂಗುವಂತಾಗೆ ಬಯಲ್ದೊಱಿ[6]ಯನೀಸು[6]ವ ಬಾಲೆಯರಿಂ ಸ್ತ್ರೀರಾಜ್ಯಮಂ ಸೂಱಿ
ಗೊಂಡುಟ್ಟುದಂ ಸುಲಿವಂತಾಗೆ ಸ್ಮರಪರಿತಾಪಕ್ಕೆ ಪಕ್ಕಾಗಿ ಪೊಕ್ಕು ಪೊರಳ್ವ ನರಳ್ವ
ನಾರಿಯರ ನೆರವಿಗಳಿಂ [7]ಬ[7]ನಂಗಳೆಲ್ಲಂ ಮದನ ವ್ಯಾಧನಾಱಿಡಿಗೊಂಡಡವಿಯಂತಾಗೆ
ಕಮಳಕೇಸರದ ಕಿಸುವುಡಿಯಿಂ ಕೆಚ್ಚನಿರ್ದ ನೀರೊಳ್ಬಿರ್ದ ನೀರರುಹನಾಳಂಗಳ
ನೊಟ್ಟಿಕೊಂಡು ಬೆಂಡುನೆಗೆದ ಬೆಡಂಗಿಯರಿಂ ತಣ್ಮಡುಗಳೆಲ್ಲಂ ನೆತ್ತರುಂ ಕರುಳುಂ
ಸುರಿಯೆ ಕಾಮಕಿರಾತಂ ಕೊಂದಿಕ್ಕಿದ ಮಡುಗಳಂತಾ[8]ಗೆ ತಂ[8] ಪಿಂಗೆ ಪಿಂಗಲಾಱಿದಂ
ಗನೆಯ ಪೊಟ್ಟಿ ಕೊಂಡ ಪುಟ[9]ಲೆ[9]ಲ್ಲಂ ಚಿತ್ತಜಚೋರನರೆಯೆಱಗಿಱಿದು ದರಿಗೆಡಪಿ
ದಂತಾಗೆ ಕಾಪಟಿದು ಪೊಟಿಲೊಳುಳ್ಳ ಬೆಲೆವೆಂಡಿರುಂ ಕುಲವೆಂಡಿರುಂ* ಮರುಳ್ಗೊಂ
ಡುದಂ ಕಂಡು ಪಾರ್ವರೆಲ್ಲರುಂ ‘ಗೃಹಿಣೀಗೃಹಮುಚ್ಯತೇ’ ಎಂಬುದು ಗರತಿಯಿಲ್ಲದೆ
ಗೃಹಮೆಲ್ಲಿತ್ತೆಂದು ಗಾರ್ಹಸ್ಥ್ಯಕ್ಕೆಳ್ಳನೀರೆಱೆದು ಪರದರೆಲ್ಲಂ ಪೆಂಡಿಜೋರ್ಡಾ[10]ಗೆ[10]
ಪರದಾಡುವುದರಿದೆಂದಂಗಡಿಯ ಪಡಿಯಂ ಕೆತ್ತು* ತಳವರ್ಗಮೆಲ್ಲಂ ತಲೆಯಂ ಪೆಂಡತಿ

---

1 ಯಂ ಪೊ (ಗಚಟಡ) ಯಿಂ ಪೊ (ಣ) 2 ಲಗಸಿಕ್ಕಿತೊ (ಜ) 3 ನಿರಾಕರಿಸಿ (ಚಟಡಣ) 4 ಕೆಟ್ಟತುಡು (ಜಣ) ಕಾಲ್ತೊಡಿ (ಡ) ಕಾಲ್ತುದಿ (ಣ) 5 ರಿಯೆ (ಣ) 6 ನೀಗು (ಕ) ಯೆನಿಸು (ಗ) 7 ಜ (ಜ) 8 ಗಿರೆತ್ತಂ (ಚಡಣ) ಸಿರೆತ್ತಂ (ಟ) 9 ಲ್ಗಳ (ಚಟಡಣ) 10 ಡೆ (ಕಚಟ) * ಕೆಟ್ಟಿತ್ತು (ಜ)

ಯುಮಂ ಕಂಡುಪೋಲ[1]ವಿದೇಕೆಂ[1]ದು ಕೈದು[2]ವನಿಂಬಿ[2]ಟ್ಟು ಪುರಜನಮುಮಂ ನೆರಪಿ ಕೊಂಡು ಬಂದು ಸಮುದ್ರವಿಜಯಂಗೆ ಪುಯ್ಯ[3]ಲ್ಚಿ[3] ಮೆಯ್ಯನಿಕ್ಕಿ ತಂತಮ್ಮ ಮಕ್ಕಳಂ ಮುಂದಿಡುವುದುಂ ಆ ನೃಪಂ ನೋಡಿ ವಸುದೇವನ ದೇಹಮನಗೆವೊಯ್ದಂತೆಯುಂ ಪಱಿದು ಪತ್ತಿಸಿದಂತೆಯುಂ ಮೊತ್ತಳವಿಮಾ ಮಕ್ಕಳೇಕಾದುವೆಂದು ಬೆಕ್ಕಸಂಬಟ್ಟು ನೋಡೆ ನುಡಿಯಲವಸರಂಬಡೆದು ಬಳಸಿದ ವಂದಿವೃಂದಮುಂ ಸೇವಕಸಮೂಹ ಮುಂ ಎಮ್ಮೆಮ್ಮ ಪುತ್ರಪೌತ್ರಾದಿಗಳುಮಿನ್ನರೆಂದಱಿವುದೀಪುರದ ಪುಣ್ಯಾಂಗನೆಯರುಂ ಮನಸಿಜನಂತೆ ಮನದೊಳಿರ್ಪ ವಸುದೇವನ ರೂಪು ಗರ್ಭದೊಳ್ಬಿಂಬಿಸಿ ಬಿತ್ತಾದಂ ತೆಯುಮಚ್ಚೊತ್ತಿದಂತೆಯುಮಾತನಂತಪ್ಪ ಪುತ್ರರಂ ಪಡೆವರೊತ್ತೆಯ ಗೂಂಟಂ ಸೊಡರಿಟ್ಟೇಱುವಂತೆರವಿನ ಸಿರಿಯನಱಿದು ಪೊಟಲೊಳಂ ಪೊಱವೊಟಲೊಳಂ ಬೀದಿ ಯೊಳಂ ಅಂಗಡಿಯೊಳಂ ಕೇರಿಯೋಳಂ ಸೂಳೆಗೇರಿಯೊಳಮೆಲ್ಲಿ ನೋಟ್ಪೊಡಂ ಕಾಮ ದೇವನೆ ಬ[4]ವಣಿ[4]ಗೆ ಬಂದಂತೆ ಬರ್ಪ ವಸುವೇವನನೆ ಕಾಣಲಕ್ಕುಮಿಲ್ಲಿಂ ಮೇಲೆ ದೇವರ ಱವಿರೆಂದುಸಿರದಿರ್ಪುದುಮರ[5]ಸನವರಂ[5] ಸಂ[6]ತಸಂ[6]ಬಡೆ ನುಡಿದು ವಿಸರ್ಜಿಸಿ ವಸು ದೇವಂಗಾಗಳೆ ಬಟಿಯಟ್ಟಿ ಬರಿಸಿ ಊರುಬ್ಬೆಯಾದ ತಮ್ಮನಗುರ್ವಿನುರ್ವಿಂಗುಬ್ಬೆ ಗಂಬಟ್ಟು[7]ಬ್ಬರ[7]ವರಿದ ಸೊಬಗಿಂಗೆ ಸಂತೋಷಂಬಟ್ಟು ತೆಗೆದು ತಟ್ಟಿಯಿಸಿ ತೂಪಿಱಿದು ಕೆಲದೊಳ್ಕುಳ್ಳಿರಿಸಿ ಬಾಯ್ವಾಯೊಳ್ ತಂಬುಲಮನಿಕ್ಕಿ ಮೆಲ್ಲನಿಂತೆಂದಂ

ಪೃಥ್ವೀವೃತ್ತಂ॥ ಇದೇಕೆ ಮುಖಚಂದ್ರನೀಪಗಲ ಚಂದ್ರನೊಂದಂದಮಾ
ಯ್ತಿದೇಕಧರಪಲ್ಲವಂ ವಿಧುರಪಲ್ಲವಚ್ಛಾಯಮಾ
ಯ್ತಿದೇಕನುಜ ನಿನ್ನ ಮೆಯ್ ಪೊಸೆದ ಪೂವಿನಂತಾದುದಾ
ನಿದಂ ಬಗೆದೆನಾಡುವೋ ಬಿಸಿಲೊಳೀಗಳಬ್ಜೇಕ್ಷಣಾ ॥೩॥

ಇಂತು ತೊಟಿಲ್ದಲ್ಲವೆ ನಿನ
ಗೆಂತಿರದೇ[8]ನೆ[8]ಮ್ಮ ನೀರೊಳಂ ನೆಟಲೊಳಮೊ
ಲ್ದಂತೆವೊಲುಟ್ಟುಂ ತೊಟ್ಟುಂ
ಸಂತಸದಿಂ ಪೂವಿನಂತೆ ಸುಖಮಿರಲಾಗಾ ॥೪॥

ವ॥ ದೇವಕುಮಾರರುಂ ರಾಜಕುಮಾರರುಮಾರ್ಕಂಡರಾರ್ಕೇಳ್ದರೆಂಬತಿರ ವೇಟ್ಕಿಂ ತಿಟ್ಟನೆ ತಿರಿದು ಬಟ್ಟಸರಿವಂದೊಡೆ ಮೆಯ್ಯಬಣ್ಣಮುಂ[9]ಪುಣ್ಯ[9]ಮುಮರಿಸಿನದ ಪಿಂಜೆಯಂತೆ ಪಾಱಿಪೋಕುಂ ಲೋಕದ ಕಿಸುರುಂ ಕಣ್ಣಿಂಜಲುಂ ಪತ್ತುಗು

1 ವೆಂ (ಚಟಡಣ) 2 ವಂ ಬಿಸು (ಜ) 3 ಲ್ಚೆ (ಚಟಡಣ) 4 ಣ್ಣಿ (ಚಟಡಣ) 5 ಸಂ ಅವರ (ಚಟಡ) 6 ತೋಷಂ (ಚಟಡಣ) 7 ಬೇರು (ಜ) ಬರ (ಡ) 8 ಕ (ಚಜಡ) 9 ದೊಲ್ ಮುರಿ (ಗಚಟಡ) ರೊಲ್ವರ (ಣ)

ಮಿನ್ನೆಂದುಂ ಮನೆಯ ಪೊಸಂತಿ[1]ಲಂ[1] ಪೋಱಮಡಲಾಗದು ನೀನೆತ್ತಲಾನುಮಲಸಿಕೆ ಯಾದೊಡೆ

ಹರಿಯದೊಳಾಸುವಮಾಡರೆ ಗೃಹಾಂಗಣದೀರ್ಘಿಕೆಯಲ್ಲಿ ಹಂಸನಂ
ತಿರೆ ಗೃಹಮೇಣಿಕಾಕುಟಿಲ ನಿಃಕುಟದಲ್ಲಿ ವಸಂತರಾಜನಂ
ತಿರೆ ತೊಳಪೀ ಸುವರ್ಣಕೃತಕಾಚಳ [2]ಮೇರುವಿನಲ್ಲಿ[2] ದೇವನಂ
ತಿರೆ ವಸುದೇವ ನೀನೆಸಗು ನಿನ್ನ ವಿಹಾರವಿನೋದಮಂ ಗಡಾ ||೫||

ವ|| ಎಂದು ಸಾ[3]ಭ್ರಾತ್ರ[3]ಸುಭಗ ಸಹಜಸ್ನೇಹದಿಂ ನಿಜಹೃದಯಮುಮಂ ಮಱಸಿ ತಮ್ಮ[4]ನುಮ[4]ಱದೊಡೆ ನೋಗುಮೆಂದಾರುಮಱ[5]ಯದಂ[5]ತೆ ಸಕಳ[6]ಸುಖ ಪರಿಕರಂಗಳಂ ಸಲಿಸಿ ಮನಮಂ ನೆಱಗೆಯ್ವಂತೆ ಸುಖದೊಳ್ ನೆಱ[6]ಗೆಯ್ದನಾತನು ಮಣ್ಣನಿಕ್ಕಿದುಗುಱಮಂ ದಾಂಟದೆ

ಮನೆಯೊಳಗಿ[6]ರ್ದು ಪು[6]ರಸ್ತ್ರೀ
ಜನಮುಮನಾತ್ಮ ಪ್ರಭಾವದಿಂದಲರಿಸಿದಂ
ಘನಪಟಲದ ಪೊರೆಯೊಳಗಿ
ರ್ದಿನನಲರಿಸುವಂತೆ ಕಮಳಿನೀ ಕಾನನಮಂ ||೬||

ವ|| ಅಂತಿರ್ಪು[7]ದುನೊಂದು ದಿವಸಂ[7]

ಈಳಿಯ [8]ಸಾಂ[8]ದುಮಂ ಪಸಿಯ ಕತ್ತುರಿ ತೀವಿದ ಪೊನ್ನ ಸಿರ್ಪುಮಂ
ಗಾಳಿಯು ಮಣ್ಣದುತಡರೆ ಕೆಂದಳದಿಂದಮೆ ಮುಚ್ಚಿಕೊಂಡು ಮಾ
ಚಾಳಿಕೆಯೆಂದು ನಕ್ಕು ನಡೆಗೊಳ್ವ ಪೊಲಂತವುರಕ್ಕೆ ಸ್ವೋಪವಾ
ಚಾಳಿಯನೊರ್ವಳಂ ಚಟುಳ ಚೇಟಿಕೆಯಂ ವಸುದೇವನಲ್ಲಭಂ ||೭||

ವ|| ಹಿಡಿದು ಹಿಟಕವಾಡೆ ಚೇಟಿಕೆಯೆಂದಳ್ ನೆಱಿಯೊಳಿರ್ದುಂ [9]ವಿ[9]ಕಾರ ತನನುನೊಂದಂ ಕೋಡಗಂಗಳೊಳ್ಕಂಡೆನೊಂದಂ ನಿನ್ನೊಳ್ಕಂಡೆನೆನೆ ಕುತ್ತುವಡೆದಂತೆ ನೊಂದು ಪೇಱದೇನೆಂಬುದುಂ ನಂಬಿಸಿ ಬೆಸಗೊಳು[10]ತ್ತುಮಿ[10] ಪೇಱದಿರೆ ಪೊಣ ರ್ವಕ್ಕಿಯುಂ ಪದ್ಮದಲರುವುನಟಲಿಸಲೆಂದು ಕಟ್ಟಿಲೆಯಂ [11]ಡ[11]ವಂತೆ ಕಯ್ಯ

1 ಲಿಂ (ಜ) 2 ದಲ್ಲಿ (ಚಟಡಣ) 3 ಚ್ಯಾತ್ರ (ಚಟಡ) ಭ್ರಾತ್ರ (ಣ) 4 ನನುನವು [illegible] 5 [illegible] 6 [illegible] ಪು (ಚಡಙ) ದ್ದಪ (ಟ) 7 [illegible] 8 ಸಾ (ಚಟಡಣ) 9 ನೀಂ ವಿ (ಚಟಡ) ನಿಸ್ನೇಪ [illegible] 10 [illegible] 11 [illegible]

ಕತ್ತುರಿಯಂ [1]ಕೊಂಡವಳ್[1] ನೊಲೆ[2]ಯಂ[2] ಮೊಗಮುಮಂ ತೊಡೆದು [3]ನೀಮ[3]ರ ಸಿಗಟ್ಟಿದ ಕತ್ತುರಿಯನಿವ[4]ಳ್[4] ತೋಳ್ತೊಡೆಯೊಳ್ತೊಡೆದಳೆಂದರಸರ್ಗೆ ಪೇೞ್ವೆಸೆನೆ ಭಯಮುತ್ತು ತೊಟ್ಟು ಮಲಹಾರಿಯದ (?) ತೊಟ್ಟಿನಂತೆ ನೀರಾಗಿ ಕಾಲ್ವಿಡಿದಾ ಸೆಂದುದಂ ಪೇ[5]ೞ್ವ ನೀಸಿ[5] ಪ್ರೊಟಲ ಪೆಂಡಿರೆ[6]ಲ್ಲರಂ ಮಱೆದು[6] ಮಱುಗಿಸಿ (?) ಮರುಳ್ಗೊಳಿಸಿ ನಿಚ್ಚಲ್ಮ[7]ಚ್ಚುಗೊಳಿಸಿದುದಂ ಕಂಡು[7] ಪೊಲೆಚರೆಲ್ಲರುಮೊಲ್ಲನುಲಿದು ಮೊರೆಯಿಟ್ಟು ನಿನ್ನ ಮೊಱೆಗೆಟ್ಟ ನಡೆವಳಿಯ[8][ನಾಕ್ಷೇಪಿಸೆ][8] ನಿಮ್ಮಣ್ಣಂ ಮುನಿದು ನಿನ್ನನೀನೆವದಿಂ ಸೆಱೆಯಿಕ್ಕಿದನೆಂದು ಮತ್ತಮಿಂತೆಂದಳ್

> ನಿಸ್ತ್ರಿಂಶ ನಿನ್ನ [9]ಕತದ[9]ಸ
> ಮಾಸ್ತ್ರ[10]ಗ್ನಿ[10]ಯೊಳ[11]ಗ್ಗಿ[11] ವಿರಹಪಾಂಡುರಿತಪ್ರಾ
> ಣಸ್ತ್ರೀಯರಗ್ನಿ[12]ಶೋಭ[12]ದ
> ವಸ್ತ್ರದವೋಲ್ ಜಲಕನಾದರೇನಿದನಱಿಯಾ ||೮||

ವ॥ ಎಂಬುದುಮೆರ್ದೆ ಸವ್ವನೆ ಪಾಱೆ ಬೆಱಗಾಗಿ ನೋೞ್ವೆನೆಂದರಮನೆಯಂ ಪೊಱಮಡಲಡಿಯಿಡುವುದುಂ ಮಿಡುಕ[13]ಲೀಯೆಮೆಂ[13]ದು ಮೊಗ[14]ಮುಮಂ[14] ಕಟ್ಟಗೆಯುಮನಡ್ಡಲಿಟ್ಟು ದೌವಾರಿಕರ್ ನಿವಾರಿಸೆ ಸಿಗ್ಗಾಗಿ ಸುಗ್ಗಿಯಂತೆ [15]ನುಸು[15]ಳ್ದು ಬನಕೆ ಬಂದು ತನ್ನೊಳಿಂತೆಂದಂ

> ಇರು ಮುಟ್ಟುಮೆಂಬು ತಾಂ ಚ
> ಪ್ಪರಿಸಿದೊಡಾನಿರೆನೆ ಮುಚ್ಚುಮಱೆಯೇಕೆಯೊ ದ
> ರ್ಕರೆ ನಾಲಗೆ ನೃಪರೆರ್ದೆ ಕ
> [16]ರ್ತ[16]ರಿಯೆಂಬುದು ಜಳಕನಾದುದೆಮ್ಮಗ್ರಜ[17]ನಿಂ[17] ||೯||

ತಾಂಗಡಮಿಕ್ಕುವಂ ಸೆಱೆಯೊಳಾಂ ಗಡಮಿರ್ಪೆನಿದಕ್ಕು[18]ಮಕ್ಕುವೆ[18]
ನ್ನಂಗಡ ಕಂಡ[19]ನೀ[19] ನೆಗಟ್ಟಿ ತಪ್ಪದನುಳ್ಳೊಡೆ ತಪ್ಪೆ ಕಲ್ಪಿಸ
ಲ್ತಾಂ ಗುರುವಲ್ಲನೇ ಮುನಿದನೀ ಪುರುಳಿಲ್ಲದ ಪೌರರೊಳ್ದೊಡ
ಣ್ಣಂಗಡ ಮುಂತೆ ತಪ್ಪನಿತುಮೆಮ್ಮದು ಸೈರಣೆ ತಮ್ಮದಲ್ಲದೇ ||೧೦||

---

1 ಕಂಡವಳ್ (ಕಗ) ಕಂಡವಳ (ಚಟಡ) 2 ಯುಂ (ಕಗಚಟಡ) 3 ನಿವ್ಮ (ಚಟಡಣ) 4 ಳ (ಗಚಟಡ) 5 ಟ್ಟಿಂ ಈ (ಚಟಣ) ಳ್ವಿಕೀ (ಡ) 6 ಲ್ಲಂವುರೆವಳು (ಚಟಡಣ) (ಮಱೆವಾಲ್ದು ?) 7 ಚ್ಚಿಗಂಗೊಂಡು (ಚಟಡಣ) 8 ನಪೇಕ್ಷಿಸಿ (ಚಟಡಣ) ನಪಕ್ಷೆಸಿ (ಜ) 9 ಕಂಡ (ಜ) ಕೆದನದ (ಡ) 10 ಜ್ಞ (ಚಟಡಣ) 11 ವರ್ಗೆ (ಚಟಡಣ) 12 ಶೌಚ (ಜ) 13 ಲಿಲ್ಲವೆಂ (ಚಟಡಣ) 14 ಮುಂ (ಚ) ಮಂ (ಟಡಣ) 15 ಮುಗು (ಜ) ನುಗು (ಟ) 16 ಕ್ತ (ಚ) ತ್ತು (ಜ) 17 ನಂ (ಕಗಚಟಡ) ನೊಳ್ (ಣ) 18 ಮೆನ್ನತ (ಚಟಡಣ) 19 ನಾ (ಜ) ನೀಂ (ಡ)

ಕೂರ್ಮೆಯನೊಕ್ಕು ನಿರ್ಮಳ[1]ರೊ[1]ಳಿಲ್ಲದ ದೋಷಮನಿಟ್ಟು ಕಟ್ಟೆ ಸೌ
ಧರ್ಮಿಕೆಗೆಟ್ಟು ದೂಱಿ [2]ಪೆಱರೆಂದು[2]ದುಗೇಳ್ವುದುಮುಗ್ರಜಂಗಿದೇಂ
ಧರ್ಮಮೊ [3]ಕೆ[3]ಮ್ಮಗೆಂದನಿದನಾತ್ಮ ಮಹೋದಯದೊಳ್ಸಹೋದರಂ
ಘರ್ಮಮರೀಚಿಯುಂ [4]ಬೆಳಗ[4]ಲಿತ್ತನೆ ಬಾಳಸುಧಾಮರೀಚಿಯಂ ||೧೧||

ತಮ್ಮರಸೆಂಬುದಂಬುಧಿ ಪರೀತಮೆ ಮಾಣ್ಮೆಮ ತಮ್ಮಿಡೊಂದು ದೇ
ಶಮ್ಮಿಹಿಗುಳ್ಳನಾದುದೆ ವಿದೇಶ ವಿಹಾರಮನೆಯ್ದೆ ಮಾಡುವೆಂ
ಸಮ್ಮದದಿಂ ಸ್ವದೇಶ ಪರದೇಶ ವಿಶೇಷಣಮುಂಟೆ ಮನ್ಮಥಂ
ಗಮ್ಮಳಯಾನಿಳಂಗಮೆನಗಂ ಮಧುಗಂ ಧರಣೀತಳಾಗ್ರದೊಳ್ ||೧೨||

ದೂಸಕರ ದೂಱುಗೇ[5]ಳ್ದಂ
ಸಾಸಿ[5]ಗನೆನ್ನಳವನಱಿದುಮಱಿಯದೆ ಪಿರಿದುಂ
ದೋಸಿಗನಾದೊಡೆ ಕೊಲ್ಗುಂ
ಪೇಸುವನಲ್ಲಂ ಸಮುದ್ರವಿಜಯನಜೇಯಂ ||೧೩||

ವ|| ನಾವಂತಪ್ಪ ಕನಸುಗಂಡೊಡೆರ್ದು ಕುಳ್ಳಿರ್ದುದುಂ ಕಂಪ್ರಮನೆನ್ನುಮಂ ಸೆಱಗೆಯ್ವನಾವನೆಂದು ಬೇರ್ನೆಲಕ್ಕೆಪೋಪುದನೆ ನಿಶ್ಚೈಸಿ ವಸುದೇವನಿರ್ದನನ್ನೆಗಂ

ಪೂಡುವ ಕುದುರೆ ಬೆಸಂಗೊಂ
ಡೋಡುವ ತೇರ್ಗೊಂದೆ ಗಾಲಿ ಪೂಡೆವಂ ಪೆಱಪಂ
ಕೇಡಿಂಗಲಸಿದೂಡಕ್ಕುಮೆ
ನೋಡಿರೆ ರವಿ ಕೆಡೆದನಸ್ತಗಿರಿ ಮಸ್ತಕದೊಳ್ ||೧೪||

ಪುಟ್ಟು[6]ಪ[6]ನಂದಗಿ ಬಸದಿಯ
ಬೆಟ್ಟುಗಳೊಳ್ಕೊಬಗೆ ಸಂಜೆವೇಳೆಯ ಪಱಿಗಳ್
ತೊಟ್ಟನೆ ತೀವಿದ ಗಱಿಗೆಯ
ಬಟ್ಟಲವೋಲ್ ದಿನಪನಬ್ದಿನಪರಾಂಬುಧಿಯೊಳ್ ||೧೫||

ವ|| ಮತ್ತಮಿನಿಸಱಿಂ

1 ದೊ (ಕ೭ಡಣ) 2 ಪೆರರಂದು (ಎ) ಪೆರರೆಂದಾ (ಓ) ಪೆರೆರೆಂದು (ಣ) 3 ಗೆ (ಕ೭ಡಣ) 4 ಬಳಗ (ಓ) ಬಳಸ (ಚಡಣ) 5 ಳ್ದಂ ಸಾಸಿಂ (ಗಓ) ಳ್ದಂ ಸಾಸಿ (ಚ) ಳ್ದರಿ ಸಾಸಿ (ಐ) 6 ವ (ಡ)

ಸಾವಿತ್ರದ್ಯುತಿ ದಾವ ಶಿ
ಖಾವಳಿ ಪರಿದಳ್ಗಿ ಪಱಿಗೆ ಕರಿಕೆರ್ದಪ್ಪೊಲೇಂ
ತೀವಿದುದೊ ಭುವನತಳಮಂ
ಗೋವಳಗಟ್ಟಲೆ ಸಮಸ್ತ[1]ಭುವನಾ[1]ತ್ಮಕಮಂ ||೧೬||

ವ|| ಅಂತುಮಲ್ಲದೆ

ಪಸರಿಸಿದುದು ಕಟ್ಟಲೆ ದೆಸೆ
ದೆಸೆಗಂ ಪ್ರ್ಯೋಕಾರ[2]ನಂ[2]ತೆ ಕಾಲಂ ಕಡಲೊಳ್
ಬಿಸುಪಡರ್ದ ತಪನತಪ್ತಾ
ಯಸ ಪಿಂಡಮನರ್ದೆ ನೆಗೆವ ಪೊಗೆಯೆಂಬಿನೆಗಂ ||೧೭||

ಚಳಚಕ್ರಾಂಕಮರಾಳ ಮೇಘಪಟಳ [3]ಶ್ರೀ[3]ವೃದ್ಧವೇಶ್ಯಾಂಗನಾ
ಪಳಿತಕ್ಕಿಕ್ಕಿದ ಕರ್ಪುರ ಸಾರಸರಸೀ ನೀಳಾಬ್ಜ ದೃಗ್ಜಾಳಕ
ಜ್ಜಳ[4]ಪಂಕಂ[4] ಪಟುಭೃಂಗಯಾಚಕ ಚಮೂ ಮೂರ್ತಾಂಬುಜಾಮೋದದಾ
ನಳಯೋತ್ಪಾದಕರ ಪ್ರದೋಷದ ಯಶಂ ಪೆರ್ಚಿತ್ತು ಭೀಮಂ ತಮಂ ||೧೮||

ವ|| ಅಂತು ಪುಡಿಗತ್ತುರಿಯೆಂದು ಪಿಡಿಕೈಸಿ ಪೂಸಲುಂ ಪಾಸಿ ಮೊಟ್ಟೆಗಟ್ಟಲುಂ ಮಿಹಿರಂಗಮಿಂದುಗಂ ಗುದ್ದಲಿಗೊಂಡಗುಟ್ಟಿ ಪ್ರೇಜ[5]ಗ[5]ಗಲುಮಪ್ಪ ಕಾಳದ ಕಟ್ಟಲೆಯೊಳ್ ವಸುದೇವನರಮನೆಯ ನುಡಿಲಂ ವಿದ್ಯಾಧರಕರಣದಿಂ ಪೊಸಂತಿಲಂ ದಾಂಟುವಂತೆ ದಾಂಟ ಪ್ರೇಜಲಂ ಪ್ರೇಜಮುಟ್ಟಿ ಪ್ರೇಜಪೊಬಲೊಳ್[6]ಗನೆ[6] ಕಿಱಿದೆಡೆಯಂ ಪೋಗೆಪೋಗೆ

ಶಿಖರಿಣಿ|| ನಿಶಾಚರ್ಯಾದಾನಂ ಶಬರ [7]ಶಿರ[7]ಮಾಕ್ರೋಶಮುಖರಂ
ಕೃಶಾನುರ್ವೀಪಾಹಸ್ರಮ [8]ಶಬಮಯೋ[8]ದ್ರೇಕ ಪಿಶುನಂ
ಪಿಶಾಚಪ್ರೌಢಸ್ತ್ರೀ ರಸವತಿ ಸುಸಿ[9]ಷ್ಟಾ[9]ದ್ಯಸದನಂ
ಶ್ಮಶಾನಂ ದೃಷ್ಟವ್ಯಂ ನೃಪಸುತನ ಕಣ್ಗಾದುದಿದಿರೊಳ್ ||೧೯||

---

1 ಭೂತಾ (ಜ) 2 ದಂ (ಚಜಟಡ) 3 ಸ್ತ್ರೀ (ಜ) 4 ಪ್ರಗ್ಯಂ (ಚಟಣ) ಪ್ರಜ್ಞಂ (ಡ) 5 ಗು (ಜಡ) 6 ನೇಳ (ಚಟ) ಗೆ (ಡ) 7 ಶಿಬಿರ (ಚಜಟಡ) 8 ಸಭಯಮಹೋ (ಜ) ಶಬಮಯೊಪೋ (ಟ) ಸಬಮಯ್ಯನೋ (ಡ) 9 ಖಾ (ಚಜಟಡ)

ವಿಚಳದ್ವೇತಾಳ [1]ರಾ[1]ಳಂ ಶಬರಭರವೃತಂ ಧೂಮವಲ್ಲೀವಿಕೀರ್ಣಂ
ಶುಚಿರಕ್ತಾಶೋಕ[2]ಸ[2]ಕ್ತಂ [3]ಶ್ವ[3]ಗಣಮೃಗಮಯಂ ಮುಗ್ಧಸೈರಾಚಕೇ[4]ಶ[4]
ಪ್ರಚಯಂ [5]ದೀಪ್ರಾಗ್ನಿ[5] ಭಾಗೋನ್ಮುಖ ಮಣಿಫಣಿಭೂತೋಗ್ರ ಮಾತಂಗಮುತ್ತುಂ
ಗಚಿತೋದ್ಯತ್ಕಾಪ್ಠ[6]ಮಾಯ್ಯಾ[6] ಪಿತೃವನವನಮಾಯ್ಯೂತ್ಮಮತ್ಯಂತ ಭೀಷ್ಮಂ ||೨೦||

ತೆರೆತೆರೆಗೊಂಡು ಬಾನ್ನಡರ್ವ ಕರ್ವೊಗೆ ಕರ್ಗಿದ ಸೀ[7][ರ್][7] ಕೊರ್ವುವಂ
ತಿರೆ ವಿಚಳಚ್ಚಿತಾನಳ ಶಿಖಾವಳಿ ವಿದ್ರುಮವಲ್ಲಿ ಪರ್ವುವಂ
ತಿರೆ ತಲೆಯೋಡಿನೊಳ್ಪೊಳೆವ ಪಲ್ಗಳೆ ಸಿಪ್ಪಿನ ಮುತ್ತು ತೋಱುವಂ
ತಿರೆ ಪರೆದಾ ಪರೇತವನಮಂಬುಧಿಯಂತಿರೆ ಭೀಕರಂ ಕರಂ ||೨೧||

ಅಲರ್ವರಲೊಕ್ಕ ಪಲ್ಪರೆಯದಿರ್ದಳಿಯಿರ್ದಿಲ ರಾಸಿ ಮೂಗುಗೋ
ಗಿಲೆ ಕರಿಕೊಳ್ಳ ಕೆಂದಳಿರೆ ಕೇಸುರಿ ಕಾಮಶರಾಗ್ನಿಯೊ[8]ಳ್ಪೊರ
ಳ್ದ[8] ಲಸ ವಿಯೋಗಿಯುಂ ಪೊಡರ್ದು ಬೇವ ಶಬಾವಳಿಯಾ[9]ದವಸ್ಥೆ[9]ಯೊಳ್
ಕಲಸಿ ಸಿಡಿಲ್ದು ಬಳ್ಳಿಡಿಗಳಿರ್ದ ಪರೇತವನಾಂತರಾಳದೊಳ್ (?) ||೨೨||

ಪೊಗೆವ ಚಿತಾಗ್ನಿ ಪೊತ್ತುವ ಚಿತಾಗ್ನಿ [10]ಪೊದಟ್ವ[10]ಚಿತಾಗ್ನಿ ಬಾಂಬರಂ
ನೆಗೆವ ಚಿತಾಗ್ನಿ ನಂದುವ ಚಿತಾಗ್ನಿ ಕನಲ್ವ ಚಿತಾಗ್ನಿ ಗಾಳಿಯಿಂ
ಮಗುಟ್ವ ಚಿತಾಗ್ನಿ ಮಗ್ಗುವ ಚಿತಾಗ್ನಿ ಕಟಿಲ್ವ ಚಿತಾಗ್ನಿಯಲ್ಲಿಗ
ಲ್ಲಿಗೆ ಪುದಿದಿರ್ದುವಾ ಮಸಣಮೊಳ್ ವಿಳಯಾಗ್ನಿಯೆ ಬಿಟ್ಟೆ ಬೀಡುಪೊಲ್ ||೨೩||

ತಾಪಸ ಭವ್ರವಾಂಬುಧಿಯೆನುಣ್ಬುರಿ ಬಾ[11]ಡನೆ[11] ವಹ್ನಿ ಬೇಗ[12]ಮಿ[12]
ಲ್ಲಾಪೆಯ ಬೇಗೆ ಪತ್ತಿ ನೆಲನಂ ಸುಡುವಗ್ನಿ ದವಾಗ್ನಿ ಕೊಳ್ಳಿಗಳ್
ವೋಪ ಮರುಳ್ಗಳಂ ಪಿಡಿದು ಪಾ[13]ಯ್ವ[13] ಸಿಡಿಲ್ಪಿನಾಗೆ ವಹ್ನಿ ಪೇ
ಳಾಪಕವಾದವೊಲ್ ಪ್ರತಿಭಯಂ ಪ್ರತಿವಾಸರಮಾ ಶಬಾಲಯಂ ||೨೪||

ಉರಿದುದು ಚಿತಾಗ್ನಿ ನೆಲದಡಿ
ವರೆಗಂ ಬಾಂಬರೆಗಮವರ ಸಣಸೆ[14]ಯ್ದುವ[14]ವೋಲ್
ನರಕಂಬೊಕ್ಕರುಮಂ ಸುರ
ಶರಣಂಬೊಕ್ಕರುಮನಳುರಲವ್ವಳಿಸುವವೋಲ್ ||೨೫||

1 ತಾ (ಜಟಡ) 2 ರ (ಜ) 3 ಶ್ವ (ಜಜಟಡ) 4 ತ (ಬ) 5 ದೀಪ್ತಾಗ್ರ (ಜ)
6 ಮಂತಾ (ಸ) 7 ರ (ಜಜಟಡಣ) 8 ಳ್ದ (ಚಬಡಣ) 9 ದವಸ್ಥಿ (ಣ) 10 ಯುಳುರ್ವ (ಜ)
11 ಡುಸ (ಜ) 12 ಪು (ಜ) 13 ಯ್ವು (ಜ) 14 ಯ್ದುದ (ಜಡ)

ನೆಗೆದುರಿ[1]ಪಿದೆ[1]ಗೆಯ ತಲೆಯಂ
ಮೊಗ[2]ವಿಡೆ[2] ಮರುಳಲ್ಲಿ ಮೊಟಗೆ ಪೆಣವಱಿ ಭೇತಾ
ಳಗಣಮುಗಿದಾಡೆ ರಕ್ಕಸ
ವಗರಣವಾಡಿದುದು ನೋಡೆ ಸೂಲದ ಪೆಣಗಳ್ ॥೨೬॥

ನಾಲಗೆ[3]ಯಾಡಿಸಿತುಂ ಕೀ
ಲಾ[3]ಲಮನುಗುಟುತ್ತೆ ಶುಷ್ಕತನುಬೇತಾಳಂ
ಸ್ಥೂಲಶಿರನಾರ್ದು ಕುಣಿದಂ
ಸೂಲದ ತಲೆ ಕುಣಿವ ತೆಱದೆ ಕುಣಪಾಲಯದೊಳ್ ॥೨೭॥

ಪಿಡಿದಡಸಿ ನುಂಗಿ ಪಸಿದಡ
ಹಡಿಸುವ ಬೇತಾಳನುರಿಪ ಪೆರ್ವೆಣನಂ ತ
ನ್ನೊಡಲಸ್ಥಿಕಾಷ್ಠದಿಂ ಪೆಣ
ತೊಡವೆಂದುದು ಬಸಿಱನೊಱಸಿ ಹಾಹಾಯೆನುತುಂ ॥೨೮॥

[4]ಇ[4]ಡಿದು ಕೊರಲ್ವರೆ[5]ಗಂ[5] ಪೂ
[6]ಬಿಟ್ಟೊ[6]ಡಮಸುವಂ ಕಳೆಯದಿರ್ಪ ಕಡುಗಳ್ಳರನೇಂ
ಪಿಡಿದುರ್ಚಿಕೊಂಡರೋ ಕೂ
ಗಿಡೆಯಿಡೆ ನರಕಕ್ಕೆ ಸಾರಕರ್ ಪಿತೃವನದೊಳ್ ॥೨೯॥

ಅಸುವಿರ್ದಂತಿರೆ ಸೂಲಂ
ಬಸಿ[6]ದಸುವಂ[6] ಪಿಡಿದು ತೆಗೆದ ಕಲಿಗಳುಮಂ ಪ
ಲ್ಮಸೆದು ತಿನಲ್ಮಸಗುವ ರ
ಕ್ಕಸರುಮನುಗ್ಗಡಿಸಿ ತಸ್ಕರರ್ ಪಿಡಿದುಯ್ವರ್ ॥೩೦॥

ಅರೆಮುಗಿದಿರ್ದ ಕಣ್ ಮುರಿದ ಮೀಸೆ ತುಱುಂಬಿದ ಜಾಜಿಪತ್ತ್ರೆ ಕ
ತ್ತರಿಸಿದ ಗಡ್ಡಮಿಟ್ಟ ತಿಲಕಂ ಬಳಸಂದೊಡೆದೋಲೆ ದೇಸೆಯಂ
ತಿರೆ ಸುಲಿಪಲ್ ತಳತ್ತಳಿಸಿ ತಂಬುಲಮಂ ಪೊಳಕುತ್ತೆ ರಾಗ[7]ದಿಂ
ಪ[7]ರಕೆಗೆ ಕೊಟ್ಟ ಸಂದಲೆಯುಗುಂದಲೆಯಾದುದು ಬೀರನಣ್ಕೆನಾ ॥೩೧॥

---

1 ಸಿದ (ಜ) 2 ಮಿರೆ (ಜ) 3 ಬಾಯೂಡಿಸುಕುಂ ಲಾ (ಚಟಡಣ) 4 ಯಡಿಗಿ (ಚಟಡ) ಅಡಿಗಿ (ಣ) 5 ಗ (ಚಟಡಣ) 6 ಜೊ಼ (ಚಟಡಣ) 6 ರ್ದಸುವಂ (ಚಟಣ) ದನುಮಂ (ಜ) 7 ವಿಲ (ಚಟಡಣ)

ತೊಡೆದು ಸುಗಂಧಮಂ ನನೆಯ ಜಾದಿಯನೆತ್ತಿ ತುಱುಂಬಿ ಪಾಲ್ಗಳಂ
ಕುಡಿಯಿಸಿ ಕೂಡೆ ಕಾಸಿ ಬಿಸುಸುಯ್ಯೊಳೆ ತನ್ನನೆ ನೋಡಿ ಜೀವಮಂ
ಪಿಡಿದಿನಿಸಿರ್ಪ ಶೂಲದವನಂ ನಡೆನೋಡಿಯೆ ಮೀಸೆದಿರ್ದುತುಂ
ಮಡಿದೆಲೆಯಂ ನಖಾಗ್ರದೊಳೆ ಕಣ್ಬನಿಯಂ ಪಿಡಿಯುತ್ತೆ ನೀಡಿದಳ್ ॥೩೨॥

ಕಿವಿಗಿನಿದಾಗೆ ತಮ್ಮ ಕಳವಂ ಕ[1]ತೆ[1]ಮಾಡಿ ಮರುಳ್ಗೆ ಪೇೞ್ದು ಪೊಂ
ಗುವ ರಸಮಗ್ಗಳಂ ಬಸಿಯೆ ತಂಬುಲಮಂ ಪಿಡಿದಿಕ್ಕಿ ಪಿಂಡಿ ತೋ
ಱುವ ತಿನಲೆಂದು ಸಾ[2]ರ್ದುಸಿ[2]ರನಾಲಿಸೆ ಸೋಲ್ವಿನಮಿಂಪು ಸೂಸೆ ಪಾ
ಡುವ ಪಿಶಿತಾಶರಂ ಪಿಡಿದು ಕಾಡುವ ಸೂಲದ ಬೀರರೊಪ್ಪಿದರ್ ॥೩೩॥

ಅಂಗಡಿಯಾನೆಯೆ ಬೀದಿಯ
[3]ಸಿಂಗಮೆ[3] ಲಲನೆಯರ ಕಣ್ಣ ಪುಣ್ಯಮೆ [4]ನಿನ್ನಂ[4]
ಜಂಗಮ ವಿಷಮಂ ಪಿಡಿದಾ
ವಂಗಡ ಪಿತೃವನಕೆ ತಂದು ತುಡಿಸಿದ ಬಂಟಂ ॥೩೪॥

ಊಡಿದೆನೋದಲಿಟ್ಟೆನುಡಕಲ್ವುದುಮಣ್ಣನ ಕೂಸುದಂದೆನಾಂ
ಬೇಡೆನೆ ಮಾಱಿ ಕಳ್ಳರೊಡನಾಡಿಯೆ ಪೆತ್ತ ಬಸಿರ್ಗೆ ಸಂತಸಂ
ಮಾಡಿದೆಯಿಂದಿದೇಂ ಮಗನೆ [5]ಪ[5]ಣ್ಣನೆ ನುಣ್ಮೊಗದಲ್ಲಿ ಮೀಸೆಗಳ್
ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸಸೂಲಮಿದೆಂತು ಮೂಡಿತೋ ॥೩೫॥

ವ॥ ಎಂದು ಬಾಯಂ ಬಡಿದು ಬಸಿಱಂ ಬಡಿದುಕೊಳ್ವ ತಾಯ್ಗೆ ತರಳನಿಂತೆಂದಂ

ಪಣವುಂಡೆಂ [6]ಬಂ[6]ದಿಯೊಳ್ಬಾಲಕನೆ [7]ಸಲಗೆ[7] ಜೂಜಾಡಿದೆಂ ಸೂಳೆಗೆಯ್ದೆಂ
ಪಣಿದಂಬೊಯ್ದೆಂ ತೊಟಲ್ದೆಂ ಪಿರಿಯ ಕಳವುಮಂ ಕಳ್ದೆನಿಂದಣ್ಮಿ ಸಾಯ
[8]ಲ್ಕ[8]ಣಿದೆಂ ಪೊತ್ತತ್ತು ಸೂಲಂ ಬಲದ ಪೆಗಲೊಳಾಂ ಬೀರನಾದೆಂ ಮರುಳ್ಮಾ
ಯ್ಗುಣಿಸಾದೆಂ ಮೆಚ್ಚಿದಂತುಳ್ಳವರನೆ ಪಿಡಿದುಂಡಪ್ಪೆನೆಂದುರ್ವಿತಿರ್ದಂ ॥೩೬॥

ವ॥ ಇಂತಿರ್ಪ ಮಗನ ನೆತ್ತರ್ಗೆ ಸಾರ್ವ ನಾಯಂ ನರಿಯುಮಂ ಸೋವುತುಂ ರಕ್ಕಸರ್ಗೆ ಕೆಯ್ಮುಗಿಯುತ್ತುಂ ರಕ್ಕಪಿತಾಯ್ ಕಾದುಕೊಂಡಿರ್ಪುದಂ ನೋಡುತ್ತುಂ ಪೋಗೆವೋಗೆ

---

1 ದೆ (ಚ) ದಿ (ಟ) ಥೆ (ಡ) 2 ಸುಸಿ (ಚಟ) ರ್ದಸು (ಜ) ಸಸಿ (ಡ) 3 ಜಂಗವು (ಚಟಡಣ) 4 ನಿಲನಂ (ಚಟಡಣ) 5 ನು (ಚಜಟಡ) 6 ಬಾ (ಚಟ) 7 ನಲನಿ (ಚಟ) 8 ಲ್ಕು (ಜ)

ತಲೆಕೆಳಗಾಗಿ ನೇ[1]ಲ್ವುದು[1] ಶಬಾವಳಿ [2]ಬಲ್ವ[2]ಲ ಪಿಂಡು ಬಲ್ಗರುಳ್
ನುಲಿಗಳೆಟಲ್ಕೆ ಬೀಟಲ ಬಟಲ್ಕೆ ಕರಂ ಕುಱುತೊಕ್ಕುತಿರ್ಪ ಪಂ
ದಲೆಗಳೆ ಜೇನಪುಟ್ಟಿಯೆನೆ ಕೊರ್ವಿದ ಕೊಂಬುಗಳಲ್ಲಿ ಪಕ್ಕಿವೋಲ್
ಚಿಲಿಮಿಲಿಯೆಂದುವೆರ್ದ ಕೊಲೆಗಳ್ಕಣಪಾಲಯದಾಲದೋಳಿಯೊಳ್ ॥೩೭॥

ಶೂಲಮನೆತ್ತಿ ಹೂಂಕರಿಪ ಭೈರವಿ ಕತ್ತಿಗೆಗೊಂಡು ಬರ್ಪ ಮಾ
ಕಾಳಿ ಕುಕಿಲ್ವ ಶಾಕಿನಿ ಶಬಾಳಿಗೆ ನಾಲಗೆಗಿಟ್ಟುಕೊಳ್ವ ಬೇ
ತಾಳರಬಲ್ದು ಪಲ್ಮೊರೆವ ಪೂತನಿ ಪೂತ್ಕರಿಸುತ್ತೆ ಪೊತ್ತುಕಂ
ಕಾಳಮನತ್ತಲಿತ್ತ ಪರಿದಾಡುವ [3]ಖಂ[3]ಡ ಕಪಾಳಿ ಕಾಡಿನೊಳ್ ॥೩೮॥

ಬಾಯ್ದೆಱೆಯುತ್ತೆ ತೂಂಕಡಿಪ ಕಿಂಕಿಣಿ ಬೇವ[4]ವ[4]ರಂಕಜಾಳಮಂ
ಪೊಯ್ದು ತಳಂಗಳಿಂ ಪೊಸೆದು ಮುಕ್ಕುವ ರಕ್ಕಸ[5]ರಿರ್ದ ಕೋ[5]ಱೆನ
ತ್ತಿಯ್ದುವ ಕಾಳ ರಕ್ಕಸಿ ಶುಭಂಕರಿ ಕತ್ತಿಗೆಯಿಂದೆ ಗಂಟಲಂ
ಕೊಯ್ದು ಕಪಾಳದಿಂ ರುಧಿರಮಂ ಪಿಡಿದೀಂಟುವ ಭೂತಮದ್ಭುತಂ ॥೩೯॥

ಮರುಳೆತ್ತಿತ್ತೊಂದು ಬಿಕ್ಕಂ ಮುಱಿದು ಮರುಳ ಮುಂಗೆಯ್ಯುಮಂ ಬಿಕ್ಕುಮಂ ನಿ
ಬ್ಬರಿಬಾಯೊಳ್ಪೊ[6]ಕ್ಕೊಡಂ ಕಂಡಿಸುವ ಪಿಡಿದ[6] ಬೇತಾಳನಂ ಮಚ್ಚದಿಂ ಚಿ
ಚ್ಚರದಿಂದಂ ಕಿಟ್ಟಿ ಬೇತಾಳನ ತಲೆಯನೆ ನಕ್ತಂಚರಂ ತಿಂದ ನಕ್ತಂ
ಚರನಂ ನುಂಗಿತ್ತು ಭೂತಂ ಬಹುವಿಶಸನನೇಕಾ[7]ರ್ಥ[7]ಲೋಲಾತಿರೇಕಂ ॥೪೦॥

> ಕಬಳಿತವಲ್ಲೂರಂ ಗಿಳಿ
> ತಬುಕ್ಕನಾ ಪೀತರಕ್ತವೇಂ ತಿಂದುದೊ ಹ
> ಸ್ತಬೃಹನ್ಮಸ್ತಿಷ್ಕಂ ತಾ
> ಯ ಬಾಯ ಮಾಂಸವನೆ ತೋಡಿ ರಾಕ್ಷಸಲೋಕಂ ॥೪೧॥

ವ॥ ಅಲ್ಲಿಂ ನೀರ್ಗುಂದಿ ಕುಮುದಕೊಂಡದಂ[8]ತಿರ್ಪ[8] ನೆತ್ತರ ಕೊಳಂಗಳೊಳ್ ಜಲಕ್ರೀಡೆಯಾಡುವ ಶಾಕಿನಿಯರುಮಂ ಪ್ರಸ್ತಾವಕ್ಕೊಂದು ಪೆಣಂ ಪಕ್ಕೆಗೆರಡು ಪೆಣನೆಂದು ರಕ್ಕಸಬೊಜಗರ ಶುಭಂಕರಿ ಕತ್ತಿಯನೊತ್ತೆಗೊಳ್ವ ರಕ್ಕಸಿ ಸೂಳೆಯರುಮಂ ಬೇವ ಪೆಣದ ಬಿಸಿಯಡಗಂ ತುತ್ತಿ ಬಾಯ್ ಬೇಯೆಯಱುಮುಗುಟಿದೆ ಮಿಾನಂತೆ ಮಿಡುಕಿ ಬೆರಲಂ ಮಿಡಿದು ಬಿರ್ದಟ್ಟಿ ತಮ್ಮ ಕೂಸುಗಳ ಬಾಯ ಬಿಸಿಯಡಗಂ ತೋಡಿ ಕಳೆದು ತಮ್ಮ ತಿಂಬಡಗಂ ಬಾಯ್ವಾಯೊಳಿಕ್ಕಿ ನಂಬಿಸುವ ನಿಶಾಚರಿಯರುಮಂ

---

1 ಲ್ವರು (ಜ) ಲ್ವುರು (ಟಡ) 2 ದಾವ (ಜ) 3 ಕಂ (ಚಟಡಣ) 4 ಕ (ಜಡ) 5 ರಿರ್ದಕೋ (ಜ) ರಿರ್ದಕೋ (ಡ) 6 ಯ್ದುಕೊಂಡಂ ಕಡಿದುವಸಿದ (ಜ) 7 ತ್ತ (ಚಟಡಣ) 8 ತೆಸೆದಿರ್ಪ (ಜ)

ಎನಿತಡಗನೂಡೆಯುಂ ಬಾಯಾಡಿ ನಲಿಯದೆ ತಿಂಬಡಗಂ ತೋಡಿಕೊಂಡು ಕಾಡುವ ಕೂಸಂ ದಸಿಯೊಳಸೆಯಿೞಿದು ಬಿಸಿಯಡಗಂ ಬಾಯೊಳ್ಗಡಿದು ತಿನ್ನುತಿನ್ನೆಂದವುಡಂ ತಿಂಬ ತಾಯಿ ರಕ್ಕಸಿಯರುಮಂ [[1]ಸೞುಸ್ಯೆತ[1]]ನೆ [2]ನೀಡಿದ ಸಿಡು[2]ಗಾಲಮೇಲೆ ಪಟ್ಟಿರಿಸಿ ಪೊಸಮಿದುಳಂ ಬೆಣ್ಣೆಯಿಕ್ಕಿ ತಲೆಯ ಸಿರ್ಪಿನಿಂ ನೆತ್ತರನೆೞಿದು ಬಾಯಂ ತೊಡೆದು ಕೆಯ್ಯಂ ನೀವಿ ತೂಪಿೞಿದೆತ್ತಿಕೊಳ್ವ ಮರುಳ್ವಾಣತಿಯರುಮಂ ಬೇವ ಪೆಣದುರಿವ ಬಾಯ್ಗೊಂಡದೊಳ್ ತಮ್ಮ ತನುವಂ ಪಿಡಿಖಂಡಂಗೊಯ್ದು ಬೀೞ್ವ ಸಾಧಕರುಮಂ ಬಲಗೆಯ್ಯ ಬಾಳ್ವೀಗಮುಮುಮೆಡದ ಕೆಯ್ಯಡಗುಂ ಬೆರಸು ಮಹಾಮಾಂಸಮುಮಂ ಭೂತಬಲಿಗೊಡಲೆಂದು ತೊೞಲ್ವ ಧೀರಸಾಧಕರುಮಂ ತಿನಲಾಸೆಗೆಯ್ದು ತಮ ಸೂಲದತ್ತ ಸಾರಲಮ್ಮದೆ ಸುತ್ತಿಸುೞಿವ ಬೂತಕ್ಕಂ ಪ್ರೇತಕ್ಕಂ ಮೆಯ್ಯ ಮಾಂಸಮಂ ಕೊಯ್ದಿೞ್ಡಾಡುವ ಕಲಿಗಳುಮಂ ಘಟೋತ್ಕಚನ ತಲೆಯಂತೆ ಮರುಳ ಕಾಳೆಗಕ್ಕಾರ್ವ ಸೂಲದ ತಲೆಗಳಂ ತಮ್ಮಟ್ಟೆಯಾಟಕ್ಕೆ ಬಾ[3]ಯ್ದಿ[3]ೞೆಗುಟ್ಟುವ ಪಿಡಿದಲೆಗಳುಮಂ ಪೊರೆ ಯೊಳ್ಬೇವ ಪೆಣದ ಪೊಗೆ ಕಣ್ಣೊಳ್ ಪುಗೆ ಸಮಪಾಯುಂ ಕಂಬನಿಗಳೊಳ್ [4]ಪಾಯ್ದೊ[4]ಡೆ ಪಿಡಿಯೆಂಗುಮೆಂದು ಕಾಲಡಗಂ ಕಾಯ್ಗಾಲಿಗೊಟ್ಟು ರಕ್ಕಸರಂ ಕರೆದು ತಮ್ಮ ನೆತ್ತರಿಂ ನಂದೆವೊಯ್ಸುವತಿ ಪ್ರತ್ಯಗ್ರ ವಿಶಾಲ ಶೂಲಭಿನ್ನರಪ್ಪ ಸುಭಟರು ಮನಡಿಗಡಿಗೆ ನಿಂದು ನೋಡುತ್ತುಂ ಬಂದು ಮುಂದೊಂದೆಡೆಯೊಳ್ ಸೂಲದ ಪೆಣದ ಸೆರಗಂ ಸೀೞ್ದುಕೊಂಡದಱ ಬಾಯಿಂ ಬಸಿವ ನೆತ್ತರೊಳ್ಮರುಳ ಕರುಳಂ ಕಿತ್ತು ಪೊಸೆದು ತೂಳಿಕೆಯೊಳರ್ದಿಕೊಂಡು ಮರುಳ ಕಯ್ಯ ಕೊಳ್ಳಿಯ ಬೆಳಗಿನೊಳೆ ಬರೆದ [5]ಬೞ[5]ಯ ಪಟಮಂ ಪೊರೆಯ ಮರದ ಕೊಂಬಿನೊಳ್ಕಟ್ಟಿಯುರಿವ [6]ಸಿದ್ದಿ[6]ಗೆಯ ಕೆಲದೊಳ್ ತನ್ನ ತೊಟ್ಟ ತೊಡವಂ ಕಳೆದಿಕ್ಕಿ [7]ಪಾಯ್ದು ಪೋದುದ[7]ಕ್ಕಂ ಮೆಟ್ಟ ಕಿಚ್ಚಿನೊಳೆ ಪಾಯ್ದ ಪಜ್ಜೆಯಂ [8]ಮಾ[8]ಡಿ ಕಿಂಕಿಣಿಯ ಬೇತಾಳನನಿತ್ತ ಬಾಯೆಂದು ಕೆಲಕ್ಕೆ ಕಯ್ಯಂ ನೀಡೆಂದು ನೀಡಿದ ಕಯ್ಯ ನಡುವಂ ಪಿಡಿದಡರ್ದು ಪೆಗಲನೇೞಿ ಪರೇತವನದಿಂ ಪೊೞಮಟ್ಟು ತನ್ನ [9]ಪಜ್ಜೆ[9]ಯಂ ಪಜ್ಜೆಕಾೞರೞಿಯದಂತು ವಸುದೇವಕುಮಾರಂ ಪಾಯ್ದು ಪೋದಂ ಇತ್ತಲ್ನೇಸಱು ಮೂಡಲೊಡನಾಡಿಗಳುಂ ಕಾಪಿನವರುಂ ಕಾಪಿ ನೋವರಿಯೊಳ್ ವಸುದೇವನಂ ಕಾಣದೆಲ್ಲೆಡೆಯೊಳಮಱಸಿ ಸಮುದ್ರವಿಜಯಂಗೆ ಬಿನ್ನವಿಸುವ ಸಮಯದೊಳ್ ಬಂದು ಪಡಿಯಱಂ ಪೊಡೆವಟ್ಟು ಪರೇತವನದೊಳಗೆ ಪೊಸದೂವೆಯ ಕೆಲದೊಳ್ ಕಳೆದೊಟ್ಟಿದ ತೊಡವುಗಳುಮಂ ಮರದ ಕೊಂಬಿನೊಳ್ ಬರೆದು ಕಟ್ಟಿದ ಕಪ್ಪಡಮುಮಿರ್ದಪ್ಪುದೆಂದು ಪಿತೃವನಪಾಳಕಂ ಕಪಾಳಕುಂಡಳಂ ಪಾರವಟ್ಟಕ್ಕೆ ಬಂದು ಬಿನ್ನವಿಸಿ ಪುಟ್ಟಿದನೆಂಬುದುಮರಸ[10]ನ[10]ೞಿದಂತ[11]ರಗಿ[11]ದು

---

1 ಸೞುಸಯ್ಯ (ಜ) ಸರುಸಯ್ಯ (ಡ) 2 ಗಿಡಿದು ಸಿಡಿ (ಚ) ಗಿಡಿದು ಸಿಡು (ಡ) ಪಿಡಿದು ಸಿಡಿ (ಣ) 3 ಯ್ವು (ಜ) 4 ಪೋದೊ (ಚಟಡಣ) 5 ಬಳಿ (ಡ) ಬೞಿ (ಣ) 6 ಸೆದ (ಜ) 7 ತ (ಜ) 8 ಗೂ (ಣ) 9 ಪ್ರಭೆ (ಚಟಡ) 10 ನಿ (ಜಡ) 11 ಙಾನಿ (ಡಣ)

ಪಾಱಿ ಪೋಗಿಮೆಂದು ಕಿಂಕರರಂ ಕಳಿಪುವುದುಮವರ್ಪರಿತಂದವಂ ಮುಂದಿಡಲೊಡನೆ ತನ್ನ ತಮ್ಮನ ಮಣಿಮಂಡನಮೊಂದಱಿದು ಸಂದರಾಗನಾಗಿಯುಂ ಧೃತಿಯಿಂ ಮಂದ ರಾಗನಾಗಿ ಪಟದ ಬರೆಪಮಂ ಬಾ[1]ಜಿ[1]ಸೆಂದು ಸಂದಿವಿಗ್ರಹಿಗೆ ಬೆಸಸಲೊಡನೆ

ಪಾದರಿಗನೆಂದು [2]ಪ[2]ರಪರ
ವಾದ[3]ಭವ[3]ಪ್ರಭುಗೆ ದೂಱಿದರ್ಗಡ ತಮಗಾಂ
ಸೋದರನಲ್ಲಿಂ ಬಸದಿಯೊ
ಳೋಪೆಂ ಪರವೆಣ್ಗೆ ಪುಱಿದುಮೆಱಗಿದ ದಿವಸಂ ||೪೨||

ಆಪುಸಮಿದು ತೊಡೆವೊಡಖಿಲೋ
ರ್ವಿಯಿಂದಮಾಯ್ತಾಯ್ತೆ ಕೆಲಬರಿಂ ಬರ್ಕುಂ [4]ಕೆರೆಯ[4] (?)
ಬಾಯಂ ಮುಚ್ಚಲ್ ಕೆರಸಿಯ
ಬಾಯಂ ತಾಂ ಮುಚ್ಚಲಾರ್ಗುಮೇಂ ಬಂದಪುದೇ ||೪೩||

ದೂಱಪು ತಮ್ಮಯ ಚಿತ್ತ
ಕ್ಕೇಱಿದ ದಿವಸದೊಳೆ ಪೊಲ್ಲಕೆಯ್ದಂ ನೋಲೆಮೇ
ಲೇೞಾಗಿ ಬದುಕಲಕ್ಕುಂ
ದೂಱಿಂ ದುರ್ಯಶಮುಮಾಗೆ ಬಾಳ್ವಂ ಭಟನೇ ||೪೪||

ಪಿಸಿನೆಂ ತಮ್ಮಡಿಗಳ ಕೇ
ಸರಿಯಂ ಸ್ಪರಿಸುವುದಪ್ಪಿದೆಂ ಪುಳಕಂಗಳ್
ನಡುವಿನೆಗಂ ತಂಬುಲನುಂ
ಕುಡದೊಡಮುಲ್ತುಱಿದುಕೊಂಡೆನಾಂ ಬಾಯ್ವಾಯೊಳ್ ||೪೫||

ಪ್ರಾಯಶ್ಚಿತ್ತಂ ಗಡ ತ
ಪ್ರಾಯಸಪುತ್ರಿಕೆಯನಂಜದಪ್ಪುವುದು ಪರ
ಸ್ತ್ರೀಯರ ನಲ್ಲರ್ಗೆ[5]ಸಗಿ[5]ದ
ನೀಯರ್ತಾಮೆಂದು ಮಸಣದುರಿಯೊಳ್ ಪೊಕ್ಕೆಂ ||೪೬||

ಇದು ತಮ್ಮಿಂದಾದುದೆ ಮ
ನ್ಮಥನ ಮದಾವೇಶದಿಂದಮಾಯ್ತೆನ್ನಯ ತು
ಪ್ಪದೊಳಾನೆ ಬೆಂದೆನೆನಗಱಿ
ಲ[6]ದಿರಿಂದ[6]ಡಮುಱಿಯದಱಿದನೇ ವಸುದೇವಂ ||೪೭||

---

1 ರಿ (ಜ) ಚಿ (ಣ) 2 ವ (ಣ) 3 ಪರೆ (ಜ) 4 ಕೆಲಯೆ (ಜ) ಕೆರಯ (ಟ) ಕೆಲಯ (ಡ) ಕೆರೆಯೆ (ಣ) 5 ನಗಿ (ಜಟ) ನಗ (ಜ) ಸಗ (ಡ) 6 ದಱಿಂ (ಣ)

ಎನೆ ಮುನ್ನಂ ನೃಪತಿ ಸಭಾ
ಜನಮನಿತುಂ ಬಱಿಕ ಮೂರ್ಛೆವೋದುದು ಕಡುಸಂ
ಜಿನ ಗಾಳಿಯೊ ಮೇಣ್ಸಂವೋ
ಹನಾಸ್ತ್ರವೋ ನೃಪಕುಮಾರ ಪಾತಶ್ರವಣಂ ||೪೮||

ಬಂದರನಿಮಿತ್ತಮು[1]ಲ್ಲಿಗ[1]
[2]ರಿಂ[3]ದಮರಂಗತಿ ವಿ[3]ರುದ್ಧ[3]ಮಹಿಪತಿಸಭೆಗಾ
ರ್ತಂದರೊ ಮುಕುಳಿತ ಕಮಲಾ
ನಂದಾರ್ಥಂ ಸುಪ್ರಭಾತದೊಳ್ ಭಾಸ್ಕರಸಂ ||೪೯||

ಆ ಸಕಳರ್ಧಿಸಮೇತಂ
ವಾಸನೆಯಂ ಪೊತ್ತುಕೊಂ[4]ಡು ಪಾವ[4]ನ ಪವನಂ
ಬೀಸೆ ಬಸವಱಿದು ಸೋಂ[5]ಕೆ ಸ
ಭಾ[5]ಸಹಿತಂ ಲಬ್ಧಸಂಜ್ಞನಾಗಿ ನೃಪಾಳಂ ||೫೦||

ಹಾ ವಸುದೇವ ಹಾ ಹರಿಕುಲಾಂತಕ ಹಾ ಚಿರಜೀವ ನಿನ್ನನಿ
ನ್ನಾವೆಡೆಯಲ್ಲಿ ಕಾಣ್ಬೆನನುಜಂ ಪಡೆದಂತುಟನಗ್ರಜಂಗೆ ಮು
ನ್ನೀವುದು ಪಂಥಮಿಂತು ವಿನಯಂಗಿಡಲಕ್ಕುಮೆ ಪತ್ತು ಸೊಕ್ಕು ಮುಂ
ಪಾವಕನೊಳ್ ಬಱಿಕ್ಕೆನಗೆ [6]ಕೊಟ್ಟೆಯಿದೇ[6]ಕೆಯೊ ಶೋಕವಹ್ನಿಯಂ ||೫೧||

ಮನಸಿಜನಂದು ಬೆಂದನೆ ಹರಾನಳನಿಂ ಪುಸಿಯಿಂದು ಬೆಂದನೇ
ವೆನೊ ವನಮಿಂದು ಶೂನ್ಯಮೆಳವೆಂಡಿರ [7]ಗಾವಣ[7]ಮಿಂದು ಶೂನ್ಯಮುಂ
ಗನೆಯ[8]ರುಮಿಂದು ಶೂನ್ಯ ಮೆ[8]ರುವಸ್ತ್ರಗಲಕ್ಷ್ಮನುಮಿಂದು ಶೂನ್ಯ[9]ಪಿಂ (?)
ಪಿ[9]ನ ಪೆಸರಿಂದು ಶೂನ್ಯಮುರಿದೆನ್ನಯ ರಾಜ್ಯಮುಮಿಂದು ಶೂನ್ಯಮೇ ||೫೨||

ಬೇವು[10]ದವಂ[10] ಪುಸಿ ಕಾಣಿರೆ
ಪಾವಕನುಂ ಕಂಡೊಡವನನೊಳಕೊಳ್ಗುಂ ಸ್ವಾ
ಹಾವಧು ತನ್ನಿನಿಯಳ್ ವಸು
ದೇವನ ರೂಪಿಂಗೆ ಸೋಲ್ಗುಮೆಂಬೀ ಭಯದಿಂ ||೫೩||

---

1 ಲ್ಲನ (ಣ) 2 ಲೆಂ (ಚಟಣ) ಲ್ಲಿಂ (ಡ) 3 ಮುಗ್ಧ (ಜ) 4 ಡಪಾರ (ಚಟಡಣ) 5 ಕಿಸಲಾ (ಚಟಣ) ಕೆಸಲಾ (ಣ) 6 ತೋಱುಪೆಯೋ (ಣ) 7 ಗೋವರ(ಜ) 8 ರುಮಿಂದು ಶೂನ್ಯಂ ಪೋ (ಚಟ) ರುಶೂನ್ಯಮೋ (ಡ) ರೆಶೂನ್ಯ ಮೋ (ಣ) 9 ಹಿಂಪ (ಜ) 10 ದುಮುಂ (ಜ)

ವ|| ಎಂದು ಶೋಕಿಸುವುದುಂ ನೀನೆಂದಂತೆ ವಸುದೇವನಂ ವಸುದೇವನೊಳ
ಕೊಳ್ವನಲ್ಲಂ ಕೆಲವಾನುಂ ದಿ[1]ವಸ[1]ಕ್ಕೆ ನಿನ್ನ ತಮ್ಮಂ ಬಂದಪನಱಿಲುಂ ಬೞಲುಂ
ಬೇಡೆಂದ[2]ರಿಂದಮ[2][ರ]ರಸನಂ ಸಂತೈಸಿ ಪೋಗೆ

ಆನಿಯಮೆ ನಿಜಾಗತ ವಾ
ಣೇನದಿ ತೀವದೊಡೆ ತನ್ನೊಳೇನುಱಿವುದೆ ಯೋ
ಗ್ಯಾನುಜ ವಿಯೋಗ ಶೋಕಾ
ರ್ವಾನಳನಿಂದಾ ಸಮುದ್ರವಿಜಯ ಸಮುದ್ರಂ ||೫೪||

ಅತ್ತ ನಿರಂಕುಶಂ ಮೊಡರಿದಾ[3]ಳ[3]ಣಿಯಂ ಮಱಿದಂಜ[4]ನನ್ಮ[4]ನು (?)
ನ್ನತ್ತ ಮತಂಗಜಂಬೊಳೆಸಿದಾ ವಸುದೇವನುಮುತ್ತಮಾಂಗನಾ
ವೃತ್ತಕುಚಾದ್ರಿಕಂಟಕ[5]ವ[5]ಸ್ಫೋತ್ಕಟರಾಗನದೀ ಪ್ರಚಾರ ಚಿಂ
ತೋತ್ತರನೆಯ್ದಿದಂ ವಿಜಯಖೇಟಮನಂಗಜ ಸೌಖ್ಯವಾಟಮಂ ||೫೫||

ವ|| ಎಯ್ದಿ ಪೊಱಪೊೞಲೊಳೊಂದು ನಂದನವನಮಂ ಪೊಕ್ಕು ಪದ್ಮಾಕರ
ದೊ[6]ಳೊಲೆದೋ[6]ಲಾಡಿ ಕೊಳನ ತಡಿಯೊಳಿಕ್ಕಿರ್ದ ಮೃಗಮದಮುಮಂ ಸೆಳೆಗೊಂಬು
ಕೊಂಬನೊರಸೆ ಸುರಿದ ಸಿರಿಕಂಡದ ರಸಮುಮನಪ್ಪೈಕ್ಕೆ ಪೂವಂ ತುಱುಂಬಿ
ತುಱುಂಬಿಗೆ ತುೞಗಿ ಮುಸುಱುವ ಮಱಿದುಂಬಿಯಿಂ [7]ಕಣ್ಬೇಲಿ[7]ಯ ತಲೆಸುತ್ತಂ
ಸುತ್ತಿದಂತೆ ಸೊಗಯಿಸಿ ಸುರಯಿಯ ಸುರಹೊನ್ನೆಯಲರ ಬಿರಿಮುಗುಳ ಬೆರಕೆವಾಸಿ
ಗಮಂ ತಲೆಸುತ್ತಿ ಕೇದಗೆಯ ಕುತ್ತುಂಗಱಗಳಂ ಕುತ್ತಿ ಕೇ[8]ಶ[8]ದ ಕೊನೆಯೊಳ್
ಕೇಸರದ ಕಿಸುವುಡಿಯಂ ಕೆದಱಿ ತಿಳಕದ ತಿಳಕಮಂ ತಳೆದು ಕೇದಗೆಯ ಬಿಳಿಯೆಸೞ
ಬಳಪಮೋಲೆಯನಿಟ್ಟು ಪೂಗೊಂಚಲಂ ತೂಗಿ ತೊನೆಯೆ ಕನ್ನವುರಂದೀವಿ ಮುಗುಳ
ಮುದ್ರಿಕೆಯನಿಕ್ಕಿ ಕುಸುಮಕಂಕಣಮನೇಱಿ[3]ನೊಂಕಿ ನಿಱಿದಳಿರ ತೊಂಗಲಂ
ತೋಳೊಳ್ತೊಡರ್ಚಿ ಚಂಪಕಮಾಲೆಯೊಳ್ಪೆರಸಿ ಕೊಳದ ಮಲ್ಲಿಗೆಯ ತಿಸರಮಂ ತೊಟ್ಟು
ತಾವರೆಯ ನೂಲ ತಿರುವಂ ತೀಡೆ ವಕುಳದ ಪೂತ ಸೆಳೆಯ ಸೆಳೆವಿಲ್ಲಂ ಗೊಲೆಗೊತ್ತಿ
ಪೊಸನನೆಯ ಪುಳುಂಬಂ ಪೊಸೆದು ಸಲಿಸಿ ಕಿಱುದಳಿರಂ [9]ಗಱಿಗಟ್ಟಿ[9] ಮಾವಿನಂಕುರದ
[10]ಕೂ[10]ರ್ಗಣೆಗಳಂ ತಳಂ ತೀವೆ ಪಿಡಿದು ಪೊಲಗೆಟ್ಟ ಕಾಮದೇವನಂತೆ ವಸುದೇವನಾ
ವನದೊಳಗೆ ಪರ್ವಾಗಳೊಂದು ತಿಳಿಗೊಳದ ತಡಿಯೊಳ್

1 ವ (ಚ) ನ (ಟಣ) 2 ರಿಪವು (ಟ) ೞದರ (ಡಣ) 3 ಳೆ (ಟಡಣ) 4 ನ್ಮ (ಜ) 5 ಮ (ಚಟಡಣ) 6 ಳೋ: (ಜ) 7 ಕರಿ (ಜ) 8 ಸರ (ಜ) 9 ಕೆಂಗರಿಗಟ್ಟಿದ (ಚಟಡಣ) 10 ಪೂ (ಜ)

ಸುತ್ತುಂ ನವಪಲ್ಲವಮೆಟಿ
ಲುತ್ತಿರೆ ಪುತ್ತಿದ ಮದಾಳಿಕುಳದಿಂ ಮದನಂ
ಗೆತ್ತಿದ [1]ಪೊಸಗಣ್ಬೇಲಿಯ[1]
[2]ಸ[2]ತ್ತಿಗೆಯೆನಿಸಿದುದು ಬಂದ ಚೂತಕುಜಾತಂ ||೫೬||

ವ|| ಆ ಮಾವಿನಡಿಯೊಳಡಿವಾಸಿ (?) ಪೂವಿನ ಪುಡಿಯ ಪುಳಿ[3]ಲಿಂ[3] ಜಗಲಿಗಟ್ಟಿ ಪೊಸದಳಿರ ಪಾಸಂ ಕುಸುಮದೆಸಳಿಂ ಪಚ್ಚವಡಿಸಿ [4]ಪ್ರೊಚ್ಚ ಪೊಸ[4] ಪಚ್ಚೆಲೆಯಂ ತಲೆಗಿಂಬುಮಾಡಿ ಬಾ[5]ವಿಸ ವಿಸ[5]ರದಿಂ ಬಿತ್ತರಿಸಿದ ಬಿತ್ತರಿಗೆಯಂ ಕಾಲಡೆಸೆಗೆ ಪೋಗೆ ನೂಂಕಿ ಪರಿಶ್ರಮಮಂ ಕಳೆಯಲೆಂದು ಪವಡಿಸಿ ಕರ್ಪೂರದ ಸರಲಂ ಬಾಯೊಳ್ಪೊಯ್ದು ತಂಬುಲಮಂ ಕಳೆದುಕೊಂಡು

ಅರಸಂ ಶೃಂಗಾರವೃತ್ತಂಗಳನೆ ಗಿಳಿಗಳೊಳ್ ರಾಗದಿಂದೋದುತುಂ ಗಾ
ವರಿಸುತ್ತುಂ ತುಂಬಿಯೊಳ್ ನುಣ್ಪಡರ್ದ ಶಿಖಿ ಶಿಕಾರಾವದೊಳ್ ಲೀಲೆಯಿಂದಂ
ಬೆರಸುತ್ತುಂ ಷಡ್ಜ[6]ಮಂ[6] ಪಂಚಮುಮನೆಲ[[7]ರದೊ[7]]ರಂವದಿಂ ತತ್ಸ್ವರಸ್ತ್ರೀ
ಕರಮಂ ಮೇಲೊಟ್ಟಿ ಮೆಲ್ಪಿಂದಲೆಯೆ ಮುಕುಳಿತ ಸ್ವಾಂತನೇತ್ರಾಬ್ಜನಾದಂ ||೫೭||

ಪ್ರಚ್ಛಾಯಾ[8]ಸುಪ್ತಂ[8] ಮೃದು
[9]ಳ[9]ಚ್ಛದನ ಪ್ರಸರಶಯನ[10]ಪ್ರೊ[10]...ತಸು...[11] ,[11]
ಸ್ವೇಚ್ಛಾಸುಖಿತಂ ನಿ[12]ದ್ರೆ[13]ಯ
ತುಚ್ಛಶ್ರಮ ಭರಮನಾಳ್ದುದೊಂದರೆಜಾವಂ ||೫೮||

ವ|| ಅಂತು ಸುಖನಿದ್ರಾಸಕ್ತನಾಗಿ

ಕೊಡೆಮಾವಿಂ ಪಾರಿಜಾತಂ ಕುಸುಮಶಯನದಿಂ ಶೇಷಶಯ್ಯಾತಳಂ ಕೇ
ಟ್ಟಿಡೆ ಪಂಕೇಜಾಕ್ಷನಂತಾ ಯುವತಿಯಮಳ ನೇತ್ರಪ್ರಭಾಪೂರವಾ ಪಾ
ಲ್ಗಡಲಂ ಪೋಲ್ತೊಪ್ಪೆ ಲಕ್ಷ್ಮೀಲಲನೆಯ ತೆಱದಿಂ ಲೀಲೆಯಿಂ ತನ್ನ ಕಾಲಂ
ಪಿಡಿಕೈಸುತ್ತಿರ್ದಳಂ ಕನ್ನೆಯನೆ ಕನಸಿನೊಳ್ ಕಂಡನಾ ರಾಜಪುತ್ರಂ ||೫೯||

ವ|| ಕಂಡು ನಿದ್ರೆದಿಳೆಯೆ ತಳವೆಳಗಾಗದೆ

---

1 ನುಣ್ಪೇಲಿಯ ಪೊಸ (ಚಡಣ) ಗಣ್ಪೇಲಿಯ (ಟ) 2 ಪ (ಕಗಟ) 3 ಯಂ (ಚಟಡಣ) 4 ಪೊಚ್ಚ (ಚಟಡಣ) 5 ಬಿಸದಿಶ (ಡ) 6 ಮುಂ (ಚಟ) 7 ದೊಳೋ (ಚಜಟಡಣ) 8 ಸೂತಂ (ಕಗಚಜಟಡ) 9 ನ (ಕಗಚಟಡ) 10 ಕೋ (ಚಡ) ಸೋ (ಟಣ) 11 ಷ (ಜ) ಶ್ರಿ (ಜ)

ಆ ವನಿತೆಯ ನಯನಜ್ಯೋ
ತ್ಸ್ನಾವಿಲಸಿತದಿಂದಮಲರ್ದು ಮಿಗೆ ಮುಗಿದ ನವೇಂ
ದೀವರಮಲರ್ದಪುದೆನೆ ವಸು
ದೇವಂ ಕಣ್ದೆಱೆದು ನೋಡಿ ವಿಸ್ಮಯದಿಂದಂ ॥೬೦॥

ನಿಜನಿದ್ರಾಮುದ್ರಿತಾಸ್ಯಾಂಬುಜಮನ[1]ಱಿ[1]ಕೆಯಿಂ ನೋಡಿ ನಿಶ್ಶಂಕ ನೇತ್ರಾಂ
ಬುಜನಾಗಳ್ ಲಜ್ಜೆಯಿಂದಂ ತೆಗೆಯೆ ನೆಗೆಯೆ ರೋಮಾಂಕುರಂ ಪೊತ್ತವೋಲ್ ಘ
ರ್ಮಜಳಂ ಕುಳ್ಳಿರ್ದು ತೋಳ್ತಿತ್ತರಿಗೆಯ ಕೆಲದೊಳ್ ಕಾಲನೊತ್ತುತ್ತುಮಿರ್ದಳ್
ವಿಜಯಶ್ರೀಯಂತೆ[3]ತೋರ್ಪಳ್[2] ಬಿಸಜವದನೆ ಜೀಱಿಂದಪಷ್ಟಂಭದಿಂದಂ ॥೬೧॥

ಆವಳಾಂ ಮೆಲ್ಲನೆ ತೊಡೆಯಂ
ತಿವಿದಪನೆಚ್ಚಱದೆ ತೆಱದೆ ಕಣ್ಗಳ ಪಸವೋ
ಡುವಿನಂ ನೋಱ್ಪಿಸಮೇಕು
ಪ್ಪವಡಿಸಿದನೊ ಕುವರನೆಂದು ಬೆಚ್ಚನೆ ಸುಯ್ದಳ್ ॥೬೨॥

ಮೊಲೆನೋಲಿಂ ಮೇಲುದುಂ ತಂಪೆಡವ ಮುಡುಪಿನೊಳ್ನೀಡುತುಂ ವಾಮ[1]ಹಸ್ತೋ[3]
[4]ತ್ಪಲಮಂ ನೈತಂಬ ಬಿಂಬ[5]ಸ್ಥಳದೊಳಿಱಿಪುತುಂ ಬಳ್ಕೆ ಮಧ್ಯಂ ಕಚಂ ಬಿ
[6]ಟ್ಟಳಿಗೆ[6]ಣ್ಪಂ ಸಾರೆ ಬೆನ್ನೊಳ್ನಸು ಮುರಿಯೆ ಮೊಗಂ ಕೊಂಕೆನಿಂದಿರ್ದು ಚೆಲ್ವಿಂ
ಬಲಗೆಯ್ಯಿಂ ಬೀಸುತಿರ್ದಳ್ಬಿಸರುಹದಳದಿಂ ಕಾಂತೆ ಮತ್ತೊರ್ವಳಾಗಳ್ ॥೬೩॥

ವ॥ ಅಂತು ತನ್ನ ಬಱಿಯನೆ ಬಂದ ಭಾಗ್ಯದೇವತೆಯಂತಿರ್ದಳಂ ಕಂಡು ಕನಸೆ ನನಸಾದುದೆಂದು ಪಂಡಿರ್ಕಾರಣಮೆನ್ನ ಬೀಡುಂ ನಾಡುಮಂ ಬಿಟ್ಟೋಡಿ[6]ಬಂ[6]ದೊಡ ಮುವಳ್ದಿರೆನ್ನ ಬೆನ್ನನೇಕೆ ತಗು[7]ಳ್ದಪರಿ[7]ನ್ನೇವೆಸೆಂದೇವೈಸಿ[8]ದಂತೆ[8]

ಮೊಗದೊಳ್ನಾಂಟಿದ ಕಣ್ಣಂ
ತೆಗೆ[9]ಯೆನೆ[9] ಕಣ್ಣೊಡನೆ ಪರಿದು ನಾಂಟಿದ ಮನಮಂ
ತೆಗೆಯೆನೆ ಭೋಂಕನೆ ಕಾಲಂ
ತೆಗೆದಂ ವಸುದೇವನಂಕದಿಂದಂಗನೆಯಾ ॥೬೪॥

1 ಱ (ಜಟಡ) 2 ರ್ವರೆ (ಟಣ) ಯೊರ್ವಳ್ (ಡ) 3 ಬಿಂಭೋ (ಜ) 4 ತ್ಪಲ (ಜ)
5 ಟ್ಟಳುವಿ (ಜ) 6 ಬಂದೆಂ ಬಂ (ಜ) 7 ಳ್ದು ಬಂದಿಪಿ (ಜ) 8 ದಂ (ಜ) 9 ಯುದೆ (ಜ)

ವ|| ಆದಂ ಕಂಡಾ ಚಿತ್ರಲೇಖೆಯೆಂಬಾಕೆಯ ಕೆಳದಿ ಬೀಸುವ ಬಿಸರುಹದೆಲೆಯ ಬಿಜ್ಜಣಿಗೆಯಂ ಮುಗುಳ್ನಗೆಯಿಂ ಪೊದಯಿಸೆ ಪೂವಿನ ಬಿಜ್ಜಣಿಗೆಯಂ ಮಾಡಿ

[1]ಬಿಡಿಸುವೆಯೇಂ[1] ಕಾಲಂ ಕೈ
ವಿಡಿದಪಳೀಗಳ್ಕುಮಾರಿ ನೀನೀಕೆಯ ಕಾ
ಲ್ವಿಡಿವಂತಾದಪುದಿನ್ನೇಂ
ತೊಡರ್ದೈ ಕಡುಗೆಲ್ಲಕಾರ್ತಿಯಿ ಕಾಂತೆ ಗಡಾ ||೬೫||

ವ|| ಅರಸನಂತೆಂಬುದೇನೆನೆ ಮತ್ತಮಾಕೆ

ಈ ಮಾವೀಕೆಗೆ ಕಾಮನರ್ಚಿಸಿದವಾ[2]ವೈತಂ[2]ದೊಡಂ ಭಾನುವೀ
ಭೂಮಿಜಾತದ ತಣ್ಣೆಳಲ್ತೊಲಗದಾವಂ ಬಂದು ಸಾರ್ದಿರ್ದೊಡು
ದ್ದಾಮಂ ಬಲ್ಲಿದರಾಣೆಯಿಟ್ಟ ತೆಱಿಂದಿರ್ದಪ್ಪುದಾ ಶ್ರೀ ಮಹಾ
[3]ರಾ[3]ಮಂ ವಲ್ಲಭನೀ ಕುಮಾರಿಗಿದುಸಿದ್ಧಾವೇಶಮುರ್ವೀಶ್ವರಾ ||೬೬||

ವ|| ಈ ಪುಣ್ಯವತಿಯುಮಿಾ ಪೌಟಿಲನಾಳ್ವ ಮಗಧಾಧಿಪತಿಯ ಮಗಳ್ ಶ್ಯಾಮಳೆಯೆಂಬೊಳೀ ಕೋಮಳೆಯಿಂದು ಸಿಸಗಿದಿರ್ಪರ್ಪಂತೆ ಒಂದೀ ಬನದೊಳಗೆ ಬಿನದದಿನಾಡುತ್ತುಮಿರ್ದು ನೀಮಿಾ [4]ಪಾಮ[4]ರದಡಿಯೊಳ್ ಒಂದಿರ್ದುದುಮನೀ ತರುಣ ತರುಚ್ಛಾ[5]ಯೆ ಪ್ರತಿಚ್ಛಾಯೆ[5]ಯಂತೆಯುಂ ನೆಲದೊಳ್ನಾಂಟ ಬೇರೂಱಿ ದಂತೆಯುಮೆತ್ತಲುಂ ತೊಲಗದಿರ್ದುದುಮಂ ಕಂಡು ಆದೇಶ ಪುರುಷನೆಂದಱಿದು ಪರಿತಂದು ಪೇೞ್ದ ವನಪಾಲಕಂಗೆ ಪಸಾಯಮನಿತ್ತು ಮತ್ತಮಿಪಂ ತಮ್ಮ ಜೊಪ್ಪಂಗ ಱಿಪಲ್ ಕಳುಪಿ ಕೆಳದಿಯರ ನೂಪುರಕ್ವಣಿತಮೆ ಬದ್ದವಣಮಾಗೆ ರಾಗದಿಂ ಬಂದಿಲ್ಲಿ ಬಸಂ[6]ತನ[6] ಪುನೆಗೆ ಬಿರ್ದು ಬಂದ ಕಾಮದೇವನಂತೆ ಬಟಲ್ದು ಬೆಂದು ಬೆಱಿಗಾಗಿ ಸಿಶ್ರಮಿಸೆ ಮಿಸುಗುತ್ತಿರ್ದ ನಿನ್ನ ಪದಪ್ರಭಾರಾತ್ಯರುಣ ಸರಸಿಜದ ಸಿರಿಯೆ ಸನ್ನಿದಮಾ ದಂತೆ ಸಮ್ಮದಮನಪ್ಪುಕೆಯ್ದು

ಚಾಮರವಿಕ್ಕುವಂತೆ ತನು ಚಂಪಕಮಾಳಿಕೆಯಂ ಮುಸುಂಕುತುಂ
ಪ್ರೇಮ ವಿಳೋಕಮೆಂಬ ಪೊಸಪೂವಿನ ಪಚ್ಚಡದಿಂ ಕರಾಬ್ಜ ಘ
ರ್ಮಾಮೃತದಿಂದೆ ನಿನ್ನಡಿಗಳಂ ನಯದಿಂದಮೆ ಪೂಸುತಿರ್ದಪಳ್
ಶ್ಯಾಮಳೆ ಪುಷ್ಪಕೋಮಳೆಯಿದೀಕೆಯ ವೃತ್ತಕಮೇಕೆ ಬೆರ್ಚುವೈ ||೬೭||

1 ಬಿಡು ಇಂದೇಂ (ಜ) 2 ಯ್ತೆಂತೆಂ (ಚಟಡಣ) 3 ದಾ (ಜ) 4 ಪಾ (ಚಜಟಡ)
5 ಯೆ (ಜಡ) 6 ತಂ ತನ್ನ (ಚಟಡಣ)

ಕೀರ[1]ಕುಳ[1]ಸ್ವರಂ ಮಧುರ ಮಂಗಳಪಾಠಕನಾದಮಾಗೆ ಝೇಂ
ಕಾರಿಸುತಿರ್ಪ ತುಂಬಿಗಳ ಗಾಪರವೊಪ್ಪುವ ಗೇಯಮಾಗೆ ಕೈ
ವಾರದಿನೀಕೆಯಂ ನಿನಗೆ ಚಿತ್ತಭವಾಗ್ನಿಯೆ ಸಾಕ್ಷಿಯಾಗೆ ಕೈ
ನೀರೆಱೆ[3]ವಂದದಿಂ ಸೊನೆಯ ನೀರ್ಸುರಿವಪ್ಪುದು ನೋಡೆ ಕೋಕಿಳಂ ॥೬೮॥

ವ॥ ಅನ್ನೆಗಂ

ಹರಿಸೈನ್ಯಂ ಹಸ್ತಿಸೈನ್ಯಂ ಪಱಿ ಪಱಿಯಿಗೆ ಓಂಭಾತಪತ್ರೋತ್ಕರಂ ಚಾ
ಮರಮೆಯ್ತ್ತುಪ್ಪೇ[2]ಜ[2]ರಂ (?) ಕನ್ನಡಿ ತಳಿರ್ಗಳಸಂ ಒರ್ಪವರ್ಬರ್ಪ ಸತ್ಪಿಂ
ಡಿರ ತಂಡಂ ಪೆಂಡವಾಸಂ ಪಡಿಯಱರಣುಗಳ್ ಮಂತ್ರಿಗಳ್ಛತ್ರಪಾಳರ್
ಬೆರಸಿಂದ್ರಂ ಬರ್ಪವೋಲ್ಕಾಗಧನಧಿಕಬಳಂ ಬಂದನಾನಂದದಿಂದಂ ॥೬೯॥

ವ॥ ಬಂದು ಪೊಸಮಾವೆ ಪಸುರ್ವಂದ[8]ರ[3]ಗೆ ಮದುವೆಮಾಡಿ ತನ್ನ ಮಗಳು
ಮನಳಿಯನುಮನೊಡಗೊಂಡು ಪೋಗಿಯರ್ಧರಾಜ್ಯಮಂ ಬಟಿವಟಿಗೊಟ್ಟು
ಸುಖದಿನಿರೆ

ಅಲಸಿಕೆ ನೋಟದೊಳ್ ತಣಿವು ಕೂಟದೊಳುಕ್ಕೆವಮುಟ್ಟಿಱೊಳ್ ಚಲಂ
ಗೆಲವಿಪೊಳಪ್ಪಿನೊ[4]ಧ್ದರವುರುಂಟಿನುಕಂ[4] (?) ಬೆಸಕ್ಕೆವ ಭಂಗಿಯೊಳ್
ಪೊಲೆಗೆಳೆಸೋಲದೊಳ್ ಪದಿರೊಳೊತ್ತಿದಿರೊಳ್ ಪಲಮಾತು ಮಾನದೊಳ್
ಕಲಿತನಮಾಗದಂತಬಲೆ ವರ್ತಿಸಿದಳ್ ಕವಿತಾವಸಂತನೊಳ್ ॥೭೦॥

ಚುಂಬನಮಪ್ಪ ಚಪ್ಪರಣೆ ಜೇಡುವ ಬಕ್ಕುಡಿ ಕಾಯ್ದು ಕೂಡುವ
ಟ್ಟುಂಬರಿಯೆಂಬಿವಾಗೆ ಸಲೆ ತನ್ನವು ನಲ್ಲನ ಬಾಯ ತಂಬುಲಂ
ತಂಬುಲಮಿಕ್ಕಿದಣ್ಪು "ತನಗಣ್ಪು" ತುಱುಂಬಿದ ಪೂವೆ ಪೂವು[8]ಮು[5]
ಟ್ಟುಂಬರಮುಂಬರಂ ನಿರುತಮಾಗಿರೆ ಕೊಂಡಳನಂಗ ಸೌಖ್ಯಮಂ ॥೭೧॥

ವ॥ ಅಂತಪ್ಪುಕೆಯ್ದೊಂದುದಿವಸಂ ವಿಷಮನೃತ್ಯಶ್ರಮ[7]ಶ್ರಾಂತೆ[7]ಯಾಗಿ

ಉಟ್ಟ ದುಕೂಲಮುಟ್ಟಪೊಲತಿಸ್ಫುಟವಾಗಿರೆ ತೊಟ್ಟಕುಪ್ಪಸಂ
ತೊಟ್ಟಪೊಲಿಟ್ಟುದಿಟ್ಟಪೊಲಣಲ್ ನಱುದಂಬುಲದಿಂದೆ ಬೀಗೆ ಸುಯ್
ಸುಟ್ಟದಿರಲ್ಕೆ [8]ಸಾ[8]ರ್ತರೆ ಕಚಂ ಮೊಗದೊ[9]ಳ್ತೆ[9]ಱದಿಂದೆ ತನ್ನ
ಮೇಲಿಟ್ಟೆಡಮೋಳವತ್ತ ಮೊಗವಾಗಿಯೆ ನಿದ್ರೆಯೊಳಿರ್ದ ನಲ್ಲಳಂ ॥೭೨॥

1 ಕರ (ಚಟಡಣ) 2 ಝು (ಚ) ಜ್ಝ (ಜ) ಜ್ವ (ಡ) 3 ಮಾ (ಚಟಡಣ) 4 ಳಧರೆವಿಂ
ಟವುತಂ (ಚ) ಧರಂವಿುಂಟವುತಂ (ಡ) ಳ್ದರ.. ಮಿಂಟರುತಂ (ಣ) 5 ತುಱುಂಬಿಂಗೆ
(ಚಟಡ) ತುಱುಂಬಿಗೆ (ಣ) 6 ವು (ಜ) 7 ಶ್ರಥೆ (ಚಟಣ) ಶ್ರದ್ಧೆ (ಡ) 8 ಸೋ (ಚಟಡಣ)
9 ಳ್ತೊ (ಟಣ)

ವ॥ [1]ಕಂಡು ತಾನ್ನೆವಕಾಱನಪ್ಪ ಕಾರಣಮೇವಯಸಿ[1]

ಶ್ರವದಿಂ ಭಾಳಕ್ಕೆ ಬಾನಲ್ವರಿ[2]ದ[2] ಕುರುಳ ಕಸ್ತೂರಿಕಾರೇಣುಜಾಳ
ದ್ರವಮಂ [3]ಕಂಡರ್ದಿ[3]ಕೊಂಡೊಳ್ನೆಸೆಯ ಪೊನೆಯೊಳಂ ಬಂದಪೆಂ ಪೋಗಿತಾನ
ನ್ನೆವರಂ ನಿಶ್ಚಿಂತಮಿರ್ಕೆನಲಸ[4]ಳ[4] ನೆಲಸಿರ್ಪಾಗಳೆಂದಾ ಸುಕೇಶಿ
ಶ್ರವಣಶ್ರೀಪತ್ರದೊಳ್ ತಾಂ ಬರೆದಱಿಯದವ್ರೋಲ್ ಪೋದನಲ್ಲಿಂ ಕುಮಾರಂ ॥೭೩॥

ವ॥ ಅಂತು ಶರೀರದಿಂ ಜೀವಂ ಪೊಱಮಟ್ಟು ಪೋಪಂತಾರುಮಱಿಯಲೀಯದೆ ಪೊಱಮಟ್ಟು ಪೋಗೆವೋಗೆ

ಸ್ರವ[5]ದಂಭೋ[6]ಧಾರ ಧಾರಾಗ್ರಹಮುಚಳಘನಾಸಾರಸಾ [6]ಸೀರ ಜಂ[6]ಝಾ
ಪವನವ್ಯಾಧೂತ ಭೂಜವ್ಯಜನಮುತುಳತಾಪಿಚ್ಛಪಿಂಛಾತಪತ್ರಂ
ಪ್ಲವಗಪ್ಲತ್ಯುತ್ಪತ ದ್ವಿ[7]ಕಿರಕರಗರುತ[7]ಚ್ಛನ್ನ ಶಾ[8]ಖಾಂತ[8]ರಾಳಂ
ರವಿರುಕ್ಸಂಧುಕ್ಷಿತಾಂಗ ಕ್ಷಿತಿಪತಿತನಯಂಗಾಯ್ತುರಣ್ಯಂ ಶರಣ್ಯಂ ॥೭೪॥

ಮಳಯುಜಮುಂ ಬಳಸಿದ ಫಣಿ
ಕುಳಮುಂ ಕೇಕಿಗಳ ಕಳರವಂ ಸೋದುದು ಭೂ
ತಳನಾಥರನೋಲಗಿಸುವ
ಖಳರಂ ಸೋವಂತೆ ಸುಕವಿಸೂಕ್ತಿಕಳಾಪಂ ॥೭೫॥

ಸೋಗೆಯ ಸೊಗಯಿಪ ದನಿಗಂ
ತಾಗುವ ಕೀಚಕದ ರುತಿಗಪೊಡಸೋಲ್ತು ಕರಂ
[9]ಬಾ[9]ಗಿ ಕುಲವೊಲಿದು ತಲೆಯಂ
ತೂಗಿದುದರಿಮಿತ್ರವರ್ಜಿತಂ ಗುಣಮಲ್ತೇ ॥೭೬॥

ಬಯಸಿ ರಸೆಯಹಿಗಳಂ ಮನ
[10]ಮು[10]ಯೆ ನೆಲದೊಳ್ಪೊಕ್ಕ ಬರ್ಹಿಣಾವಳಿಯ ಶಿಖಾ
ವಯವಮಿವೆ ತೋಱಿದಪುವೆನೆ
ಮಯೂರಶಿಖಿನಿಕರಮೆಸೆದುವಾ ಕಾನನದೊಳ್ ॥೭೭॥

1-(ಚಟಡಣ) 2 ವ (ಜ) 3 ಕೊಂಡಳ್ಚಿ (ಜ) ಕಂಡರ್ಚ್ಛಿ (ಡ) 4 ಳೆ (ಜ) 5 ದಾವ್ರೋ (ಜ) 6 ಸೀರಝಂ (ಜ) 7 ಕರ ನಿಕರಗುರು (ಜ) 8 ಖಾಳ್ತ (ಜ) 9 ಬೋ (ಜ) 10 ಮು (ಚಟಣ)

ಆಹಿತಬಹುಬದರದಳ
ವ್ಯೂಹ ತಿ[1]ರೋ[1]ಹಿತ ಬುಭುಕ್ಷಿತೋತ್ತಾನ ಮುಖೋ
ಗ್ರಾಹಿ ಶಿರೋರುಣಮಣಿಯಂ
ಹಾಹಾ ಪಣ್ಗೆತ್ತು ಪಾಯ್ದುದೊಂದು ವಿಹಂಗಂ ॥೭೮॥

ಆಡಗೆಂದೆಲವದ ಪೂ[2]ವಿಂ[2]
ಗಡಹಡಿಸಿಯೆ ಪಾಯ್ದು ಕಾಯ್ದು ಕಾದಿದುವೊಡಲಂ
ದಡಗಡ[3][ಗ][3]ಪ್ಪಿನಮೆಱಕೆಗ
ೞುಡಿವಿನೆಗಂ ಕಣ್ಗಳೊಡೆವಿನಂ ಕಾಕಂಗಳ್ ॥೭೯॥

ಅಡವಿಯ ಖಗನಿಕ[4]ರದ[4] ಬೞ
ವಿಡಿದು[5]ಱು[5]ದಱಿಯಟ್ಟಿ ಪಿಡಿಯಲಾಱದೆ ಕಡುಪಿಂ
ಗುಡುಗುಡು ಗುಡೆಂದು ಗಿಡಗಂ
ಕೆಡೆದುದು ಗಱಿಯುಡಿಯೆ ಪೊಡೆದು ತನ್ನಯ ನೆಟಿಲಂ ॥೮೦॥

ಅರ್ಕಾಂಶುಗೆ ಪುಗಲಿಲ್ಲದೆ
ಸೀರ್ಕರಡಿಯ ಕಡುಪಿನಂದದಡವಿಯ ತಮಮಂ
ಮಾರ್ಕೊಂಡು ಸುೞಿವ ಕಾಡೆಳ
ವೆರ್ಕಿನ ಕಣ್ ನಡೆವ ಸೊಡರ್ಗಳೆನೆ ಜಲಜಲಿಕುಂ ॥೮೧॥

ಪೊರೆವಿಡಿದು ಪೊಕ್ಕು ಪಾವಿನ
ಪೆರೆಯಂ [6]ಪೊ[6]ತ್ತೊಂತಿಯೊಂದು ಪರಿತರೆ ತಿರಿದೇಂ
ಸರಟಶತಮೋಡಿ ಪೊಕ್ಕುವು
ಸುರನಹಿಗೆತ್ತುದಿರ್ದ ಖದಿರ ಬದರೋದರಮಂ ॥೮೨॥

ಗಿಡು ಪಿಡಿಯೆ ತನ್ನ ಬಾಲಂ
ತೊಡರ್ದೊಡೆ ಪರಿತರ್ಪ ಬೇಗೆಗಾಡುವ ಚಮರಂ
ಬಿಡಿಸಿದಪೆನೆಂದು ನಿಂದುದು
ಕಡುಲೋಭಂ ಜವನ ಬಂದಿಯೋ ಬಂಧನಮೋ ॥೮೩॥

---

1 ವಿರ (ಚಣ) ವಿರೊ (ಟ) 2 ವಂ (ಚಜಟಡ) 3 ವ (ಚಜಟಡಣ) 4 ರಂ (ಚಟಣ) 5 ಱ (ಜ) 6 ಪೆ (ಚಟಡಣ)

ಅಡಸಿ ಬರೆ ಶಬರನುಡುಗಿದು
ದುಡು ಕಣ್ಣಂ ಮುಚ್ಚಿ ಪರಿಯನಾಗಡೆ ಗಡ ಕ
ರ್ದಡಿಗನ ಕಣ್ಣೊಳ್ಪೊವಿನ
ಪುಡಿ ಪೊಕ್ಕುದು ಮಾಱುತೇಱುತಂ ಕಾನನದೊಳ್ ||೮೪||

ಅಹಿಯ ವಿಷವಹ್ನಿ[1]ಗೆಂ[1]ದಹಿ
ಗ್ರಹಮಂ ಪೀರ್ದುರ್ಚುವತ್ಸಭಲ್ಲ[2]ನ[2] ಬಾಯಂ
ದಹಿಯಿಸಿ ಪಾಪಿ ಪಾಪೇ
ನ ಹನ್ಯತೇಯೆಂಬ ನುಡಿಯನೇಂ ನಡೆಯಿಸಿತೋ ||೮೫||

ಮಾವಿನ ತಳಿರೊಳಗೆ ಮುಗು
ಳ್ಮಾವಿನ ಮೊಗಮುಳಿಯೆ ಮಿಸುಪ ತೊಡೆ ನಡು ಜಘನಂ
ತೀವಿದ ಮೊಲೆಯೆಂಬಿವು ವಸು
ದೇವನ ಕಣ್ಗಿತ್ತುವತನುರಾಗೋದಯಮಂ ||೮೬||

ಮುಗಮುಗಿಸಿ ಕವಿವ ಮದಗಂ
ಪುಗಳನೆ ಪೊಗೆಬ್ವಂತೆ ಮೊಱೆಯಿಮು ಮುಸುಱುವ ಮಱಿದುಂ
ಬಿಗಳಿಂ ಕೊರ್ವಿದ ಕತ್ತುರಿ
ಮಿಗಮಿರ್ಪವೊಲಿರ್ದುದೊಂದು ಗಂಧಗಜೇಂದ್ರಂ ||೮೭||

ತಮುಕಿನ ಸರಳದ ಸಪ್ತ
ಚ್ಛದದಾಮ್ರದ ತಳಿರನುಡಿದು ಮೇಯದೆ ಕರಿ ಮೇ
ದುದು ವಿರಹಿಯಱಿಸಿ ಪೊಸವೇ
ಟದ ಪಿಡಿ ನಸುಮೇದು ಬಿಸುಟು ಪೋದೊಣದಳಿರಂ ||೮೮||

ಮಧುಪರಿಮಳಮಂ ಕಾದುದು
ಸುಧೇನು ಪೇಚಕಮನೊಂದು ಮದಗಜಹಸ್ತಂ
ಮಧುಸಖನ ಬಯ್ತರತಿಧನ
ನಿಧಾನಮಂ ಕಾವ ಕಾಳಸರ್ಪನ ತೆಱದಿಂ ||೮೯||

1 ನೆಗೆ ([illegible]) 2 ನ ([illegible])

ತಾಳಸ್ಥೂಳಕರಂ ತಮಾಳವಿಸರಚ್ಛಾಯಂ ಸುರೂಪಂ ಸುವ
ಕ್ತ್ರಾಳೋಕಂ ಶುಭಬಿಂದು ಶುಭ್ರರದನಂ ದಾನಾರ್ದ್ರಗಂಡಸ್ಥಳಂ
ಲೀಳಾಯಾನನುದಗ್ರ ಪಲ್ಲವನದೀ ತಾನಾಯ್ತೊ ನೂತಕ್ಷಮಾ
ಶೀಳಂ ಕೇಸರಿಗಂ ನಿರೀಕ್ಷಣ ಸುಖಶ್ರೀಪಂಜರಂ ಕುಂಜರಂ ||೯೦||

ಗಜಮೊಂದಿರ್ದುದು ರೋಹಣಾಚಲದವೊಲ್ ತತ್ಪದ್ಮರಾಗಪ್ರಭಾ
ರಜಮಿರ್ಪಂತಿರೆ ತೋರ್ಪ ಪದ್ಮಪಟಲಂ ತಳ್ಪೊಯ್ಯೆ ನೀಳೋತ್ಪಳ
ವ್ರಜಮಿರ್ಪಂತಿರೆ ಮತ್ತಭೃಂಗಮಿಳಿತಂ ದಾನದ್ರವಂ ದಾಳವಾ
ಯಜಮಿರ್ಪಂತಿರೆ ಕಣ್ಣ ಪೆರ್ಮೞೆಯೊಳಂ ಮೇ[1]ಲ್ವಾ[1]ಯ್ದಪಾಂಗಾಂಶುವಿಂ ||೯೧||

ನೇಱಿಲ ಪಣ್ತ ಕೊಂಬುಡಿದು ಬಿರ್ದವೊಲೊಟ್ಟಿದ ಸೀ[2]ವರ[2]ಕ್ಕೆ ಪಾ
ಯ್ದಾಱಡಿಱಿಂಡಿನಿಂ ಮುಱಿದು [3]ಪೂಸಿದ[3] ಮಾವಿನ ಕೊಂಬು ಮೇಲ್ಮದಂ
ಗಾಱಿ ಕಟಂಗಳುಣ್ಮಿವಿಡೆ ಕಾಯ ಒಲಂ ಮಿಗೆ ಬೇಗೆಯಿಂದೆ ಬೆಂ
ದಾಱಿದ ಬೆಟ್ಟನಂತೆ ವನವಾರಣಮಿರ್ದುದದೊಂದು ತಾಣದೊಳ್ ||೯೨||

ಚೂತಾಮೋದಕ್ಕೆ ಮೂಗಂ [4]ತದುಕಿವ[4] ತಳಿರ್ಗಾಸ್ವಾದಮಂ [5]ಶತ್[5]ಪುಳಿಂದೀ
ಗೀತಕ್ಕುತ್ಕರ್ಣಮಂ ಕುಟ್ಮಳಿತನಯನಮಂ ಕೋಕಿಲಾಸ್ಯಕ್ಕೆ ಮೆಯ್ಯಂ
ಸ್ರೋತಶ್ಶೀತಾನಳಂಗೊಪ್ಪಿಸಿ ಸುಖಮಯನಾಗಿರ್ದುದಸ್ಪಂದಮಂದೀ
ಭೂತಂ ಕರ್ವೆಟ್ಟನಂ ಕಂಡರಸಿ ಸಮೆದವೋಲ್ ನೀರದಾಭಂ ಮದೇಭಂ ||೯೩||

ನನೆವೆರಸು ಗುಜ್ಜಮಾವಿನ
ಕೊನರ್ಗಳನುಡಿದುಡಿದು ನೀಡೆ ಬೇಟದ ಪಿಡಿಯೇಂ
ಮನನೊಸೆದು ಮೇವುತಿರ್ದುದೊ
ವನಕರಿ ಪರಿದಂತೆ [6]ದತ್ತ[6]ಹಸಿತಕಟಾಕ್ಷಂ ||೯೪||

ಕಡೆವಾಯಿಂ ಪ್ರತಿಹಸ್ತದೊ
ಳಡಸಿದ ತಳಿರುದಿರೆ ತಳ್ತ ಕೆಯ್ಯೊಳೆ ಕೆಯ್ಯಂ
ಪಿಡಿದು ಪಿಡಿ ತುಱುಸುತಿರ್ದುದು
ಕಡೆಗಣ್ಣಿಂ ಸಮೆದ ಕರಿಯ ಕೊಂಬಿನ ಕೊನೆಯೊಳ್ ||೯೫||

---

1 ಲ್ಪೊ (ಚಟಡಣ) 2 ದಱ (ಟಣ) 3 ಸೂಸಿದು ಸೂಸಿದ (ಜ) 4 ಕದಿಕಿಪ (ಚಟಣ) ಕದುಕಿನ (ಡ) 5 ಸತ್ (ಜ) ಕಲ್ (ಡ) 6 ದಂಕ (ಚಟಡಣ)

ನೆಱೆ[3] ಜಳಕೇಳಿಯಾಡಿ ಪೊಱಮ[1]ಟ್ಟ[1] ವನೇಚರಿಯರ್ಕಳೆಂಬಿನಂ
ತುಱುಗಿರೆ ತೀರದೊಳ್ ನವತಮಾಳ ಲತಾವಳಿಯಬ್ಜಷಂಡಮೊಳ್
ಪೊಱಮಡದಿರ್ದುವಾಕೆಗಳ ಕಣ್ಮಲರುಂ ನೊಲೆವಿಂ[2]ಡು[2]ಮೆಂಬಿನಂ
ಮುಱಿಗಿದುವೊರ್ಮೆ[3]ಯುಂ ಪೊಳೆವ ವಿರಾಂ[3]ಗು[4]ಲಮುಂ ಪೊಣರ್ವಕ್ಕಿಯೊ[4]ಕ್ಕ[4]ಲುಂ ||೧೦೨||

ಹರಿಯ ನಳಿನಾಭಿನಳಿನಂ
ವಿ[5]ರಂಚಿಯಂ[5] ಪಡೆದುದರ್ಕೆ ಪುರುಡಿಸಿ ತಾನಾ
[6]ಹ[6]ರಿಯನೆ ಪಡೆದವೊಲೆಸೆದುದು
ಸರೋವರಾವರ್ತ ನಳಿನಮೊಂದಳಿಗರ್ಭಂ ||೧೦೩||

ತರುಣ ಬಿಸ[7]ಸದನಮಬ್ಜಾ[7]
ಕರ ಕರಿ ಮೇಗೊಟ್ಟುಕೊಂಡುದದು ನೀರ್ವೂವಂ
ಸರಸಿರುಹಪತ್ರಕರ್ಣಂ
ತರಂಗತರಮುಚ್ಯಮಾನ ಶೀಕರನಿಕರಂ ||೧೦೪||

ವನರುಹ ಸಹಸ್ರನೇತ್ರನ
ನನಿಮಿಷ ಸೇವಿತ[8]ದಿ[8]ನಾ ಸರೋವರಸುರನಾ
ಥನನಾಂತ ಕರಿವೊಲೆಸೆದುದು
ವನಕರಿ[9]ಯು[9]ನ್ಮಗ್ನಪೂರ್ವಕಾಯಂ ಕ್ಷಣದಿಂ ||೧೦೫||

ಸೊಗಯಿಸಿದುದು ಕನಕಾಬ್ಜದ
ಮುಗುಳ್ನನೆಯಿಂ ಕರಿಯ ಬಿಳಿಯ ಕೆಂಪಿನ ನೀರ್ವೂ
ವುಗಳಿಂದೆ ಪಂಚರತ್ನದ
ಪಗನಂ ತೆ[10]ಱೆ[10]ದಂತೆ ಸರಸಿ ಸರಸಿಜದೆಲೆ[11]ಯಂ[11] ||೧೦೬||

ನೀಲದ ಪೊಳೆವ ಪರಲ್ಗಳ
ಕೀಲಣೆಯಿಂ ಜಲಕನಾದ ಜಲದೇವಿಯ ಪೊ
ನ್ನೋಲೆಯೆನಿಸಿದುದು ಪತ್ರಕ
ಪೋಲಗತಂ ಕನಕನಳಿನಮೊಂದಳಿ[12]ಮು[12]ಳಿನಂ ||೧೦೭||

---

1 ಟ್ಟು (ಜಡ) 2 ಬು (ಜ) 3 ಗೊ (ಚಟಡ) 4 ಕ್ಕಿ (ಚಟಡಣ) 5 ರಿಂಚಸಂ (ಜಡ) 6 ಪ (ಚಟಡಣ) 7 ದಶನ ಮುಜ್ಯಾ (ಜ) 8 ನ (ಜ) 9 ಮು (ಜಟ) 10 ಗೆ (ಟಣ) 11 ಯಿಂ (ಣ) 12 ನ (ಚಣ)

ಕೊಳದೊಳೆ ವೈಗರೆದ[1]ಬ್ಯಾ[1]
ಕುಳಮಿರ್ಪವೊಲಿಂದು ಕೂಡಿದುದು ಕುಮುದಿನಿಯೊಳ್
ಜಳರುಹಮಂ ಕಡಿದುದು ಸೈ
ವಳತರು[2]ವಂ ಕೊಂಬು[2]ಗೊಂಡುದೊಂದು ಮರಾಳಂ ||೧೦೮||

ಗಲ್ಗಲನೆ ಕರಗುವಾಲಿಯ
ಕಲ್ಗಳ[3]ವೋಲ್[3] ಕರಗಿ ಪ[4]ರಿ[4]ವ ಜೊನ್ನದ ತಿಂಗ
ಳ್ಗಲ್ಗಳೊಸರದೆನೆ ಕ[5]ಟಿಲ್ದ್ರೈ[5]
ಕಿಲ್ಗೊಳನೆನೆ ಕುಳಿರ್ದುದಾ ಜಳಂ ತಿಳಿಗೊಳದಾ ||೧೦೯||

ಊದೆ ಕರಿಗಳ್ ಸರಸ್ಸ್ವ
ಚ್ಛೋದಕಮಂ ನೆತ್ತಿಗಡರ್ದ ಪನಿಗಳೆ [6]ಪ್ರ್ಸ[6]ಮು
ತ್ತಾದುವದಲ್ಲದೊಡಡವಿಯ
ವೇದಂಡದ ನೆತ್ತಿಯಲ್ಲಿ ಮುತ್ತುಗಳೊಳವೇ ||೧೧೦||

ತರುಣತರಂಗೋತ್ಥಿತ ಸೀ
ಕರಹಿಮದಿಂ ನೇದೆಗೊಂಡವೊಲ್ಪೊಕ್ಕು ಸರೋ
ಜ ರಜಃಪರ ಗುಂ[7]ರಿ[7]ತಮೆನ
ಲರಳಿದುದದು ಕುಮುದ ಮುಕುಳ ಕೋಟರ ಕುಟಿಯೊಳ್ ||೧೧೧||

ವ|| ಆ ಕುಸುಮಾ[8]ಕರ[8]ಮೆಂಬ ಕಮಳಾಕರಮಂ ಕುಮಾರಂ ಪೊಕ್ಕು ಪ್ರಕ್ಷಾಲಿತ ಪಾದ ಮುಖಕಮಳನುಂ ಪೀತ ಶೀತಜಳನುಮಾಗಿ ನೀರಜರಜದ ನೀರ್ಗುಂಕುಮಮಂ ತೊಡೆದು ತಡಿಯೊಳಿಕ್ಕಿರ್ದ [9]ಗಜ[9]ಮದದಿಂ ತಿಳಕವಿಕ್ಕಿ ಸೆಂದುರದ ಬಿರಿಮುಗುಳಂ ತುಱುಂಬಿ ಕಮಳಪತ್ರಮಂ ರಾಗವಟ್ಟಕಟ್ಟಿ ಕಾವುವೆರಸಿರ್ದ ಕರಿಯ ನೆಯ್ದಲನಂಕುಶಂ ಮಾಡಿ ಪಿಡಿದು ವಿನೋದದಿನಾಸೆವಸದನಂಗೊಂಡು ಆ ಕೊಳನ ತಡಿಯೊಳ್ ಸಮವ ಸರಣದಶೋಕೆಯಂತಿರ್ದ ಅಶೋಕೆಯ ನೆೞಲೊಳ್ ಬೆಸದ ಮೆಯ್ಯಂ ಮುೞಿದು ಶಾಯ್ತೊಱಗಿದ ಬ[10]ಳ್ಳಿಗವುಂ[10]ಗಂ ಮಲಂಗಿ ಕುಮಾರಂ ಕುಳ್ಳಿರ್ದನನ್ನೆಗಂ

---

1 ವೋ (ಚಟಡಣ) 2 ಮಂಕುಟುಕು (ಚಡ) ಭುಂಕು ಕುಟುಕ (ಟಣ) 3 ವಲ್ (ಚಟಡಣ) 4 ರೆ (ಚಟಡಣ) 5 ಳಿದ್ರೈ (ಚಟಡಣ) 6 ಮುಸು (ಜ) 7 ದಿ (ಚಟಣ) 8 ರೆಮ್ಯ (ಚಟಡಣ) 9 ಮದಗಜದ (ಜ) 10 ಳಿಕಂ (ಚಟಡ) ಬ್ರುಕಂ (ಣ)

ಕೊನೆಗೊಂಬಲ್ತು ಬಿಸಾಂಕುರಂ ಸಿರಮುದಲ್ತುತ್ಕಚ್ಛಪಂ ನೇತ್ರಮ
ಲ್ತನಿಮೇಷಂ ಮದಮಲ್ತು ವಾರಿ ಕಿವಿಯಲ್ತಬ್ಜಚ್ಛದಂ ಪದ್ಮಕಾ
ನನಮಲ್ತಂಬುಜಮಾನೆಯಲ್ತು ಸರದೊಳ್ ಲೀಲಾ[1]ಸರಂ[1] ಪುಟ್ಟಿದ
ತ್ತೆನೆ ಮೂಡಿತ್ತವಗಾಹಮಿರ್ದು ಕೊಳದಿಂ ಕಾಯ್ದೊಂದು ದಂತಾವಳಂ ||೧೧೨||

ತೋರದೆರೆ ಮುಱಿಯೆ ಮೂಡುವ
ವಾರಣಮಂ ಪೋಲ್ತುದಡಸಿ ನಿಡುಗಯ್ಯಂ ಭಂ
ಡಾರಿಸಿ ಮೆಡಱಿದ ತಳಿಯಂ
ಬಾ[2]ರಿ[2]ಯುಮಂ ಮುಱಿಯೆ ಪೊಯ್ದು ಪೊಱಮಡುವಿಭಮಂ ||೧೧೩||

ವ|| [3]ಅಂತು ಮಕರಾಕರದಿಂ ಪೊಱಮಡುವ ಕರಿ ಮಕರದಂತೆ[3] ಕಮಳಾಕರದಿಂ ಪೊಱಮಟ್ಟು ದಡಂಗೊಳ್ವಲ್ಲಿ ಕಿಟ್ಟು ಕೆಡೆದು ಕಾಲೊಳ್ತೊಡರ್ದು ಬಂದ ಬಿಸವಲ್ಲಿಗಳ್ ನೆಲನನೊಡೆದು ನಾಗಲೋಕಮಂ ಪುಗವೇಡೆಂದು ಗರುಡನ ಕಾಲಂ ಪತ್ತಿ ಬಿಡದ ಪಾವುಗಳಂತಿರ್ದುವದಱ ಗಾಳಿಗೆ ವನಗಜಘಟೆಗಳೆಲ್ಲಂ ಘನಘಟೆಗಳಂತಿ[4]ರೊಡೆ[4] ದೋಡಿದುವು ಮೇಲ್ವಾಯ್ದ ಸಿಂಗಂಗಳೆಲ್ಲಮಾದಿಯ ಪಂದಿಯಂ ಪೇಱಿದ ಗ್ರಾಮ ಸಿಂಹಂಗಳಂತಿರ್ದುವು ಪೆಳಱಿ ಬೆಂಗುಡುವ ಬಟ್ಟಾನೆಗಳಿಂ(?) ಮಣಿಯೇಱಿಂದಿಱಿದೆತ್ತಿದಲ್ಲಿ ಮದದ ಮಸಿಯಿಂ ಮಳೀಮಸವಾದ ಮುಸುಂಬು ಮುಸುವಿನ ಮುಸುಂಬಿನಂ[5]ತೆ[5] ಕಡಲಂ ಕಟ್ಟಲೆಂದು ಬೆಟ್ಟಮಂ ಕಿಱಿತ್ತೆತ್ತಿದ ಸುಗ್ರೀವನಂತಿ[6]ರ್ದುದು[6] ವನಮಂ ಪೊಕ್ಕು ಮರಮುಸಕದಿಂ ಮರವಾಯ್ದು ಮರದುಱುಗಲಂ [7]ಕಿಱ್ತೀಡಾಡುವಲ್ಲಿ ದಶಗ್ರೀವನ ವನಮಂ ಕಿಱ್ತೀ[7]ಡಾಡುವಣುವನಂತಿರ್ದುದು ಪಲ್ಲವಮನುಡಿದು ಸೂಸುವಲ್ಲಿ ದೆಸೆಯಾನೆಗಾಳೆಗಕ್ಕೆ ಪುಲ್ಲಂ ಸೂಸುವಂ[8]ತಿರ್ದುದು ಅಂತು[8] ಮಾಮು[9]ಸಕಂ[9]ಮಸಗಿ ಬ[10]ಸ[10]ಟಂಬರಿವ ಮದಕರಿಯಂ ಕುಮಾರಂ ಕಂಡೀ ಕಟ್ಟಾನೆಯನೇಱಿದೊಡಾನೆಯಾನೆ ವಿ[11]ನ್ನಾ[11]ಣಿಯೆಂದು [12]ಸ[12]ರಂದೋಱಿದ ಸರದ ಬಟಿಯನೆ ಗಟಿವಟಿಯ ಪಾವಿನಂತೆ ಮೊಗದ ಬಿ[13]ಗಿ[13]ಪುಂ ಕಣ್ಣ ಬೀಡುಂ ಬೆರಸು ಗಾಳಿಗೆ ಗಱಿಮೂಡಿದಂತೆ ಗಿಱ್ರನೆಯ್ತಪ್ಪಾನೆಯಂ ಚಪ್ಪರಿಸಿ ಪಿಡಿದಾಸೆಗೊಟ್ಟು ಪುಷ್ಕರಣದೊಳ್ ಕೆಂದಳಂ ಕೆಂದಳಿರಂತೆ ತೊಳಗೆ ದೀರ್ಘಾಂಗುಳಿಯಿಂ ಪಿಡಿದು ಗರುಡನೊಪ್ಪಮಂ ಗಾಳಿಯ ನುಸುಳುಮಂ ಕೈಕೊಂಡು ಕೊಂಡಾಡಿ ಮನಮೆ ಮಾನೆಸೆನಾದಂತೆ ಪ[14]ರಿದುಪರ[14]

---

1 ಲಸಂ (ಚಟಡಣ) 2 ರೆ (ಚಟಡಣ) 3 ಅಂತು (ಜ) 4 ರೋಡಿ (ಚಟಡಣ) 5 ತೆತ್ತಿರೆ (ಚಟಡಣ) 6 ರ್ದುವು (ಚಡಣ) ರ್ದು (ಟ) 7 ಕಿಱ್ತೀ (ಜ) 8 ತು (ಜ) 9 ಸ (ಚಟಡಣ) 10 ಸಾ (ಜ) 11 ನ್ನ (ಜ) 12 ಸು (ಚಟ) ಸಿ (ಡಣ) 13 ಗು (ಜ) 14 ರಿದು ಪೊರೆದುಪರ (ಜ)

ಯೊಳ್ [1]ಟ[1]ಳಲ್ಚಿ ಕುಡೆಂ[2]ಬ ತಿಂಕು[2]ವೊಳಗಿಂ ಬೆಂಗೆ[3]ಬಾ[3] ಎಂಬಂತೆ ಬೂತಾಟೆ ನಂಗೆಯ್ದು ಗಜದ ಬೆಂಗೆ ಸಿಂಗದಂತೆ ಲಂಘಿಸಿಯಾನೆಯೆ ಪೊರಜೆಯಾಗೆ ಪೂರ್ವಾಸನದೊಳ್ ಪದುಳಮಿ[4]ರ್ದುಮಬ್ಬ ಬಾಪ್ಪುಬಾಪ್ಪೆಂ[4]ದು ಕುಂಭಸ್ಥಳಮನಾಸ್ಫಾಳಿಸಿ ಬೀರಸಿರಿಯ ಗುರುಕುಚಮನುಗುರೊಳುಗಿದು ಕೋಡಗಂಗಳೆ ಅಳ್ಕೋಡಗವಾಗೆ ಹರಿಣಂಗಳೆ ಹರಿಕಾಱರಾಗೆ ಪರ್ವತಂಗಳೆ ಪ್ರತಿಗಜಂಗಳಾಗುರುಳೆ [5]ನೂಂಕಿಯ ೨ ಸುರುಳೆ ನೂಂಕಿಯು[5]ಮಡ್ಡವಿಕ್ಕಿಯುಂ ಪೊಕ್ಕು ಪರಿಯಿಸಿಯುಮಂತಪ್ಪ ಕಟ್ಟಾನೆಯಂ ಕೆಪ್ಪ[6]ನ್[6]ಳವಡಿಸುವಂತೆ ಮಡದೊಳಮುಂಗುಟದೊಳಳವಡಿಸಿದ ರಾಜಪುತ್ರನ ಬಲ್ಪಿಂಗಂ ಬಿನ್ನಣಕ್ಕಂ ಬೆಕ್ಕಸಂಬಟ್ಟು

ಆ ಪ್ರಸ್ತಾವದೊಳಿರ್ವರ
ತಿಪ್ರೌಢಖಚರರಚಿರರುಚಿ ದಿವಿಜಧನು
ರ್ದೀಪ್ರಮಣಿ ಮಕುಟ ವಿಕಟ ಪ
ಟುಪ್ರಭೆಯಿಂ ಭೂಪಭಾನುಗರ್ಘ್ಯಮನಿತ್ತರ್ ||೧೧೪||

ಮದಪುರುಷರಗಿದು ರದನಿಯ
ಮದವಿೞಿದ[7]ೞಿವಪುದೆಂದೆನೆ[7] ಮೆಯ್ಯಿಕ್ಕಿದವೊಲ್
ವಿದಳಿತ ವದನ ಪಯೋಜರ್
ಪದೆದಚಿರಂ ಖಚರರಿರ್ವರವನತರಾದರ್ ||೧೧೫||

ವ|| ಆಗಿ ಕಯ್ಗಳಂ ಮುಗಿದು ದೇವ ಬಿನ್ನಪಮಿಾಯಾನೆಯನೇಱುವೆನೆಂಬನ ನಸುನೆತ್ತಿಗೇಱುಗುಂ ಮುನಿವನ ಮುನಿಗುಂ ಪರಿಯಿಸುವೆನೆಂಬನ ಪಸಿಪ್ಪರೆಗುಯಿಮಾಯತಿವರ್ತಿಯಂ ವಶವರ್ತಿಮಾಡಲುಮಂಕುಶಮಿಲ್ಲದಂಕಿಸಲುಂ ನಿನಗೆ ತೀರ್ವುದು [8]ನೀನಲ್ಲದ[8] ದೇವನುರ್ಮೇತಱ ದೇವನೆಂದು ಗಳಗರ್ಜರಂತೆ ಪೊಗೞ್ದು ಬೇಗಮಿಾ ಗಜದಿನಿೞಿದೆಮ್ಮಧಿವಾಸನಾದೇಶಭಾಗಮನಿಱಿಪುವುದೆನೆ ವಸುದೇವನಿೞಿದು ನೀಮಾರ್ಗ[9]ದೇನೆಂಬುದೆನೆ ವಿದ್ಯಾಧರರಿಂತೆಂದರ್

ಮಾಣಿಸಿ ನಿ[9]ದ್ದೆ[9]ಯಂ ಜಿನಪತಿಸ್ನಪನೋತ್ಸವ ಮಂಗಳಾನಕ
ಕ್ವಾಣಮದೊಮ್ಮೆಯುಂ ಜಿನಮುಖಾಮುಖಮುಂ ಸಲವಿಂಪೆ ನೋೞ್ಪ ಕ
ಣ್ಜಾಣೆಮೆಯಿಕ್ಕಲೀಯದಿರೆ ತಾನೆ ನಗೇಂದ್ರದ ದಕ್ಷಿಣೋತ್ತರ
ಶ್ರೇಣಿಗೆ ತಂದು ಮುಂದಿಡುವುದಾರುಹತಂ ಸುರಲೋಕಶೋಭೆಯಂ ||೧೧೬||

---

1 ಬಿ (ಚಟಡಣ) 2 ಬತಿಕ್ಕು (ಚಟಣ) ಬಾತಿಂತು (ಡ) 3 ಯಿಂ (ಚಟಡಣ) 4 ರ್ದುಮುಜ ಬಾಷ್ಪು ಬಾಷ್ಪೆಂ (ಜ) ರ್ದವುಬ್ಬ ಬಾಷ್ಪು ಬಾಷ್ಪೆಂ (ಟ) ರ್ದುವುಬ್ಬ ಬಾಷ್ಪ ಬಾಷ್ಪೆಂ (ಡ) 5 ನೂಂಕಿಯುಂ (ಜ) 6 ವ (ಚಟಡಣ) 7 ಪುದಳಿಯಾದೆಂದು (ಚ) ಫುದಿಳಿವುದೆಂದು (ಜ) ಪುದಳಿವುದೆಂದು (ಟಡ) 8 ನಿನಗಲ್ಲದ (ಚಟಡಣ) 9 ರ್ದ (ಚಟಡಣ)

ವ॥ ಆ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ನಿ[1]ಳಿಪ್ಪ[1] ಕಿನ್ನರಗೀತಮೆಂಬ ಪೊಟಿಲನಾಳ್ವೊಂ ಮಹಾಭಾಗನಶನಿವೇಗನೆಂಬನಂಬರಚರನಾತನ ಮಗಳ್ ಪರ ಪುರುಷ ಶುಕಶಾಲ್ಮಲಿ ಶಾಲ್ಮಲಿಯೆಂಬಳಾಕೆಗನುರೂಪನಪ್ಪ ಪುರುಷನಂ ಖಚರಕುಲ ದೊ[2]ಳಂ ಭೂಚರಕುಲದೊಳಂ[2] ಕಾಣದೆ ವಿನ್ನನಾಗಿರ್ಪುದುಮಾದೇಶ[3]ಪುರುಷ ನುವಿನಾ[3] ಮದಗಜಮನೇಱದನೆ ನಿಜಾತ್ಮಜೆಗೆ ಮದವನಿಗನೆಂದೊಡಾನಂದದಿನೆಮ್ಮಾಳ್ದ ನೆಮ್ಮಿರ್ವರುಮಸೀ ಕರಿಪತಿಗೆ ಕಾಪಂ ಪೇೞ್ದನೆಂದಿಂದಿತ್ತಲೀಯಡವಿಯೊಳಡಿಮಿಡುಕದೆ ಮೃಗಂಗಳಾಗಿರ್ದೆವಿಂದೆಮ್ಮ ಪುಣ್ಯಂ ಬರ್ಪಂತೆ ಬಂದು ಸಾಹಸಪುರುಷನುಮಾದೇಶ ಪುರುಷನುಮಾಗೆ ಎಮ್ಮ ತಪಮುಂ ಶಾಲ್ಮಲಿದತ್ತೆಯ ಕಾಮತಾಪಮುಂ ಸಫಲ ಮಾದುದೆಂದು

ಇದು ದಿವ್ಯಶ್ರೀವಿಮಾನಂ ಮನಮೊಸೆದಿದ ನೀನೇಱು ಬಾ ಪೋಪಮಾ ತೋ
ರ್ಪುದೆ ಕಂಡೈ ಖಂಡಿತಾರಿಸ್ಮಯ ಜಯವಿಜಯಾರ್ಧಾಚಲಂ ನಿನ್ನನೆಯ್ತಂ
ದಿವಿಗೊರ್ಳ್ವಂದಿತ್ತ ಬರ್ಪುಜ್ಜ್ವಳ ಜಳಧರದಿಂ ನಿನ್ನ ಬರ್ಪುತ್ಸವಕ್ಕೆ
ತ್ತಿದವೊಲ್ ಕೂಟಾಗ್ರದೊಳ್ ನಿರ್ಝರಪಟಳ ಪತಾಕಾಳಿ[4]ಯಂ[4] ಲೀಲೆಯಿಂದಂ ॥೧೧೭॥

ಆನೆಯನೇಱದೆಯೇಱು ವಿ
ಮಾನಮನೇಱದಪೆಯಚಳಪತಿಚೂಳಿಕೆಯಂ
ತಾನೆ ಕುಡುಗುಂ ಮಹೋನ್ನತ
ಮಾನೋನ್ನತಿ[5]ಯುಂ ನತೋನ್ನ[5]ತಾರೋಹಣಮಂ ॥೧೧೮॥

ವ॥ ಎಂದಾ ಖಚರಯುಗಳಮಪವಟ್ಟೈಸಿದ ಮಣಿಮಯ ವಿಮಾನಮನೇಱ

ಪವನಪ್ರೇಂ[6]ಖಾನಳ[6]ಪ್ರೋಚ್ಚಳಿತ ಮರಕತ ಸ್ಥೂಲ ರತ್ನಾವಳೀ ಪ
ಲ್ಲವಮಾಲಾ ತೋರಣಾಂಗಪ್ಪಸುಗುರ್ಪುಮರೆಗಳಂ ಪೂಡಿದಂತೊಪ್ಪೆ ಕಯ್ಯೊಳ್
ನಪಲೀಲಾ ನೀರಜಂ ರಂಜಿಸೆ ನಿಜರಥಮಂ ಬಂದು ಮಾರ್ತಂಡನೊಲ್ದೇ
ಱುವವೊಲ್ತಾನೇಱದಂ ಕಾಂಚನಖಗರಥಮಂ ಮೂರ್ತಿ ಮಾರ್ತಂಡದೇವಂ॥ ೧೧೯॥

ಇದು ಮೃದುಪದಬಾಧಬಂಧುರ ಸರಸ್ವತೀ ಸೌಭಾಗ್ಯವ್ಯಂಗ್ಯ ಭಂ[7]ಗಿ[7]ನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ [8]ಸೆಜ್ಜೆ[8]ವಳ್ಳ ಪದ್ಮ ನಾಭದೇವ ಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ಪಂಚಮಾಶ್ವಾಸಂ

ಸಮಾಪ್ತಂ

1 ಳಂಪ (ಚಟಡಣ) 2 ಳ್ (ಜ) 3 ವಿದರಿ (ಜ) 4 ಯಿಂ (ಚಟಡಣ) 5 ಯುಂ ನ (ಜ) 6 ಖೊಳನ (ಜ) 7 ಗಿನೀ (ಚಟಡ) 8 ಪದವೀ ವಿರಾಜಿತ ಸೆಜ್ಜೆ (ಜಟಡ)

ಷಷ್ಠಾಶ್ವಾಸಂ

ಶ್ರೀಪತಿಪಾದಂ ಗಗನಾ
ಕೂಪಾರದ ಮುತ್ತುಬೆಟ್ಟಮಾದವೊಲೆಸೆದಿ
ರ್ಪಾ ಪರ್ವತಕ್ಕೆ ಕೃತಿಕುಳ
ದೀಪಂ ಕವಿತಾವಸಂತ[1]ನವನೀ[1]ಕಾಂತಂ ||೧||

ತುಱುಗಿದ ಕಡಲಂ ಸೂಸುವ
ನಿಱುಮುಗಿಲೊಳ್ ಪರಿವ ಗಗನಯಾನದೊಳರಸಂ
ನೆಱೆ[2] ಪೋಲ್ತಂ ಸ್ತ್ರೀರತ್ನಮ
ನಱುಸ[3]ಲ್ ತಾಂ[2] ಪಾಱುವೋಪ ಸಾಂಯಾತ್ರಿಕನುಂ ||೨||

ಕುಲಗಿರಿಸಂಕುಳಂ ಸುಕವಿಶೇಖರನುನ್ನ[3]ತಿ[3]ಗಂಡು ಲಜ್ಜೆಯ
ಗ್ಗಲಿಸೆ ಕುನುಂಗುವಂತೆಸೆದು ತೋಱುದುವಂದು ಮಿಸುಪ್ಪ ಸರ್ಪ ಸಂ
ಕುಲಮನೆ ಕೂಡಿ ಕೊಂಕಿ ಪರಿಗೊಳ್ವ ನದೀನದಜಾಳದಿಂ ಮಹೀ
[4]ತಳ[4]ಮಹಿಲೋಕದಂತೆಸೆದುದಾ ಜಗತೀಪತಿಗೂರ್ಧ್ವಯಾನದೊಳ್ ||೩||

ವ|| ಅಂತುಮಲ್ಲದೆ

ಸಾಗರವೊಂದು ಕಂಕಣದಿನುರ್ವರೆ ಕಾವಲಿ[5]ಯಿಂ[5] ಕುಳಾದ್ರಿಗಳ್
ಪಾಗಲ ಕಾಯ್ಗಳಿಂ ನುದಗಜಾವಳಿ ಪಂದಿಗಳಿಂ ನದೀವ್ರಜಂ
ಭೋಗಿಗಳಿಂ ತಡಾಗ[6]ತ[6]ತಿ ಕ[7]ಣ್ಗಳಿನು[7]ನ್ನತಪಾದಪೋತ್ಕರಂ
[8]ಸೀಗು[8]ರಿಯಿಂ ಕರಂ ಕಿಱಿಯವಾದುವು ಕಣ್ಗೆ ಗುಣಾವಲೋಕನಾ ||೪||

* ಮಾಲಿನೀ|| ಪರಿಗತ ಬಹುವರ್ಣಂ ತತ್ಸಮಾಭೂತ ಪದ್ಮಾ
ಕರಸಲಿಲದಚಲಾರಣ್ಯಾ ನಿಮ್ನೋನ್ನತ ಶ್ರೀ
ಕರಮೆಸೆದುದು ಜಂಬೂದ್ವೀಪಮಾದಂ ಬೆಡಂಗಂ
ಬೆರಸಿ ಬರೆದ ಜಂಬೂದ್ವೀಪದಂತೀಕ್ಷಣೀಯಂ ||೫||

---

1 ವನಿತಾ (ಚಟಡಣ) 2 ಲ್ಕಂ (ಜ) ಲ್ (ಡ) 3 ತ (ಚಟಡಣ) 4 ವಲ (ಚಟಡಣ)
5 ಯೆಂ (ಚಟ) 6 ಗ (ಚಜಡ) 7 ಜೊಗ್ಗಳಿಗು (ಚಟಡಣ) 8 ಶ್ರೀ ಗಿ (ಚಟಡಣ)
* 'ಡ' ಪ್ರತಿಯಲ್ಲಿಲ್ಲ

*ವ|| ಅಂತು ಕಿನ್ನರಗೀತಕ್ಕೆ ಪೋಗಿ ಶಾಲ್ಮಲಿದತ್ತೆಯೊಳ್ಮದುವೆ ನಿಲೆ

ತುದಿ ಮೊದಲಪ್ಪುದಿಂಪಡರೆ ಕೂಡುವ ಕೂಟದೊಳೀಕ್ಷಣಕ್ಕೆ ರೂ
ಪದೆ ಪೊಸತಪ್ಪುದೊಲ್ದೆಳಸಿ ನೋಡುವ ನೋಟದೊಳೇನನಿತ್ತನಿ
ತ್ತುದೆ ಬೆಲೆಯಪ್ಪುದೆನ್ನಸುಗೆ ಬೇಡುವ ಬೇಟದೊಳೆನ್ನ ನಲ್ಲನಂ
ಮದನವಿಕಾರಸಾರಸುಖದಿಂದಮೆ ಮಾಡದೆ ಮಾಣ[1]ನ[1]ಬ್ಜಜಂ ||೬||

ಬಾಯ್ವಸವೋಡದಂತಡರೆ ಚುಂಬಿಸೆಯುಂ ಬಗೆದೆಂತು ತಳ್ತೊಡಂ
ಮೆಯ್ವಸ[2]ವೋಡ[2]ದಪ್ಪ ಗಡ ಕಣ್ಬಸವೋಡದಿದೆಂತು ನೋಡೆಯುಂ
ಕಯ್ವಸದಂತವಂ ನೆರೆದೊಡಂ ಮನಮಾಱದದರ್ಕೆ [3]ಸಕ್ಕಿಯಿಂ[3]
ಸಯ್ವೆಱಗಾದ ಮೆಯ್ಮವಿರ್ಗಳೆಂಬವೊಲಂಗನೆ ಕೂರ್ತು ಕೂಡಿದಳ್ ||೭||

ಸುರಯಿಯ [4]ಮುಗುಳ್ಗ[4]ಳೊ[5]ಳುರುವಳ್[5]ದಳಿಪತಿ
ಬಿರಯಿಸೆ ಬೆರಸುವ ಬಸದನ ಬಿಸ[6]ನಿ[6]ರೆ
ಸುರತ ಸುರಭಿರಸ ಪರಿಮಳಮಿಱುತರೆ
ಬೆರಸಿದನರಮಗನರಸಿಯೊಳೆಸೆದಿರೆ ||೮||

ವ|| ಅಂತು ಬಂದ ಬಸಂತದೊಳ್ ವನ[7]ಜಲ[7]ಕೇಳಿ[8]ಯಾಡಿ ಬಱಲ್ದು ಬಂದು[8] ಮಲ್ಲದೆ ಸುರತಶ್ರಾಂತರಾಗಿ ಶಾಲ್ಮಲಿದತ್ತೆಯುಂ ವಸುದೇವನುಂ ದೇವದಂಪತಿ [9]ಯಂತೆ[9] ಸೌಧಾಗ್ರತಲದೊಳ್[10]ತಳ್ತು[10] ಪವಡಿಸುತ್ತುಮಿರೆ

ಬಿಡಿಸಿ ಭುಜಂಗಿಯ ತಳ್ಪಿಂ
ಪಿಡಿದುಯ್ವಂತೆಳೆಯ ಮಲಯಜಾತಮನಳಿಪಿಂ
ತೊಡರ್ದಾ ಖಚರಿಯ ತಳ್ಪಿಂ
ಬಿಡಿಸಿ ನೃಪಾತ್ಮಜನನೊ[11]ರ್ವನುಯ್ದಂ[11] ಖಚರಂ ||೯||

ವ|| ಆಗಳಾ ಶಾಲ್ಮಲಿದತ್ತೆಯುಮೆಚ್ಚತ್ತು ಚಂದನಗ್ರಾಹಿಯ ಬೆನ್ನಟ್ಟುವ ಭುಜಂಗಿಯಂತೆ

---

1 ದ (ಚಟಡ) 2 ವೋದ (ಜ) 3 ಶಕ್ತಿಯಂ (ಜ) ಸಕ್ತಿಯಿಂ (ಣ) 4 ಬಿರಿ ಮುಗು (ಜಜಟಡ) 5 ಳ್ಗರೆಸ (ಜ) 6 ಸಿ (ಡಣ) 7 ಜ (ಚಟಡ) 8 ಯುನಾಡಿ ಬಂದು ಬಳಲ್ದುದು (ಚಟಡಣ) 9 ಗಳಂತೆ (ಟಡ) 10 ಪಳ್ತು (? ಟ) 11 ಯ್ದನೊರ್ವಂ (ಡ)
* 'ಡ' ಪ್ರತಿಯಲ್ಲಿಲ್ಲ.

ಒಕ್ಕ ಸೆಱಂಗಿನಿಂ ಮೊಲೆಯ ಗಾಳಿಸಿ ಗಂಡುಡೆ[1]ಯು[1]ಟ್ಟು [2]ಪಚ್ಚು[2]ಗಂ
ಟಿಕ್ಕಿ ಬಟಲ್ದ ಬಳ್ವಿಣಿಲನೊತ್ತಿದೆಱಂಕೆವೊಲೆತ್ತಿಕೊಂ[3]ಡೆರಟ್[3]
ಪಕ್ಕದ ಬಾಳು[4]ಮು[4]ತ್ತಪರ[5]ವುಂ ಪ್ರೊ[6]ಳೆಯುತ್ತಿರೆ ಪಾಱಿದಳ್ ನಭೋ
ಗ್ರಕ್ಕತಿವೇಗದಿಂ ಖಚರಕಾಮಿನಿ ಕಾಮನ ವೀರಲಕ್ಷ್ಮಿವೊಲ್ ||೧೦||

ಅತ್ತಪರಂ ಸಹಸ್ರಕಿರಣಂ ಪೊಣರ್ವಕ್ಕಿಯನಪ್ಪಿದಂತೆ ಪೊ
ನ್ನತ್ತಪರಂ ತಳತ್ತಳಿಸೆ ಪೆರ್ಮೊಲೆಯೊಳ್ ಪೊಳೆಪಿಂ ತೊಡಂಕೆ ಕ
ಣ್ಗತ್ತಿಗೆಗೊಂಬಿನೊಳ್ ನಲಿದು ನರ್ತಿಸುವೊಂದೆಳಮಿಂಚಿನಂತೆ ಮಿಂ
ಚುತ್ತಿರೆ ತೋಳ ಬಾಳನೊಲೆಯುತ್ತುಮೆ ಶಾಲ್ಮಲಿದತ್ತೆ ತೂಗಿದಳ್ ||೧೧||

ವ|| ಅಂತು ಪಾಱಿಪೋಗಿ ಕಿಱಿದಂತರದೊಳ್ ಕುಮಾರನಂ ಕೌಂಕುಟಿಕೊಳ ವುಂಕಿಕೊಂಡು ಪೋಪ ಖಚರನಂ ಕಂಡು ಕಡುಮುಳಿದೆಲೆಲೆ [8]ಸ[8]ತ್ತೆಯಿನ್ನೆತ್ತವೋದಪೆ ಯೆಂದು ಮಧುಮತ್ತಕೋಕಿಲಕುಮಾರಿಯಂತೆ ಖಚರಕುಮಾರಿ ಗಜಱಿ ಗರ್ಜನಂ ಗೆಯ್ದು

ಬಿಡು ಬಿಡು ಮನ್ಮನಃಪ್ರಿಯನನಲ್ಲದೊಡಕ್ಕೆನುತಾಕೆ ಖಡ್ಗಮಂ
ಜಡಿ[7]ದೊಡನಾಲಿಯುಂ[7] ಜಲಮುನೊಕ್ಕುವಿನಂ ಶತಖಂಡಮಪ್ಪಿನಂ
ಸಿಡಿ[9]ಲೆ[9]ಳಮಿಂಚು ನುಚ್ಚುನುಱಿಯಪ್ಪಿನೆಗಂ ಕಡಿಖಂಡಮಪ್ಪಿನಂ
ಪೊಡೆದಳದೊಂದು ನೀಲಘನಮಂ ಪೊಡೆವಂತಿರೆ ಮತ್ತದಂತಿಯಂ ||೧೨||

ಸೋಗೆಯ ಕಲರುತಿಗಳ್ಕಿದ
ನಾಗರವೊಲ್ ಗಜಱುವವಳ ದನಿಗಳ್ಕಿ ಖಗಂ
ಪೋಗಲ್ ಪಡೆಯದೆ ಖಚರಿಯ
ಮೋಗವನೀಡಾಡಿ ಪೋದನರಸರ ಮಗನಂ ||೧೩||

ವ|| ಈಡಾಡೆ ಬೀಟ್ವ ಬಾಲಭೂಪಾಲಚಂದ್ರನಂ ಪೆರ್ಮೊಲೆಯೊ[8]ಳಾಂತು[8] ಓಡಿದು ಪುಳಕದಿಂ ಕೀಲಿಸಿಕೊಂಡು ಕುಸುಮಸ್ತಬಕಮಂ ಕುಂಭಸ್ಥದೊಳ್ಕೊಟ್ಟುಕೊಂಡ ಕಾಮಕರಿಣಿಯಂತೆ ಪೋಪ ಶಾಲ್ಮಲಿದತ್ತೆಯನೊಂದು ದಿವ್ಯಧ್ವನಿ

---

1 ಮೆ (ಜ) 2 ಸಜ್ಜು (ಚಡಣ) ಸಚ್ಚು (ಟ) 3 ದವೊಲ್ (ಚಟಡಣ) 4 ಮಾ (ಝ) 5 ಮಂ ಪೆ (ಚಟಡಣ) 6 ಪ (ಜ) 7 ದಡೆವಾಲಿಯಂ (ಚಟ) ದೊಡೆದಾಲಿಯುಂ (ಜ) ದೊಡವಾಲಿಯುಂ (ಡ) 8 ದೆ (ಜ) 9 ಳ್ಮಾನು (ಜ)

ಇದು ವಾಣೀಮತ್ತಹಂಸೀಸ್ವನಮಿದು ಮದನಜ್ಯಾಲತಾಸಿಂಜಿತಂ ಮ
ತ್ತಿದು ನೃತ್ಯದ್ವಾರಶ್ರೀ ನೂಪುರ ರು[1]ತಮಿ[1]ದು ಪುಷ್ಪಾಯುಧಾಮೋದಮುದ್ಯ
ನ್ಮದ ಭೃಂಗೀರಂಜಿತಂ ತಾನೆನೆ ನನೆಗಣೆಯಂ ಕೋಟಿಬಂದಿಂಪು ನುಣ್ಪಿಂ
ದುದಿರ್ವಂತಾ ರಾಜಪುತ್ರಶ್ರುತಿಗತಿಧಿಯದೊಂದಾಯ್ತು ವೀಣಾ ಪ್ರಣಾದಂ ||೧೫||

ವ|| ಆ ವೀಣಾರವಂ ಬಂದ ಬಟ್ಟೆವಿಡಿದು ಪೋಗಿ ಬಸದಿಯೆಂಬಸಿಯ[2]ಳು[2]ಟ್ಟ
ಪಸಿಯ ನೇತ್ರಮನಸಕಟಿವಂತಿರ್ದುಪವನದ ನಡುವೆ ಪೂವಿನ ಪುಡಿಯೊಳೊಟ್ಟ ಬೆಟ್ಟ
ದಂತಿರ್ದೊಂದು ಪೊಂಬಸದಿಯ ಮತ್ತವಾರಣದ ಮೇಲೆ

ಅಳಕಾಸಕ್ತೈಕಹಸ್ತಂ ಪ್ರಿಯಶುಕಪರಿಹಾಸಪ್ರಫುಲ್ಲೈಕಗಂಡ
ಸ್ಥಳಮಾ[3]ದರ್ಶಾರ್ಪಿತೈಕೇ[3]ಕ್ಷಣಮುಚಿತಸಖೀವಾಗ್ವಿತೀರ್ಣೈಕಕರ್ಣಂ
ಕಳವೀಣಾಲಿಂಗಿತೈಕಸ್ತನಮೆಸೆದುದು ಕಾಂತಾಜನಂ ರತ್ನಪೀಠಂ
ಗಳೊಳೇಕೈಕಾಂಗಲೀಲಾಬಲ[4]ಮ[4]ನೆ ರತಿನಾಥಂಗೆ ತೋರ್ಪಂದದಿಂದಂ ||೧೬||

ವ|| ಮತ್ತಮಾ ಬಸದಿಯೊಳಗೆ ಪಿದಿ ಬಯ್ತು ಭುವನಭಾಗ್ಯದೇವತೆಯಂತಿರ್ದ
ಪದ್ಮಾವತಿಯ ಮುಂದೆ ಚಂದ್ರಬಿಂಬಮಂ ತುಂಬಿಮಾಡಿ ಬಿಸತಂತು ಸಿಂಜಿನಿಯಂ
ತಂತಿಮಾಡಿ ಇಕ್ಷುಚಾಪದಂಡಮಂ ದಂಡಿಗೆಮಾಡಿ ಪಂಚಶರಂಗಳಂ ಸಪ್ತಸ್ವರಂಗಳಂ
ಮಾಡಿ ಜಿನಪತಿಯುಮನೆನ್ನ ಗಂಡನೊಳೆ ಪಡೆದು ಕುಡುವುದೆಂದು ದೇವಿಯನಾರಾ
ಧಿಸಿ ಬೀಣೆಯಂ ಬಾಜಿಸುವ ರತಿಯಂತಿರ್ದಳನೊರ್ವಳಂ ಸೌಂದರ್ಯಸುಕುಮಾರಿ
ಯಂ ಕುಮಾರಿಯಂ ಕಂಡು ಆಕೆಯ ವೀಣಾ[5]ವಾ[5]ದನ ವೈದ[6]ಗ್ಧ್ಯ[6]ಕ್ಕಂ ಸಕಲ ತ್ರಿಭುವ
ನಾತಿಶಯ ರೂಪಾಕೃತಿಗಂ ಕುಮಾರಂ ಮೆಚ್ಚಿ [7]ಮೆಯ್ಮ[7]ಱೆದು ಕಂಬದ ಮಱೆಯಂ
ಸಾರ್ದು ಕೇಳುತ್ತುಮಿರ್ಪುದನಾಕೆಯ ಗುರು ಮನೋಹರನೆಂಬ ಗಂಧರ್ವಾಚಾರ್ಯಂ
ಕಂಡು ವಸುದೇವನಂ ದೇವನೆಂದೇ ಬಗೆದು [8]ಕು[8]ಳ್ಳಿರ[9]ಲ್ಕು[9]ಡಿಸಿ ಕುಮಾರನಾಕಾರ
[10]ಮ[10]ನೇಱ[11]ಯಮಿಟಿಯುಂ[11] ನೀಡುಂ ಭಾವಿಸಿ ನೋಡಿ

ಶ್ರೀಯಂ ತಾಳ್ದಿರ್ದ ವಕ್ಷಂ ಕಿಸುಸೆರೆವರಿದಿರ್ದಕ್ಷಿಯುಗ್ಮಂ ಪಯೋಜ
ಪ್ರಾಯಂ ತಾಮ್ರಾಧರೋಷ್ಠಂ ವದನಮಿಭಕರಸ್ಪರ್ಧಿಗಳ್ ತೋಳ್ಗಳಂಗ
ಯ್ಯಾ[12]ಯೂ[12] ರೇಖಾಭಿರಾಮಂ ಪೊಱ[13]ಅಡಿ ಕಮಠಾಕಾರಮಾಕಾರಮತ್ಯಾ[13]
ದೇಯಂ ಸಾಮಾನ್ಯನಲ್ಲಂ ತ್ರಿಭುವನಜನತಾ ಮಾನ್ಯನೀ[illegible] ||೧೭||

1 ತಿಯಿ (ಚಟಡಣ) 2 ಳ್ಳ(ಜ) 3 [illegible] 4 ಮೆ (ಜಟಡ) 5 ನಾ (?) 6 ಗ್ಧಿಕೆ (ಚಟಡ) ಗ್ಧಿತೆ (ಣ) 7 ನೆ (ಜ) 8 [illegible] (ಚಟಡಣ) 9 ಲ್ಕೊ (ಚಟಡ) 10 ಮುಂಮ (ಜ) ಮುಂ (ಟ) 11 ಯುಂ [illegible] ಯುಮಿಂಳಿಯುಂಯು (ಜ) 12 ಯುಂ (ಚಟಡ) 13 [illegible] (ಚಟಡಣ)

ವ॥ ಎಂದು ಮನದೊಳ್ ಮಚ್ಚುತ್ತುಮಿರ್ಪನ್ನೆಗಂ ಪನ್ನಗಪೂಜಿತೆ ವೀಣಾವಾದನಪ್ರವೀಣತೆಗೆ ಮೆಚ್ಚಿ ಮನವೊಸೆದು ಪಸಾಯಮಿತ್ತ ಮಕುಟದ ಮುಕುಳಮನಾ ಕುಮಾರಿ ಮುಡಿಯೊಳಿಟ್ಟು [1]ಭಟ್ಟತ್ತಿಗೆ[1] ಪೊಡೆಮಟ್ಟು ಬಂದುಪಾಧ್ಯಾಯಂ ಗೆಱಗಿ ದೇವಿಯೆನಗೆಂದುಮಿಾಯದ ವರಪ್ರಸಾದಮನಿಂದು ಗುರುಚರಣಪ್ರಸಾದದಿನಿತ್ತಳೆಂದು ಪೋಪುದುಮುಪಾಧ್ಯಾಯನೀ ಮಹಾನುಭಾಗನ ಬರ[2]ವುಮಿಾ[2] ದೇವತೆಯ ಬರವುಮಿಾಯಿಂದುವದನೆಗಿಂದು ಸಮನಿಸಿದ ಕಾರಣದಿನೀ ಕಾರಣಪುರುಷನೀ ವರಾಂಗನೆಗೆ ವರನಾಗಲ್ವೇೞ್ಕುಮೆಂದು ಮಂದಸ್ಮಿತವದನನಾಗೆ ವಸುದೇವನಱಿದೀ ಕುಮಾರಿ [3]ಯಾ[3]ರ ಮಗಳಾಗರ್ಗೆ ಕುಡಲಿರ್ದಪಳೀ ಪರಮೇಶ್ವರಿಯ [4]ಪರಿಜನ[4]ಮೇಕೆ ಬಾಳಕರನೆತ್ತಿದಂತೆ ವೀಣೆಯಂ ಕೌಂಕುೞಿಯೊಳ್ಕೊಂಕಿಕೊಂಡಿರ್ದಪಳೆಂಬುದುಮೋಜನೆಂದನೀಕೆ[5]ಯೀ[5] ಪುರಮನಾಳ್ವಂ ಚಾರುಚರಿತಂ ಚಾರುದತ್ತನೆಂಬ ಪರದನ ಮಗಳೀ ವಾಣಿಗೀ[6]ವೀಣೆಯೊಳ್ ವಾಣಿಯಿಂ[6] ಬಲ್ಲಳ್ ವೀಣಾವಾದನದಿಂ ತನ್ನ ನಾಪಂ ಗೆ[7]ಲ್ವನವಂಗ[7]ಲ್ಲದೆ [8]ಪೆಂಡತಿ[8]ಯಾಗೆನೆಂದು ಪ್ರತಿಜ್ಞೆಯಂ ಮಾಡಿದಳಿವರ ಯ್ಯನುಂ ರಯ್ಯಮಾಗಿ ತಿಂಗಳ್ಗೊಮ್ಮೆ ವೀಣಾಸ್ವಯಂವರಮಂ ಮಾಳ್ಪಮೆನ್ನರಪ್ಪ ಕಿನ್ನರರುಮಿಾ ಕನ್ನೆಗೆ ಸೋಲ್ತು ಕನ್ನೆಗೆ ವಂದ ರವಿಯಂತೆ ನಿಃಪ್ರಭರಾಗಿ ಪೋಪರಿದು ವಿಪಂಚೀಪ್ರಪಂಚಮೆನೆ ಕುಮಾರನೊಸೆದು ತನ್ನೊಳಿಂತೆಂದಂ

> ಪರದರ ಸುತೆಗಿನಿತು ಕಳಾ
> ಪರಿಣತೆ[9]ಯುಂ[9] ರೂಪುಮಾಗ[10]ದೆಳ[10]ಗೊಸಗಿನ ಪೂ
> ಮರದಡಿಯೊಳಿರ್ದ ಸಂಪಗೆ
> ಯರ[11]ಲಿ[11]ರ್ಪವೊಲಿರ್ದಳೀಕೆ ಯಾವನ ಮಗಳೋ ॥೧೮॥

ವ॥ ಎಂದು ಮನದೊಡನೆ ಮಾತಾಡುವ ಕುಮಾರಂಗೆ ನಿನ್ನನುಮಾನಮನಱಿದೆ ನೆಂ[13]ದು ಮನೋಹರನೆಂದ[12]ನೀ ಪರದನ ಪರಮಮಿತ್ರನಮಿತಗತಿಯೆಂಬನಂಬರಚರನಾತನ ಮಗಳೀಕೆ ಗಂಧರ್ವದತ್ತೆಯೆಂಬಳೀ ಚಾರುದತ್ತನ ಚಾರಿತ್ರಕ್ಕಂ ಚತುರತೆಗಮಗಲಲಾಱದಮಿತಗತಿ ವಿದ್ಯಾಧರ ಲೋಕಕ್ಕೊಡಗೊಂಡು ಪೋಗಿ ತನ್ನ ರಾಜ್ಯಮಂ ಕುಡೆ ಕಡೆಗಣಿಸಿ ಗಂಧರ್ವದತ್ತೆಯ ಗಾಂಧರ್ವಗಂಧಿಯಪ್ಪ ಕಳಾಕೇಳಿಗಂ ವಲ್ಲಕೀವಲ್ಲಭತೆಗಂ ಬೆಡಂಗಿಂಗೆಡೆಗೊಂಡ ಗಾಡಿಗಂ ಬಯಸಿ [13]ಕೊಳ್ಳಗಳ್ಗೊಂ[13]ಡನಿದೀಕೆಯ ವೃತ್ತಕಮೆಂದು ವಸುದೇವನಂ ತನ್ನ ಮನೆಗೊಡಗೊಂಡು ಪೋಗಿ ಮಜ್ಜನ ಭೋಜ

1 ಭಟಾರಿಗೆ ಪೋಗಿ (ಜ) 2 ವು (ಚಟಡಣ) 3 ಯ (ಣ) 4 ಪರಿಚಯಜನ (ಚಟ) ಪರಿಚರಿಯ(ಡ) 5 ಗೀ (ಚಟಣ) 6 ವಾಣಿಯೊಳ್ ವಾಣಿ (ಜ) 7 ಲ್ಲನಾತಂಗ (ಚಟ) ಲ್ವನಾತನನ (ಡಣ) 8 ಮದುವೆ (ಣ) 9 ಯಂ (ಚಟಡ) 10 ದಿಳೆ (ಜ) 11 ಲಾ (ಜ) 12 ದ (ಜ) 13 ಕೊಳ್ಗೊಗಳ್ ಕಂ (ಚಟಣ) ಕೊಳೆಗ್ಗೊಗಳ್ಗೊಂ (ಡ)

ನಾದಿಗಳಿಂ ಮನ್ನಿಸಿ ಮನೋಹರಂಗೆ ಮನೋಹರನಾಗೆ ಮಱುದಿವಸಂ ವೀಣಾಸ್ವಯಂ ಬರವಾಗೆ ವೀಣೋಪಾಧ್ಯಾಯನೊಡಗೂಡಿ ಸ್ವಯಂವರ ಮಂಟಪದೊಳ್ ಕುಳ್ಳಿರ್ದ ನನ್ನೆಗಂ ನೆರೆದ ಕಿನ್ನರ ಕಿಂಪುರುಷ ಗರುಡ ಗಾಂಧರ್ವ ಸಿದ್ಧ ವಿದ್ಯಾಧರರಂ [1]ಕರ್ವಿ[1]ನ ಬಿಲ್ಲನೇಱಿಸುವಂತೆ ಕಳೆಯನೇಱಿಸಿ ಜೇವೊಡೆವಂತೆ ಮಿಡಿದು ನನೆಗಣೆ[2]ಯಂ[2] ಕೊಳ್ವಂತೆ ಕೋಣಮಂ ಕೊಂಡು ಮ[3]ಗ[3]ಮಗಿಸುವಂತೆ ಬಾಜಿಸಿ ಮನೋ[4]ಜ ವಿ[4]ಜ ಯಾಧಿದೇವತೆಯಂತೆ ಗಂಧರ್ವದತ್ತೆ ಸೋಲಿಸೆ ವಸುದೇವಂ ಕಂಡು ಮನೋಹರನನು ಮತದಿಂ ಕಳನೇಱುವಂತೆ ವಿದ್ಯಾಪೀಠಮನೇಱಿ ಬೀಣೆಯಂ ಬೇಡುವುದುಮುಪಾ ಧ್ಯಾಯನೊಳ್ಳಿದುವೆಂ[5]ದಾ[5]ಯ್ದು ತಂದಿತ್ತ ಬೀಣೆಯಂ ಮಿಡಿದು ನೋಡಿ ತಂತಿಯೊಳ್ ತನುರೋಮ[6]ಮಂ ಸೋ[6]ರೆಯೊಳ್ ಶಲ್ಯಮಂ ಪ್ರವಾಳದೊಳ್ ಪಾಷಾಣಮಂ ಕೋಱಿ ಕುಡುವೊಡೆ ನಿರ್ದೋಷಮಪ್ಪ ವೀಣೆಯಂ ಕುಡಿಮೆನೆ ಮನೋಹರನೆಂದನೀ ಲೋಕ ದೊಳಿವಲ್ಲದಿಲ್ಲ ನಿಮ್ಮ ಮೆಚ್ಚುವ ಬೀಣೆ ಯಾವ ಲೋಕದೊಳುಂಟೆನೆ ವಸುದೇವನೊಂ ದಾಖ್ಯಾನಮಂ ಪೇೞಲ್ ತಗುಳ್ದನದೆಂತೆನೆ

ನುತಹಸ್ತಿನಾಖ್ಯಪುರದಧಿ
ಪತಿ ಮೇಘರಥಂಗಮೆಸೆವ ಪದ್ಮಾವತಿಗಂ
ಸುತರಾದರ್ ಜಗತೀ ವಿ
ಶ್ರುತ ವಿಷ್ಣುಕುಮಾರ ಪದ್ಮರಥರತಿಸೇವ್ಯರ್ ॥೧೯॥

ವ॥ ಮೇಘರಥಂ ಮೇಘ[7]ಕ್ಷ[7]ಣ ದರ್ಶನದಿಂ ವೈರಾಗ್ಯಪರನಾಗಿ ವಿಷ್ಣು ಕುಮಾರಂ ಬೆರಸು ತಪಂಬಟ್ಟಂ ಪೆಱಗೆ ರಾಜ್ಯದೊಳ್ ನಿಂದ ಪದ್ಮರಥನ ಮೇಲೆ [8]ಮುಳಿದೆತ್ತಿ[8] ಬಂದ ಪ್ರತ್ಯಂತ ಭೂಪಾಲರ ಬಲಮಂ ಬಲಿಯೆಂಬ ಮಂತ್ರಿಯುಂ ಮಂತ್ರಬಲದಿಂ ಬಾರದಂತು ಬಾರಿಸೆ ಪದ್ಮರಥಂ ಮೆಚ್ಚಿ ಮೆಚ್ಚಿ[9]ತಂ[9] ಬೇಡಿಕೊಳ್ಳೆನೆ ಬಲಿ ಜೋ[10]ಕೋ[10]ರನಂತೀರೇೞು ದಿವಸದರಸುತನಮಂ ಬೇಡಿ ಪಡೆದನನ್ನೆಗಮಾ ಪುರದ ಪೊಱಪೊೞಲ ಸೌಮ್ಯಗಿರಿಯೊಳ್

ಧೃತಿಯಿಂ ಮಚ್ಚರಿಸುವ ಪ
ರ್ವತಮಂ ತಾನಿಕ್ಕಿ ಮೆಟ್ಟಿದಂತಿರೆ ಯತಿಸಂ
ತತಿವೆರಸಕಂಪನಪ್ರತಿ
ಪತಿಯಿರ್ದಂ ಯೋಗ[11]ಧುರ್ಯನಚಲಿತ ಧೈರ್ಯಂ[11] ॥೨೦॥

[illegible] (ಇ)
[illegible] (ಇ)
[illegible] 10 [illegible] 11 [illegible]
[illegible]

ವ|| ಆದು ಕಾರಣದಿಂದಕಂಪನ ಮುನೀಶ್ವರಂಗೆ ಬಲಿಯುಪಸರ್ಗಮಂ ಮಾಟ್ಪ
ಮನಮನೆತ್ತಿಕೊಂಡು ಕೋಟಿಹೋಮಮುಮಂ ಬ್ರಾಹ್ಮಣ ಭೋಜನಮುಮಂ ಸೌಮ್ಯ
ಗಿರಿಗುಹಾಗೇಹಂಗಳೊಳ್ ಮಂತ್ರಿ ಮಾಡಿದಪನಲ್ಲಿಯಲ್ಲದೊಡೆಯುಂ ಗರಗರಿಕೆಯುಮಿಲ್ಲೆಂದು
ಡಂಗುರಮಂ ಪೊಯ್ಸಿ ಬಾಯ ಸವಿಗೆ ಪಾರ್ವರೆಲ್ಲಂ ಪರ್ವತಕ್ಕೆ ಮೂಷೆ
ಯಿಡುವಂತೆ ಸುತ್ತಿ ಮುತ್ತಿ ಬೇ[1]ಳ್ವಿ[1]ಯುಮನಡುಗೆಯುಮಂ ಎಡೆಯುಡುಗದೊಡರಿಸೆ

ಮುಗಿ[2]ಲಗ[2]ಶೃಂಗಮಂ ಮುಸುಱಿ ಮೇವವೊಲುರ್ವಿ ಪೊದಟ್ದು ಪರ್ವೆ ಪೆ
ರ್ವೊಗೆ ಭಗಣಂ[3]ಗಳಂ[3] ಬಳಸಿದಿಂದುವಿನಂತೆ ಮಯೂಖಮಾಲೆಯೋ
ಲಗಿಸುವ ಸೂರ್ಯನಂತೆಸೆಯೆ ಸುತ್ತಿಱಿದಗ್ನಿ ಭಟಾರನಂತೆ ಯೋ
ಗಿಗಣಪರೀತನಸ್ಖಲಿತನಿರ್ದನಕಂಪನಯೋಗಿ ಯೋಗದೊಳ್ ||೨೧||

ವ|| ಆ ಮುನಿಜನೋಪಸರ್ಗಮಂ ಮಾಟ್ಪುದುಗಂಡಿಂತೇಕೆಂದು ವಿಷು
ಕುಮಾರನಱಿದು ಪದ್ಮರಥನಲ್ಲಿಗೆ [4]ವಂದು[4] ಪೊಡೆವಟ್ಟೊಡಂ ಪರಸದೆ ವೀತರಾಗಾ
ಸನಮನಿಕ್ಕಿಕೊಂಡು ಕುಳ್ಳಿರದೆ ಕನಲ್ದಿಂತೆಂದಂ

ಮಂತ್ರಿ ಮುನಿದೀ ಮಹಾಮುನಿ
ಸಂತತಿಗೆ ಮಹೋಪಸರ್ಗಮಂ ಮಾಟ್ಪುದುಗಂ
ಡಿಂತೇಕೆ[5]ಯಣ್ಣ ಮಂತು[5]ವಿ
ನಂತಿರ್ದಪೆಯರಸನಾದುದರ್ಕಿದು ಫಲಮೇ ||೨೨||

ವ|| ಎನೆ ಪದ್ಮರಥಂ ನಡುಗಿ ಮೂಱುಂ ಲೋಕಮುಮನೆಱಗಿಸುವ ನಿಮ್ಮಡಿಯ
ತಪೋರಾಜ್ಯಮೆ ಎಡೆಯ ಕಡೆಯ ಬಡವರುಮನೆ[6]ಱಗಿಸಲಾ[6]ಱದೆಮ್ಮ ರಾಜ್ಯಮೇತಱ
ರಾಜ್ಯಮಿಂದ್ರೋಪೇಂದ್ರಾದಿಗಳ್ಗಾಸನಕಂಪಂ ಮಾಟ್ಪ ನಿಮ್ಮಡಿಯ ತಪಸ್ತೇಜದ
ಪೊರೆಯೊಳ್ ಮನ್ನೆಯ ಮಂತ್ರಿಯುಮಂ ನಡುಗಿಸಲಾಱದೆಮ್ಮನ್ನರಪ್ಪ ನರಕೀಟಕಂಗಳ
ತೇಜಮಾದಿತ್ಯನ [7]ತೇಜದ ಪೊ[7]ರೆಯ ಮಿಾಂಬುಟುವಿನ ತೇಜದಂತಕ್ಕುಮಲ್ಲದೆಯುಂ
ಬೇ[8]ಗೆ[8] ಪರ್ವಿದ ಪರ್ವತಂಗಳ ತಾಪಮಂ ಕಳೆವೊಡವಱಿಂದುನ್ನ[9]ತಮ[9]ಪ್ಪ ಜಲಧರಂ
ಗಳೆ ಕಳೆಗುಂ [10]ಕೀೞಿದ[10]ವಪ್ಪ ತೊಱೆಯುಂ ಬಾವಿಯುಂ ಬಗರಗೆಯುಂ ಕಳೆಯ
ಲಾಱವೀ ಮಹಾನುಭಾವರುಪಸರ್ಗಮಂ ಪಿಂಗಿಸುವೊಡೆ ಸಾಮರ್ಥ್ಯವಂತರಪ್ಪ

1 ಳೆ (ಚಟಡಣ) 2 ಲ್ಗಳ (ಚಟಡ) ಲ್ಗಳೆ (ಇ) 3 ಕರಂ (ಶ) 4 ಪೋದೊಡಂ (ಚಟಡಣ) 5 ಮಣ್ಣ ಮತ್ತು (ಚಟ) ಮಣ್ಣ ಮಂತು (ಜಡ) 6 ರಸಾ (ಚಟಡಣ) 7 ಪೊ (ಡ) 8 ಗ (ಡ) 9 ತಂಗಳ (ಚಟಡಣ) 10 ಕಿಳ್ಗಿದ (ಜ)

ನಿ[1]ಮ್ಮಂದಿ[1]ಗೆ[2]ರೆ[2] ಪಿಂಗಿಸುವರ್ ಮಂದರಪ್ಪೆಮ್ಮಂದಿಗರಿಂದೇನಪ್ಪುದೆನೆ ವಿಷ್ಣು ಕುಮಾರನಂತಾದೊಡಾಮೆ ನಿಯಮಿಸಿದಪೆಮೆಂದು ಪೋಗಿ

[3]ಒ[3]ಗೆಯೆ ಕ[4]ವಿ[4]ಲ್ತ ಕಾಸೆ ಪೊಸಜನ್ನಿವರಂ ಶಿಖಿಕೋವಣಂ ಕರಂ
ಡಗೆ ಕಿಸುವೊನ್ನ ಬಟ್ಟಗೊಡೆ [5]ಬಾರಸ[5]ನಾಮದ ಜೊಟ್ಟು [6]ಕೊಪ್ಪಿ[6]ನೊಳ್
ನೆಗೆದ ಕುಶಾಂಕುರಂ [7]ಮಿ[7]ಸುಪ ಮುಂಜಿ ಪಲಾಶದ ದಂಡ ಕುಂಡಳಂ
ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮದಂ ||೨೩||

ವ|| ಆ ಮಾಣಿಕದಂತಪ್ಪ ಮಾಣಿ ಮಂತ್ರಿಯ ಮುಂದೆ ನಿಂದು ಮಂತ್ರಮಂ ಪೇಳ್ದಕ್ಷತೆಯಂ ಕೊಟ್ಟು

ಶ್ಲೋಕ|| ಬ[8]ಲಿಂ ವಿ[8]ಷ್ಣುರಯಂ ಕುರ್ಯಾದವಿಲಂಬಂ ಧನಂ ತವ
ಸಮಾಶ್ಲಿಷ್ಯತಿ ಯತ್ಪಾದಂ ಪ[9]ದ್ಮಾ ಭಾ[9]ತ್ಯಾತಪ[10]ತ್ವಿಷಾ[10]

ವ|| ಎಂದುಪಶ್ಲೋಕಿಸಿದ ವಟುವಿನ ವಾಕ್ಪಟುತ್ವಕ್ಕಂ ಬ್ರಹ್ಮವರ್ಚ[11]ಸ್ವಿಗಂ[11] ಬೆಕ್ಕಸಂಬಟ್ಟು ಬಲಿ ಬಲಗೊಂಡು ಪೊಡೆವಟ್ಟು ಬೇಡಿಮೆನೆ ವಾಮನನೆಮಗೆ ಕುಳ್ಳಿರ್ದನುಷ್ಠಾನಮಂ ಮಾಡಲ್ತಕ್ಕನಿತನೆಮ್ಮ [12]ಕುತ್ತ[12]ಡಿಯೊಳ್ ಮೂಱಡಿ ನೆಲನನೀವುದೆನೆ ಬಲಿ ಬೆಚ್ಚನೆ ಸುಯ್ದಿನಗದೃಷ್ಟಮೆಯ್ದ[13]ದಿಕರ್ಣಂ[13] ಕಿಱಿದಂ ಬೇಡಿದಿರ್ ಕೊಟ್ಟೆ ನಳಿದುಕೊಳ್ಳಿಮೆನೆ

ವಟು ಮರದುದ್ದವಾದನನಿತಲ್ಲ[14]ದೊಡಿತ್ತ[14]ಲೆಯುದ್ದವಾದನ
ಕ್ಕಟ ಮದಿಲುದ್ದವಾದನಿವನಾವನೊ ಪೆರ್ಮರದುದ್ದವಾದನಿಂ
ತುಟು ಗಿರಿಯುದ್ದವಾದನಿದು ವಿಸ್ಮಯಮಾ ಮುಗಿಲುದ್ದವಾದನೋ
ವಟಮುಟಿಗಂ ದಿಟಕ್ಕೆನೆ ಕರಂ ಬಳೆದಂ ಮನದಂತೆ ವಾಮನಂ ||೨೪||

ವ|| ಅಂತುಮಲ್ಲದೆ

ಮಾರನಂ ಮುಟ್ಟದನಿಲ್ಲ ಮೇಘಘಟೆಯೊಳ್ ಕಾಲ್ಕೋದನಿಲ್ಲಿಲ್ಲ ಭೂ
ಧರಮಂ ದಾಂಟದನಿಲ್ಲ ಬಾಂದೊಱೆಯೊಳಿಟ್ಟಂ ಕಾಲನಿಲ್ಲಿಲ್ಲ ಭಾ
ಸ್ಕರನಂ ಮಾಯದ ಮಾಣಿ [15]ಸೆಂಡೊಡೆದನಾ[15] ಇಲ್ಲೆಂಬಿನಂ ನೀಡಿದಂ
ತರಸಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ವಾ ಮನಂ ವಾಮನಂ ||೨೫||

1 ವ್ಮಾಡಿ (ಚಟಡಣ) 2 ತೆರಿಗೆ (ಜ) ಲ್ಲಸೆಯುಂ (ಡ) ಳೆ (ಣ) 3 ಬ (ಣ) 4 ವ (ಚಟಡಣ) 5 ಭಾರಿಸ (ಚಟಡ) ಭಾಸುರ (ಣ) 6 ಬೊಟ್ಟೆ (ಚಜಟಡ) 7 ಪಿ (ಚಟಡ) 8 ಲಿಗ್ವಿ (ಚಟಡ) ಲಿಂವಿ (ಜ) 9 ದ್ಮಭ್ರಾಂ (ಜ) 10 ಸ್ತ್ರಿಷಾ (ಚ) ಸ್ತ್ವಿಷಂ (ಜ) ಸ್ತ್ರಿತ್ವಷಾ (ಟಡ) 11 ಸಕ್ಕಂ (ಚಜಟ) ಸ್ವಕ್ಕಂ (ಣ) 12 ಕಿಲ್ತ್ರಿ (ಚಡ) ಕಿತ್ತ (ಜ) ಕುಳ್ತ (ಟ) 13 ದಿಕರ್ಣಂ (ಚಟಡಣ) 14 ದೆಲಿತ (ಚಟ) ದಲೆತ (ಜ) ದೆಲ್ಲಿತ (ಡ) 15 ಸಂದೊಡೆದನಂ (ಚಟಡ) ಸೇದೊರ್ಗೆದನೇ (ಣ)

ಅದೆ ಪೊಸಪೊನ್ನ ಸತ್ತಿಗೆಯದಲ್ಲದು ರತ್ನಹಟ[1]ಕ್ರಿ[1]ರೀಟವ
ಲ್ಲದು ವರವಜ್ರ ಕುಂಡಳವದಲ್ಲದು ಕೌಸ್ತುಭ ರತ್ನಮಂತದ
ಲ್ಲದು ಕರಚಕ್ರನಲ್ಲದದು ನಾಭಿಸರೋಜಮೆನಲ್ ದಿನೇಶಬಿಂ
ಬವ ನೆಲೆ [2]ಕಗ್ಗಿ[2]ತಪ್ಪಿಸವನುಕ್ರಮದಿಂ ಬಳೆದಂ ತ್ರಿವಿಕ್ರಮಂ ॥೨೬॥

ಇದು ಲೀಲಾಧೃತಭೂಕರೇಣುಕರಮಲ್ತು ಭ್ರೋತ್ಪಟೀಕೇತುವ
ಲ್ತಿದು ಸಾಮರ್ಗಂಬುಜನಾಳಮಲ್ತು ಶಶಿ[3]ಲೋಕಾ[3]ದೀಪಿಕಾಸ್ತಂಭಮ
ಲ್ತಿದು ತಾರಾಕುಸುಮಾವಳೀ ವಿಟಪಮಲ್ತು ಭ್ರಾವನೀ ಶೇಷಮ
ಲ್ತಿದೆನಲ್ ತಾಂ ಬಳೆಯಿತ್ತನುಕ್ರಮದಿನಾ ಪಾದಂ ಪಯೋಜಾಕ್ಷನಾ ॥೨೭॥

ತರುವಿಂದತ್ತತ್ತ ಸೀಳ್ದಂ ಘನಪಟಲದಿನತ್ತತ್ತ ಮಿಕ್ಕಂ ಹಿಮೋರ್ವೀ
ಧರವಿಂದತ್ತತ್ತ ಪೋದಂ ರವಿಯ ರಥದಿನತ್ತತ್ತ ಮೆಯ್ವೆರ್ಚಿದಂ ಸು
ಟ್ಟುರೆಯಿಂದತತ್ತಮತ್ತಂ ಸಿಮಿರದಿರಸಿವೇಸೆಂದು ಜಾತಾದ್ಭುತಂ ಸೋ
ಟ್ಸಿರ ಕಣ್ಣಂ[4]ಷೇತಸುಂ[4] ಕಾಲ್ಗಿಡೆ ಕಮಜವದಿಂ ವಿಷ್ಣು ವರ್ಧಿಷ್ಣುವಾದಂ ॥೨೮॥

ವ॥ ಅಂತುಮಲ್ಲದೆ

ಬಲಗೊಂಡತ್ತಮರಾದ್ರಿ[5]ಗೆ[5]ತ್ತ್ರಡೆಯೊಳಾ ಜ್ಯೋತಿರ್ಗಣಂ ಬಂದಿರುಳ್
ತಲೆಸೋಜತ್ತಳ ವಿಮಾಂಗಳೊಂದು ದೆಸೆಯೊಳ್[6]ಮೆಯ್ಯೊ[6]ರ್ಪಿನಂ ತಪ್ತಕಂ
ದಳಿತಂ ಸಂಪಣಿಗೊಂಡುದೊಂದು ದೆಸೆಯೊಳ್ ಸೂರ್ಯಾತಪಂ ವಿಕ್ರಿಯಾ
ಬಳದಿಂ ತಾಂ ಬಳೆಯಲ್ಕೆ ಭಂಜಿತ ಮಹಾ ಷುತ್ರಿಕ್ರಮಂ ತ್ರಿಕ್ರಮಂ ॥೨೯॥

ರವಿ ಮಸ್ತಂ ದೆಸೆವಾಯ್ದು ಪಾಯ್ದೆ[7]ಬಿ[7]ವಿಸಂ ತೇರಂ ನಯಂ ಪೆರ್ಚಿ[8]ಬೆ[8]
ರ್ಚುವಿನಂ ಚಂದ್ರನ ಬೆಳ್ಕೊಗಂ ಬೆದಱದಾತ್ಮ ಸ್ತ್ರೀಯರಂ ಪೇಱ ಪಾ
ಱುವಿನಂ ತಾಂ ಪೊಲಗೆಟ್ಟು ಖೇಚರಚಯಂ ದಿಕ್ಪಾಲಕರ್ ಭೋಂಕೆನಂ
ಜುವಿನಂ ವಿಷ್ಣುಕುಮಾರನೇಂ ಬಳೆದನೋ ಬ್ರಹ್ಮಾಂಡಮಂ ತಾಪಿನಂ ॥೩೦॥

ಈ ವಟುವಿಂಗೆ ಮಿಂಚುನೆಳಮಿಂಚಿನ ವಾರಿದಲೇಖೆ [9]ಮೌಂಜಿ[9]ಯುಂ
ಕೋವಣಮಾಯ್ತು ಮುಟ್ಟೆ ರವಿಗರ್ಘ್ಯಮನೀವ ಪೊಡರ್ಪು ಮಾಯ್ತು ಮಾ
ಯಾವಿಗ [10]ತನ್ನ[10]ಗುಂಡಿಗೆಯಿನಾಗಸಗಂಗೆಯ ದಿವ್ಯತೋಯಮಂ
ತೀವುವ ಬುದ್ಧಿಯೊಳ್ ಬಗೆದನಕ್ಕಟ ವಾಮನನ ಪ್ರಮಾಣಮಂ ॥೩೧॥

1 ತ್ರಿ (ಜ) ಕ್ಕಿ (ಣ) 2 ತಗ್ಗಿ (ಚಟಡಣ) 3 ಲೇಖಾ (ಜ) 4 ಚಿತ್ರಮಂ (ಜ) 5 ಗ (ಜ) 6 ಕೆಯ್ದು (ಚಟಡಣ) 7 ಳ (ಜ) 8 ಪೆ (ಜ) 9 ಮುಂಜಿ (ಚಜ) ಮುಂಚಿ (ಟಡ) 10 ಮೆಂಬ (ಚಟಡ) ನೊಲ್ದು (ಣ)

ಇಂತಪ್ಪ ಸಿತಗನೀ ವಟು
ವಿಂತಪ್ಪತಿವರ್ತಿ ಮಾಣಿಯುಂ ಕೋಡಗಮುಂ
ಸಂತಮಿಡಲಾರ್ಕುಮೇ ರವಿ
ಯಂತಪ್ಪನ ಪರಿವ ಭಂಡಿಯೊಳ್ ಕಾ[1]ಲ್ಗೊಂದಂ[1] ||೩೨||

ಅಂಬರತಳಕ್ಕೆ ಬಳೆದು ತೆ
ಱಂಬೊಳೆವಚ್ಯುತನ ಚರಣದಂಡಂ ನಕ್ಷ
ತ್ರಂ ಬಳಸಿ ದೀಪಮಾಲೆಯ
ಕಂಬದವೋಲ್ ತೊಳಗಿ ಬೆಳಗುತಿರ್ದತ್ತಾಗಳ್ ||೩೩||

ಬಲಿಹರನ ಚರಣದಂಡದ
ತಲೆಯೊಳ್ [2]ಕಿಱು[2]ಗೊಂಡೆಬಿಲ್ವ ಬಾಂದೊಱಿಯೆಲರಿಂ
ಪೊಲಿದುದು ವಿಷ್ಣು ಕುಮಾರನ
ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೋಲ್ ||೩೪||

ವಾಮನ ಪದಹ[3]ತ ವಿಗ[3]ಳಿತ
ಜೀಮೂತ ವಿಮುಕ್ತ ಬಹಳ [4]ಜಲಧಾರೆಗಳಿಂ
ದಾ[4] ಮುನಿಜನಾಪಕಾರಕ
ಧೂಮಧ್ವಜನೆಯ್ದೆ ನಂದಿ ಪೋದತ್ತಾಗಳ್ ||೩೫||

ವ|| ಅಂತಾ [5]ಮಹಾಮುನಿ[5]ಜನೋಪಸರ್ಗಮಂ ಮಾಣಿಸಲೆಂದು ವೈಕುರ್ವಣ [6]ಋ[6]ದ್ಧಿಯಿಂ ಬ್ರಹ್ಮಾಂಡಮನೊಡೆದು ಬಳೆದಾ ತ್ರಿವಿಕ್ರಮನುತ್ಕ್ರಮಾಂಗುಷ್ಠಘಾತದಿಂ ತ್ರಿದಿವವಿದಿರ್ಗುಮೆಂಬ ಭಯಮಾಗೆ ಬಲವಿರೋಧಿ ಪೆಸಸಿದ ಗಂಧರ್ವದೇವರ್ ಬಂದು ಗಾಂಧಾರಗ್ರಾಮಮನಾಳಾಪಿಸಲೆಂದು [7]ಧಾರಾ[7]ವಿಯುಂ [8]ಸಾ[8]ರಿರಿಯುಮೆಂ ಬೆರಡುಂ ಬೀಣೆ[9]ಗಳು[9]ಮನಳವಡಿಸಿ

ಕಳಿಸುಂ ಪತ್ತಿಸಿ ಜೀವೆಯಂ ನಿಱಿಸಿ ಮೆಲ್ಪಿಂ ತಂತಿಯಂ ತೀಡಿ ಕಾ
ಕಲಿಯೊಳ್ ಬೀಣೆಯನಾಗುಮಾಡಿ ಮಿಡಿಯುತ್ತಿರ್ದರ್ ನುಣ್ಗಾವರ
ಕ್ಕಳಿ ಪೂವಂ ಗಿಳಿ ಪಣ್ಣನಾಲಿಸಿ ಲಸಚ್ಚೂತಾಂಕುರಾಸ್ವಾದಮಂ
ಕಳಕಂಠಂ ಬಿಡೆ ದೇವ[10]ರಾಲಪಿಸಿದರ್[10] ತ್ರಿಸ್ಥಾನಸಂಶುದ್ಧಿಯಿಂ ||೩೬||

1 ಲ್ಗೊಂಡಂ (ಚ) ಲ್ಗೊಡಂ (ಡ) 2 ನೆಱೆ (ಜ) 3 ತಿವಿದ (ಚಟಡಣ) 4 ಧಾರೆಗಳಿಂದಂತಾ (ಚಜಟಡ) 5 ಮುನಿ (ಜ) 6 ವೃ (ಚಟ) ೧ (ಜಡ) 7 ದಾರ (ಜ) 8 ಶಾ (ಜ) 9 ಯು (ಚಜಟಡ) 10 ರೋಲಗಿಸಿದರ್ (ಜ)

ವ॥ ಆ ಗಂಧರ್ವವಾದನಕ್ಕೆ [1]ವಿಷ್ಣುಗಂಧಿಯಪ್ಪ ವಿ[1]ಷ್ಣುಕುಮಾರನತಿ ಪ್ರಸನ್ನನಾಗಿ ನಿಜೋದ್ರೇಕಮುಮಂ ವೈಕುರ್ವಣಮುಮನುಪಸಂಹರಿಸಿ ಬಲಿಯಂ ಬಂಧನದೊಳಿರಿಸಿದನಾ ವೀಣೆಯ ವಂಶದ ವೀಣೆಯುಂಟಕ್ಕುಮ[2]ಪ್ಪೊ[2]ಡೆ ತನ್ನಿಮೆಂದ ವಸುದೇವನಾ ವಿಪಂಚೀಪ್ರಪಂಚವಾಚಾಕ್ವಣಿತಾಕಾರಕ್ಕಮತಿ ಮನೋಹರಾಕಾರಕ್ಕಮತ್ಯಂ [3]ತವಾ[3] ಸಕ್ತೆಯಾಗಿ

ಅತಿಮುಗ್ಧಾಪಾಂಗಭೃಂಗಂ ಮುಖಸರಸಿಜದೊಳ್ ತನ್ನ ಬಾಹಾಭುಜಂಗಂ
ಸುತನು ಶ್ರೀಖಂಡ ಶಾ[4]ಖಾಂತರದೊಳಧರ[4] ಸದ್ವಿದ್ರುಮಂ ದಂತಮುಕ್ತಾ
[5]ವಳಿ[5]ಯೊಳ್ [6]ಪಾಣಿ[6] ಪ್ರವಾಳಂ ಕುಚಕಲಶದೊಳಿಂಬಾಗೆ ತಳ್ತಿರ್ದನಿಂದ್ರ
ಪ್ರತಿಮಂ ಗಾಂಧರ್ವದತ್ತಾ ಮೃದು ಹೃದಯದೊಳಾ ರೂಪ ಕಂದರ್ಪದೇವಂ ॥೩೭॥

ವ॥ ಇರ್ದೊಂದು ದಿವಸಂ ವಸುದೇವಕುಮಾರಂ ವಿದ್ಯಾಮಂಡ[7]ನ[7]ಮಂಡನೀಭೂತ[8]ಜಗ[8]ತ್ಯಾಗಸಿಂಹಾಸನದೊಳ್ ಸಿಂಹಕಟೀತಟಮನುಪಮೆಗೆ ತರ್ಪಂತುಪವೇಷದಿನಳಂಕರಿಸಿರ್ಪುದುಮಾ ಪ್ರಸ್ತಾವದೊಳ್ ಕುಂಕುಮನುಂ ಕುಚಕಳಸನುಮೆಂಬರಿರ್ವರಕ್ಕರಿಗರ್ ಬಂದು ಶುಭೋದಯಮೆಂದು

ಸಂಸ್ಕೃತ॥ ಕೀರ್ತ್ಯಾವಾ[9]ಜತಿ[9] ಸೆಜ್ಜೆವಳ್ಳ ಸಚಿವ ಶ್ರೀ ಪದ್ಮನಾಭ ಪ್ರ[10]ಭೋಃ[10]
ತ್ರೈಲೋ[11]ಕ್ಯಾ[11]ಶ್ವಪತೀಃ ವಿ[12]ಜೇ[12]ಯ ಸುಚಿರಂ ದೃಷ್ಟ್ವಾ ಸತೀಭಿಸ್ಫುಟಂ
ಕಸ್ತೂರೀತಿಲಕೇನ ಲಕ್ಷ್[13]ಣ[13]ಕೃತೇ ಚಂದ್ರಪ್ರಸ್ಸಲಕ್ಷ್ಮಾಭತೇ
ಕಂಠೇ ಕಾಳಯತಿ ಪ್ರಸಿದ್ಧಮಗಮತ್ ಶೇಷೋ[14]ಹಿ[14]ಭೂಷೋಪಿಚ ॥೩೮॥

ಪ್ರಾಕೃತ॥ ಸಿರಿಯ ಸರಸಿಯ ಸಯಿಯೆ ವಿರಲಂ
[15]ತ್ರಿ[15]ಯವಚ್ಛ್ರೀವ ಮು[16]ಹು[16]ಮಿಹಭಯದಂಡೋ
ಸಂಜೀಯಾ[17]ಯ[17]ಜಿಣಾಸೆಂ ಜಾಜೈಪ[18]ವು[18]ಮಹಣಾಹೋ
ವೀರಬಲ್ಲಾಳದೇವಂ ಪು[19]ತಿ[19]ಯ[20]ಪುದು[20]ವಿಣಾಹೋ ಸಂಜಳೋ ಸೆಜ್ಜೆವಳ್ಳೋ ॥೩೯॥

ವ॥ ಎಂದೋದಿದ ಭಟ್ಟರ್ಗೆ ತುಡಲಾರ್ಪನಿತು ಮಣಿಭೂಷಣಂಗಳಮನುಡಲಾರ್ಪನಿತು ಪಟ್ಟಾಂಬರಂಗಳುಮುಂ ವೊಟ್ಟೆಗಟ್ಟಿ ಪೊತ್ತುಕೊಂಡು ಪೋಗಲಾರ್ಪ

1 ವಿ (ಚಟಡಣ) 2 ದಿಂತರ್ಪೊ (ಣ) 3 ತಾ (ಚಟಡಣ) 4 ಖಾತರದೊಳಧರ (ಜ) ಖಾಗ್ರದೊಳಧರ ಲ (ಣ) 5 ತತಿ (ಚಟಡಣ) 6 ಹಸ್ತ (ಜ) 7 ಪವಂ (ಜ) 8 ಜಿ (ಜ) 9 ಜಿತ (ಜ) 10 ಭಾ (ಚಟಡಣ) 11 ಕೀ (ಚಟಡ) ಕ್ಯೈ (ಜ) 12 ಚಿ (ಜ) 13 ಣೀ (ಚಜಟಡ) 14 ಪಿ (ಣ) 15 ಥಿ (ಜ) 16 ಹ (ಜ) 17 ದೆ (ಜ) 18 ಟು (ಣ) 19 ಥಿ (ಜ) ಡಿ (ಜಟಡ) 20 ಪುಂಡ (ಜ) ಪುಡು (ಟ)

ನಿತು ಪೊನ್ನುಮನಿತ್ತು ನೀಮೆತ್ತಣಿಂ ಬಂದಿರೆಲ್ಲಿಗೆ ಪೋದಪಿರೆಂಬುದುಂ ಕುಚಕಲಶ [1]ನೆಂದಂ[1] ವಂಶವಿಷಯದೊಳ್ ಮಾಗಧಿಯೆಂಬ ಪೊಟಿಲನಾಳ್ವ ರಕ್ತಾಕ್ಷನೆಂಬರ ಸಂ[2]ಗಂ ಸುಮಿತ್ರೆಯೆಂಬರಸಿಗಂ[2] ರೋಹಿಣಿಯೆಂಬ ಮಗಳಾದಳಾ ತ್ರಿಭುವನ ಸೌಂದರ್ಯ ಸಂಕೇತ ಭೂಮಿಯಪ್ಪ ಭಾಮಿನಿಯ ಶೃಂಗಾರಸ್ವಯಂವರಕ್ಕೆ ಜರಾಸಂಧ ಚಕ್ರವರ್ತಿಯುಂ ಸಮುದ್ರವಿಜಯಂ ಮೊದಲಾದ ಮಂಡಳಿಕರುಂ ನೆರೆದರಿವರಂ ಬೇಡುವೆವೆಂಬ ಬಗೆಯಿಂ ಬಂ[3]ದೆವೀ ಭವ[3]ಕ್ಕೆ ನಾವಾರುಮಂ ಬೇಡದೆ[4]ತುಮಾರ್ಬೇಡಿದೊಡಂ[4] ಬೇಡಿದನಿತನಾಮೆ [5]ಕುಡುವಂತುಂ[5] ಕೊಟ್ಟೆ ನೀನೆ ದಾಸಿಯೆಂದು ಪೊಗಟ್ಟು ಪೋದರಿತ್ತ ವಸುದೇವನಾ ಪೊಟ್ಟಿತ್ತಿ ಪೊಟ್ಟಿತ್ತಾಗಿ ಪರ್ಣಲಘುವಿದ್ಯೆಯಿಂ ಸುಪರ್ಣನಿಂ ಬೇಗಮಾಗಿ ಮಾಗಧಿಗೆ ಪೋಗಿ ಪ್ರಾಕೃತ ಕಾವ್ಯದಂತೆ ಸಹಜಸೌಭಾಗ್ಯ ಭಂ[6]ಗಿ[6] ಭಾವಾಲಂಕಾರದಿನಲಂಕೃತನಾಗಿ ಸ್ವಯಂವರ ಮಂಟಪಮಂ ಪುಗುವುದುಂ ಆಗಳಾ ಸ್ವಯಂವರ ಸಭೆಯಾದ ವಾದಕಸಂಪ್ರದಾಯದೊಳೊರ್ವ ಪಾಣವಿಕನ ಪೆಗಲ ಪಣವಮಂ ತನ್ನ ಪೆಗಲೊಳ್ ತಗುಳ್ಚಿಕೊಂಡು ಮೂಜುಂಕೆಜದ ಲಯಮೊಳಮನಿತೆ [7]ಜತಿಯೊ[7]ಳಂ ವಿವಿಧ ವಾದ್ಯವಿಧಿಯೊಳಂ ಮಧುರಾತಿಮಧುರಮುಂ ಚಿತ್ರಾತಿಚಿತ್ರ ಮುಮಾಗೆ ಬಾಜಿಸುವ ವಾದ್ಯವಿದ್ಯಾಧರನ ನಾದನನ್ನೈದಗ್ಧಂ ಮರುಳ್ಗೊಂಡು ಗಂಡಗಾಡಿ ಗಂಡು[8]ವೇಟಂಗೊಂಡು[8] ಸ್ವಯಂವರ ಸಂಭ್ರಮುಮಂ ರಾಜಪುತ್ರಿ[9]ಯ[9] ಕೈಗೆ ಮಾ[10]ಲೆಯೊಂ[10]ದು ಬಂದ [11]ಬರವು[11]ಮಂ [12]ಮಜಿಕಿದು ಪ್ಪೈಮಜಿಸು[12] ನೆರೆದ ರಾಜಲೋಕಮೆಲ್ಲಂ ರಾಜಸುತೆಯನೀಡಾಡಿ ಬಂಗು ಪೊಮ್ಮಳಿಸಿ ಮುಮ್ಮಟಿಗೊಂಡು ನೋಡುತ್ತುಮಿರ್ಪುದುಮಲ್ಲಿಗೆ ಕಾತರಚಿತ್ತೆಯಾಗಿ ಕಿವಿಯೇದುವರಿಯೆ ಕೇಳ್ದು ಮನವೆಳದುವರಿಯೆ ಬಂದು ಕಣ್ಣೆಳದುವರಿಯೆ ನೋಡಿ

ಪಾಡುವ ಗೀತಮಂ ಜತಿಗಳಂ ಸ್ಮೃತಿ ಸೂಡೆ ವಿಲಾಸ ಲಕ್ಷ್ಮಿಯಂ
ಸೂಡೆ ವಿಲೋಚನೋತ್ಪಲದಳಂ ಪುಳಕಾಂಕುರ ಸಂಕುಳಂಗಳಂ
ಸೂಡೆ ನಿಜಾಂಗವಲ್ಲಿ ಮನಮುತ್ಸವದಿಂ ಕುಸುಮಾಸ್ತ್ರಮಾಲೆಯಂ
ಸೂಡೆ ವಿರೋಧಿರಾಜಕುಳರಾಹುಗೆ ರೋಹಿಣಿ ಮಾಲೆ ಸೂಡಿದಳ್ ||೪೦||

ವ|| ಸೂಡಲೊಡನೆ ರಾಜಕುಮಾರರ ಮನದೊಳ್ ಸೂಡೆರ್ದಂತಾಗೆ ಚಕ್ರವರ್ತಿಗಂ ಮಂಡಳಿಕರ್ಗಂ ಕುಡಲಿರ್ದ ಕೂಸಂ ದೇಸಿಗಂ ಕೊಂಡನಿದೇನೆಂದು ಮಾಮಸಕಂ ಮಸಗಿ ಮುಳಿದು ಬಾಲಭಾಸ್ಕರನ ಮೇಲೆ ಮೊಡ್ಡಿತಪ್ಪ ತಮದೊಡ್ಡು ಕವಿವಂತೆ

1 ರೆಂದರ್ (ಜ) 2 ಗಂ (ಜ) 3 ದೆನಿನ್ನೀಭವ (ಚಟ) ದೆನಿನ್ನೀಭವನ (ಡ) ದೊಂ ನಿನ್ನೀಭವನ (ಣ) 4 ತುಂ (ಣ) 5 ಕೆದುವಂತೆ (ಜ) ಕುಡುವಂತುಂ (ಣ) 6 ಗಿನಿ (ಜ) 7 ಲಯದೊ (ಜ) 8 ವೆಟ್ಟಂಗೊಟ್ಟು (ಚಟ) ವೆಟ್ಟಗೊಂಡು (ಡಣ) 9 ಯುಮಂ (ಜ) 10 ಳ್ಪಿನೊಂ (ಜ) 11 ಭರ (ಣ) 12 ಮೆಚ್ಚಿದ (ಣ)

ಕಿಶೋರಕೇಸರಿಯ ಮೇಲೆ ದಂತಾವಳದೊಡ್ಡು ಕವಿದು ಮುಸುಱಿ ಮುತ್ತುವಂತೆ ವಸುದೇವನ ಮೇಲೆ ರಾಜಕುಮಾರರೊಡ್ಡು ಕವಿದು ಮುಸುಱಿ ಮುತ್ತಿದಾಗಳ್

ಕಿವಿ ಕೋಲಂ ಕೋಟಿಯಂ ಕಾಱಿದಪ್ಪುವೊ ಬೆರಲಿಂ ಬಾಣಮಂ ಭೋರೆನೀದ
ಪ್ಪುವೊ ಚಂಚನ್ಮೌರ್ವಿ ಜುಮ್ಮೆಂದುಗುಟ್ಟಿ[1]ಪ್ಪುವೊ ಶರ[1]ಶ್ರೇಣಿಯಂ ಮಾಣದೆಂಬಂ
ತೆವೊಲಡ್ಡಂ ಕಾಯ್ಪಿನಿಂದಂ ಕವಿಯೆ ಜವಕೆ ಕೆಯ್ವೊಯ್ದು ಪಾಯ್ದಂಬನಂಬ
ಟ್ಟುವವೊಲ್ ಪುಂಖಾನುಪುಂಖಂ ಮೊಟಕಲಿಸೆ ಮನೋವೇಗದಿಂ ಬೇಗಮೆಚ್ಚಂ ||೪೧||

ನೀಡಿದ ನಾಲಗೆಯಂತಿರೆ
ಪೂಡಿದ ಕಣೆ ಕುಣಿದು ತೆಗೆದ [2]ಕೊಮ[2]ರನ ಬಿಲ್ಲೊಳ್
ಮೂಡಿದುದು ನುಂಗಲಹಿತರ
ಪಾಡಿಗಳಂ ಮಸಗಿ ಮಿಟ್ಟು ಬಾಯ್ದೆಱೆದ ತೆಱಂ ||೪೨||

ಅಲಗು[3]ನ[3]ಡೆ ಪರೆದ ಬಿಸಿಲವೊ
ಲಲಗಲಗಿನೊಳೊರಸಿ ಪುಟ್ಟಿದುರಿ ಸುರಿದುವು ಕ
ಟ್ಟಿಲಿಸಿದುದು ದೆಸೆ ದಿನೇಶಂ
*ಪೊ[4]ಲಗೆಟ್ಟಂ[4]ಮಸಗಿ ಮಿಸುಕದಿ[5]ಸೆ[5] ವಸುದೇವಂ ||೪೩||

*ಮಱಿದುಂಬಿಯಲರ್ದ ಸಂಪಗೆ
ಗೆಱಗದವೊಲ್ ತಪ್ಪಿ ಪಾಱಿದುವು ಪಿರಿಯಣ್ಣಂ
ಪೊಱಮು[6]ಯ್ಯುವರಂ[6] ತೆಗೆದೆ
ಚ್ಚಱಿಕೆಯ ಪೊಸಗಱಿಯ ಕಣೆಗಳವನವರಜನಂ ||೪೪||

ಅದಟರನೊಂದೆ ಶಾತಶರದಿಂ ತುರಗಂಗಳನೊಂದೆ ಬಾಣದಿಂ
ಮದಗಜದೊಡ್ಡನೊಂದೆ ಕಣೆಯಿಂದ ನಿವಾರಿಸೆ ಪೊರ್ದೆ ಪಾದಪ
ದ್ಮದ ಮೊದಲೊಳ್ ನಿಜಾಗ್ರಜನನೆಚ್ಚ ಶಿಲೀಮುಖಮಾಗಳಂಬು ತ
ಪ್ಪಿದೊಡಭಿವಾ[7]ದ್ಯವೆಂ[7]ಬ ತೆಱದಿಂ ಪೊಡೆವಟ್ಟನಪಾರಪೌರುಷಂ ||೪೫||

ವ|| ಪೊಡೆವಡುವುದಂ ನಿರವಿಸಿ ವಸುದೇವನೆಂದಱಿದು

---

1 ವೊಶರನಿ (ಚಜಟಡ) 2 ಕುವ (ಚಟಡ) ಕುಮ (ಜ) 3 ವೊ (ಚಣ) ವ (ಟಡ)
4 ಲಗೆಲ್ಲಂ (ಚ) ಲಿಗೆಲ್ಲಂ (ಡಣ) 5 ನೆ (ಚಣ) 6 ಯ್ವರಂತೆ (ಜ) 7 ದೆಯಂ (ಚಟಡಣ)

ಕೆಯ್ತ್ತಪ್ಪಾದುದು ಕಾದಲೊರ್ವನೆ ಸಮಗ್ರಾನೀಕದೊಳ್ ಕೋದುಕೋ
[1]ಲ್ದೊ[1]ಯ್ದಂ ಬಾಳಕೆನೊಕ್ಕ ತಪ್ಪಮುಡುಗಲ್ಕೇಂ ಬರ್ಕುಮೇ ಗಂಟಲಂ
ಕೊಯ್ದಂ ಕೈತವದಿಂದಮೆಂದೊಗೆದ ನೋವಂ ಸಂತಸಂ ನೂಂಕೆ ನೇ
ಲ್ವಾಯ್ದಿಂದ್ರೇಭಸಮಂ ಸಮುದ್ರವಿಜಯಂ ತಟ್ಟೈಸಿದಂ ತಮ್ಮನಂ ॥೪೬॥

ಮಿಸಿಸೆ ಸುಖದಶ್ರು ಪುಳಕಂ
ಪಸರಿಸೆ ಬಿಲ್ಲೊಂದು ಜಾವಮಪ್ಪಿನಂ ಪಸವೋ
ಡೆ ಸಮುದ್ರವಿಜಯನಪ್ಪಿರೆ
ವಸುದೇವನುಮಪ್ಪಿಕೊಂಡು ತೋಱಿದನಳವಂ ॥೪೭॥

ವ॥ ಬಟ[2]ಯಂ ಬಳಮುಖ್ಯರಪ್ಪ ಜರಾಸಂಧನಂಗಮಗ್ರಜನ ಬೆಸದಿನೆಱಗಿ ಮಱುದಿವಸಂ ಸ್ವಯಂಬರಕ್ಕೆ ನೆರೆದರಸುಮಕ್ಕಳೆಲ್ಲಂ ನಿಬ್ಬಣಿಗರಾಗೆ ರೋಹಿಣಿಯೊಳ್ ಮದುವೆನಿಂದು ಮಗುಟ್ದು ಸೂರ್ಯಪುರಕ್ಕೆ ಪೋಗಿ ಸುಖಸಂಕಥಾ ವಿನೋದದಿಂದಮಿರ್ದನಾ ಮಹಾನುಭಾ[2]ವ[2]ನ ಸೌಭಾ[2]ಗ್ಯಬಾಗ್ಯ[3] ಸಂಭೋಗಮಂ ಪೇಟ್ವೊಡೆ

ಬಱೆ ಭರದಿಂದೆ ನಿಬ್ಬಣಕೆ ಚಿತ್ತಜನುಂ ರತಿಯುಂ ವಸಂತನುಂ
ವರವನಲಕ್ಷ್ಮಿಯುಂ ಶಶಿಯುಮಾತನ ರೋಹಿಣಿಯುಂ ಶಿರೀಷಮುಂ
ಸುರಯಿಯುಮಾಮ್ರಮುಂ ಮಿಸುಪ ಮಲ್ಲಿಗೆಯುಂ ವಸುದೇವನಾಳ್ದನೀ
ಧರೆ ಪೊಗಟಲ್ಕೆ ಷೋಡಶಸಹಸ್ರ ವಿವಾಹಮಹೋತ್ಸವಂಗಳಂ ॥೪೮॥

ಗುಣನಿಧಿಯುದಯಿಸಿದಂ ರೋ
ಹಿಣಿಗಂ ವಿಧುವಿಂಗಮುದಯಿಪಂತೆ ಬುಧಂ ರೋ
ಹಿಣಿಗಂ ವಸುದೇವಂಗಂ
ರಣರಸಿಕಂ ಪ್ರಬಲನತಿಬಲಂ ಬಲದೇವಂ ॥೪೯॥

ವ॥ ಅಂದಾ ಸ್ವಯಂವರದೊಳ್ ತನ್ನ ಬಲ್ಲ ಬಿಲ್ಲಬಿನ್ನಣಂಗಂಡು ಬಂಟರಾಗಿ ಬಟ[5]ಸಂದು ಬೆಸಕೆ[4]ಯ್ದು ಬೇಡಿಕೊಂಡ[4] ರಾಜಕುಮಾರರ್ಗೆ ಬಿಲ್ಲವಿದ್ದೆಯಂ ಕಲಿಸುತ್ತುಮಿರ್ಪ ವಸುದೇವನಲ್ಲಿಗೆ

ಸುಡುದಲೆ ಬಿಟ್ಟಕಣ್ ಕಲಿಮೊಗಂ ಕಡಿಗೊಂಡುಡೆ ಬಿಟ್ಟತಪ್ಪ ಕೈ
ಯಿಡಿದು ಪೊರಟ್ಟಿ ಮಾಡಿದವೊ[6]ಲಿ[6]ಪ್ಪೊ[6]ತಲೊಪ್ಪುವ ರೂಪು [6]ತ್ರು[6]ಪ್ಪಮಂ
ತೊಡೆದವೊಲಪ್ಪ ಮೀಸೆ ಮಿಸುಗುತ್ತಿರೆ ಬಂದನವೊರ್ವನೊಂದು ಬಿ
ಲ್ವಿಡಿದು ಯುವಾನನಲ್ಲಿಗೆ ನವೀನ ನವೀ[7]ರನ[7]ಮೋತ್ಕಟಂ ಭಟಂ ॥೫೦॥

1 ಲ್ವಾ (ಚಟಡಣ) 2 ಗ (ಚಟಣ) 3 ಗ್ಯ (ಣ) 4 ಯ್ವು ಬೇಡಿಕೊಳ್ವ (ಣ) 5 ಅ (ಚಜಡಟ) 6 ಕೊ (ಜ) ಕ (ಡ) 7 ನರ (ಚ)

ವ॥ ಬಂದು ವಸುದೇವಂಗೆ ತುೞಿಲ್ಗೆಯ್ವುದುಮರಸನೆತ್ತಣಿಂ ಬಂದೆಯೆತ್ತ ಪೋದಪೆ ನಿನ್ನ ಪೆಸರೇನೆಂಬು'ದೆನೆ' ಭಟನಿಂತೆಂದಂ

ಜನನಾಥಾ ನಿತ್ಯಚಂದ್ರೋದಯ ಧರಣಿಪತೀ ನಾಡುನಾಡಂ ತೊೞಲ್ದಿಂ
ಧನುವಂ ಕಲ್ವಟ್ಟೆಯಿಂ ಬಿ²ಲ್ಲೊ³ಜನನಱಿಸಿ ಬಿಲ್ವಲ್ಮೆಯೊಳ್ ದೇವ ನೀಂ ದೇ
ವನೆಯಾನುಂ ಚಟ್ಟನಾಗಲ್ ನಿನಗೆ ಬಗೆ⁴ದು ಯುಷ್ಮ⁵ದ್ವಿಪಧ್ವಂಸನೆಂ ಕಂ
ಸನೆನೆಂಬೆಂ ನಿನ್ನ ವಿಖ್ಯಾತಿಯನಖಿಳ ದಿಶಾಚಕ್ರದೊಳ್ ಕೇಳ್ದು ಬಂದೆಂ ॥೫೧॥

ವ॥ ಎನೆ ಕೈಕೊಂಡು ಕೋದಂಡ ವಿದ್ಯೆಯಂ ಕಲಿಸುತ್ತುಮಿರೆ ಕಂಸಂ ವಸುದೇವಂಗೆ ಚಟ್ಟನಾಗಿ ಮಿಕ್ಕ ಚಾಪಾಚಾರ್ಯರ್ಗೋಜನಾಗಿ ಧನುರ್ವಿದ್ಯೆಯಂ ಸಾಧಿಸುತ್ತುಮಿರ್ದನನ್ನೆಗಂ

ಪೌದನಪುರವನಿತೆಗೆ ಸ
ಮ್ಮೋದನಗಶ್ರೀನಿತಂಬ ಕಳಕಾಂಚಿಗೆ ತಾ
ನಾದನಭಿನವ ಪಯೋಧರ
ನಾದಂ ಪತಿತಾಳಹಸ್ತನೆಂಬನಳುಂಬಂ ॥೫೨॥

ಅವನೊರ್ಮೆ ಪಿಡಿದು ಕಂಠೀ
ರವ ಪೋತಮನೋತು ಪೊರೆದು ಪಿರಿದಪ್ಪುದುಮೇ
ೞುವನಾಗಿ '⁶ಸರಿಯುತಿರ್ದಂ⁶'
ಭುವನದೊಳಾತಂಗೆ ಸಿಂಹರಥನೆಂಬ ಪೆಸರ್ ॥೫೩॥

*ಕುಱುಯ ಕಡಿಯಣಕೆ ಬಾಯಂ
ತೆಱೆಯದಿರಿಂ ಬಾಯ ಕರುಳೆ ಕಡಿಯಣಮಾಯ್ತೆಂ
ದುಱದೆ ನೃಪಸಿಂಹನೇಱಲ್
ಮಱುಗುವನೇಱನೆ ಕಡಂಗಿ ಸಿಂಹಮನಾತಂ ॥೫೪॥

ಕರಿಯಂ ಸಂಕ್ರಂದನಂ ಮೇಷಮನಸಿತಪದಂ ಕೋಣನಂ ಕಾಲನಾಳಂ
ಕರಸಾದಂ ಯಾದವೋದಂ ವರುಣನೆರಲೆಯಂ ವಾಯು ಪಾೞಿಂ ಕುಬೇರಂ
ಪಿರಿಯೆತ್ತಂ ರುದ್ರನಾರ್ದೇಱಿಯುವೊದವಿದಪರ್ ದೇವರೆಂದೆನ್ನವೋಲ್ ಕೇ
ಸರಿಯಂ ಪಾಯ್ದೇಱಿದಂದೇಂ ತೊಡರ್ವರೊ ಜಡರೆಂದೇೞ್ಪಂ ತಾಳಹಸ್ತ ॥೫೫॥

---

1 ದುಂ (ಣ) 2 ಲ್ಲೊವ (ಜ) 3 ದೆಯುಂಕ್ಕಂ (ಚಟಡಣ) 4 ಪರೆದು ಪುದಿದೀ (ಚಟ) ಪರೆದುದೀ ಭೂ (ಜಡ) 5 ವುಂ (ಚಟ) ರುಂ (ಡ) 6 ತೆಂದೊ (ಜಣ) * 'ಜ' ಪ್ರತಿಯಲ್ಲಿಲ್ಲ.

ಹರನೆಟ್ಟಿಂ ಯಕ್ಷನೇ[1]ಳಂ[1] ಪವನನೆರಲೆಯಂ ಸಾಗರಾವಾಸನಂಭ
ಶ್ಚರಮಂ ನೈಋತ್ಯನಾಳಂ ಯಮ[2]ನ[2] ಮಹಿಷಮಂ ವಹ್ನಿಯಾ ಮೇಷಮಂ ಕೊ
ಕ್ಕರಿಕುಂ ಸಂಗ್ರಾಮದೊಳ್ ಮನ್ಮೃಗಪತಿಯುಗುರುಂ ತಾಗಲಿಂದ್ರೇಭಕುಂಭಂ
ಬಿರಿವನ್ನಂ ಪೊಯ್ಗುವೆಂದೇಂ ಗಜಘುವನೊ ನಿಜಾಸ್ಥಾನದೊಳ್ ತಾಳಹಸ್ತಂ ॥೫೬॥

ಉ[3]ಕ್ಕಿಟ್ಟುದಕ್ಕೆ[3]ನೆಂಬವ
ನು[4]ಕ್ಕಂ ತಾಂ[4] ಬಿಟ್ಟನಾಗಿ ಸಿಂ[5]ಹ[5]ಮಸೇಬಿಲ್
... .
.... ॥೫೭॥

....
....
ಕೊಟ್ಟನಾ[6]ವಿ[6]ರಿ ಗಜಾರಿ[7]ಯ[7]
[8]ಮಟ್ಟಂ ಬೆನ್ನೇ[8] ಬುವ[9]ಗೆಯೆಂ[9]ಟಿದೆಯುಂಟೇ ॥೫೮॥

ನಾಡೊಳಗೆ ಮಿಾಸೆದೆಱಿಯಂ
ಬೇಡಿಸುವಂ ಬೀರರರಸಿಯರವೆಸರಿಂ ಕೂ
ಸಾಡಿಸಲೀಯಂ ಹು[10]ಲ್ಲು[10]ರಿ
ಯಾಡಿಸುವಂ ತೇಜದುರಿಯಿನರಮಿಾಸೆಗಳಂ ॥೫೯॥

ವ॥ ಎಂಬಗುರ್ವಿನ ಗರ್ವಸಿಂಹರಥನಾಂ ಜೀವಿಸುತ್ತುಮಿರೆ ಮತ್ತೊರ್ವನ ನೆತ್ತಿಯೊಳ್ ಸತ್ತಿಗೆಯುಂ ಕಯ್ಯೊಳ್ ಕೈದುವುಂಟೆಂಬುದೆ ಮದೀಯ ರಾಜವೃತ್ತಿಗಂ ವೀರವೃತ್ತಿಗಂ ಭಂಗಮೆಂದು ಸಿಂಹದ ಸಹಾಯ ಬಲಮುಂ ಕೂರ್ಪುವಡೆದ ಕೈದುವಿನ ಬಲಮುಂ ಮುಪ್ಪುರಿಗೂಡಿದಂತಾಗೆ ಮೇಗೆ ಮೆಯ್ಯಱಿಯದೆ

ಬಿಡುವೆಸರ ಚಕ್ರಿಯಪ್ಪೊಡೆ
ಮಡಕೆಗಳಂ ಮಾಡಿ ಕಳಿಪುಗಲ್ಲದೊಡೀಗಳ್
ಮಡಕೆಗೆಡೆ ಮಾಡಿ ಕೊಳ್ಗಿಂ
ದಡದುರ್ ಜರಾಸಂಧ ಚಕ್ರಿ[11]ಗಾತಂ ಭೂ[11]ತಂ ॥೬೦॥

---

1 ಱಿಂ (ಚಟಡ) ಳ್ತಂ (ಜ) 2 ನು (ಜಡ) ನ (ಟ) 3 ಟ್ಟುದಕೀರ್ಜೀವ (ಜ) ಕ್ಕಿದಕ್ಕೆ (ಟ) 4 ಕ್ಕರ್ಂ (ಜ) 5 ಗ (ಜ) 6 ನಿ (ಜ) 7 ಯ ಬೆನ್ನಂ (ಜ) 8 ಮೆಟ್ಟುವ ಮಿಾ (ಜ) ಮಟ್ಟುಂ ಬೆನ್ನೇ (ಙ) 9 ಗೆಂ (ಜ) 10 ಳ್ಲ (ಙ) 11 ಗಂತಾಂ ಬೂ (ಜ) ಗಾತಂ ದೂ (ಜ)

ವ|| ಅಟ್ಟುವುದುಂ ಪ್ರೋಜಿಮಟ್ಟಾಸುರಂ ಮಸಗಿ .ಮಿಾಸೆಯಂ ಕಡಿದು ಕಿಡಿ ವೋಗಿ ಕಡೆಗಣ್ಣ ಕೋಪದುರಿ ಪೊತ್ತಿ ಪರಕಲಿಸಿ ಪರ್ವಿದಂತೆ ತಳತ್ತಳಿಸುವ ಚಕ್ರವರ್ತಿಯ ಕಯ್ಯಂ ನೀಡುವುದುಮಾತನಿಂತೆಂದಂ

ಖಳನಂ ಗೆ[1]ಲ್ವುದೆ[1] ಭಂಗಂ
ಕೆಳೆಗೊಳ್ವುದೆ ಕಷ್ಟಮವನೊಳಾಗದು ಪಗೆಯುಂ
ಕೆಳೆಯುಂ [3]ಕರಮರಿ[3]ಯನೆ ನೀಂ
ಮುಳಿವನ್ನಂ ನೃಪತಿಮೌಳಿಮಣಿಖಚಿತಪದಾ ||೬೧||

ಕರಿಗೆ ಹರಿ ಹರಿಗೆ ಶರಭಂ
ಶರಭ[3]ಕ್ಕೆಲೆ[3] ನೃಪತಿ ಮುಳಿಗುಮಾ ಭೇರುಂಡಂ
ನರಿ[4]ಗೆ ಹರಿ[4] ಕರಿಗೆ ಶರಭಂ
ಹರಿಗೆಂದುಂ ಮುಳಿಯಲಱಿಯದಾ ಭೇರುಂಡಂ ||೬೨||

ವ|| ಎಂಬುದುಮನಂತ ಚಾತುರ್ಬ[5]ಲಮುಂ[5] ಬೆ[6]ಸಸೆ[6] ನೆಲಂ ಬೆಸಲೆಯಾದಂತೆ ಪ್ರೋಗಿ ಪೌದನಪುರದ ಪ್ರೋಜಿಗೊ[7]ಡ್ಡಿ ನಿಲು[7]ವುದುಂ ಅಟ್ಟಿತಿಂಬ ದೈವಕ್ಕೆ ಪಾಟಿಂ ಬಟ್ಟಂತಾದುದೆಂದು ಸಿಂಹರಥಂ ಬಲದ ಕಳಕಳಕ್ಕೆ ಕೆಳರ್ದು

ತುಱಿಯೆ ಪದಾತಿಯಂ ತವೆ ತುರಂಗದಟಿಂ ತುರಗಂಗಳಂ ರಥಂ
ತುಱಿಯೆ ರಥಂಗಳಂ ತುಱಿಯೆ ದಂತಿಗ[8]ಳಿಂತರಿ ಸೇನೆ[8]ಮಿಟ್ಟು ತೊ
ತ್ತುಳದುಱಿದಂತೆ ತನ್ಮೊಳಗೆ ಮುಮ್ಮುಱಿಯಾಗಿರೆ ಗರ್ಜಿ[9]ಸಿತ್ತು[9] ಸೊ
[10]ಕ್ಕಿ[10]ಱಿಪಿ ದಿಗ್ಗಜಂ ರಣದೊಳೇಱಿದ ಕೇಸರಿ ತಾಳಹಸ್ತನಾ ||೬೩||

ವ|| ಅದನೊರ್ವಂ ಮಾರಿಯುಱಿದಾಡಿನಂತೋಡಿ ಪೋಗಿ ಪೇೞೆ ಕೇಳ್ದುಂ ಜರಾಸಂಧಂ ಜರಾಜರ್ಜರನಂತೆ ಜಕ್ಕನೆ ಜಱಿದು ಸ್ವಯಂಬರದನುವರದೊಳ್ ವಸುದೇವನ ಕೂರ್ಪಂ ಕಂಡನಪ್ಪುದಱಿನೆವನಲ್ಲದಿವನ ಮಿತ್ತುವಂ ಮಿದಿ[11]ಯಲಾ[11]ರ್ಪರಿಲ್ಲೆಂದು ಶೌರಿಪುರಕ್ಕೆ ಪುರುಷರಂ ಕಳಿಪಿ ಸಿಂಹರಥನಾವೊಂ ಪಿಡಿದು ತಂದನವಂಗೆ ತನ್ನ ಮಗಳುಮಂ ಬೇಡಿದ ನಾಡುಮಂ ಚಕ್ರವರ್ತಿ ಕೊಟ್ಟಪನೆಂದು ಗೋಸಣೆ

---

1 ಲ್ವಡೆ (ಡ) 2 ಕರಿಮುರಿ (ಡ) ಕರಮುರಿ (ಟ) 3 ಕ್ಕಿರೆ (ಚಣ) ಕ್ಕರೆ (ಟ) ಕ್ಕುರೆ (ಡ) 4 ಹರಿಗೆ (ಚಟ) 5 ಲಂ (ಚಣ) 6 ಸಿ(ಜ) ರಸು (ಡಣ) 7 ಡ್ಡ (ಚಟಡಣ) 8 ಳಂದಮೊಸೇನೆ (ಚಡಣ) ಳಿಂತರಿ ಸೈನ್ಯ (ಜ) ಳಿಂದವೊ ಸೇನೆ (ಟ) 9 ಸುತ್ತೆ (ಚಣ) ಸುತ್ತ (ಟಡ) 10 ಕ್ಕ (ಚತಣ) 11 ಯಾ (ಚಟಡಣ) * ಈ ಭಾಗ 'ಜ' ಪ್ರತಿಯಲ್ಲಿಲ್ಲ.

ಯಿಡಿಸೆ ಕಂಸಂ ಪಿಡಿದು ವಸುದೇವನಲ್ಲಿಗೆ ತಪ್ಪುದುಮಾನಕ ದುಂದುಭಿಧ್ವನಿಯಿಂ ಚಟ್ಟರೊಳಗೆ ಪೆಸರಂ ನಿಲಿಸಿದೆಯೆಂದು ನಲಿದು ಪ್ರಸ್ಥಾನಭೇರಿಯಂ ಪೊಯ್ಸಿ ಪೋಱ ಮಡು[1]ವಾಗಳ್[1] ನೀಂಬರಮಿದಾವ ಭರಮೆಂದು ಕಂಸಂ ನಿವಾರಿಸಿ ಪೇೞ್ದು ಪಡೆವೆರಸು ಪೌದನಪುರಕ್ಕೆತ್ತಿವರ್ಪುದುಂ ಸಿಂಹರಥಂ ಕೇಳ್ದು ಗಹಗಹಿಸಿ ಬಾಯ ತಂಬುಲಂ ಸೂಸೆ [2]ಸೊರ್ಕಾನೆದಿಂಬಂಗಾಡೆ ಹೋ[3]ಟೆ[3]ಗೆಯೆಂಬಂತೆ ಚಕ್ರವರ್ತಿಯ ಬಲಮಂ ಬಱಿಕೆಯ್ದೆನ್ನ ಸಿಂಹಕ್ಕೆಡೆಯ ಕಡೆಯ ಬಡವರ ಬಲವೊಂದು ಪಲ್ಲಕೊನೆಗಂ ಬಾರ ದೆಂದು ಮದದಿಂ ಮುಂದುಗಾಣದೆ ಕದನಕ್ಕಿದಿರ್ವಂದು ಕಂಸನ ಮೇಲೆ ಸಿಂಹ ರಥಂ ಸಿಂಹಮಂ ಪಾಯಿಸೆ

ಕಂಚನಱಿದೆಚ್ಚ ಕೂರ್ಗಣೆ
ಪಂಚಾಸ್ಯನನುರ್ಚಿ ಪಾಱಿ ಪೋದುದೆ ನೆಱೆ ಪಾ
ಯ್ದಂಚೆವೊಲಂಬಿನ ಬೞಿಯನೆ
[4]ಬಂ[4]ಚಿಸಿ ಗಱೆ[5]ವ[5]ಟೆಯ ಪಾವಿನಂತಿರೆ ಸಿಂಹಂ ||೬೪||

ಮುರಿದಂಗಂ ನೀಳ್ದ ಗಾತ್ರಂ ಮೊಟಕಲಿಸಿ ಕರಂದಂಡೆಯಂ ನೀಡಿದಂದಂ
ಕರುವಿಟ್ಟಂತಿರ್ಪಿನಂ ಚಪ್ಪರಿಸಿ ಬೆರಸಿ ಕಂಠಾಗ್ರದೊಳ್ ನಾಲ್ಕು ಬಾಯಂ
ತೆರೆದೇಱಪ್ಪನ್ನೆಗಂ ಕಿಟ್ಟಿಲಗನೊದೞ ಮೇಲ್ವಾಯ್ದ ಪಂಚಾಸ್ಯನಂ ವೀ
ರರ[6]ಸಾಂಗಂ[6] ಶೂದ್ರಕಂಬೋಲ್ ಕದನದೊಳಱದಂ ಕಂಸನತ್ಯುನ್ನತಾಂಸಂ ||೬೫||

ಕೇಸರಿಯುಗುರ್ವೊಯ್ಲಿಂ ಪೊಸ
[7]ಬಾ[7]ಸುಟಿವೇಂ ಕಂಸನಂಗದೊಳ್ ನೆಗೆದುವೊ ಕೂ
ರ್ತಾಸತ್ತು ನೆರೆದ ವೀರ
ಶ್ರೀ ಸೆಳೆದೊಂದಸಿಯ ಪಸಿಯ ಕೂರುಗುರಿನವೋಲ್ ||೬೬||

ವ|| ಅಂತು ಸಿಂಹಮಂ ಸಂಹರಿಸಿ ಸಿಂಹದಿಂ ಮುನ್ನಮೆ ನೆಲದೊಳ್ ಬಿರ್ದಿರ್ದ ಸಿಂಹರಥನಂ ಮೇಗಱವಕ್ಕುಮೇಕೆ ಬಿ[7]ರ್ದೆ[7]ಯೆರ್ದುರ್ *ನಿನ್ನ ಸಿಂಹದ ಪಲ್ಲನೆಣಿಸಿ ನೋಡೆಂದದಱ ಪಲ್ಗಳಂ ಕಳೆದು ತಲದೊಳಿಕ್ಕಿ ಮಂದಮತಿಯ ಮುಂದೆ ತಲೆಯ ಚುಂಚಂ ಪಿಡಿದು ಚರೆಯಕ್ಕೆ ಬಿಟ್ಟ ಗೂಂಟನೆೞೆದು ತಪ್ಪಂತೆ ತಂದು ನಿಮ್ಮ ಸಿತಗ ನಪ್ಪ ಸಿಂಹರಥನಿವನಪ್ಪನೆ ಬೆಸಗೊಳ್ಳಿಮೆಂದು ಬೆಸನನೊಪ್ಪಿಸಿದ ಕಂಸಂಗೆ ವಸು

---

1 ವುದುಂ (ಣ) 2 ನಾಕಾನೆ ತಿಂಬಗೆರ್ಡೋ (ಚಟ) ನಕ್ಕಾನೆತಿಂಬಗಾರ್ಡೋ (ಜಡ)
3 ಪಂ (ಣ) 4 ಬ (ಚಟ) 5 ಸಾರ್ದಂ (ಡ) 6 ವಾ (ಚಜಟಡ) 7 ಟ್ಟಿ (ಜಡ)
* ಇಲ್ಲಿಂದ ೬೯ ನೆಯ ಪದ್ಯದ ಮುಂದಿನ ವಚನದ ಅರ್ಧದವರೆಗೂ 'ಡ' ಪ್ರತಿಯಲ್ಲಿಲ್ಲ.

ದೇವನಂಗಚಿತ್ತಮನಿತ್ತು ಸಿಂಹಮುಮಂ ಸಿಂಹರಥನುಮಂ ಬಂಡಿಯೊಳಿಕ್ಕಿಕೊಂಡುಯ್ದು ಜರಾಸಂಧನ ಮುಂದಿಡುವುದುಂ ಮಂದಸ್ಮಿತಮುಖನಾಗಿ ಚ[1]ಕ್ರಿ[1] ಬೆಕ್ಕಸಂಬಟ್ಟೆತ್ತ ಬಾಯೆಂದು ವಸುದೇವಂಗೋರಾಸನಮನಿತ್ತು ಮೆಚ್ಚಿದಂ ಬೇಡಿಕೊಳ್ಳೆನೆ [2]ವಸುದೇವಂ ದೇವ[2] ಭಿನ್ನಪಮಿದೆನ್ನ ಬೆಸನಲ್ತೆನ್ನ ಚಟ್ಟನ ಬೆಸನೆಂದು ಕಣ್ಸನ್ನೆಯಿಂ ಕಂಸನಂ ತೋಱೆಮಡಿಸೆ

ಪರಚಕ್ರಹರಿಗೆ ರಣಕೇ
ಸರಿಗೆನ್ನಂ ಕರ್ಚಿ ಪಾಱಲಾರ್ಪದ[3]ಟನ ಚ
ಟ್ಟ[3]ರದೆನಿಬರುಮೊಳ[4]ರೆಂದೆ[4]ನೆ
ದೊರೆಯಾಸೇಗಣಿತಮವರೊಳಾ ನೇ[5]ವಿ[5]ಯಂ ||೬೭||

ವ|| ಎನೆ ಕಂಸನಂ ಸೀನೆತ್ತಣಿನಾರ ಮಗನೆನೆ ಕಂಸಂ ಕೈಮುಗಿದು ಕೌ[6]ಶಂ[6] ಬಿಯ ಕಳ್ಳವತಿ ಮಂಡೋದರಿಯ ಮಗನೆಂಬುದುಮರಸನವನ [7]ನೇಱತಿಯುಮಿಱ[7] ಯೆಯುಂ ನೋಡಿ ನೀಡುಂ ನಿರವಿಸಿ ನಿಜಾಂತರ್ಗತದೊಳ್

ಸಿಂಗಮನಿಱವೀ ಸಾ[8]ಸಂ[8]
ಪಿಂಗುಲಿಗರ ಮಗನೊಳಾಗದಾರ್ಪೊಡೆ ಪಿಡಿಗುಂ
ಪಿಂಗ[9]ಳ[9]ನಾಕೃತಿಯೊಳಮು
ತ್ತುಂಗನಿವಂ ರಾಜಪುತ್ರನಾಗಲೆವೇೞ್ಕುಂ ||೬೮||

ಕಾಗೆ ಪೊರೆದನಿತಱಿಂದಂ
ಕೋಗಿಲೆ ತಾನದಱ ಪಿಳ್ಳೆಯಕ್ಕುಮೆ ಬೇಗಂ
ನೀಗಿ ನವಚೂತವನದೊಳ್
ಪೋಗಿರ್ಕುಂ ಕರ್ಮಘಟಿತವಘಟಿತ ಘಟಿತಂ ||೬೯||

ವ|| ಎಂದು ಮಂಡೋದರಿಯಂ ತರಿಸಲಟ್ಟಿದರಸಾಳ್ಪೋಗಿ ಬೇಗಂ ಪೋಱ ಮಡು ನಿನ್ನಂ ಚಕ್ರವರ್ತಿ ಚಕ್ಕನೆ ಪಿಡಿದು ತರವೇೞ್ದನೆನೆ ಪಿಡಿವೆತ್ತ ಕಳ್ಳನಂತೆ ಕಳ್ಳವತ್ತಿಗೆ ತಳವೆಳ[10]ವೋಗೆ[10]ತ್ತಣಮಿಟ್ಟು[11]ಮೇ[11]ನಿಮಿತ್ತಮೆನೆ ಸ[12]ತ್ತೆನಂಜು[12]ವೆಡೆಯೊಳ್ [13]ಬೆಳ[13]ಗಾದುದಾವ ಕಳ್ಳೆಯ ಬಸಿ[14]ಱಿಂ[14] ಬಂದನೆಂದಱಿಯನೆನ್ನ ಬಸಿ

1 ಕ್ರವರ್ತಿ (ಚಟಣ) 2 ದೇವ (ಣ) 3 ಟನ್ನಂ ಬ (ಚಟ) ಟಂಬಟ್ಟ (ಣ) 4 ರಾ (ಜ) 5 ವಿಕೆ (ಚಟಡಣ) 6 ಸಂ (ಚಟ) ಶಾಂ (ಣ) 7 ನೆರಲಿಱಿ (ಚಟಣ) 8 ಹಸ (ಚಟಣ) 9 ಗ (ಚಟಣ) 10 ಗಾಗಿ ಒಲಿದು (ಚಟಣ) 11 ವೇ (ಣ) 12 ತ್ತವೆನಂಜ (ಚಟಣ) 13 ಬಳೆ (ಚಟಣ) 14 ಱಂ (ಚಟಣ)

ಱಿಕೊಳ್ ಕಿಚ್ಚಂ ತಗುಳ್ಚಿದನಟ್ಟಿ ಕಳಿದೊಡಂ ಬೆನ್ನಟ್ಟದಪಂ ಮುನ್ನಿನ ಭವದ ಪಗೆಯೆಂದು ಮಂಡೋದರಿ ಮಂದಸಂ ಪೊತ್ತು ತಂದು ಜರಾಸಂಧನ ಮುಂದೀಡಾಡಿ ಬಿಟ್ಟ ತಲೆಯುಂ ಬೆಮರ್ತ ಮೆಯ್ಯುಂ ಬೆಳ್ಕೊಗಮುಂ ಬೆರಸು ಕಾವುದು ದೇವ ಎಂದು ಪುಲ್ಗರ್ಚಿ [1]ಪುಯ್ಯಲ್ಚಿ ಮೈಯಿಕ್ಕಿ[1]

ಸೊಂದಿಯವನೆನ್ನ ಮಗನ
ಲ್ಲಂ ದೇವರ ಪಾದದಾಣೆ ಬಿನ್ನಪಮಾ ಕಾ
ಳಿಂದಿಯೊಳಿರ್ದೀ ಕಂಚಿನ
ಮಂದಸಿನೊಳ್ ಪುಟ್ಟಿ ಕಂಸವೆಸರಂ ಪಡೆದಂ ॥೭೦॥

ವ॥ ಎಂದು ಮಂದಸಿನೊಳಗಣ ತಾ[2]ಯ[2] ಕಲ್ಗಳೀ ಕೊಲೆಯೊಡವುಟ್ಟಿದಪೆಂದು ತೀವಿತಂದ ಮಾಣಿಕಂಗಳಂ ಮುಂದೆ ಸುರಿದು ಕೊಲ್ವೊಡಂ ಕಾವೊಡಂ ದೇವರೆ ಬಲ್ಲಿರೆಂಬುದುಮರಸಂ ವರಹಸಿತಮುಖನಾಗಿ ನಾಗಸಂಪಗೆಯೆಸಟಿಂತಿರ್ದ ಕನಕಪತ್ರಮನಲ್ಲಿ ಕಂಡು ಬೀಸುಂಬಟಿ[3]ಯುಮಿಲ್ಲದೆ ನಿಬಿಡಮಾಗಿ ಬರೆದಿರ್ದಕ್ಕರಂಗಳನನುಮಾನಿಸಿ ತಾನೆ ನೋಡಿ

ಶ್ಲೋ॥ ಉಗ್ರಧೀರುಗ್ರಸೇನಾಂಶಾ[3]ನ್ಮಥುರಾನ್ಮ[3]ಧುರೇಶಿತುಃ
ಪದ್ಮಾವತ್ಯಾ[4]ಮ[4]ಭೂ ಚ್ಚಂದ್ರಾದುತ್ಕ್ಯಾ[5]ಯಃ[5] ಕಾಮವಹ್ನಿಪತ್
ದುರ್ಮುಹೂರ್ತ ಪ್ರಭೂತತ್ವಾದೇಷ ದೋ[6]ಷಾರು[6]ಣೇಕ್ಷಣಃ
ಮಂಜೂಷಾಯಾಂ ವಿನಿಕ್ಷಿಪ್ಯ ಯಮುನಾಯಾಂ ವಿಸರ್ಜಿತಃ

ವ॥ ಎಂದು ವಾಚಿಸಿ ಭಾಗಿ[7]ನೇ[7]ಯನಪ್ಪುದನಱಿದು ಸಂತಸದಂತನೆಯ್ದಿ ಬೇಡಿದ ಕಾಡೊಳೆ ಮಱಿಕೊಂಡುದೆಳಕುಱಿ[8]ಗೊಳ್ವಂಗೆಱಂಗೊಟ್ಟಂ[8]ತಾಯ್ತು ಕವರುಕತ್ತಿಗೆ ಕಡಿತಂ ಬಂದಂತಾಯ್ತು ಪ್ರ[8]ದ್ಯೋತನಂಗೆ ಪದ್ಮಿನಿಯಂ ಪಣಿದಂಬೊಯ್ದಂತಾಯ್ತು [9]ಮುಹೂರ್ತಮೆ ಶುಭಮು[9]ಹೂರ್ತಮೆಂದು ಮಂಡೋದರಿ ಬೆಕ್ಕಸಂ[10]ಬೆಱ[10]ಗಾಗಿ ನೋಡುತ್ತುಮಿರೆ

ನಿಸದಂ ನೀನೆನ್ನ ಕೂಸಿಂಗೊಡೆಯನೆಯೆನಗಿನ್ನುಂಟೆ ತೇಜಂ ಭವತ್ಸಾ
ಹಸ ಸಿಂಹಕ್ರೀಡೆಗಾಂ ಸಂಗಿಗನೆನಱಿದಿರೆಂದುತ್ಸವಾತೋದ್ಯಗೀತಾ
ನುಸರಂ ಟಂಕಾರಮಂ ಮುಂದಿಡೆ ಮದನಧನುರ್ಮಂಜರೀಜೀವೆ ಜೀವಂ
ಜಸೆಯಂ ಕಂಸಂಗೆ ಕೊಟ್ಟಂ ಜಸಮೆಸೆಯೆ ಜರಾಸಂಧನಾನಂದದಿಂದಂ ॥ ೭೧॥

1 ಮೆಯ್ಯಿಕ್ಕಿ (ಚಟಣ) 2 ಯಿ (ಜ) 3 ಮಧುರಾನಾಮ (ಜ) 4 ಯ (ಜ) 5 ಯಾ (ಜ) 6 ಷಗು (ಚಟಣ) 7 ನಿ (ಜ) 8 ಪ್ರ (ಜ) 9 ಮು (ಜ) 10 ಮಾಡಿ ಬೆಱ (ಟ)

ವ॥ ಅದಂ ಕಂಡು ಗಲ್ಲದೊಳ್ ಕೈಯನಿಟ್ಟು ಮಱುವಟ್ಟಿರ್ದ ಮಂಡೋದರಿ ಗುಡಲುಂ ತುಡಲುಂ ಕೊಟ್ಟು ಕಳಿಪುವು[1]ದುಂ[1] ಪಡೆದ ಮರೆ ಬೆ[2]ಳ[2]ಗೆಯ್ಗುಂಡಂತೆ ಬದ್ದೆನೆಂದು ಕಳ್ಳವತ್ತಿಗೆ ಚಿತ್ತವಡೆದು ಪೇೞುತ್ತ ನಿನ್ನ ಮಚ್ಚಿನ ನಾಡಂ ಬೇಡಿಕೊಳ್ಳೆನೆ ಕಂಸಂ ತನಗೆ ತನಯಪ್ರಿಯನಪ್ಪ ತಂದೆಯ ನಾಡನೆ ದಯೆಗೆಯ್ವುದೆನೆ ಕಂಸನ ಕೋಪ[3]ನಕೋಪಗ[3]ರ್ಭಗರ್ಭೋ[4]ದೀ[4]ರಿತಮನ[5]ವಧಾರಿಸಿ[5] ಧರಣಿಪತಿ ತನ್ನಂತರ್ಗತದೊಳ್

ಬಿಸಮನುಗುಬ್ದಿಪ್ಪನೀ ಸಾ
ಹಸಿ ತಂದೆಗೆ ಕಾಣ[6]ದೇನೆನಗೀ[6] ಸಂಸಾ
ರ ಸಮುದ್ರದೊಳಗಿದೇ ತಾ
ಮಸವೆಸಡಿಯ ಬಸಿಱನೊಡೆದು ಪುಟ್ಟಿವೆ ಮಱುಗಳ್ ॥೭೨॥

ಎನಿತು ಮು[7]ನಿ[7]ದಳುರ್ದೊಡಂ ನೀ
ರ ನಿಧಿಯೊಳೊಗೆವಗ್ನಿ ವಾರ್ಧಿಯಂ ತವೆ ಸುಡದಂ
ತೆನಿತು ತನೂಜಂ ತಂದೆಗೆ
ಮುನಿದೊಡನುಱುವಂತು ಪೊಲ್ಲಕೆಯ್ಗುಮೆ ಪಿರಿದುಂ ॥೭೩॥

ವ॥ ಬಿಸುನೀರ್ ಮನೆಯಂ ಸುಡುಗುಮೆ [8]ಕು[8]ಡುವೆನೆಂದು ಕೊಟ್ಟು ಕಳಿಪೆ ಕಂಸಂ ಜರಾಸಂಧಚಕ್ರವರ್ತಿ ಪೇೞ್ದ ಚತುರಕ್ಷೋಹಿಣೀಬಲಂಬೆರಸು ವಸುದೇವ ಸಹಿತಮೆತ್ತಿ ಪೋಗಿ ಮಧುರಾಪುರ[9]ಮಂ[9] ಕೊಳ್ವಂತೆ ಲೀಲಾಮಾತ್ರದಿಂ ಕೊಂಡು

ಅರಣಿಯನುರಿಪ್ಪುವ ವೈಶ್ವಾ
ನರನಂ[10]ತಿರೆ ನುನಮುನಿ[10]ಸುವ ಮನಸಿಜನಂತಂ
ತಿರೆ ಪಿಡಿದು ಕಟ್ಟಿ ಕಂಸಾ
ಸುರನಿಕ್ಕಿದನಕಟ ಜನಕನಂ ಸಂಕಲೆಯೊಳ್ ॥೭೪॥

ವ॥ ಅಂತು ಪು[11]ೃಳೆ[11] ಪಾಲಂ ಕಿಡಿಸುವಂತುಗ್ರಸೇನನಂ ಕಿಡಿಸಿ ಮಧುರಾಪುರ ದ್ವಾರದೊಳ್ [12]ನಂ[12]ಕಲೆಯೊಳ್ ಸೆಱೆಗೆಯ್ದುದೆ ಸಂಸಾರ ಶರೀರ ಭೋಗನಿರ್ವೇಗಕ್ಕೆ ಕಾರಣಮಾಗೆ ಯುವರಾಜಲಕ್ಷ್ಮಿಯನುೞಿದ ಯತಿಮುಕ್ತಕಂ ತಪಸ್ಸಾಮ್ರಾಜ್ಯಲಕ್ಷ್ಮೀ

1 ದುಮುಟ್ಟು (ಚಟ) 2 ಳೆ (ಚಟ) 3 ಯಿ (ಜ) 4 ದಿತ (ಚಟ) 5 ಱಿದು (ಣ)
6 ರೇನನೆನಗೀ (ಜ) ದೇನನೇನಂ (ಣ) 7 ಳಿ (ಜ) ಗಿ (ಟ) 8 ಕೆ (ಚಟ) ಕೊ (ಣ)
9 ಮಹೀನೂಪುರಮಂ (ಚಟ) 10 ತೆನೆಮುನಮುನೆ (ಚಟ) ತಿರೆ ಮುನ ಮುನಿಸುವ (ಣ)
11 ಳಿಯೆ (ಚಟಣ) 12 ಸ್ತ್ರಿಂಖಳಕಂ (ಜ)

ಸಂಭೋಗ ಶೃಂಗಾರ ಪಯಃ ಪಯೋ[1]ಧಿ[1]ನಿಮಗ್ನ [2]ಸ[2]ರೋಜನಾಗೆ ಕಂಸಂ ವಸುದೇವನಂ ಬರಿಸಿ ಸಿಂಹಾಸನಾಲಂಕೃತನಂ ಮಾಡಿ ಸಾಷ್ಟಾಂಗ ಪ್ರ[3]ಣ[3]ತನಾಗಿ ನಿಟಿಲತಟಘಟಿತ ಕರಕುಶೇಶಯ ಕುಟ್ಮಲನಿಂತೆಂದು ಬಿನ್ನವಿಸೆ

ಹರಿವಂಶಂ ಹರಿವಂಶದಂತತುಲ ಭೋಗಖ್ಯಾತಮಾಯ್ತುರ್ವರಾ
ಧರ[4]ದಿಂದಂ[4] ಸ್ಥಿ[5]ರ[5]ಮಾಯ್ತು ಶಾಸ್ತ್ರಮಯಮಾಯ್ತಾನರ್ಘಮೆಂಬಂತೆ ಪು
ಷ್ಕರಿಯಂತಾಯತದಾನಮಾಯ್ತುದಧಿಯಂತುದ್ವೃತ್ತಸ್ಸುಧಾಧಾಮಮಾ
ಯ್ತರವಿಂದಾಕರದಂತೆ ಲಕ್ಷ್ಮಿಗಿರಲಾಯ್ತೀ ನಿಮ್ಮ ಕಾರುಣ್ಯದಿಂ ||೭೫||

ಆನೆತ್ತರ್ಕಸುತಾ ಪ್ರವಾಹಭರಮೆತ್ತಲ್ಲಿರ್ದ ಮಂಜೂ[6]ಷಪೆ[6]
ತ್ತಾನೀಚಾಶ್ರಯವೆತ್ತ ನಿಮ್ಮ ಬರವೆತ್ತೀ ಶಾಸ್ತ್ರ ಶ[7]ಸ್ತ್ರ[7]ಶ್ರಮಂ
ತಾನೆತ್ತಿಕ್ಕುವುದೆತ್ತ ಸಿಂಹರಥನಂ ಚಕ್ರಿಪ್ರಸಾದೋದಯಾ
ಧೀನಂ ರಾಜ್ಯಮಿದೆತ್ತದೇ[8]ವುದಿನಿ[8]ತುಂ ಯುಷ್ಮತ್ಪ್ರಸಾದೋದಯಂ ||೭೬||

ಆದಱಿಂದೆನ್ನುಮನೆನ್ನ ರಾಜ್ಯಭರಮಂ ಸಪ್ತಾಂಗಮಂ ಸಸ್ಯ ಸಂ
ಪದಮಂ ವಾರಿದಮಂಬುಜಾತವನಮಂ ತಿಗ್ಮಾಂಶು ನೀಲೋತ್ಪಳಾ
ಸ್ಪದಮಂ ಶೀತಮರೀಚಿ ರಕ್ಷಿಸುವವೊಲ್ ನೀಂ ರಕ್ಷಿಸೆಂ[9]ದಂ[9]ದು ಬೇ
ಡಿದನಾ[10]ತಂ[10] ನತಮೌಳಿರತ್ನರುಚಿಗಳ್ ತಳ್ಪೊಯ್ಯೆ ದಿಗ್ಭಾಗಮಂ ||೭೭||

ವ|| ಅಂತು ಬೇಡಿಕೊಂಡು ತನ್ನಯ ಮನೆಯ ಬಲದ ಕೆಲದೊಳನೇಕ ನೂತ್ನ ರತ್ನರಾಜಿರಾಜಿತ ಚಂಚತ್ಕಾಂಚನಮಯ ಮಹಾರಾಜಭವನಮುಮಂ ಮಾಡಿಸಿ ಕೊಟ್ಟು ಮುನ್ನಮೆ ವಸುದೇವನ ರೂಪವಿಲಾಸ ಸೌಭಾಗ್ಯ ಭಾಗ್ಯೋದಯಮಂ ಕೇಳ್ದು ಕಿವಿವೇಟಂಗೊಂಡು ಕಾಮಕಾ[11]ರ್ಮುಕನಿರ್ಮುಕ್ತ[11]ಶಿಲೀಮುಖ ಸಹಸ್ರ ಸಮಾಘ್ರಾತಮನಃಸರೋಜ ಸಂಭಾವಕಿಯಾದ ದೇವಕಿಯ ಭಾವಮನಂತಃಪುರ ಪರಿಚಾರಕಿಯರಿಂ ಕೇಳ್ದು

ಭೂವರ ವಸುದೇವಂಗೆ ಮ
ಹೀವಿಶ್ರುತ ಕಂಸರಾಜನಿತ್ತಂ ಬುಧಸಂ
ಭಾವಕಿಯಂ ಮನ್ಮಥ ಸಂ
ಜೀವಕಿಯಂ ವಿಹಿತ ವಿಭವದಿಂ ದೇವಕಿಯಂ ||೭೮||

---

1 ನಿಧಿ (ಚಟ) 2 ಮನಃಪ (ಜ) 3 ಣಾ (ಚಜಟ) 4 ದಂತ (ಚಜಟ) 5 ತ (ಜ) 6 ಷೆಯೆ (ಣ) 7 ಸ್ತ್ರಾ (ಟ) 8 ವಿಡಿದಿ (ಚಟ) ವಿನಿ (ಜ) 9 ದೆಂ (ಚಜಟ) 10 ತ್ಮಾ (ಚಜಟ) 11 ಮಕ ನಿರ್ಮುಕ್ತ (ಚಟ) ರ್ಮುಕ (ಜ)

ಸರಸಿಜಸಂಭವಂ ಕುಸುಮಸಾಯಕನಾಗಿ ಸುಧಾಂಶು ಚಂದನಂ
ಸರಸಿಜಮುತ್ಪಲಂ ಸರಸಿ ಚಂದ್ರಿಕೆ ಮಾಲತಿ ಚಂದ್ರಕಾಂತ ಬಂ
ಧುರಪರಮಾಣುವೆಂಬಿವಱನಾತ್ಮಮನಃಸುಕುಮಾರ ಹಸ್ತದಿಂ
ವಿರಚಿಸಿದಂ ನಿಜೇಶಮುಖಸೌರಭಭೃಂಗಿಯನಾ ಲತಾಂಗಿಯಂ ||೭೯||

ವ|| ಮತ್ತಮಾ ಮನೋಜರಾಜಯೌವನಪನವಸಂತಲಕ್ಷ್ಮಿಯ ಚರಣಪಲ್ಲವಾರುಣಿತನಖಮಯೂಖಮಣಿಮಾಲಾಮಂಜರಿಯಾ ರಾಜ[1]ಶಿರೋರತುನಗೆ[1] ಚೂಡಾಮಣಿಯಾಗೆಯುಂ ಆ ರತಿಪತಿ ಕೃತಕಗಿರಿಜಾನು ಕಲ್ಪಲತೆಯಾಜಾನು ಕಲ್ಪಲತೆಯಾ ಹರಿವಂಶಪಾರಿಜಾ[2]ತನ ಪಾರಿಜಾತ[2] ಶಾಖಾನುಕಾರಿಯಾಜಾನುಶಾಖಾದ್ವಯಮನಾವೇಷ್ಟಿಸಿಯುಂ ಆ ಮನ್ಮಥ ಮಹಾರಾಜಭವನ ಮೂಲಸ್ತಂಭಪಾಂಚಾಳಿಕೆಯ ರಂಭಾಸ್ತಂಭಾನುಕಾರಿಯಾಗಿರು[3]ಶಾಖೆ[3]ಯಾದ ಕುಮಾರಕುಂಜರನ ಮನಃಕುಂಜ[4]ರಾ[4]ಲಾನಸ್ತಂಭಮಾಗೆಯುಂ ಆ ಸಂತುಕೇಳೀತರಂಗಿಣೀ [5]ಪುಳಿನಸ್ಥಳಿಯ ನಿತಂಬ ಪು[5]ಳಿನಸ್ಥಳಂ ಮಹಾರಾಜ ರಾಜಹಂಸನ ಲೀಲಾರಾಜಹಂಸೀವಿನೋದಕ್ಕೆ ಪುಳಿನ ಸ್ಥಳಮಾಗೆಯುಮಾ ಪಂಚಬಾಣ[illegible]ಕಾಯಮಾನ ಭ್ರೂಲೇಖೆಯ ಮುಷ್ಟಿಗ್ರಾಹ್ಯಮಧ್ಯಮಾ ಧನುರ್ವಿದ್ಯಾಪಿತಾಂದ ಪ್ರತ್ಯಾದೇಶನ ಕೋದಂಡ ಮಧ್ಯಪ್ರದೇಶಮಾಗೆಯುಮಾ ಕುಸುಮಾಯುಧಕುಂಭಿ ಲೀಲಾಕುಂಭಿನಿಯ ಕುಚಕುಂಭಮಾರಾ[6]ಜ[6]ಮೂರ್ಧಾಭಿ[7]ಷಿಕ್ತ[7]ನ ಸಾಮ್ರಾಜ್ಯಾಭಿಷೇಕ ಶಾತಕುಂಭಮಾಗೆಯುಮಾ ಶೃಂಗಾರಸಂಭವ ಶರಚ್ಚಂದ್ರ ಚಂದ್ರಿಕೆಯ ಮುಖಚಂದ್ರನಾ ಹರಿವಂಶ ಚಕೋರೀಚಂದ್ರನ ಚಂದ್ರಿಕಾವಿಹರಣಕ್ಕೆ ಸಂಪೂರ್ಣಚಂದ್ರನಾಗೆಯುಮನೂನ ಕಾಮಸಾಮ್ರಾಜ್ಯ ಸುಧಾಪಯೋನಿಧಿಯೊಳೋಲಾಡುತ್ತುಮಿರೆಯಿರೆ

ತನುಸೋಂಕಿಂ ಮಧುರಾಧರಾಮೃತದೆ ಸರ್ವಾಂಗೀಣಸೌಗಂಧದಿಂ
ಘನಲಾವಣ್ಯಸಮೃದ್ಧಿಯಿಂ ಪಿಕನಿನಾದ ಖ್ಯಾತಿಯಿಂದೀಯೆ ಕಾ
ಮಿನಿ ಪಂಚೇಂದ್ರಿಯ ಸೌಖ್ಯಮಂ ತಳೆದನುರ್ವೀಪಾಲಮೌಳಿಪ್ರಭಾ
ದ್ಯುನದೀದ್ಯೋತಪದಾಂಬುಜಂ ಪ್ರತಿದಿನಂ ಸಾಹಿತ್ಯವಿದ್ಯಾಧರಂ ||೮೦||

---

1 ಶೇಖರರತ್ನನ ಚೂಡಾಮಣಿಗೆ (ಚಟಙ) 2 ತ (ಟಙ) 3 ಜೋಭೆ (ಚಟಙ) 4 ರಕಾ (ಜ) 5 ಪು (ಜ) 6 ಜನೆ (ಚಟಡ) ಜನ್ಮ (ಜ) 7 ಷೇಕ (ಜ)

*ಇದೇ ಆಶ್ವಾಸದ ೬೬ ನೆಯ ಪದ್ಯದ ಮುಂದಿನ ವಚನದಿಂದ ಇಲ್ಲಿಯವರೆಗೆ 'ಡ' ಪ್ರತಿಯಲ್ಲಿಲ್ಲ.

ಇದು ಮೃದುಪದಬಂಧಬಂಧುರ ಸರಸ್ವತೀ ಸೌಭಾಗ್ಯ[1]ವ್ಯಂಗ್ಯ ಭಂಗಿ[1] ನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ [2]ಸೆ[2]ಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್

ಷಷ್ಠಾಶ್ವಾಸಂ

ಸಮಾಪ್ತಂ

---

1 ಭಂಗಿನಿ (ಜ) ವ್ಯಂಗ್ಯಭಂಗಿನಿ (ಟ) 2 ಪದವೀ ವಿರಾಜಿತ ಸೆ (ಚಜಟಡ)

ಸಪ್ತಮಾಶ್ವಾಸಂ

ಶ್ರೀವರಸು ಬಂದ ಚಂದ್ರಮು
ಖೀವಮೃತವನೀಯೆ ತನಗೆ ಮಧುರಾಧರದಿಂ
ದೇವಕಿಯ ನಗೆಮೊಗಂ ವಸು
ದೇಸಂ ದೇವಂಬೊಲಿರ್ದನಪ್ರತಿಮಲ್ಲಂ ||೧||

ವ|| ಒಂದು ದಿನಂ ಮಧ್ಯಂದಿನ ಸಮಯದೊಳ್ ಮಧುರಾಪುರಕ್ಕೆ ಬಯಲೆಲ್ ಬೇಱತರ್ದ[1] ಕುಶಾಳಿಕೆ ಪೆಡತಲೆ[2]ಯಂ[2] ಪೊಕ್ಕ ಕಣ್ ತೋರ್ಪ ಕೆಯ್ಯಾಕ್ಷಿಪೆ ಪಾತ್ರಾಂಕ್ಕೆ [3]ಪೊಕ್ಕೆ[3]ವೊರ್ಣವಸಿಜಡುಗಿದೊಂದುರಂ ಪೊಟ್ಟಿಬಾಯ್ ಬೇಕಬಯಾದಂತಿರ್ದ ಬಾನಂಗುಟಿ [4]ಗಿಟಗಿಟ[4] ಜಂತ್ರಂಬೊಲಾಗಿರ್ದ ಮೈ ಮೆಯ್ಸಿರಿ ಚಿನ್ನಪಕ್ಷೆ ಪೆಕ್ಕಾಗಿರೆ ಚರಿಗೆ[5]ಗೊಡ್[5]ಬ್ಬಂದನೊರ್ವಂ ಮುನೀಂದ್ರಂ ||೨||

[6]ಬಿಸಿಲಿಂಬಳುರ್ದೊಡೆದೊಡಲಂ[6]
ವಸಿಸಿಂಬ ಸ[7]ದ[7]ರ್ಧಿ (?) ಶಾಂತರಸದಿಂ ಮುಸಿಯಾ
ಯ್ತುಸದಳಮೆನೆ ಮೆಯ್ಯ ಮಲಂ
[8]ಮಿಸುಗಿದುದಾ ಮದನ ಕರಟಿ[8]ಕಂಠೀರವನಾ ||೩||

ಕೆಳರ್ದುವಿಳಿದ[ಿ]ರಿದು ಗಗನಮು
ನಳುರ್ದು ತಪೋಧನನ ತಪದ ಸೆಗಳಿ ಕನಲ್ದು
ವ್ವಳಿಸೆ ತನಗೋಡಿ ಕಾಡುವ
ಜಳಧರಮಂಡಳದ ಮಱಿಯನರ್ಕಂ ಪೊಕ್ಕಂ ||೪||

ವ|| ಅಂತುಮಲ್ಲದೆ

ಅಡವಿಯ ಕಿರ್ಚು ಕರ್ಚಿದುದು ಪುಲ್ಗಳನು[9]ರ್ಚು[9]ವ ನೀರ ಕಿರ್ಚು ಪೆ
ರ್ಗಡಲೊಳಡಂಗಿ ಪೋದುದು ಪುರಾಂತಕನಗ್ಗಳಗಣ್ಣ ಕಿಚ್ಚು ಕೆಂ
ಜೆಡೆಯೊಳಗಿರ್ದ ಗಂಗೆಯೊಳಗಿರ್ದುದು ತನ್ನುರಿಪಕ್ಕೆನಲ್ ಕರಂ
ಕಿಡಿಕಿಡಿ [10]ತಾ[10]ಗುತಿರ್ದುದು ಮಹೋಗ್ರತಪಂ ತಪವಂಕಕಾಱ[11]ನಾ[11] ||೫||

---

1 ಯೆಱಿಪ್ಪೇರೆಳ್ದ (ಜ) ಯೆ ಬೇರೆರ್ದ (ಡ) 2 ಯೊಳ್ (ಚಟಡಣ) 3 ಪೆತ್ತು (ಜ) 4 ಗಿಡಿಗಿಡಿ (ಜ) 5 ಗುಱ (ಚಟಡಣ) 6 ಬಿಸಿಲ್ಗಾಂದಳಿದೊರ್ಡಲಂ ತಾಂ (ಜ) ಬಿಸಿಲಿಂದಳಿದೊರ್ಡಲಂ (ಡ) 7 ತ (ಚಜಟ) 8 ಮುಸುಳಿಸಿತಾ ಮದನರಹನಿ (ಜ) 9 ಕ್ಕು (ಚಟಡಣ) 10 ವೋ (ಜ) 11 ನಂ (ಚಟ) *' ಜ 'ಪ್ರತಿಯಲ್ಲಿಲ್ಲ

ವ|| ಅಂತಾಬಾಲೆ ನೀರ್ಪೊಱಗಿಱಿದ ಬಾಳೆಯಂತೆ ಮಿಡುಮಿಡುಮಿಡುಕಿ ಪುಡಿಯೊಳ್ ಪೊರಳ್ದು ಮೂರ್ಛೆವೋಗಿ ಪರಿಚಾರಕಿಯರ್ ಪರಿತಂಪತ್ತಿಕೊಂಡು ಪೋಗಿ ಪಾಸಿನೊಳ್ ಪವಡಿಸಿ ಬಿಜ್ಜಣಿಗೆಯೊಳ್ಬೀಸಿಯುಂ ಕಣ್ಬನಿಯಂ ಸೂಸಿಯು ಮಿಂತಾನು[1]ಮೆಚ್ಚ[1]ಱಿಸಿ ಮೂರ್ಛೆದಿಳಿಯೆ ತಾನುಂ [2]ತಿಳಿದು ಪ[3]ಱುಗಱಿದಱಲ ಕಿಚ್ಚುರ್ಪೊಟ್ಟಿರದ ಕಿರ್ಚಿನಂತೊಳಗೊಳಗಳು[7]ರೆ[8] ಕನ್ನಡೊಳ್ಸತ್ತ್ರ ಕಳ್ಳನ ತಾಯಂ ತೊಳಗೊಳಗ[4]ಱುತೆ ತನ್ನಗೆಯ್ದ[4] ಪಾತಕ[5][ಮನಂ][6]ತಾರ್ಗನುಸಿರಲ್ಕಾಱದೆ ತನ್ನೊಳಿಂ ತೆಂದಳ್

ಕಂಜದಳಾಕ್ಷಿ ಮೆಯ್ಮೆಱೆವುದೇಕೆ ಮಹಾವ್ರತಿ ಬರ್ಪುದೇಕೆ ಬಂ
ದಂಜಪೆ ಮೂರ್ಖನಂ ಮಿಗೆ [6]ಕೆರಳ್ಚಿ[6]ದೆಸೇಕೆನಗಾ ತಪೋಧನಂ
ನಂಜಿಡಲೇಕೆ ಭಾವಿಪೊಡಿದೆನ್ನ ಪುರಾಕೃತಕರ್ಮಮೆಂದು ಜೀ
ವಂಜಸೆ ಜೀಪಮಂ ಪಮ್ಮಳಿಸ್ಟು ನಿಷ್ಠಾನದೊಳಿರ್ದಳಿರ್ಪಿನಂ ||೧೩||

ವ|| ಕಂಸನಾಕೆಯಿರ್ದವಸ್ಥಾಂತರಮಂ ಬಂದು ಕಂಡು ಬೆರ್ಚಿ ಬೆಗಱುಗೊಂಡು

ಮೊಗಮಿನಿತಾದುದೇಕೆ ನಗೆ ಪೋಗಲಿದೇಕೆ ಕಡಂಗಿ ಕಣ್ಣನೀರ್
ನೆಗೆದಪ್ಪುವೇಕೆ ಸುಯ್ ಬಿಸಿಯುಮಾದುವಿದೇಕೆ ಕದಂಪು ಕೆಂಪನಾ
ಳ್ದುಗುಬ್ಬುವುದೇಕೆ ಗಗ್ಗ[7]ರಿ[7]ಕೆಯುಗ್ಗಳವಾದುದಿದೇಕೆ ನೀಂ ಕರಂ
ಪೊಗೆವಪೆಯೇಕೆ ಸೇೞೆನಗೆ ಪಂಕಜಪತ್ರ ವಿಶಾಲಲೋಚನೇ ||೧೪||

ವ|| ಎಂಬುದುಂ

ನಿಡುಸುಯ್ಗೆ ಮೊಗದ ಕಂಪಂ
ಕುಡಿವಳಿ ಪಾಱುವುವು ಮೊಗಮೊಳುಳ್ಳಕ್ಕರಮಾ
ಗಡೆ ಪಾಱಿದಂತಿರಿವು ಪೋಪೊಡೆ
ನುಡಿಯಲ್ಕಱಿಯದಂತೆ ಮೋನದೊಳಿರ್ದಳ್ ||೧೫||

ವ|| ಅಂತಾಕೆ ಮೂಗರ್ ಕಂಡ ಕನಸಿನಂತೇನುಮನೆನಲಱಿಯದೆ ಕಿಱಿದು ಬೇಗಮಿರ್ದಿದು ನಿನಗೆ ನುಡಿಯಲ್ತಕ್ಕ ಮಾತಲ್ಲೆಂದು ತಲೆವೀಸಿಯುಮುಪನಸಿಪಕ್ಕಿರ ಲುಱಿಬಿನೆಂದು ಬಾರದುದಂ ಬಂದ ಸಿಂದು ಮೆಯ್ಯುನಿಸಿ ದೇವ[8]ಕಿ[8]ಯಾನಂದ ವಸ್ತ್ರಮಂ

---

1 ಮಚ್ಚ (ಚಟ) 2 ಪ (ಜ) 3 ತೆ (ಚಟಡಣ) 4 ಳುತ್ತೆ ತನಗೈದಿದ (ಚಟ) 5 ದಂ (ಚಜಟಡಣ) 6 ಕೆಳಲ್ಚಿ ಕಳಲ್ಚಿ (ಟಡಣ) 7 ಳಿ (ಜ) 8 ಕಿ ದೇವಿ (ಣ)

ತೋಱಿ ತಱಸಟವಾಡಿದೊಡೆನಗೆ ನಗೆಯೆಂದಱಿಯದತಿಮುಕ್ತಕಮುನಿ ಮುನಿದಿಂ ತೆಂದ[1]ಘೋರ್[1]ಕ್ತಿಯೊಳೆ ನೋನಂಗೊಂಡೆಡೆಗೆಡೆಗೆ ಗುಡುಗುಡನೆ ಕವಿವ ಕಣ್ಬನಿಗಳಂ ಸೆಳ್ಳುಗುರಿಂ ಸಿಡಿದು ಸಿಡಿದು

ತನ್ನನುಜೆಗೆ ನಂದನನ
ನ್ನನ್ನತನಪ್ಪಂ ಗಡಾಗಿ ಸೀಂಟೆದವೀ ಮಾ
ತಿನ್ನವಿರೆನ್ನಯ ತಾಯುಮ
ನಿನ್ನುಮನ ನನೋಲೆಗಳ[2]ಸು[2]ವಂ ಗಡ ಕೇಳಾ ||೧೬||

ವ|| ಎನೆ ಕೇಳ್ದ ಕಂಸಂ ಮೊಟಗಂ ಕೇಳ್ದ ಹಂಸನಂತೆ ಕುತ್ತುವಡೆದಂತಾಗಿ

ಕದಡೆ ಕಲಂಕವಿರ್ಕುಮೆ ಮರುನ್ನದಿಯುಂ ಪೊಸದಿಕ್ಕೆ ಕಂದು ನಾ
ಱವೆ ಪೊಸಪೂವು ಮೇನಱಿಯೆ ಚಂದನದೊಳ್ ಕಿಡಿಪುಟ್ಟದೇ ಸುರರ್
[3]ನೊಪೆ[3]ಗಡಲಂ ಕರಂ ಕಪೆಯೆ ಪೇೞ್ ವಿಷ[4]ಮೇೞ್[4]ದೆ ಶಾಂತರಪ್ಪರಂ
ಮದ[5]ಮು[5]ದಿತಾತ್ಮರೇಂನೆ ವಿಕಾರಮನೆಯ್ದದದೇಕೆ ಸೈರಿಪರ್ ||೧೭||

ಮರುಳೆ ಕಡುಪೊಲ್ಲಕೆಯ್ಯ
ಸಿರಿಯಂಗಂ ಮರ್ಮವೇದಿಗಂ ಮೂರ್ಖಂಗಂ
ನರಪತಿಗಂ ಧನಪತಿಗಂ
ಗುರುಗಂ ಪೈವಕ್ಕಮಂಜವೇೞ್ಕುಮಮೋಘಂ ||೧೮||

ವ|| ಇದರ್ಕೊಪಜರೇಕೆ ಜ[6]ನ[6]ಮೆಲ್ಲಮ[7]ಱಿಗುವರ್ಗೆಱಿಗಡ[7]ವರುರದರನುರದಿರ್ಪುದಸೀ ಮೊಲೆಯುಣ್ಬ ಮಕ್ಕಳೊಳಗಾಗಿ ಬಲ್ಲರ್ "ಸಮಣೋ ಅಮೋಘ ವಯಣೋ" ಎಂಬುದು ನಗುತೆಂದೊಡಂ ಸವಣರ ಮಾತು ಸತ್ಯಮಾದೊಡಪೇನಾಯಿತ್ತಿದರ್ಕೊಂದುಪಾಯಮುಂ ನೆನೆದೆಂ ಕಾರಣಮಿಲ್ಲದೆ ಕಾರ್ಯಮೆಂತಾದಪುದಿದರ್ಕೆ ಕಾರಣಭೂತಮಪ್ಪ ದೇವಕಿಯನೆ ಕೊಲ್ವೆನೆಂದು ಮನದೊಳಿತ್ತಿಕೊಳ್ವುದ ಮೊಂದು ದಿವ್ಯನ್ವನಿಯಾಗ[8]ದಾಗದೆನೆ[8] ಕೇಳ್ದವಧರಿಸಿ ದಿವ್ಯಕ್ಕೆ ಪಲ್ದಿನುತ್ತು ಮಾಗಳೆ ವಸುದೇವಸ್ವಾಮಿಯ ಸಮೀಪಕ್ಕೆ ಪೋಗಿ "ವಿನೀತಿರ್ಧೂರ್ತ ಲಕ್ಷಣ"ಮೆಂಬಂತೆ ಭಯಸ್ಥನಾಗಿ ತುಱಿಲ್ಗೆಯ್ದು ಕಾಲ ಕೆಳಗೆ ಕುಳ್ಳಿರ್ದು ಕಯ್ಗಳಂ ಮುಗಿದು ಕಂಸನಿಂತೆಂದಂ

1 ನೆಂದಘೋರ (ಜ) 2 ಪು (ಜ) 3 ಸುಧೆ (ಚಟಡ) 4 ವೇಗ (ಜ) 5 ನು (ಜ) 6 ಗ (ಜಡ) 7 ಱವಗಱಿಗುವುದ (ಜ) ಱವರ್ಗೆಱಿಗುವುದ (ಡ) 8 ನದೊಳೊಗೆದುದನೆ (ಚಟಡ) ನದೊಳಗೊಗೆದುದನೆ (ಣ)

ತವರುಂ ಪೊಕ್ಕಿಲುವಾಗಿ ಮದ್ಗೃಹಮಿವಳ್ಗೀ ಸಂತಸಕ್ಕಿಲ್ಲದು
ಕ್ಕೆವ ಸೌ[1]ಧರ್ಮ[1]ಕೆಯಿಂ[2]ದಮೇಂ[2] ಭಗಿನಿಯುರ್ವೆತ್ತುತ್ಸವಕ್ಕಾದ ಬ
ದ್ದವಣಂ ಪೆರ್ಮನೆಗುದ್ಭವಂ ಪಡೆಗೆ ಸಾಸಿರ್ಮಕ್ಕಳಂ ಪೊತ್ತು ತೀ
ವುವುದುಂ [3]ಪೋ ಕಳಿಸಿಂ[3] ಮದೀಯಭವನಕ್ಕೀ ದೇವಕೀದೇವಿಯಂ ||೧೯||

ಎಂದು ಪಯೋಮುಖಪಿಷಕಂ
ಭಂ ದೈನ್ಯಂಬಟ್ಟು ಬೇಡಿಕೊಂಡೆಂ ದಯೆಗೆ
ಯ್ಯೆಂದೊಡೆ ಮನಮಲ್ಲದ ಮನ
ದಿಂದಾ ವಸುದೇವಸಿತ್ರನಾತಂ ಪೆತ್ತಂ ||೨೦||

ಸಿರಿವಂತರ್ ತಂಗೆವಿರಂ
ತರಿಸಿ ತವರ್ಮನೆಗೆ ಪಿಂಗಲುಂ ಪೆಱಲುಂ ಬಿ
ತ್ತರಿಪುದೆನೆ ಬಲ್ಲ[4]ರೆ[4]ರ್ದೆ ಕ
ತ್ತರಿ ನಾಲಗೆ ಬೆಲ್ಲಮೆಂದು ಬಲ್ಲವರೊಳರೇ ||೨೧||

ವಿನಯಮೆ ಸಾಧು[5]ಚಿಂತೆ[5] ಕರಮುರ್ಚಮೆ ತಾನಪಕೀರ್ತಿಹೇತು ದು
ರ್ಜನನತಿವಾಕ್ಪಟುತ್ವಮೆ ಲಸದ್ಗುಣ ದೂಷಣದಾಯಿ ರೂಪು ಯೌ
ವನಮೆ ಪರಾಂಗನಾಪಹರದಿಂ ಬೆಱಗಾದಪೆನಾತನಿಂದಮಾ
ತನ ಗುಣ[6]ದೊಂ[6]ದು ದುರ್ಜನಿಕೆ ಮಿಕ್ಕುದು ಲೋಕದ ಪಾಪವಲ್ಲವೇ ||೨೨||

ಖ[7]ಲನೇಂ[7] ಕಾಣ್ಗುಮೆ ಗುಣಮಂ
ಕಲಂಕಮಂ ಕಾಣದಂತೆ ಸುಜನನುಲೂಕಾ
ವಲಿ ಬಿಸಿಲಂ ಸೂರ್ಯಂ ಕ
ತ್ತಲೆಯಂ ಮುನ್ನಿಂಗಮಱಸಿ ಕಂಡೆಡೆಯುಂಟೇ ||೨೩||

ಜನ[8]ಪ[8]ರ ಕಿವಿಯೊಳ್ ಪಿಸುಣನೆ
ಜಿನುಗುಗುಮಮ ಕುಡುವ ಭೀತಿ[9]ಯಂ[9] ದಿಕ್ಕರಿ ಕ
ರ್ಣನಿಕಾಯ[10]ಸ್ಫೋಟನಪಟು[10]
ಘನಕಂಠೀರವ ರವಂಗಳುಂ ಕೊಟ್ಟಪುವೇ ||೨೪||

---

1 ಧಾಮಿ (ಚಟ) 2 ದೆಯುಂ (ಜ) 3 ಪೊಕ್ಕಳಿಪಿ (ಜ) ಪೊಕ್ಕಳಿಸಿಂ (ಡ) 4 ದೆ (ಚಟಡಣ) 5 ಭೀತಿ (ಜ) 6 ದೊಂ (ಜ) 7 ಳನುಂ (ಜ) 8 ಕ (ಜ) 9 ಯಿಂ (ಚಟಡಣ) 10 ಸ್ಫಟನ ಪಟುಂ (ಟಡ) ಸ್ಫಟನ ಪಟಂ (ಚಣ)

ದೇವಕಿಯಮಳಂ ಪೆತ್ತಳ್
ಜೀವಂಜಸೆ ಪೆಱಸೆ ಹರಿಯ ಬೆಸದಿಂದಂ ಮಾ
ಯಾವಿ ಪರಿತಂದು ನೈಗಮ
ದೇವಂ ತಂದಿಕ್ಕೆ ಮುಂದೆ ಮಾಯಾಶಿಶುವಂ ||೨೯||

ವ|| ರಾಹುಮುಖದಿನಮಳ್ವೞಿಯಂ ತಪ್ಪಿಸಿಕೊಂ[1]ಡುಯ್ವಂತಮಳರ[1] ಮಳಯಾ ಚಳಕ್ಕೆ ಕೊಂಡುಯ್ದನಿತ್ತ ಕಂಸನಾ ಕೂಸುಗಳ ಕಾಳ್ವಾಳೆಂಬ ದನಿಗೇಳ್ದಲಿಯುಲಿವು ಗೇಳ್ವ ಬೆಕ್ಕಿನಂತೆ ಬೊ[2]ಕ್ಕನೆ ಪಾಱ[3]ವಾಯ್ದು

ಪಸಿದುಗ್ರವ್ಯಾಘ್ರನೇಣೀ ಶಿಶುಗಳನೆ ಗಡಂ ಕೋಡು ಕೊಲ್ವಂತೆ ಪಲ್ಲಂ
ಮಸೆದತ್ಯುದ್ರೇಕದಿಂ ತನ್ನಯ ಸಿರಿವನೆಯೊಳ್ಪೊಕ್ಕ ಸೆರ್ಮಾರಿಯಂ ಪೂ
ಜಿಸಿ ಬಾಱಿಪ್ಪಂದಂದಮಂ ದಿಗ್ಬಲಿಗೆದಱಿದವೊಲ್ ಸೂಸೆ ಮಾಂಸಾಸ್ಥಿ ಮಾಯಾ
ಶಿಶುವಂ ಕೊಂಡಿಕ್ಕಿದಂ ಪಾಸಱೆಯೊಳಸಗನೋಲ್ ಪ್ರಯ್ದು [3]ಕಂಸಂ[3] ನೃಶಂಸಂ ||೩೦||

*ವ|| ಮತ್ತಮೊರ್ಮೆ

*ಅಸುರದೊಳಿಂದ್ರಜಾಲದ
ಕೂಸುಗಳಂ ಕಂಸನೊಗೆದನಱೆಯೊಳ್ ನೆತ್ತರ್
ಸೂಸೆ ದೆಸೆದೆಸೆಗೆ ಕೆಂಪಿನ
ಪಾಸಂ ಪಿಡಿದೊಗೆವ ಪಟ್ಟಕಾಱನ ತೆಱದಿಂ ||೩೧||

ವ|| ಮತ್ತಮೊರ್ಮೆ

ದೆಸೆದೇವತೆಯ ಕುಸುಂಬೆಯ
ಕುಸುಮಂಗಳಿನಿಂಡೆಯಾಡುವಂತಿರೆ ಕೆಂಗ
ಲ್ಮಸಗಿ ಪರಿತಂದು ಮಾಯದ
ಸಿಸುಗಳನೆಱೆದಱೆಯೊಳೊಗೆದನಱಗುಲಿ ಕಂಸಂ ||೩೨||

ಮನೆವಱೆಯೊಳ್ಮಾಡಿದ ಕಂ
ಸನ ಪೊಲ್ಲಮೆ ಮುಟ್ಟಿದತ್ತು ಮುಗಿಲಂ ಪೊಗೆ ಭೋಂ
ಕನೆ ಪೊಱಮಡುವವೊಲಡುಗೆಯ
ಮನೆ[4]ಯಂ[4] ಲೇಸಾಗಿ ಬೆಳಗಿನಂ ತೊಳಗಿರ್ಕುಂ ||೩೩||

1 ಡೊಯ್ವಂತಃ ಅಮಳಂ ಅ (ಜ) 2 ಕ್ಕಿಸೆಪಾರಿ (ಚಟ) ಕ್ಕನೆ (ಜ) ಕ್ಕಸೆ ಪೋಗಿ (ಠ) 3 ಕೊಂದಂ (ಚಟಡಣ) 4 ಯಿಂ (ಡಣ) * ಡ ಪ್ರತಿಯಲ್ಲಿಲ್ಲ.

ಪುರುಷರ್ ಮಾಡಿದ ಪುಣ್ಯಂ
ವರೆಯದು ನೀರೊಳಗೆ ಬಿಟ್ಟ ಘೃತಬಿಂದುವಿನಂ
ತಿರೆ [1]ತೋರ್ಕುಂ ನೀರ ಪೊಯ್ಯಲ್
ಪರೆಗುಂ[1] ಬಿಟ್ಟಂತೆ ತೈಲಬಿಂದುವನದಱಿಕೊಳ್ ||೩೪||

ವ|| ಅಂತು ಮೂಱುಗೆಯ್ದು ಋತುಗಳಂ ಪಡೆವ ಪೃಥ್ವಿಯಂತೆ ಋತುಮತಿಯಾಗಿ ದೇವಕಿ ಪೆತ್ತ ಮಕ್ಕಳಸತ್ತ ನೈಗಮದೇವನೆತ್ತಿಕೊಂಡುಯ್ದಂ ಇತ್ತ ನಿಷ್ಕರುಣನಾ ದೇಪಸಿಕ್ಕಿದ ಮಾಂಸದ ಮಕ್ಕಳನೆ ಮೊಕ್ಕಳಂ ಮುಳಿದು ಶಿಲೆಯೊಳೊಗೆದಾರಿ ವರಪಿ ಕಯ್ಯಂ ತೊಡೆದುಕೊಂಡು ಮುನಿಯ ಮಾತಂ ತೊಡೆದೆನೆಂದು ಕೊಲೆ ಪುಸಿ ಯಿನ್ನದತಿಮುಕ್ತಕನಾದೇಶಮೆ ಪುಸಿಯಾದುದೆಂದವು ತನಗೆ ತಪ್ಪದಪಮೃತ್ಯು ಗಳಿಂದಱಿಯದೆ[2]ಯುಂ[2] ಕಂಸನತ್ಯಧಿಕಾಂಸನಾಗಿ ನಿಶ್ಚಿಂತಮಿರ್ದಂ, ಇತ್ತ ಕೃತ ಕಾನ್ತಂದಕಂದಳಿತಪುಷ್ಕ ಶೋಕಾಕ್ರಾಂತ ಜೀವದ್ಯಶೋವ್ರೀಡಾ ವಿಷಾದ ಸಚಿವ ಸಂಚಿತ ಪ್ರಸೂತಸಮಯ ಸಮುದ್ಭೂತ ಪುತ್ರಾ[3] ವಿದ್ಯಾವರೇಣ್ಯೆಯುಮಶರಣ್ಯೆಯು ಮಂತರ್ಗತಗಾಢಗಾಢ ಶೋಕ[4]ವಾಪ[4]ಕಿಯಪ್ಪ ದೇವಕಿ ತದ್ವೃತ್ತಾಂತಮೆಲ್ಲಮಂ ಜಲಕ್ಕನಱಿದು

ಅಸಕಟಿದಟಿಲುಂ ಬಸಿಱಿಕೊಳ್
ಕುಸುಂಬಿವುರಿಯುರಿಯೆ ಸತ್ತಳತ್ತಳ್ ಬಸಿಱಿಂ
ಪೊಸೆದಳ್ ಜಗಿದಳ್ ನೀಡುಂ
ಬಿಸುಸುಯ್ದಳ್ [5]ನುಡಿದು ಕೆಡೆದು ಬಿದಿಯಂ ಬಯ್ದಳ್ ||೩೫||

ವ|| ಬಯ್ದಾರುಮಿಲ್ಲದ ಪೊಟ್ಟು ಪೊಯ್ದುಕೊಂಡ ಬಸಿಱ ಬಾಸುಟ್ಗಳ್ ತಗಡಂ ಪತ್ತಿಸಿದಂತಾಗೆ ಮಾಣದೊಳಗೊಳಗೆ ಮೂಗಟಿಕ್ಕಿಯಟ್ಟಿಟ್ಟು ಮಕ್ಕಳ ಮೊಗಂ ನೋಡದೆ[6]ಯುಂ[6] ಸತ್ತ ಕೂಸನಾದೊಡಮೆತ್ತಿಕೊಳ್ಳದೆಯುಂ ಬಳಗಂ ಬಳಸಿ ಸುತ್ತಿ ಕೊಳ್ಳದೆಯುಂ ಮೇಲೆ ಪೊರಳ್ದಟಿದೆಯುಂ ಕರೆಯದೆಯುಂ ಪೂಟಿಲ್ಕೊಂಡು ಪೋಗ ದೆಯುಂ [7]ಎಂತು ಬಾಟಿಕ್ವಿಂ[7] ಮಕ್ಕಳ್ವಡೆದುಮಟ್ಟಿವಡೆಯ[8]ದಿನ್ನುಂ[8] ಮನೆಯೊಳಿ ರ್ಪುದಱಿಂ ಬಂಜೆಯಪ್ಪುದುಂ ಬಿಂಜದೊಳಿರ್ಪುದುಮೊಳ್ಳಿತ್ತೆಂದಿರುಳ್ ನಿದ್ರೆಯುಂ ಪಗಲ್ ಪಸಿವುಮಿಲ್ಲದೆ ಮಮ್ಮಲಂ ಮಱುಗಿ ಮನ್ಯುಮಿಕ್ಕು ಗದ್ಗದಕಂಠೆಯಾಗಿ ದೊಂದು ದಿನಸಂ ಅತಿಮುಕ್ತಕ ಮುನಿಯಂ ನಿ[9]ಲಿ[9]ಸಿ ಕಣ್ಣನೀರೊಳ್ಕಾಲಂ ತೊಳೆದು

1 ಪರೆಗುಂ ವಿಸ್ತರದಿಂ (ಜ) 2 ಪೋಗಮೋಗಱಿಯದೆಯುಂ (ಜ) 3 ಕ (ಜ) 4 ಪಾಂ (ಚಜಟಡ) 5 ಮ (ಚಜಟಡ) 6 ಯಬಂ ಮೊಲೆಯಸೂಡದೆಯುಂ (ಜ) 7 ಎಮ್ಮ ಬಾಟಿಕ್ವಿ ಯುಂ (ಚಟಣ) ಎಂದು ಬಾಳ್ವಿಯುಂ (ಡ) 8 ದೆ (ಜ) 9 ರಿ (ಣ)

ನೀರಂ ಕೈಯೊಳಿಕ್ಕಿ ಮುನಿದಂತೆ ಕಾಲಮೇಲೆ ಬಿರ್ದು ಕಾವರೆ ಕಣೆಗೊ[1]ಳ್ವರ್[1] ತಾಯೆ ರಕ್ಕಸಿಯಾದಳ್ ಕರುಳೆ ಬಾವಾಗಿ ಕೊಱಿದು ತಿಂದಪುದುಣ್ಬ ಕೂಟಿಯ್ ಕೊಂದಪುದು ಕುಡಿವ ನೀರ್ನಂಜಪುದು ಮುಂಜೂರೊಳ್ಕಿರ್ಚಿರ್ದುದು ಕಣ್ಣ ನೀರ್ಕತ್ತರಿವಾಣಿಯಾದುದು ಬಸಿರ್ಬಱಿದಾಗೆ ಪೆತ್ತು ಪುತ್ರಮುಖಂಗಾಣದೆ ಪೊದೇನೊಂಭತ್ತು ತಿಂಗಳ್ ಬತ್ತಿ ಬಾಳಕನಾಗಿ ಪೊತ್ತ ಬೇನೆಯುಂ ಸತ್ತ ಬೇನೆಯುಮಂ ನೀಗಲಾಱೆಂ ನೀವೆನ್ನೀ ದುಃಖಮುಂ ಪಱಿವಡೆ ತಲೆಯಂ ಪಱಿಯಿಮೆಂದು ಪಱಿದ ತಲೆಯುಮಾಱಿದ ಬಾಯುಂ ಬೆರಸಟಲ್ ಮರುಳ್ಗೊಂಡು ಬಾಯಟಿದಟ್ವ ದೇವಕಿ ದೇವಿ[2]ಯನೇಟಿಕೀಟಿ[2]ವೇನುಮಿಲ್ಲ ಶಾಂತಂ ಪಾಪಂ ಪ್ರತಿಹತಮುಮಂಗಳಮದೆಂತೆನೆ ನೀಂ ಬೆಸಲೆಯಾಗಲೊಡನೆ ಮುಂದೆ ಮಾಯಾವಿಶುವನಿಕ್ಕಿ ಸಲ್ಲಟಿಸಿ ಪೆತ್ತ ಮೂಱು ಮಕ್ಕಳುಮನೆತ್ತಿಕೊಂಡು ಪೋಗಿ ನೈಗಮದೇವಂ [3]ದಾದಿ[3]ಯಾಗಮರ್ದನೂಡಿ ನಡಪೆ ಮಂದಮಾರುತಾಂದೋಳಿತ ಚಂದನಚಾಮರ ಪ್ರಸೂತ ಶಿಲಾತಳಾಮೋದಮುಗ್ನಪುಷ್ಪ

ಗಿರಿಕೂಟೋನ್ನತಪುಷ್ಪ ಸೌಧ[4]ತಳದೊಳ್ ವಿ[4]ಶ್ವಂಭರಾಖಂಡದಂ
ತಿರೆ ನಿನ್ನಾತ್ಮಜರಿನ್ನು ಪೊರ್ದನಗಟಂ ಚಾಣೂರ ದರ್ಪಾಪಹ
ಮುರಶೈಲಾಶನಿ ಕಂಸಕೇಳಿ ಮಧನಂ ನಾರಾಯಣಂ ಗಾಸಂಧಸಿಂ
ಧುರಸಿಂಹಂ ನಿನ[5]ಗಾದಪಂ ಮಗ[5]ನಿದಕ್ಕೇ[6]ಕೆ[6] ನಿಮ್ಮುಟ್ಸೆಗಂ ||೩೬||

ವ|| ಅತನುಂ ತ್ರಿಖಂಡ ಮಂಡಳಾಧಿಪತಿಯಾದಪನೆಂದು ದೇವಕಿಯ ದುಃಖ ದಹನದ ಮೇಲೆ ದಯಾರಸಮುಮಂ ವಚನವಾರಿಯುಮನತಿಮುಕ್ತ[7]ಕಂ[7] ಪೊಯ್ದು ಪೋದ[8]ನ[8]ತ್ತಮಿತ್ತ ಕೆಲವಾನುಂ [9]ವಾಸರಕ್ಕೆ[9]

ಒದವಿದ ಲತೆಗಂಕುರಗ
ರ್ಭದ ಚಿಹ್ನಂ ಮೂಡುವಂದದಿಂ ದೇವಕಿಗಂ
ರ್ಭದ ಗರ್ಭದ ಚಿಹ್ನಂ ಮೂ
ಡಿದುವಾ ಕಂಸಂಗೆ ಮಿಱು ಮೂಡುವ ತೆಱದಿಂ ||೩೭||

ಅಸುರರ ವೊಗ[10]ಮೊಗ[10]ಸಿಯಳ
ಮಿಸುಪ ಕುಚದ್ವಯದ ಮುಖಂ ಕಱಂಗಿದುವವಳೊ
ಳ್ವಸಿಱ ವಳಿರೇಖೆಗೆಟ್ಟುವು
ನೊಸಲಕ್ಕರ ರೇಖೆಯೊಡನೆ ಮಧುರಾಧಿಪನಾ ||೩೮||

---

1 ಯಿಡಪರ್ (ಜ) 2 ಗೆನಬ (ಚಡಣ) ಯನಲ (ಟ) 3 ದಾನಿ (ಚಟಡ) ತಾನೆ (ಣ) 4 ದೊಳ್ ಬಳಿದ ಪವಿF (ಜ) ದೊಳ್ ಪವಿFಶಿವಿ (ಡ) 5 ಗಾಂಪವಂಗ ನೀ (ಚಟ) 6 ಕ್ಕೆ (ಚಟಡಣ) 7 ರುಂ (ಜ) 8 ರ (ಜ) 9 ದಿವಸಕ್ಕೆ (ಜ) 10 ದವೊಳ (ಣ)

ದಿಕ್ಪಾಲಿಪ್ರೋರ್ಗ್ ಕೃಷ್ಣಂ ಮುಱಿ
ಒಕ್ಕೆ ನೆಲಕ್ಕಾರ್ದು ಬಿರ್ದು ಕಂಸಂ ಮಣ್ಣಂ
ಮುಕ್ಕಿದಪನೆಂದು ಪೇೞ್ವವ
ಳಕ್ಕುಮೆ ವಸುದೇವನರಸಿ ಮಣ್ಣಂ ಮೆಲ್ವಳ್[1] ||೩೯||

ತವಕದೆ ಕಂಸಂ ಕೈನೀ
ಡುವನಾಮೊಲೆ ನುಂಗಲೆಂದು ಗುರುಗರ್ಭಸ್ಥಿತಾ
ನವನೇಜಂ ಕಾವ ಕಾವಾ
ಹಿವೊಲಿರ್ದುದು ರೋಮರಾಜಿ ದಾಮಾತ್ಮಜೆಯಾ ||೪೦||

ಸಿಂಧುಪರೀತ ಭೂತಳಮನೆಯ್ದೆ ಕೊಳಲ್ಕರಿಚಕ್ರದಿಂ ಜರಾ
ಸಂಧನ ಕಂಠಮಂ ಕಡಿಯ ಕೇಶವನಿರ್ಪ್ಪನೆಂದು ತೋರ್ಪವೋಲ್
ಗಂಧಗಜೇಂದ್ರಯಾನೆ ಕಡುಮೋಹದ ತುಬ್ಬ ಕಿರಾತದಾನವ
ಕ್ಕಂಧರಮಂ ಕರಂ ತಿರಿಪಿ ಕಂಕಣದಿಂದಿಡುವಳ್ ವಿನೋದದೊಳ್ ||೪೧||

ವ|| ಆ ಗರ್ಭಶಾಂತಿಕಕ್ಕೆ ಶಾಂತ್ಯುದಕಮಂ ತಳೆವಂತೆ

ಅಲರ್ವಲರ್ಗೊಂಚಲಂತಲುಗೆ ಮಿಂಚು ಪಿಕಂ ನಲಿಪಂತೆ ಚಾತಕಂ
ಜಲಕಣಯಷ್ಟಿಯೊಳ್ ಕಳಿ[2]ಕೆಗರ್ಚೆ ಕರಂ ಸೊನೆಸೋರ್ವ ಭಂಗಿಯಿಂ
ಬಲವರೆ ಸೋನೆ ಗೊಂ[3]ದಣಿಸಿ ಕೆಂಪಳಿರೊಳ್ಗಿವಿಂಡು ಪಾಯ್ದುದಂ
ಸಲಿಸೆ ಸುರೇಂದ್ರಚಾಪಲತೆ ಬಂದುದು ಕಾರೆಳಮಾವಿನಂದದಿಂ ||೪೨||

ವ|| ಆ ಮೞೆಗಾಲದೊಳಭಿಷೇಕದೊಳ್ಭಿಮತವಂ ದಾನದೊಳ್ ಧನಮಂ ಪೂಜೆಯೊಳ್ ಪೊೞ್ತಂ ಕೞಿಯುತ್ತುಮಿರ್ದಾ ಪುಣ್ಯಸತಿಯ ಪುಣ್ಯದಂತೆ ಪು[4]ಣ್ಯ ಯತಿಗಳಂ ಕೇಳೆ ತಿಂಗಳ್ ತೀವೆ ಕಂಸಭಯದಿಂ ಗರ್ಭಂ ಕಲಂಕಿದಂತೆ ಬಸಿರ್ವಸಗೆ ತನ್ನ ತನಯಂ ಭದ್ರಪದನಕ್ಕುಮೆಂಬುದಂ ಪೇೞ್ವಂತೆ ಭಾದ್ರಪದದೊಳ್ ಮುಳಿಯಿಸಿ ದರ್ಗೆ ವಿಳಯಕಾಳನಕ್ಕುಮೆಂಬುದನಱಿಪುವಂತೆ ಕಾಳದೊಳ್ ದುಷ್ಟಚತುಷ್ಟಯ ಕೃಷ್ಣಮ ಚಂದ್ರಮನಕ್ಕುಮೆಂಬುದಂ ನಿವೇದಿಸುವಂತಷ್ಟಮಿಯೊಳರ್ಧ ಚಕ್ರವರ್ತಿ ಯಕ್ಕುಮೆಂಬುದಂ ಸೂಚಿಸುವಂತರ್ಧರಾತ್ರದೊಳ್

---

1 ಪ್ಪ ... ಗಳ (ಪಟ) 3 ಚಲಿಸಿದಣ್ಣಿಸಿ (ಚಟಡ) ಚಲಿಸಿ (ಖ) 4 ಣ್ಯವಂ (ಖ)

ಆಳಿಯಂ ಪದ್ಮಿನಿ ಪಾರ್ಥಿವೇಳೆ ವಿಷಮಂ ಕಸ್ತೂರಿಯಂ ಪುಲ್ಲೆ ಕ
ಜ್ಜಳಮಂ ದೀಪಿಕೆ ಕಾಳರಾತ್ರಿ ತಮಮಂ ನೀಲಾಶ್ಮ[1]ಮಂ[1] ರೋಹಣ
ಸ್ಥಳಿ ಭೂದೇವಿ ತಮಾಳಮಂ ಪಡೆದವೋಲ್ ನಾನಾಹಿತಾಂಕೂರಕಂ
ದಳನಂ ದೇವಕಿ ಲೀಲೆಯಿಂದೆ ಪಡೆದಳ್ ಕಂಸೋಷ್ಣನಂ ಕೃಷ್ಣನಂ ||೪೩||

ವ|| ಆ ಪ್ರಸ್ತಾವದೊಳ್ ಕಂಸ[2]ನಱುಗುಮೇಂ[2] ಬದ್ದವೆಂದು ಬದ್ದವಣಂ ಬಾಜಿಸುವ ದೇವದುಂದುಭಿಧ್ವನಿಗಳೊಳ್ ಘನಾಘನಧ್ವನಿಗ[3]ಳ್[3]ಡಂಗಲಿಸೆ ದೇವಕಾಂತೆಯರ್ ನಿವಳಿಸುವ ಮಂಗಳದೀಪ ಮಂಜರೀಮರೀಚಿಗಳೊಳ್ಮಿಂಚಿನ ಗೊಂಚಲ್ಗಳೊಡ ಗಲಿಸೆ ಸೂಸುವ ಮುತ್ತಿನ ಸೇಸೆಗಳೊಳಾಲಿಕಲ್ಗಳ್ಕರೆಗಲಸಿ ಕೊಳ್ವ ಮಱಿಯೊಳಾನಂದ ಬಾಷ್ಪವರ್ಷವಡಂಗಿ ಪೋಗೆ ಸಮಸ್ತ ತ್ರೈಲೋಕ್ಯಕ್ಕಮಧಿಕೋತ್ಸವಂ ಪುಟ್ಟಿ

ಸೊಡರ್ವೆಳಗಂ ಮುಸುಕಿದನಾ
ಗಡೆ ತನ್ನಯ ತನು ತಮಾಳರುಚಿಯಿಂದಂ ಮೇ
ಲ್ಗಡೆದೆತ್ತಾನು[4]ಮ[4]ವೇೞ್ಟಂ
ದೊಡೆ ಕಂಸಂ ಕಾಣ್ಗುಮೆಂಬ ತೆಱದಿಂ ಕೃಷ್ಣಂ ||೪೪||

ವ|| ಆತಂ ಕಾರಣಪುರುಷನಪ್ಪ ಕಾರಣದಿಂ ಸಹಜ ಘನಸಂಘಸನಾಗಿ ಸಾಮಾನ್ಯ ಶಿಶುವಿನಂತೆ ಕಲಲಚ್ಛಾಯನಾಗದೆ ಪರಿಣತಚ್ಛಾಯೆ ನಟ್ಟು ನಿಲೆ ನೀಲ ಶಲಾಕೆಗೆ ಜೀವಂಬೊಯ್ದಂತಿರ್ದ ಕೃಷ್ಣನ ಮೂರ್ತಿಯಂ ಕಣ್ದೀವಿ ಕಾಣಲ್ಪಡೆದು ಕುರುಡಂ ಕಣ್ಪಡೆದಂತಾಗಿ ನಿಧಾನವನೆತ್ತಿಕೊಳ್ವವೋಲಿರಳುಮೆಯ್ಯೊಳ್ ಬೇಗಮೆತ್ತಿಕೊಂಡು [5]ಕಯ್ಯಿಂ ಪಿ[5]ಡಿವಂತೆ ಪದುಳಮಾಗಿ ಪಿಡಿದು ವಸುದೇವಂ ವಾಸುದೇವ[6]ನಂ[6] ಪೊಱಮಡಿಸಿ ಕಾಳಿಂದಿಯೊಳೋಲಾಡಲ್ ಕಲಿಸುವಂತೆ ಕಾಳದ ಕಟ್ಟಲೆಯೊಳ್ ತಳಂಗಳೊಳ್ ತಳೆ[7]ದು[7] ತಳರ್ವಾಗಳ್ ಮುಕುಂದನ ಮೇಲೆ ನಾಗಂ ಸಹಜಸ್ನೇಹ ಸಂಭ್ರಮದಿನೆಟ್ಟಂದು ನೀಲವಸನಮಂ ಮುಸುಂಕಿಕೊಂಡೇಕಕುಂಡಲನೊಲೆಯ ಕೊಡೆವಿಡಿದು ತಾಳಧ್ವಜನಾಗಿ ತೋಱೆ ಪುರುಷೋತ್ತಮನ ಪುಣ್ಯಪ್ರೇರಣೆಯಿಂ ತನ್ನ ಮೇಲೆ ಕಾಲೂಱಲಂಜಿದಂತೆ ಜೀಮೂತವ್ರಾತವಾಸಾರಮನುಡುಗಿ ಕಟ್ಟೆ [8]ಕು[8]ಡುಮಿಂಚಿನ ಕೆಯ್ದೀವಿಗೆವಿಡಿದು ಮುಗಿಲ್ಗಳೆ ಮುಂದುಱಿನರಿಯೆ ಪರಿವ ಪೊನಲ್ಗಳೆ ಪಡಿಯಱರಾಗೆ ಮಾರ್ಗಂಬಿಡಿದು ನಡೆಯೆ ತಮ್ಮೊಡವೆಗೆ ತಾವೇ ಕಳ್ಳರಾಗಿ ಗಱಗಟ್ಟಿಸಿ ಪೋಗಿ ಪೆರ್ವಾಗಿಲಂ ತಾಗೆ ಒಂದು ಬಿಯ್ಯಗವಿಕ್ಕಿ

---

1 ಮಾ (ಜ) 2 ನ (ಜ) 3 ಳ (ಚಟಡ) 4 ಮೆ (ಜ) 5 ಕಯ್ಪಿ (ಜ) 6 ನ ಮನೆಯಿಂ (ಜ) 7 ದಂ (ಚಟಡಣ) 8 ಳ (ಚಟಡ)

ಚಿ[1]ಕ್ಕುಟುಂ[1] ನುಸುಳಲ್ಬಾರದಂತಾಗಿ ಬಿಗಿಯೆ ಕೆತ್ತಿದ ಕರ್ಬುನದ ಪಡಿಗಳಂ ಕಂಡಿ ರ್ವರುಮಿನ್ನೇವೆವೆಂದುಮ್ಮಳಿಸಿ ಮಮ್ಮಱಿಗೊಳುತ್ತುಮಿರ್ಪನ್ನೆಗಂ ಸ್ವರ್ಗೌಕಸರ ಸೈಪಿನಿಂ ಸಗ್ಗದ ಪಡಿಗಳ್ ತೆಱೆವ ತೆಱದಿನಾ ಶಕಟಘಿರಟ್ಟನುಂಗುಷ್ಠಂ ಮುಟ್ಟಿ ಲೊಡನೆ ಕೆತ್ತ ಪಡಿಗ[2]ಳ್ ತಮ[2]ಗೆ ತಾವೆ ತೆಱೆಯೆ ಬೆಱ[3]ಗಾದಂತೆ[3] ಬಾಗಿಲ್ಗಾ ಪಿನ ಜಾವದುಕ್ಕಡದ ಗರವಟಿಗೆಯ ತಾಣಾಂತರದವರೆಲ್ಲಮೆರಡು ಕಯ್ಯನೆತ್ತಿ ಪುಂಡರೀ ಕಾಕ್ಷಂಗೆ ಪೊಡೆವಟ್ಟು ಮಾಟದ ಮಾನಸರಂತೆ ಮಿಳಮಿಳನೆ ನೋಡುತ್ತಿರೆ ಮಾರಿಯ ಬಾ[4]ಯಂ[4] ಪೊಱಮಡುವಂತೆ ಮಧುರೆಯ ಬಾಗಿಲಂ ಪೊಱಮಟ್ಟು ಬಟ್ಟೆಗಾಣದೆ ದಿಗ್ಭ್ರಾಂತರಾಗಿ ನಿಲಲುಂ ಸರಸರಿಸಿ ಪೋಗಲುಮಱಿಯದೆ ಕುಱುಕುಱು ಮೆಟ್ಟುತ್ತು ಮಿರ್ಪಿನಂ

ಪೆಡೆವಣಿಯ ಫಣಿಗಳಂತಿರೆ
ಸೊಡರಂ ಪೊತ್ತಿರಡು ಕೋಡು ಕೆಲೆದೇಂ ಮುಂದಂ
ನಡೆದುದು ಧವಳವೃಷಂ ಮಾ
ರ್ಗFಡೆಯುಂತಿರೆ ನಾಲ್ಕುಕಾಲಫಣಿಭೀಷಣಮಂ (?) ||೪೫||

ವ|| ಆ ಜಲದುಜ್ಜ್ವ[5]ಲ ದೀ[5]ಪಕಳಿಕಾಂಕುರಿತ ವಿಷಾಣನಪ್ಪ ವೃಷಭನ ಬೆನ್ನನೆ ಪತ್ತಿ ಪೋಗೆವೋಗೆ

ಇದು ನೀಲಾಂಭೋದಜಾಳಂ ಕರೆದಪ್ರವೊ ಮಹೀಭಾಗದೊಳ್ ವಾಮನೋದ್ಯ ನ್ಮದಪೂರಂ ಧಾತ್ರಿಗೆಟ್ಟಿಂದುದೊ ಕವಿದು ವಿಹಾಯೋಮೃಗಂ ಭೂಮಿಗೇನಿ ಕ್ಕಿದುದೋ ಕಸ್ತೂರಿಕಾಸ್ರೋತಮನೆನಗೆ ತೊಡಂಕಾಯ್ತು ಪೇೞಿಂಬಿನಂ ಬಂ ದುದು ಭೋಂಕೆಂದಂದು ಕಾಳೋರಗ ತರಳ ತರಂಗಾಳಿ ಕಾಳಿಂದಿ ಮುಂದಂ ||೪೬||

ಓಲೆಗಱಿವೊಯ್ದು ಜಲಕ
ಲ್ಲೋಲಂಗಳಿನಬ್ಧಿಯೆಂಬ ಬಾಸಿಗದತ್ತಲ್
ಕಾಲಿಂದಿ ಮೊರೆವ ತುಂಬಿಯ
ಮಾಲೆಯವೋಲ್ ಮೊರೆದು ಪರಿಯುತಿರ್ದತ್ತಾಗಳ್ ||೪೭||

ವ|| ಅದಂ ಕಂಡಹೋ ವಿಘ್ನಪರಂಪರಾ ಎನುತ್ತುಮಿರ್ವರುಮುಬ್ಬೆಗಂಬಡು ತ್ತಿಯ್ದುವರೆ ಮುಂದಾ ಬಸವಂ ಪಸಲೆಯಂ ಪುಗುವಂತೆ ಜಗುನೆಯಂ ಪೊಕ್ಕು ಪಾಯ್ದು ಪೋಗೆ

---

1 ಕ್ಕಡುಂ (ಜ) ಕ್ಕಟುಂ (ಡ) 2 ಳಮೇ (ಜ) 3 ಗಾಂತ (ಟಣ) 4 ಯಿಂ (ಣ)
5 ಲಧಿ (ಜಜ)

ಬಾಲಕನ ಮಹಿಮೆಯಿಂದಂ
ಕಾಲಿಂದಿಯ ನೀರ ಸೋಲೆ ನಡೆವುದು ಮುದದಿಂ
ನೀಲದ ಪೊಸನೆಲೆಗಟ್ಟಿನ
ಮೇಲೊಯ್ಯನೆ ನಡೆವ ತೆಱದೆ ಹರಿಕುಲತಿಲಕಂ ||೪೮||

ತರಳತರಂಗಮುಂ [1]ತರಳ[1]ದಂತೆಪೊಲಿಬ್ಬೆಗೆಯಾಗೆ ಬೇಗದಿಂ
ಪರಿಯುಡುಗಿರ್ದ ಪೂರ್ಣಯಮುನಾನದಿಯುಂ ವಸನಾರ್ಥಿಗಳ
ಪರಿವ ಪಯೋದಮಾಲೆ ಸರಿನೋಂದೆ ಕಿಯಿಂದಹಿನಿಬ್ಬ ಪ್ರೀವೆ ...
ಚರರೆನೆ ಪಾಯ್ದು ಪೋದಪೊ ಹಲಾಯುಧನುಂ ವಸುದೇವಭೂಪನುಂ ||೪೯||

ವ|| ಎಂಬಿನಮಂತಕ್ಕೆ ಪಾಯ್ದುದುಮಾ ತೊಱೆಯ ತಡಿಯ ತುಱುಸಟ್ಟೆಯಂ ತೋಱೆ [2]ಗೋಪತಿ[2] ಗೋಕುಲಮುಂ ತೋಱುವುದುಚಿತಮೆನಿಸಿ ಬಸವನ ದೃಶ್ಯ ಮಪ್ಪುದುಮವರ ಪುಣ್ಯದೇವತಾಯತನದಂತೆ ಮುಂಪೊಂದು ದೇವತಾಯತನಮಿರ್ದು ದದನನಪೂರ್ಕಣ್ಕ ಪೊಱಗಂ ನೋಟಪ್ಪಾಗಳಲ್ಲಿಗೆ ಪುತ್ರೋತ್ಸವಂ ದೀವಿಗೆ ಪಿರಿದು ತೇರ್ದೈಸಿ ಬರ್ಪುದಂ ಕಂಡು ತಮ್ಮ ಪಜ್ಜೆವಿಡಿದು ಬೆನ್ನಟ್ಟಬಂದ ಕಂಸನೆಂದೇ ಬಗೆದು ಭಯಂ ಗೊಂಡು ಮೆಯ್ಗರೆದಿರ್ಪಿನಮಾತನಾ ತುಱುಸಟ್ಟಿಗೆಱೆಯನಪ್ಪ ನಂದನಾದನನುಂ ತಮ್ಮ ತೆಱದಿನಾಗಳೆ ಪುಟ್ಟಿದೊಂದು ಪೆಣ್ಗೂಸಂ ಪಿಡಿದು ಬಂದು ನೇವತೆಗಿಂತೆಂದಂ

ಕಿತಕಂ ದೇವತೆಗೇಕೆ [3]ಪೇೞ್ದು[3] ಪರಸಿ ಗಂಡಂ ನೀಡಿಕೊಂಡೆನ್ನ ನಂ
ಡತಿಗಿತ್ತೈ ಪುಟ್ಟಿತೊಂದು ಪೆಣ್ಣನಿವನೊಲ್ಲಳ್ಳಿಸಿ ಪೊಱಪ್ಪಾದ ವಾ
ಪತಿಯಕ್ಕುಂ ತುಱುಗಾಱರೇಂ ಪಡಸಿ ಕೊಂಡುಂದಪ್ಪರೇ ಒಪ್ಪಿಕೆಂ
ಳ್ಳಿತು ಪೆಣ್ಗೂಸಿದು ಕಾಯಲೋ [4]ಕಱತ[4] ಯಲೊರ್ ಬೆನ್ನಟ್ಟಿಬೋ ಬಟ್ಟಲೋ ||೫೦||

ವ|| ನಚ್ಚಿನೆಮ್ಮ ಕೋಣನನೀದಂತಾದುದು ನೀನುಂ ಪೆಣ್ಣುಪ್ಪುದಱಿಂ ಪೆಣ್ಣನೀವೆಯಲ್ಲದೆ ಗಂಡಂ ಕರ್ದು ತಪ್ಪಾ ನಿನ್ನ [6]ಪೆಣ್ಣಂ[6] ನೀನೆ ಕೊಳ್ಳೆನ್ನ ಪೆಂಡತಿ ನೋಂತುಂ ಪಸಿದುಂ ಪಾ[7]ಲಿಂ[7]ಬಟ್ಟುಂ ಕೊಟ್ಟ ಪರಕೆಯುಂ ಪುಗುಳಿ ಕುಡು ಕುಡವಂದು ನಿನ್ನನೀ ಮನೆಯೊಳಗೆ ದಿಟದ ದೇವತೆಯಂತೆ ಮಲಗಿ ಮುಲ್ಲಂತಿಗಿಱಿದು ಕುಳ್ಳಿರ ಲೀಯೆಂ ವಿಷ್ಣುಗುಪ್ತಂ ಲಿಂಗದ ನೆತ್ತಿಯೊಳಿಕ್ಕಿದಂತೆ ಪಿರಿಯ ಕರಿಯ ಕಲ್ಲನೆತ್ತಿ ತಂದು ನಿನ್ನ ನೆತ್ತಿಯೊಳಿಕ್ಕಿ ತುಱುಕಾರ್ತಿಯರನಾಗೊಂಡು ಸುಣ್ಣನೆ ನುಂಗಿದುದೆ ಲ್ಲಮಂ ಮೂಗಿಂ ಬಾಯಿಂ ಕಾಱಿಸುವೆನೆಂದು ವಿಗಾಸೆಯುಂ ಜಱಿದು ಕೂಸನೀಡಾಡಿ

1 ದೆ ತೆರ (ಚಜಟಡ) 2 ಹತಿ (ಜ) 3 ಕೇ (ಜಡ) 4 ಕೊಱೆ (ಜ) 5 ಱಂಗೀ (ಚಟಣ)
6 ಪೆಣ್ಣಂಕಳ್ಳಿ (ಚಟಣ) 7 ಲಂ (ಡ) ಬ್ರಾಂ (ಣ)

ನಂದಂ ಮಗುೞ್ದು ಪೋ[1]ಪುದು[1]ಮವರ್ಕಂಡಱಿಸುವ ಬಳ್ಳಿ ಕಾಲ್ತೊಡರ್ದುದೆಂದು ದೇವತೆಯ ಮುಂದೆ ಮಗನನಿರಿಸಿ ಮಗಳಂ ಕಳೆದುಕೊಂಡು ವಸುದೇವಂ ಕಾರ್ಯವಶಕ್ಕೆ ಕತ್ತೆಯ ಕಾಲ್ವಿಡಿದನೆಂಬಂತೆ ಕಾಲ್ವಿಡಿದೇಂ ಕನಲ್ದು ಪೋಗದೆ ಬಾ ಗಂಡುಗೂಸಂ ಕೊಟ್ಟಪೆನೆಂದು ಕರೆಯೆ ತನಗಂಜಿ ದೇವತೆ ಕರೆದಳೆಗೆತ್ತು ಮತ್ತೆ ಬಂದು ನಂದನಾನಂದದಿಂ ಕಂಡಳಿಗೆ ಮಾಣಿಕಮಂ ಕೊಳ್ವಂತೆ ಕಳೆದುಕೊಂಡು

ಕಣ್ಬಡೆದ ಕುರುಡನಂತಿರೆ
ಪಣ್ಬಡೆದೆಳವಕ್ಕಿಯಂತೆ ಪುಣ್ಯದ ಫಲದಿಂ
ಪೆಣ್ಬಡೆದ ಸೂಳೆಯಂತಿರೆ
ಜಾಣ್ಬಡೆದೊಕ್ಕಲಿಗನಂತೆ ನಲಿದಂ ನಂದಂ ॥೫೧॥

ವ॥ ಇಂತಾದೊಡೆ ನೀನೆ ದೇವತೆಯೆಂದು ಪೊಡೆವಟ್ಟು ಪೋಗಿ ಯಶೋದೆಗೆ ಕೊಟ್ಟನಿತ್ತಲಾ ಬಾಲಕಿಯಂ ದೇವಕಿಯ ಮುಂದೆ ತಂದಿಕ್ಕಿ ತಂದಿರ್ವರುಂ ತಾಮಱಿಯದಂತಿರೆ ಕಂಸಂ ತನ್ನ ತಂಗೆ ಬೆಸಲೆಯಾದುದನಱಿದಾ ಬೈಗಿರುಳೆ ಬಂದನುಜೆಯ ಮುಂದಣ ತನುಜೆಯಂ ಕಂಡು ಕೊಲಲೊಲ್ಲದೆ ಇವಳೊರ್ವಳಣ್ಮಳಾಣ್ಮನೆತ್ತಾನುಮಪ್ಪೊನಾಡೊಡಾತನೆನಗೆ ಮಾರಿಯಪ್ಪನೆಂದಾಕೆಯ ಮೂಗಿನೆಡಂಗೊತ್ತಿ ಪೋದನಾಕೆಯುಂ ತನ್ನಂ ತಾನಱಿದಿಂ ಬೞಿಕ್ಕೆ ಮೊಗಮಂ ನೋೞ್ಪರ ಮೊಗಕ್ಕೆ ನಾಣ್ಚಿ ವಿಂಧ್ಯಮಂ ಪೊಕ್ಕು ವಿಂಧ್ಯಮಾನಸೆಯೆಂಬ ದೇವತೆಯಾದಳಿತ್ತಲಂದಾನಂದನ ಮಂದಿರದೊಳ್ ಮಹೋತ್ಸವಂ ಮಾಡಿ

ಕುೞಿಯೊಳು ನಾಟಿಸಿ ನೀರಂ
ಗಱಗಱನೆಱೆವಂತೆ ಫಲಿತ ಲತೆಗಚ್ಯುತನಂ
ಕುೞಿವೊಕ್ಕು ಕೊಂಡ ಜಸದೆಗೆ
ನೆೞಲೊಳ್ಗೋಪಿಯರೆ ಮೀಯಲೊಲವಿಂದೆಱೆದರ್ ॥೫೨॥

ಅರಿಸಿನದಂಚೆಯನಿನಿಸೋ
ಸರಿಸಲುಮೀಯದೆ ಯಶೋದೆ[2]ಯೀತಂ[3] ಪೀತಾಂ
ಬರನೆಂದು ಧರೆಗೆ ಪೇೞ್ವಂ
ತಿರೆ ಪೊಕ್ಕುೞಿಕೊಳಿಕ್ಕಿದಳ್ ಪಯೋಜೋದರ[4]ನಂ[4] ॥೫೩

1 ಪಲ್ಲಿ (ಚಟಡಣ) 2 ನುಡಿದೊ (ಜ) 3 ಯಿತ್ತಂ (ಚಟಡ) ಯಿತ್ತಲ್ (ಣ) 4 ನಾ (ಜ)

ನಲಿದೊಡವುಟ್ಟಿದ ಮುಂಗೈ
ವಲಚುಂಬಿಳಗೂಸು ಕೂಡೆ ಕಣ್ದೆಱೆದವೊಲಾ
ಜಲಜಾಕ್ಷನ ಮುಂಗಯ್ಗೊ[1]ಳೆ[1]
ಜಲಜಲಿಸೆ ಯಶೋದೆ ಕಟ್ಟಿದಳ್ಕವಡಿಕೆಯಂ ॥೫೪॥

ನಳಿನಿಯ ಬಿರಿಮುಗುಳೊಳ್ಪಾ
ಯ್ದ ಳಿಕಳಭಂ ಬಿಂಡುನೆಗೆದು ಬಂಡುಣ್ಬವೊಲಂ
ದಲೆದಲವಲಿಸಿ ಯಶೋದೆಯ
ಮೊಲೆಯುಂಡಂ ನವತಮಾಲಕೃಷ್ಣಂ ಕೃಷ್ಣಂ ॥೫೫॥

ಮೃಗದಂತಿರೆ ಮಗಮಗಿಸುವ
ಸುಗಂಧ ವರತೈಲತೃಣದ ಮೇಪಿನ [2]ಸೊಡರ್ವ
ಕ್ಕು[2]ಗಳಿಂದೆ ಬೊಟ್ಟನಿಟ್ಟಳ್
ಮೊಗದೊಳ್ಕತ್ತುರಿಯ ತಿಲಕದಂತಿರೆ ಹರಿಯಾ ॥೫೬॥

ಪಿಡಿದಡಸಿ ಕಂಸನಿದಿರೊಡ
[3]ಲೊಡೆ[3]ವಿನವೊದೆದೊದೆದು ಗುದ್ದಿಗುದ್ದಿಯೆ ಕೊಲಲೆಂ
ದಡಹಡಿಸುವಂತಿರಿರ್ದುವು
ಪಿಡಿಕಯಿಸಿದ ಕಯ್ಯುಮೊದೆವ ಕಾಲುಂ ಹರಿಯಾ ॥೫೭॥

ಅರಗಿಳಿಯಂ ಮಾಣಿಕವಂ
ಜರದೊಳಗಿರಿಸುವವೊಲಿರಿಸಿ ಮಣಿದೊಟ್ಟಿಲೊಳಾ
ಮರಕತವರ್ಣನನುತ್ಸವ
ಭರದಿಂದೆ ಯಶೋದೆ ಪಾಡಿದಳ್ ಜೋಗುಳಮಂ ॥೫೮॥

ಜೋ ! ನಳಿನಾಕ್ಷ ಜೋ ! ಭುವನವಲ್ಲಭ ಜೋ ! ನಯನಾಭಿರಾಮ ಜೋ !
ಜಾನಕಿಯಾಣ್ಮ ಜೋ ! ಜನಮನೋಹರ ಜೋ ! ಜಗದೀಶ ಕೃಷ್ಣ ಜೋ !
ಜೋ ನರಸಿಂಹ ಬೇಡಟದಿರಾ ಮೊಲೆಯಂ ಪಿಡಿ ಹೋ[4]ಯಿ[4]ಯೆಂದು ಚಂ
ದ್ರಾನನೆ ತೊಟ್ಟಿಲಂ ತೊನೆದು ತೂಗುತುಮಾಡಿ ಯಶೋದೆ ಪಾಡಿದಳ್ ॥೫೯॥

1 ಳು (ಜಟಡ) 2 ಸೊವಡುಕರ್ೞ (ಜ) ಪೊಡರ್ವಕ್ಕು (ಡ) 3 ವೊಡೆ (ಜ) 4 ರಿ (ಜ) ರಿ (ಡ)

ಎಳವೆಯ ಮುದ್ದುಂ ರೂಪುಂ
ಬಳೆಯಿಸೆ ಮೋಹನಮನವ[1]ರ[1] ಮನದೊಳ್ ಮದನಂ
ಬಳೆದಂತೆ ಬಳೆದು ಕೃಷ್ಣಂ
ಬಳೆದಂ ಗೋಪಿಯರ ತೋಳೊಳಂ ತೊಟ್ಟಿಲೊಳಂ ॥೬೦॥

ಚಿಣ್ಣಂ ಪೊಸವೆಂಡಿರ ಕಡೆ
ಗಣ್ಣಲಸದೆ ತೊಡರ್ದ ತಮ್ಮ ಕಡೆಗಳ ಕರ್ಪಿಂ
ನುಣ್ಣನಿರೆ ಕರಿಯ ನೆಯ್ದಿಲ
ಬಣ್ಣಂಬೊಯ್ದಂತೆ ಕರಿಯ ರೂಪಿನೊಳೆಸೆದಂ ॥೬೧॥

ಯುವತಿಯರನೊಲಿಸಿದಂ ಶೈ
ಶವದೊಳ್ ಕೇಶವನ[2]ದೊಂ[2]ದೆ ಪೂಗಣೆಯಪ್ಪ
ನ್ನೆವರಂ ನಿಂದುದು ಬಗೆ ಬೆದ
ಱುವಿನಂ ನನೆಗಣೆಯೆ ತಾಗಿ ತಾನಟಲಿಸದೇ ॥೬೨॥

ವ॥ ಮತ್ತಿತ್ತ ಮಧುರಾಪುರದೊಳ್

ಪಗಲುಳ್ಕಂ ಬಿರ್ದುದುರ್ವೀರುಹಮೊಳಱಿದುವಟ್ಟಾಡಿವತ್ತದ್ರಿಜಾಲಂ
ಪೊಗೆದತ್ತಾ[3]ಶಾಮುಖಂ[3] ಮೇದಿನಿ ಮೊಱಗಿದುದಾಕಸ್ಮಿಕಂ ಭಸ್ಮಮಾಯ್ತಾ
ವಗ ವಹ್ನಿ[4]ಬ್ರಾ[4]ತಮೆರ್ದಾರ್ದುದು ಮರುಳಿರುಳೋರಂತಿರಿಕ್ಕಿತ್ತು ಬಾಷ್ಪಾಂ
ಬುಗಳಂ ಭೋರೆಂದು ದೇವಪ್ರತಿಮೆಗಳ ಪರಿಶ್ರಾಂತ ನೇತ್ರಪ್ರತಾನಂ ॥೬೩॥

ಉಡಿದತ್ತುಗ್ರಾಸಿ ಬೆಂದತ್ತರಮನೆಯುರಿದತ್ತಾತಪತ್ರಂ ತದಶ್ವಂ
ಮಡಿದ[5]ತ್ತೋವೋವೊಬಿಟ್ಟ[5]ತ್ತವನ ಕರಿಯುರುಳ್ದತ್ತು ಸಿಂಹಾಸನಂ ಗೋ
ಟ್ಟಿಡೆದತ್ತಾಳಾನಮುಕ್ಕಿತ್ತೆಸೆವ ಕಸವರಂ ಕಂಸನಿಟ್ಟುಂಬ ಥಟ್ಟೋ
ರ್ಗುಡಿಸಿತ್ತಟ್ಟಿತ್ತು ಮಂಚಂ ನಡನಡನಡುಗಿತ್ತಾತನೇಱಿರ್ದ ಮಾಡಂ ॥೬೪॥

ಅಟ್ಟುವು ಗೃಹದೇವತೆಗಳ್
ಮುಟ್ಟುವು ಕಿವಿಯೋಲೆ ಬಱಿದೆ ಬಾಷ್ಪಾಂಜಲಿಗಳ್
ಬೀಟ್ಟಿಂದುವು ಕಣ್ಗೆಯ್ದುದು
ವೇಟ್ಟಿಂದುವು ಪೊಲ್ಲಗನಸು ಜೀವಂಜಸೆಯಾ ॥೬೫॥

---

1 ಗ (ಚಟಡಣ) 2 ನೊಂ (ಚಜಟಡ) 3 ಶಾಶವುಂ (ಚಡಣ) ನಿಶಮುಂ (ಟ)
4 ಭ್ರಾಂ (ಚಟಡ) 5 ತ್ತಾದೊಲೋವಿರ್ದ (ಚಟ) ತ್ತಾದೊಲವಿರ್ದ (ಡಣ)

ಪೇೞಲ್ಬಾರದ ಮನದೊಳ್
ಪೊೞಲ್ಬಾರದ ಬರುಂಟೆ ಕೇಳ್ದವರಾರುಂ
ಬಾೞಲ್ಬಾರದ ಕನಸಂ
ಬೀೞಲ್ಬಳೆವಂತೆ ಬಳೆಯೆ ಕಂಸಂ ಕಂಡಂ ||೬೬||

ವ|| ಕಂಡೇವಯಿಸಿ ವರುಣನೆಂಬ ನೈಮಿತ್ತಿಕನಂ ಕರೆದು ಬೆಸಗೊಳ್ವುದುಮಾತಂ ಕಿವಿಗೆ ಮಾತಿಕ್ಕದ ಮುನ್ನಮೆ ಕಣ್ಬನಿಯನಿಕ್ಕಿ ದೇವಕಿಯ ಮಗನೊರ್ವಂ ಪೆಱವು[1]ಳಿ[1] ಬಳೆದಪನೆಂದು ಬಗೆಯೊಳ್ [2]ಪ[2]ಗೆಯನಿಕ್ಕಿ ಪೋಗೆ ಪೊ[3]ಯಿಲ್ವ[3]ಡೆದಂತಾ[4]ಗಿ[4] ತನ್ನೊಳಿಂತೆಂದಂ

ನರನೆಚ್ಚಂಬುಂ ಕವಿಕೇ
ಖರದೇವಂ ಪೇೞ್ದ ಕಬ್ಬಮುಂ ಬಿದಿ ನೊಸಲೊಳ್
ಬರೆದಕ್ಕರಮುಂ ಪರಿಕಿಸೆ
ಪರಮ ತಪೋಧನರ ವಾಕ್ಯಮುಂ ತಪ್ಪುವುದೇ ||೬೭||

ಆವೊಂಗಮಾದೊಡಂ ಮ
ತ್ತಾವುದುಮಂ ಕೞಿವುಪಾಯಮುಂಟೇ ಜಗದೊಳ್
ದೇವಂಗಂ ದೈತ್ಯಂಗಂ
ಸಾವಂ ತಪ್ಪಿಸುವುಪಾಯಮಾವುದುಮುಂಟೇ ||೬೮||

ವ|| ಆಶೌಚಮುಂ ಗೋವಧೆಯುಮುೞಿದುದೆಂಬಂತೆಮಗೆ ಪಾಪಮುಂ ಪೈಶೂನ್ಯಮುಮುೞಿದುದಿಲ್ಲೆಂದುಮ್ಮಳಿಸಿ ಪಟ್ಟಿರೆ ಪೂರ್ವಭವದೆಣ್ಬರ್ ದೇವತೆಯರ್ ಬೇಱಿವೇಱಿ ಬಂದು

ಆರಂ ಬಾರಿಪ್ಪೆನಾರಂ ನಿನಗೆಱಗಿಪೆನಾರಂ ಕೊಲಲ್ಕಾಯ್ವೆನಾರಂ
ಬೇರಿಂದಂ ಕೀೞ್ವೆನಾರಂ [5]ತಿ[5]ಱಿದು ನೊಣೆವೆನಾರಂ ತಿನಲ್ಪೋಪೆನಾಟಂ
ದಾರಂ ಪೊ[6]ಯ್ದಾರ್ವೆ[6]ನಾರಂ ಪಿಡಿದು ಪೊಸೆವೆನಾರಂ ಕರಂ ಪೋೞ್ವೆನಾರಂ
ನಾರಂ ಸೀೞ್ವಂತೆ ಸೀೞ್ವೆಂ ಬೆಸಸು ಬೆಸಸಲೇ ಕಂಸ ರಾಜಾವತಂಸಾ ||೬೯||

ವ|| ನೀನುಮ್ಮಳಿಸುವಲ್ಲಿವರಮೇನೆನೆ ಕಂಸಂ ದೇವಕಿಯ ಮಗನೊರ್ವನೆಲ್ಲಿ ದರ್ಪನೆಂಬುದಂ ಭೇದಿಸಿ ಕೊಲ್ಲಿಮೆಂಬುದುಮವರವನಿರ್ದ ಭಂಗಿಯಂ ವಿಭಂಗಬೋಧದಿನಱಿದು ರಾಕ್ಷಸಪ್ರಕೃತಿಯಪ್ಪ ದೇವತೆ ನಂದಗೋಪಿ ನಂದನನಂ ತೊಟ್ಟಿಲೊಳಿರಿಸಿ ನೀರಂ ತರಲ್ಪೋದ ಪೆಱಗೆ

1 ಳಿದು (ಚಜಟಡಣ) 2 ಬ (ಜಡ) 3 ಯ್ದೊ (ಜ) 4 ಗೆ (ಜ) 5 ವಿ (ಚಟಡ) ನಿ (ಜ)
6 ಯ್ದೊರ್ವೆ (ಚಟ) ಯ್ದುವೆ (ಡ) ಯ್ದೊಯ್ವ (ಣ)

ಪೆಱನೊಸಲಾಗೆ [1]ನೆ[1]ಕ್ಕ ನೊಸಲೊಳ್ಕಿಲೆಯಪ್ಪೊಡಲಾಗೆ ನಿಟ್ಟೊಡ
ಲ್ಕಿಱಿದಲೆಯಾಗೆಯೊಪ್ಪ[2]ದಲೆ ತೋಳ್ ತ[2]ನಗಾಗೆ ಪೊಲ್ಲದೋಳ್ ?
ತುಱುಗೆವೆಗಣ್ಗಳಾಗೆ ಬಿಡುಗಣ್ಗಳೆ ತೆಳ್ವಸಿಱಾಗೆ ಪಾಟ್ವಸಿಱ್
ಸಱಮೊಲೆಯಾಗೆ ಬಿರ್ದವೊಲೆ ಪೂತನಿ [3]ಗೋಪಿ[3]ವೊಲಾಗೆ ಬೇಗದಿಂ ||೭೦||

ವ|| ಬಂದು ನೀರನಿಱಪಿ ಎತ್ತುವರಿಲ್ಲದೆ ಮಾಯದ ಮಗ[4] (ಳಾಂ) [4] ತಳ್ವದೆ [5]ನೆ[5]ನ್ನ ಹೋರಿ ಹಸಿದನೆ ಬಾಬಾಯೆಂದು ಪಾಪಿಯ ಕೂಸನೆತ್ತಿಕೊಳ್ವಂತಟುವ ಕೂಸ ನೆತ್ತಿಕೊಂಡು

ಮುನಿಸಿಂ ನಂಜೂಡಿ ತಾ[6]ಯೂ[6]ಡಿದ ಮೊಲೆಗಳನಾ ನಂಜಿನಂತಪ್ಪ ನೀಳಾಂ
ಜನವರ್ಣಂ ಮುನ್ನೆ [7]ಕ[7]ನ್ನೆತ್ತರನೆ ಜಿಗುಱಿ [8]ಪೀರ್ವಂ[8]ದದಿಂ ಪೀರ್ದು ಹಾಹಾ
ಯೆನುತುಂ ಪುಯ್ಯಲ್ಚಿ ಬಾಯಂ ಬಿಡಿಸಿ ಬಿಡದೆ [9]ಭಲ್ಲೂ[9]ಕ ಬಾಲಂಬೊ[10]ಲ್ಲಾ[10] ಪೂ
ತಿನಿಯಂ ಕಾಳಾಹಿ ಪೀರ್ವಂತಸುವನಸದಳಂ ಪೀರ್ದು ಕೊಂದಂ ಮುಕುಂದಂ ||೭೧||

ವ|| ಮತ್ತಮೊರ್ವಳತಿಪ್ರಚಂಡೆ ಚಾಂಡಾಳ ಪ್ರಕೃತಿಯಪ್ಪ ದೇವತೆ ಕಾಕಾ ಕೃತಿಯನಪ್ಪುಕೆಯ್ದು

ಕಾಕಂ ಪಂಜರದೊಳಗಣ
ಕೋಕಿಳಮಂ ನೋಡಲೆಂದು ಬರ್ಪಂತಿರೆ ಬಂ
ದಾ ಕೃಷ್ಣನ ಮಣಿದೊಟ್ಟಿಲ
ನೇಕಾಕಿಯ ಕಣ್ಣನಿಱವೆನೆಂದೆಱಗಲೊಡಂ ||೭೨||

ಆಡರ್ದು ಕಮಂಡಲುಜಳಮಂ
ತುಡುಂಕೆ ಕಂಡೊಳಗಣೆಸಡಿ ಕಾಗೆಯ ಮೂಗಂ
ಪಿಡಿದುಱಿದಿಱಂಕೆ ಮುಱದವೊ
ಲೆಡಗೆಯ್ವಿಡಿ[11]ದೊತ್ತಿ[11] ಮುಱಯೆ ಮೂಗಂ ಬೇಗಂ ||೭೩||

ಪೊಡೆದಗ್ರಾಂಗುಳಿ ಪಕ್ಷದಿಂದುಡಿವಿನಂ ಪಕ್ಷದ್ವಯಂ ಕುತ್ತಿ ಕ
ಣ್ಣೊಡೆವನ್ನಂ ನಖಚಂಚುವಿಂದೆಱಗೆ ಮತ್ತಂ ಪೊಯ್ದು [12]ಪಂಗಾ[12]ಗೆವೊಂ
ದೊಡಲಂದೊಂದಡಗಾಗೆ [13]ಮೇ[13]ಗೆ ಕರೆಯುತ್ತಾ ಕಾಗೆ ಬೀೞ್ತರ್ಪಿನಂ
[14]ಗಿಡುಗಂ ಕೊಳ್ವವೊಲಟ್ಟಿ[14] ಕೊಂದುದು ಕರಂ ವಾಮೇತರಂ ಕೃಷ್ಣನಾ ||೭೪||

---

1 ನೊ (ಜ) 2 ವರೊಳ್ತ (ಜ) ತೋಳ್ತ (ಟಡ) 3 ಗೊಪ್ಪ (ಚಟಡಙ) 4 ಳೆಂ (ಚಟಡಙ) ನೇಂ (ಜ) 5 ಳೆ (ಙ) 6 ಯ್ದಾ (ಜ) ಯ್ಯೂ (ಚಟ) ಯುಡ್ದ (ಡ) 7 ಕೆ (ಙ) 8 ಬರ್ಪಂ (ಜ) 9 ಬಲ್ಲೂ (ಚಡಙ) ಬಲ್ಲೂ (ಟ) 10 ಗಲ್ (ಚಟಡಙ) 11 ದೆ (ಚಟಡಙ) 12 ಪೆಱಾ (ಚಟಡಙ) 13 ಕಾ (ಜ) 14 ನಿಡೆಗಣ್ಣಳ್ವವೊಳಲ್ಪಿ (ಟ)

ವ॥ ಅಂತಾ ಕಾಗೆಯಂತಕನ ಬೋನಕ್ಕೆರೆ[ಯಾಗೆ] ಮತ್ತೆ ಕೆಲವಾನುಂ ದಿವಸದೊಳ್

ಇಱಿದುದು ನೆಲನಂ ಹಸ್ತದ
ತೆಱದಿಂ ಮುಂದಲೆಯ ನಿಡಿಯ ಜಡೆ [1]ನುಣ್ಗ[1]ರ್ಪಿಂ
ಮಿಱುಗಿದುದು ಬಣ್ಣಮಾನೆಯ
ಮಱಿಯಂತೆವೊಲಂಬೆಗಲಸಿ ನಡೆದಂ ಕೃಷ್ಣಂ ॥೭೫॥

ಮೊಳೆದಂತೆವೊಲೆಳೆಯ ಮುಗಿ
[2]ಲ್ಗ[2]ಳಮುತ್ತುಗಳಂತೆ ಬಳೆವ ಕೃಷ್ಣಂಗೆ ತಳ
ತ್ತಳಿಸಿ [3]ಬೆ[3]ಳಗಿದುವು ಪ[4]ನೆಗಳ್
ಮೊಳೆಗಳ[4]ವೆನೆ ಮಂದಹಾಸ ಬಿಸವಲ್ಲರಿಯಾ ॥೭೬॥

ವ॥ ಆ ಪ್ರಾಯದೊಳ್ ಮತ್ತೊರ್ವ ದೇವತೆ ಲೋಯಿಸರದ ಮೇಲೆ ಬಂಡಿ ಪರಿದಂತು ಮಾಟ್ಪೆನೆಂದಂಗಣದೊಳ್ ತೆಮಟ್ಟಾ[5]ಡುವ ಮಗನ ಮೇಲೆ ಶಕಟಮಾಗಿ ಪರಿತರೆ ಪರಿವ ಬಂಡಿಯೊಳ್ಕಾ[6]ಲ್ಗೋ[6]ವ ಗೋವನೆನಿಸಿ

ಕುಣಿಕಿಲ್ಗಾಲಿ [7]ನೊಗಂ[7] ಪ
ಲ್ಗುಣಿಯ[8]ಚ್ಚಿನಿಸೊಂದ[8]ನೊಂದು ತೆಱತಯದ ತೆಱದಿಂ
ಗಣಕೆಯ ಬಂಡಿಯನೊದೆವಪೊ
ಲಣಿಯರವೊಡೆದಂ ಪ್ರತಾಪಿ ಕೃಷ್ಣಕುಮಾರಂ ॥೭೭॥

ವ॥ ಆ ರಥಮುಂ ಕಂಸನ ಮನೋರಥಮುಂ ಭಗ್ನಮಾಗೆ ಮತ್ತೊರ್ವ ದೇವತೆ ಕಿಶೋರವಾಗಿ ಕೇಶವಂಗೆ [9]ಕಿಳಿಱ[9] ಕಿವಿಯುಂ ಬಾಯುಮಂ ತೆಱೆದುಕೊಂಡು

ಬಿದಱಿವೆ ಬಂದು ಬಾಳಕನ ಕಯ್ಯನೆ ಕಾಯ್ದು ಕಡಂಗಿ ಕರ್ಚೆ ಕೊ
ರ್ವಿದ ಕುಱ ಕೊಯ್ಕೆ[10]ಯುಂ[10] ಮಸಗಿ ಮೇವವೊಲಾತನುಮೇಱ ನೂಂಕಿ ಕು
ತ್ತಿದೊಡದು ನೆತ್ತಿಯಿಂದೊಡೆದು ಮೂಡುವುದುಂ ತೊಳಗಿತ್ತು ಕೆಂದಳಂ
ಕುದುರೆಗೆ ಮತ್ತಮೊಂದು ಕಿವಿ ಮೂಡಿದುದೆಂಬಿನಮಂಬುಜಾಕ್ಷನಾ ॥೭೮॥

ವ॥ಅಂತಾ ಗೂಂಟನ ಬಾಯೊಳ್ಗೂಂಟಮಂ ಬೆಟ್ಟಿದಂತಿರ್ದ ಕೆಯ್ಯನುರ್ಚಿಕೊಂಡು ಕೊಂಡದ ಕಿಚ್ಚಿನಂತಿರ್ದ ಕೋಪದೊಳಾ ದುಷ್ಟಾಶ್ವಮನಿಕ್ಕಿ [11]ಕೊಂದು ಮಾದವನ[11]ಶ್ವ

1 ಸುಂಗಿ (ಚಟಡ) ಸುಂಗ (ಣ) 2 ಲೆ (ಟಣ) 3 ಶೊ (ಜ) 4 ವಿಗಳ ಮೊಳೆಗಳ (ಚಟಡಣ) 5 ಳ್‌ತಮುಳ್ದು (ಚಟ) ಳ ತೆಮುಳ್ದು (ಜ) ಳ್ ತಳ್ವು (ಡ) 6 ಲೋ (ಜ) 7 ಮೊಗಂ (ಚಟ) ನೊಗ (ಡ) 8 ಚ್ಚಿಸೊಂಡ (ಚಟ) ಚ್ಚಿಸೊಂದ (ಡ) 9 ಕೇಗಿರಿ (ಚಟಡಣ) 10 ಯೋಂ (ಚಜಟಡಣ) 11 ನ (ಚಟಡ) ಯಾ (ಣ)

ಮೋಧವಂ ಮಾಡಿ ತುಱುಪಟ್ಟಿಯ ಪಾಲುಂ ಮೊಸಱುಂ ಬೆಣ್ಣೆಯುಮಂ ಸೂಱೆ
ಗೊಂಡು ಸಹಪಾಂಸುಕ್ರೀಡಿತರಪ್ಪ ಗೋಪಕುಮಾರರ್ಗೆ ದಕ್ಷಿಣೆಗುಡುವಂತೆ ಕೊಟ್ಟು
ಪೊರೆಯುತ್ತುಮಿರೆ

ಆಡುವ ಮಕ್ಕಳ[1]ನೊಳ[1]ಕೊಂ
ಡೂಡಿಯುವೊಳಗಿರ್ದ ಬೆಣ್ಣೆಯಂ ಮತ್ತಮದಂ
ಬೇಡಿದಪಂ ಕಾಡಿದಪಂ
ಬೇಡೆಂದು ಯಶೋದೆ ನಿನ್ನ ಮಗನಂ ಕರೆಯಾ ||೭೯||

ಸಲೆ ಕಾಯ್ದ ಪಾಲ್ ಬರ್ದುಂಕದು
ನೆಲಹಿನ ಪಾಲುಂ ಬರ್ದುಂಕದೆಲೆ ಕೞಿವೀ ಕಂ
ದಲ ಪಾಲುಂ ಮುಂ ಬರ್ದುಕದು
ಮೊಲೆಯೂ[2]ಡ[2] ಯಶೋದೆ ಕರೆದು ನಿನ್ನಯ ಮಗನಂ ||೮೦||

ಕೞಿಯಲಣಮಣ್ಮದಿರ್ದೊಡ
ಮಿಱುಂಕಿ ತೊಡೆಯಿಂದೆ ಕಾಲನಾಕಳನಾ[3]ತಂ[3]
ಕೞಿವವೊಲೆಲ್ಲರ ಬಾಯೊಳ್
ಕೞಿದಪನೆಲೆ ಕರೆ ಯಶೋದೆ ನಿನ್ನಾತ್ಮಜನಂ ||೮೧||

ವ|| ಆರ್ಗೆ ಪುಟ್ಟಿಯಾರ್ಗೆ ಮುದ್ದಾದನೆಂದು ಗೋಪಿಯರಿಕ್ಕುವರಕ್ಕ ರಕ್ಕಸ
[4]ಗಾ[4]ಣಕ್ಕಿರಲಾಱವೆ ಯಶೋದೆ ಕರೆದು ಕಡೆವ ಕಂಭದೊಳ್ ಪಿಡಿದು ಕಟ್ಟಿದೊಡಾ
ಕೆಚ್ಚಿನ ಕಂಭಮುನಂ[5]ಜನ[5]ಗಜವಾಳಣೆಯುಂ ಮುಱಿವಂತೆ ಮುಱಿದು ಪೊಱಮಟ್ಟು
ಪೋಪ ಕೃಷ್ಣನಂ ಕಂಡು ಕಡುನುಡಿದು ಜಡಿದು

ದಾವಿನೊಳಡಸಿ ಯಶೋದಾ
ದೇವಿ [6]ಕರಂ ಕಟ್ಟಿ[6]ಮುದರದೊರಲುಡೆಗಿಱಿತಂ
ದೇವೇೞ್ವನೊ ದಾಮೋದರ
ದೇವಂಗುಡೆವಣಿವೊಲಾಯ್ತು[7]ಬಿಣ್ಪನಿತಾಯ್ತೇ[7] ||೮೨||

ವ|| ಆನೆಯನೆತ್ತುವಂಗಾಡು ಚಿಕ್ಕಾಡೆಂಬಂತೆ ಗೋವರ್ಧನಾಚಲಮನೆತ್ತಿ
ದರ್ಗಂಗುಲೂಱಲನೊಂಬುದಾವ ಲೆಕ್ಕಮೆಂದಱಿವರೆಲ್ಲರುಮೊಂದೆ ಕೊರಲಿಂ ಪೊಗೞೆ
ಪೇರೊರಳನೆೞೆದು ಪರಿದಾಡಿದಂ ಮತ್ತಮೊರ್ಮೆ ಮತ್ತಿಯ ಮರಂಗಳಾಗಿ ಮರುಳ್ದೀ

1 ನೆಳ 7 ಬಿಣ್ಪಂತಾಯ್ತೇ (ಚಟಡಣ) ಬಿಣ್ಕತ್ತಾಯ್ತೇ (ಜ) (ಚಟಡಣ) 2 ಡು (ಜ)
3 ಡಂ (ಜ) 4 ಕಾರ (ಚಟಡಣ) 5 ಗಜ (ಚಟಡಣ) 6 ಯಃ ಕಟ್ಟಿರ್ದು (ಚಟಡಣ)

ವತೆಗಳಾಡುತುಮಿರ್ದ ಕೃಷ್ಣನಂ ಕರಿಯ ಕುರುಳಿಂ[1]ದು ಬಗೆದು[1] ನೀಲಮಂ ಕತ್ತುರಿಯಿಱುಂಕುವಂತಿಱುಂಕಲೊಡನೆ

ಅಮಿತಬಳಂ ಕಿೞ್ತಿಕ್ಕಿದ
ನ[2]ಮುಂಕಿ ಮಾಂ[2]ಕರಿಸಿ ಕಂಭಯುಗಮಂ ಪುರುಷೋ
ತ್ತಮನಾ ಕಂಸನ ಭುಜಯುಗ
ಳಮನವಯವದಿಂದೆ ಕೀೞ್ವುದಂ ಗುಣಿಯಿಪವೋಲ್ ॥ ೮೩॥

ವ॥ ಮತ್ತಮಾತನದಟಂ ಪೇೞ್ವೊಡೆ

ಅಡೆವಂ ಗೋಣ್ಮುಱಿಗೊಂಡು ಬೋಟದಲೆಯಂ ಮುಂಗೆಯ್ಗಳಿಂ ಮೂರಿಗೊಂ
ಡಿಡುವಂ ಕೂಂಕಿ ಕೊಡಂಕೆಯಂ ಮುಱಿವನು[3]ಗ್ಗು[3]ತ್ತಳ್ಳೆಯಂ ಗಲ್ಲಮಂ
ಮಿಡಿವಂ ಮಿಂಡರ ಮಿಾಸೆಯಂ ಸೆಳೆದು ಮೂಗಿಟ್ಟೇಱುವಂ ಮಕ್ಕಳ
ಟಿಕ್ಕೊಡೆ ಬಾಯ್ವಾಯನೆ ಪೊಯ್ವನೇಂ ಸಿತಗನೋ ಕಾಳಾಹಿಕೋಳಾಹಳಂ ॥೮೪॥

ಇಡುವಂ ಗುರ್ದುವನುರ್ದುವಂ ಕೆಡಪುವಂ [4]ಮೇಲಿ[4]ಕ್ಕುವಂ ಕುಕ್ಕುವಂ
[5]ಬ[5]ಡಿವಂ ಬಯ್ದು ಚಿವುಂಟುವಂ ಕೆನಿಸುವಂ ಪಾಯ್ದೊತ್ತುವಂ ಕುತ್ತುವಂ
ಜಡಿವಂ ಜ[6]ತ್ತ ಕು[6]ಱಾಡುವಂ ಬಳಸುವಂ ಬೆನ್ನಟ್ಟುವಂ ಮುಟ್ಟುವಂ
ಪಿಡಿವಂ ಮಕ್ಕಳನೇಂ ಕರಂ ವಿಕರಿಯೋ ಕೂಸಾಟದೊಳ್ ಕೇಶವಂ ॥೮೫॥

ವ॥ ಅಂತಾ ತುಱುಪಟ್ಟಿಯ ಕಿಱುಮಕ್ಕ[7]ಳಂ[7] ಮಿಂಡಮಕ್ಕಳುಮನೊಂದೆ [8]ಕೋ[8]ಲೊಳ್ ತಂದು ಪುಯ್ಯಲಿಡಿಸುವ ಕೃಷ್ಣನಂ ತುಱುಕಾರ್ತಿಯರೆಲ್ಲರಳುತ್ತುಂ ಕರೆಯುತ್ತುಂ ಬಂದು ತಂತಮ್ಮ ಮಕ್ಕಳ ತಱಿದ ಮೆಯ್ಯುಮಂ ಮುಱಿದ ಕೆಯ್ಯುಮಂ ಪಱಿದ ಕಿವಿಯುಮಂ ಒಡೆದ ಮೂಗುಮಂ [9]ಅಡೆ[9]ದ ನೆತ್ತಿ[10]ಯಂ ಬುಗುಟೆ[10] ಮಂಡೆಯುಮಂ ಯಶೋದೆಗೆ ತೋಱಿ ದೂಱಿ ಗೋಪಿಯಿಂತೆಂದಳ್

ಏಗೆಯ್ವಂ ಕೊಂದೊಡಮೆನ
ಗಾಗಂ ಬಸಮಲ್ಲನೆನಗೆ ಕಿಚ್ಚಿಲ್ಲದೆ ತಾ
ನೇಗಂಡುರಿದಪನಱಿಯೆಂ
ಪೋಗಿಂ ನೀಂ ಮೆ[11]ಚ್ಚೆ ಮೆಚ್ಚುಕಯ್ಯಿಂ ಪೊಯ್ಯಿಂ[11] ॥೮೬॥

1 ದು (ಚಟಡಣ) 2 ಮುಕಿಂ ಮಾ (ಚಟಡ) ಮುಕಿಂ ಮಾಂ (ಣ) 3 ಳ್ಗ (ಚಡಣ) ಣ್ಮ (ಟ) 4 ಮಲ್ಲಿ (ಜ) 5 ಜ (ಚಟಡ) 6 ತ್ತ ಕ (ಜ) 7 ಳುಂ ಬಲ್ಮಕ್ಕಳುಂ (ಜ) 8 ಕೊರ (ಚಟ) ಕಾ (ಡ) 9 ವಡ (ಚಟ) ನೆಡೆ (ಜ) ಸಡ (ಡ) 10 ಯು ಬುಗುಟು (ಚಟಣ) ಯಂಬುಗೆಯು (ಜ) 11 ಚ್ಚ ಮೆಚ್ಚ ಕಯ್ಯಂ ಮುಗಿದಳ್ (ಚಟಡಣ)

ವ॥ ಎನೆ ಗೋಪಿಯರ್ದೂಱಲೆವೇಟ್ಟುಮೆಂದು ದೂಱದೆವಲ್ಲದೆ [1]ತರುವಲಿಗೆ[1] ನೆಱತಿಯ[2]ಲಾ[2]ಱದೆ ಬಂದೆವಲ್ಲೆವು ನೋಡಿನ್ನು ನಿನ್ನ ಮಗನ ಕೇಡನೆಂದು ಪೋಗಿ ಮಕ್ಕಳೋಪಾದಿಯ ಮಗುವೆಂದೇ ಬಗೆದು ಸ[3]ಳ[3]ಯಂ ಕೊಂಡು ಕಿಱುಮುಗಿಲ ಬೆನ್ನಂ ಬಿಟ್ಟುವ ಕುಡುಮಿಂಚುಗಳಂತೆ ಗೋಪಿಯರೆಲ್ಲಮೊಲ್ಲನುಲಿದು ಮಲೆದು ಬೆನ್ನಟ್ಟಿ ಕೃಷ್ಣನುಂ ಕಿಱುನಗೆ ನಗುತ್ತುಂ ಕಿಱುದೆಡೆಯನೋಡಿಯೋಡಲಾಱದಂತೆ ಮಗುಟ್ದು

ಬಡಿಯಿಂ ಮಕ್ಕ[4]ಳೊಳ[4]ನ್ನೊಡ
ನುಡಿ ನೊಡವೆಂದರ್[5]ಜಿದಂತೆ[5] ಕಂಜಾಕ್ಷಂ ಕಾ
ಲ್ವಿಡಿದೆತ್ತಿ ಕೆಡಪಿ ಕಾಲಂ
ಪಿಡಿದೆಱದೆಱದಱಿಸಿ ಬಿಟ್ಟನಾ ಗೋಪಿಯರಂ ॥೮೭॥

ವ॥ ಮತ್ತಮೊರ್ಮೆ ದೇವತಾವತಾರಮಪ್ಪ

ತಾಳತರು ಪಣ್ಗಳಂ ಬೇ
ತಾಳಂ ಕಲ್ಗೊಂಡು ಕಱತವಪ್ಪೊಲ್ಕಱದುದು ಗೋ
ಪಾಳರ ತಲೆಯೊಡೆವಿನಮಾ
ತಾಳಂ ಬಳೆಗಳೆದನೊಂದೆ ಪೊಯ್ಲಿಂ ಕೃಷ್ಣಂ ॥೮೮॥

ವ॥ ಇವಂ ಮನೆಯೊಳಿರ್ದೊಡೆಲ್ಲಿಲ್ಲದ ದೂ[6]ಱಂ[6] ದುರ್ಯಶಮುಮಂ ತಂದಪ ನೆಂದು ನಂದಗೋಪಂ ಗೋವಳರಂ ಪಸದನಂಗೊಳಿಸಿ ಗೋವಿಂದನಂ ಗೋಕುಳಮಂ ಕಾಯವೇಟ್ದು ಕಾಡ[7]ನೋಡಿ ಕಾಡೆಱ[7]ಯಂಗೆಱಗಿ ಗೋಪಾಳ ವೃಂದದೊಡನೆ ವೃಂ[8]ದಾರಕ[8]ವನಕ್ಕೆ ಕಳಿಪೆ

ಉರಗಾನೀಕಮನೆತ್ತಿ ತರ್ಪನಿದು ಬಲ್ನೇಣೆಂದು ತನ್ನಂದಸುಂ
ದರಿಯೋವೋವೆನುತೋಡೆ ಕಾಡ ಪುಲಿಯಂ ಬೆಕ್ಕೆಂದು ತರ್ಪಂ ಮಹಾ
ಕರಿಯಂ ಕೊರ್ವಿದ ದಂಷ್ಟ್ರಿಯೆಂದು ಪಿಡಿತರ್ಪಂ ನೋಡ ನಾಯೆಂದು ಕೇ
ಸರಿಯಂ ಪಾಸದೊಳಿಕ್ಕಿ ತರ್ಪನಿದು ಬಾಲಕ್ರೀಡೆ ಗೋಪಾಳನಾ ॥೮೯॥

ವ॥ ಮತ್ತಮೊಂದು ದಿವಸಂ

---

1 ತುರುವತಿಗೆ (ಚಟಡಣ) 2 ಪೋ (ಚಟಡಣ) 3 ಳಕೆ (ಚಜಟಡ) 4 ಳನಿ (ಚಣ); ಳಳಿ (ಟ) ಳೀಳಿ (ಡ) 5 ದಂತೆಯಾಗ (ಚಟಡಣ) 6 ಱುಂ (ಚಜಟಡ) 7 ನೂಡಿ ಕಾಡೊಡೆ (ಚಟಡಣ) 8 ದಾ (ಚಟಡಣ)

ಬಸವಕ್ಕೆಕ್ಕೆಡ ಬಾಲಮೊತ್ತದ ರವಂ ಬಳ್ಕಿರ್ದ ಬೆನ್ ಬಿಟ್ಟ ರ
ಕ್ಕಸಗಣಮ್ಬಾಯ್ದೆಱೆದಂತೆ ತೋರ್ಪ ಕಿವಿಗಳ್ಗೋವೃಂದಮಂ ಕೂಡೆ ಬೆ
ರ್ಚಿಸೆ [1]ಕುದ್ದಾ[1]ಳ ವಿಶಾಳ ದೀರ್ಘದಶನಂ ವ್ಯಾದಾನವಕ್ತ್ರಂ ಮಳೀ
ಮಸವರ್ಣಂ ಪರಿತಂದುದೊಂದು ನವದೂರ್ವಾಕರ್ದಭಂ ಗರ್ದಭಂ ||೯೦||

ಪೇೞಿಕ್ಕಿದಂತೆ ಬೆನ್ನೊ
ಳ್ತಾಱೆಯ ಪಣ್[2] (?) ಕಟ್ತಿ ಕರ್ಚಿ ಬಿ[3]ಟ್ಟು[3]ದು ಪೆಱಗ
ಣ್ಗೇಱೆ ಪಿತೃಪತಿಗೆ ಪೆಣನಂ
ಪೇೞುವ ಪೆರ್ಗತ್ತೆಯಂತೆ ಖರಸಂಕುಳಮಂ ||೯೧||

ವ|| ಅಂತು [4]ಪೆಂಟೆಗಳಂ[4] ದಾಂಟೆ ಕೆಡಪುತ್ತುಂ ಕಡವಂಗಳಂ ಕರ್ಚಿ ಕೆಡಪುತ್ತುಂ ಬೆಗಡುಗೊಂಡೋಡುವ ಗುಂಡನುರುಳೆವಾಯ್ದು ಕೆಡಪುತ್ತುಂ ತಾನೆ ತನ್ನ ಬೀರಕ್ಕೆಟ್ಟ [5]ಱೆ[5]ದ ಕಟ್ತಿಯಂತೆ ಬೆಬ್ಬಸಬೆಸೆದು [6]ಬ್ರಹ್ಮ[6]ನಂ ಕೂರಿಸಿದ ಕತ್ತೆಯಂತಾರುಮಂ ಕೈಕೊಳ್ಳದಿದಱ ಬಾಯ್ಗೆ ಬ್ರಹ್ಮಾಂಡಮೆಯ್ದದೆಂಬಂತೆ ಬಾಯಂ ತೆಱೆದು ಕೇಳ್ದರಿರ್ದ ತೆಱೆವಿನಮೊಳಱೆ[7]ಪೆಂಟೆ[7]ಯ ಪೊಟ್ಟೆಯಂ ಕರ್ಚಿ ಸೆಳೆಯೆ ಬಾಯೊಳೆಟಿಲ್ವ ಕರುಳಿಂ ಕ[8]ಪ್ಪೆಯ[8] ನೇಣಂ ಕರ್ಚಿ ಪರಿವ ಕುದುರೆಯಂತೆ ಬೀದಿವರಿದು ಮಾಮುಸಕಂ ಮಸಗಿ ತುಱು ಪಳ್ಳಿಯೆಲ್ಲಮುಮನೊಕ್ಕಲಿಕ್ಕಿ ಕೊಲ್ವ ಕಟ್ತಿಯ ಕೋಳಾಹಳ[9]ಕ್ಕಂತೆ[9] ಕುಣಿ ವಂಗೆಱೆಯಪ್ಪನಾದಂತೆ ಗೋವಳಗಾವಳಿಗೊಂಡು ಗೋವಳಗೋಲನೆತ್ತಿಕೊಂಡೊ ದಱೆ ಧೀರ[10]ನದಿರ[10]ದೆ ಬರ್ಪುದಬ್ಬೆಯ ಬೇಟ್ಪುದವರೆ[11]ವಿಟ್ಟಂ[11]ಬಂತೆನ್ನ ಬೇಟ್ಪಾ ತನುಮಿಾತನೆಂದು ಕಟ್ತಿ ಮೇಲ್ವಾಯಲೊಡನೆ (?)

ಹರಿ ಹರ್ಯಕ್ಷನ ಬಾಯಂ
ತಿರೆ ಕಟ್ತಿಯ ತೆಱೆದ ಬಾಯನೊರಹಾಯ್ತನಗೆಂ
ದೆರಡುಂ ಕಯ್ಯಂ ಪಿಡಿದಾ
ಸುರಮಾಗಿ[12]ರೆ[12] ಸೀೞ್ದು ಬಿಸುಟನೆರಡುಂ ದೆಸೆಗಂ ||೯೨||

ವ|| ಆಗಳ್ ಕೃಷ್ಣನ ಕಯ್ಯ ಕೋಲಿಂದುದಿರ್ದ ಪಲ್ಗಳಾ ಕಟ್ತಿಯ ನೆಗೞ್ತಿಯಂ ಕಟ್ತಿಯೊ[13]ಳುಟ್ತು[13] ಕವಡಿಕೆಯಂ ಬಿತ್ತಿದಂತೆಸೆಯೆ ಮುರಾರಿಯ ವೀರವೃತ್ತಿ ದೆಸೆಗೆ ಬೆಸೆಯೆ ಮೂಗಿನ ಮೇಲೆ ಕಯ್ಯನಿ[14]ಟ್ಟು ಜನಮೆಲ್ಲಂ[14] ಚೋದ್ಯಂಬಡೆ ತಾಯುಂ ತಂದೆಯುಂ ಸಂತೋಷಂಬಡೆ (?)

---

1 ಕೂಳ್ಪಾ (ಜ) 2 ಪೆಱಂ (ಚಜಟ) ಪೆಂಱಂ (ಡ) 3 ಸುಟು (ಜ) 4 ಪಟ್ಟೆ (ಚಟಡಣ) 5 ರೇಱು (ಚಜಟಡ) 6 ದುರ್ವ (ಜ) 7 ಪೆಟ್ಟೆ (ಚಟಡಣ) 8 ಯ್ಯು (ಜ) 9 ಕ್ಕಂ (ಡ) 10 ನಂಧೀರನ (ಜ) 11 ಯಾಲಿಟ್ಟಂ (ಚಟಣ) ಯಾಲಿಟ್ಟಂ (ಡ) 12 ಯೆ (ಜ) 13 ಳ್ (ಜ) 14 ಟ್ಟು (ಜ)

ನಿಯತಾಹಂಕೃತಿ ಪೂತನಾ ಪ್ರತಿಭಯಂ ಲೋ[1]ಲಾತ್ಮ[1]ಕಾಕಾಂತಕಂ
ಲಯಶಂಕಾಶಕಟಾಪ[2]ಹಾ[3]ರಿ ಖರತಾ ಚಕ್ರೀವ ಜೀವಾಪಹಂ
ಭಯ ಲೋಭಾರ್ಜುನ ಭಂಜನಂ ನುತಯಶೋದಾನಪ್ರಿಯಾತ್ಮೋದ್ಭವಂ
ಜಯಮಂ ತಾಳ್ದಿದುದಾತ್ಮಸನ್ನಿಭಗುಣಂ ಶ್ರೀಗಂಧಗೋಪಾಳ[3]ನಾ[3] ||೯೩||

ಇದು[4]ವ್ಮ[4]ದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯ ವ್ಯಂಗ್ಯಭಂ[5]ಗಿ[5]ನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಪದವೀವಿರಾಜಿತ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್

ಸಪ್ತಮಾಶ್ವಾಸಂ

ಸಮಾಪ್ತಂ

---

1 ಲಾತ್ಮ (ಚಟಡ) ಲೋಕ್ಷ್ಮ (ಣ) 2 ಶಾ (ಚಟಡಣ) 3 ಳಂ (ಚಟಡಣ) 4 ಮಿದಿಪವ್ಮ (ಜ) 5 ಗಿನಿ (ಚಟ)

ಅಷ್ಟಮಾಶ್ವಾಸಂ

ಶ್ರೀಯಂ ಪಡೆದಂ ವಿಬುಧ
ಗೀರ್ಯಲ್ಪಡೆದಂ ಪ್ರತಾಪಮಂ ಧಾರಿಣಿಯಂ
ಕಾಯಲ್ಪಡೆದಂ ಪ್ರತಿಭೆಯ
ನಾಯಮನಱಿಯಲ್ ಯಕೋರ್ಧಿಮೂರ್ತಿ ಮುಕುಂದಂ ||೧||

ವ|| ಆ ಗಂಡಗೋಪಾಳನ ಗೋಕುಳಕ್ಕೆ ಪುಲ್ಲಂ ನೀರುಮಂ ಸಲಿಸಿ ಬಿರ್ಚಿ ಬೆಸಕೆಯ್ಯಲೆಂದು

ನೀರಂ ನೀರಂಧ್ರಮೇಘಂ ಸುರಿಯೆ ಮೊರೆಯೆ ಭೀಮಾರುತಂ ಮಾರುತಂ[1]ಕೊ
ಳ್ಗಾ[1]ರಂಗಾರಂಬೊಲಾ[2]ಯ್ತೆಂ[2]ದಗಿಯೆ ಪಥಿಕರುಚ್ಚಾತಕಂ ಚಾತಕಂ ಕಾ
ಸಾರಾಸಾರಾರ್ಥಿ[3]ಗೋಲಂಗು[3]ಡಿಯೆ ನಲಿವೆನ್ನೋ ಜಂಬುವಂ ಜಂಬುವಂ ಸೋ
ಕೀರಂ ಕೀರಂ ಕರ್ದುಂಕುತ್ತಿರೆ ಕೆರಳಿಸಿದತ್ತೋವಿ ಕಾರಂ ವಿಕಾರಂ ||೨||

ಎಳಮಿಂಚಂ ತಱಿಯಿಕ್ಕಿ ಚಾದಗೆಗಳಂ ಬಿ[4]ಟ್ಟೋ[4]ಡಿ ಬಲ್ಗಚ್ಚಲಿ
ಟ್ಟಳಿ ನೀಳಾಂಬುದದಿಂ ಬಱಲ್ದ ಗಗನಶ್ರೀ[5]ಧೇನುವಂ[5] ಕೋಮಳಾ
ಮಳ ದೀರ್ಘಾಮೃತ ಧಾರೆಗಳ್ಸರಿಯೆ ಭೋರ್ಭೋರೆಂಬಿನಂ ಶಕ್ರಚಾ
ಪಳತಾದಾಮಕದಿಂದೆ ಕಟ್ಟಿ ಕಱಿದಂ ಕಾರೆಂಬ ಗೋಪಾಳಕಂ ||೩||

ವ|| ಅಂತುಮಲ್ಲದೆ

ಕಳಕೇಕಾರುತಿ ಪೋಲೆ ವೇಣುರುತಿಯಂ ಬೀಸುತ್ತೆ ಮಿಂಚೆಂಬ ಗೋ
ವಳಿಗೋಲಂ ಪೊಡೆಸೆಂಡುವೊಯ್ದು ಸಿಡಿಲಂ ಗೀರ್ವಾಣಬಾಣಾಸನ
ಚ್ಛಳದಿಂ ಕತ್ತರಿವೀಲಿಯೊಂದು ಪಣೆಕಟ್ಟಂ ಕಟ್ಟಿಕೊಂಡಭ್ರಕಂ
ಬಳಮಂ ಗೋವನವುಂಕಿ ಬಂದೊದಱಿದಂ ಕಾರೆಂಬ ಗೋಪಾಳಕಂ ||೪||

ವ|| ಅಂತು ಬಂದ ಕಾರ್ಗಾಲಮಂ ಕಂಡು ಮನಂಗೊಂಡು ಮತ್ತಮಾ ದೇವತೆಯರ್ ಭೇತಾಳನ [6]ಪೆ[6]ಣದಂತೆ ಬೆನ್ನಕಯ್ಯಂ ಬಿಡದೆ [7]ಕೊಂ[7]ದ ಕೊಲೆಯಂ ತಲೆಪ ಮನುಱಿಯದುದಕಮೂರ್ಮಿರದಿಂ ಕೆಟ್ಟುಂಕೆಡದಂತೆ ತಮ್ಮಗುರ್ವಿನಗುರ್ವಣೆಯ

---

1 ಕೊಳ್ಗಾ (ಚಜಟ) ಕೊಲ್ಗಾ (ಡ) 2 ಯಿಂ (ಡ) 3 ಗೊಲ್ಲಂ ನು (ಜ) 4 ಟ್ಟೋ (ಚಟಡಣ) 5 ದೇವನುಂ (ಚಟಡ) 6 ಪ (ಚಟಡ) 7 ಕೊ (ಜ) 8 ಡರೆ (ಚಡಣ) ಡೆರೆ (ಟ)

ಕಾಕಾವಿಕಾರದಿಂ ಸತ್ತುಂ ಸಾಯದೊಂದೆಡೆಗೆವಂದು ಪರಿವ ನೀರಂ ಪರಿಯೆ ಪೊಯ್ಯಲುಮುರಿಯನಿಱಿದೇರ್ಪಡಿಸಲುಂ ರಸಮಂ ಸೋಯಿಸಲುಂ ನಮ್ಮಂ ನೋಯಿಸಲುಂ ಇನ್ನುಮೊರ್ವಂ ಪುಟ್ಟುವನುಂಟೆಕ್ಕುಮೆ[1]ಯೆಂದೋ[1]ರೊರ್ವರಂ ಕಯ್ಯಂ ಪೊಯ್ದು ಕಹಕಹಾಟ್ಟಹಾಸದಿಂ ಕರುಳ್ ಪಱಿಯೆ ನಕ್ಕು

ಅದ[2]ಟಂ[2] ಮಂಡೆಯಮಾ[3]ಸಾ[3]
ಱದ ತರುವ[4]ಲಿ ನ[4]ಮಗಮರಿಯನಾದನವಂ ಪೆ
ರ್ಚಿದೊಡಾ ಭವನುಂ ಜವನುಂ
ಕದನದೊಳಾನಲ್ಕೆ ನೆಱೆ[5]ಯರೆಂಬನಿತಕ್ಕುಂ ||೫||

ವ|| ಆದೊಡಮಿನ್ನುಮೊರ್ಮೆ ಎಮ್ಮೊಳಪ್ಪುದು ಮಲ್ಲನಂತೆ ಮೆಯ್ವ[5]ತ್ತಿರೆ[5] ಧನುರ್ಧರನಂತೆ ದೂರಿದನೆಚ್ಚು ನೋಟ್ಟಮಂದು ಕೃಷ್ಣಂ ತುಱುಗಾಯಲೆಂದು ಪೊಲಕ್ಕೆ ಪೋದಲ್ಲಿ

ಪಡೆದರ್ದೇವತೆಯರ್ಮಿಗೆ
ಕಡುಮುಳಿಸಿಂದುರಿದು ದಹನ ಶಿಖಿಗಳ ಪೊಗೆ[6]ಯುಂ
ಪ[6]ಡೆವಂತೆ ಪತ್ತು ದೆಸೆಗಂ
ಗುಡಿ[7]ಗೆ[7]ಱಿದಂತಾಗೆ ನೀಳಮೇಘಾವಳಿ[8]ಯಂ[8] ||೬||

ಕಡಲೊಳ್ ಪಟ್ಟಿರ್ದವಂ [9]ಪೊಟ್ಟಿರದಿರೆ ಬನಪೊಳ್ ಬಂದ ಸಪ್ತಾರ್ಣವಂ ಮೇ ಗೊಡೆವಿರ್ದಂತಾಗೆ ಮಿಂಚೆಂಬುರಿ ಮಿಗೆ ನ[10]ಭ[10]ಮಾಶಾಮುಖಶ್ರೇಣಿ[11]ಯಿಂ[11] ಗೋ ಟಿಱುವಂತೋರಂದದಿಂದಂ ಮೊಟಗಿ ಮುಸುಱೆ ಮೇಘೌಘವಜ್ರಾಕ್ಷನಂ ಬ ಲ್ಸಿಡಿಲಿಂದಿಟ್ಟಾಲಿಕಲ್ಲಿಂದೆಱಗಿ ಕಱಿದುದಾ ಗೋಕುಲಂ ತೇಂಕುವನ್ನಂ ||೭||

ಉತ್ಸಾಹರಗಳೆ|| ಮೊಟಗಿ ಮಿಂಚಿ[12]ಮುಂಚಿ[12]ಕೊಳ್ವ
ಮಱಿಗಳಂಬುರಾಶಿ[13]ಯಲ್ಲಿ[13]
ಕಱೆಯೆ ನೀರನುಂಡು ಮೇಘ
ಮೊಱೆ (?) ಕಾಱುವಂತುಟಾಯ್ತು ||೮||

---

1 ಯ್ಯದೋರ್ವ (ಚಟಡಣ) 2 ಟಂ (ಚಣ) 3 ನಾ (ಚಟಡಣ) 4 ರಿಯೆ (ಜ) ರಿನ (ಟ) 5 ತ್ತರೆ (ಚಟಡ) ತ್ತದೆ (ಜ) 6 ಯಿಂ ಪೊ (ಜ) 7 ಯಿ (ಜ) 8 ಯಿಂ (ಜ) 9 ಪೊ (ಚಟಡಣ) 10 ವ (ಣ) 11 ಯುಂ (ಚಟಣ) 12 ಸಂತೆ (ಜ) 13 ಯೊಳ್ (ಚಟಡಣ)

ಪೊಡೆವ ಸಿಡಿಲ್ಗಳನೆಳೆಯೊಳ್
ಕೆಡೆದೇಟಿಂಟಣುಕು ನೆಗೆದು ನುರ್ಗಪ್ಪಿನೆಗಂ
ಪೊಡೆದಂ ಗೋವಳಿಗೋಲಿಂ
ಪೊಡೆಸೆಂಡಾಡುವವೊಲೇಂ ಬಲಸ್ಥನೊ ಕೃಷ್ಣಂ ॥೯॥

ಕರಗದ ಮುಗಿಲಂ ಪರೆಯದ
ಸುರಧನುವಂ ಮಿಂಚಿ ಕಿಡದ ಮಿಂಚಂ ಪೊಡೆದೋ
ಸರಿಸದ ಸಿಡಿಲಂ ಸಮೆಯದ
ಸರಿವಟಿಯಂ ಕಂಡು ಬೆಗಡುಗೊಂಡರ್ ಗೋವರ್ ॥೧೦॥

ವ॥ ಆಗಳಂ[1]ಜಲಿಮಂ[1]ಜಲಿಮೆಂದು ಬೆಗಡುಗೊಂಡ ಗೋವಳಿಗರನೊಡಗೊಂಡು ದೊಮ್ಮಳಿಸಿ ಮಮ್ಮಟಿಗೊಳ್ವ ಗೋವುಗಳನಟ್ಟಿಕೊಂಡು ಕಿಱಿದಂತರದೊಳಿರ್ದ ಗೋವರ್ಧನ ಗಿರಿಯ ಮಱಿಗೆ ಪೋಗಿಯದೊಂದೆ ಸಱಿಯುಪ್ಪುದಱಿಂ ಪಶುಶಿಶು ಪ್ರವೇಶಕ್ಕಂ ತಕ್ಕ[2]ಗುಹೆ[2]ಯಂ ಕಾಣದೆ

ಪರಲಂ ಬಾರ್ ತೆಗೆಮಿಾಂಟುವಂತೆ ಚರಣಾಂಗುಷ್ಠಾಗ್ರದಿಂ ಮಿಾಂಟೆ ಝು
ಲ್ಲರಿವೊಲ್ ಝುಲ್ಲನೆ ಸೂಸಿ ನಿರ್ಝರಜಲಂ ಬಿಟ್ಟಿರ್ಪಿನಂ ಕಾವಿನಂ
ತಿರೆ ಕೊಂಡೆತ್ತಿದ ಕೆಯ್ ಮುರಾರಿ ಕೊಡೆಯಂ ಕ್ರೀಡಾರಸಕ್ಕೆತ್ತುವಂ
ತಿರೆ ಕಿಟ್ಟೆತ್ತಿದನೊಂದೆ ಕೆಯ್ಯೊಳೆ ಮಹಾಗೋವರ್ಧನಾದ್ರೀಂದ್ರಮಂ ॥೧೧॥

ಪೋಲೆ ಬಲಗಯ್ಯ ಗೋವಳಿ
ಗೋಲೊಡ್ಡಿಸುವ[3]ರ್ದವಾ[3]ಗನವಯವದಿಂ ಗೋ
ಪಾಲನೆಡಗಯ್ಯೊಳೆತ್ತಿದ
ಶೈಲಂ ಸೆಂಡಿನವೊಲಿರ್ದುದೇನಚ್ಚರಿಯೋ ॥೧೨॥

ಹರಿ ಗಿರಿಯ ಪರ[4]ಲ್ಕೇಗು[4]ಗು
[5]ತ್ತ[5]ರೆ ತಲೆ[6]ಯಿಂ[6] ತೆಗೆದು ಕಮಠನಂ ಕಮಠಂ ಪೊ
ತ್ತುರಗನನಾತನ ನಳಿತೋ
ಳುರಗಂ[7]ಪೋಲ್ತೆ[7]ಳೆಯನದ್ರಿ[8]ಪೋಲ್ತಿರೆ[8] ಪೋಲ್ತಂ ॥೧೩॥

---

1 ಜಯಂ (ಚ) ಬಿಜಯಂ (ಟ) ಜಿಯಂ (ಡಣ) 2 ಮಹಿ (ಚಟಡಣ) 3 ರ್ದವಾ (ಚಟ) ರ್ದಮಾ (ಜ) ದ್ದವಾ (ಡಣ) 4 ಲ್ಮಿನು (ಣ) 5 ತ್ತ (ಚಟಡ) ತ್ತಿ (ಣ) 6 ಯಂ (ಚ) 7 ಪೊತ್ತೆ (ಜ) ಪೊತ್ತಿ (ಡ) 8 ಪೊದ್ದಿರೆ (ಡ)

ಕರಿಕಳಭಪತಿ ಬಯಲ್ದಾ
ವರೆಯಂ ಕಿೞ್ತೆತ್ತುವಂತೆ ಕಿೞ್ತೆತ್ತಿದನಾ
ಹರಿ ತರುಣಂ ಗೋವರ್ಧನ
ಗಿರಿಯಂ ಗೈರಿಕರಜೋವಿರಾಜಿತ [1]ದರಿಯಂ[1] ||೧೪||

ಶೈಳಮನೆತ್ತುವುದುಂ ಗೋ
ಪಾಳಂ ಫಣಮಣಿಗಳೆಸೆಯೆ ಮ[2]ಣ್ಮಿ[2]ಸುವ ಪಾ
ತಾಳಾಹಿವಿತತಿ ಪಾವಿನ
ಪೇಳಿಗೆಯಂ ತೆಱೆದ ತೆಱದಿನೇಂ ತೋಱಿದುವೋ ||೧೫||

ಕೆಂಡದ ಮೞೆಗಳ್ತಂಡದೆ
ಕೊಂಡಪುವೆನೆ ಪುಟ್ಟಪಾಱೆ ಕಿಡಿಗಳ್ ಕೃಷ್ಣಂ
ಕೊಂಡೆತ್ತಿದಗದ ಮೇಗಾ
ಚಂಡಿಕೆಯಮರ್ಗಳಿದು ಕಲ್ಲ ಮೞೆಯಂ ಕಱೆದರ್ ||೧೬||

ವ|| ಅಂತೆಣ್ಬರುಂ ದೇವತೆಯರೇೞು ದಿವಸಮಾವರ್ತನ ಪರಿವರ್ತನಂ ಬಂದು ನಿರ್ವರ್ತಿಸಿದ ಸಂವರ್ತನ ಸಮಯ ಪರಿವರ್ತಿತ ಪುಷ್ಕಳಾವರ್ತಂಗಳಂತೆ ಕಗ್ಗನೆ [ಕ]ನಿತು ನೆಗೆದ ನಿಜಜಳಧರಂಗಳ್ ನೀಳ ಮಹೀಧರಂಗಳೆ ವಿಪುಳ ಪಾಷಾಣ [3]ಜಾಲನಿರ್ಝರಂಗಳಂ[3] ಕಱೆವಂತೆ ಪೆರ್ಮೞೆಗಳಂ [ಕಱೆಯೆ] ಗೋವರ್ಧನಂ ಗೋವರ್ಧನ ಗಿರಿಯ ನೆತ್ತುವಂತೆತ್ತಿ ಗೋಕುಳಮಂ ಕಾದುದಂ ಕಂಡು ಗೋವರುಂ ಸೀವರುಂ ಜಕ್ಕರುಂ [4]ಮ[4]ಕ್ಕಳುಂ ಮಱಿಗಳುಂ ಬೆಕ್ಕಸಂಬಟ್ಟವಂ ದೇವನುಂ ದಾನವನುಮಲ್ಲೆಂದು ಪೊಗೞ್ದು ಪುರುಷೋತ್ತಮನನೆವೆಯಿಕ್ಕದೆ ನೋಡಿ ಪರಮಾನಂದಾಮೃತಮನೊಂದೆ ಮೆಯ್ಯೊಳೆ ಪೀರ್ದ ನಂದನನುಮಂ ಯಶೋದೆಯುಮಂ ದೇವನುಂ ದೇವಿಯುಮೆಂದು ಪೂಜಿಸಿ ಪೊಡೆವಟ್ಟು ಪೋಗೆ ನಾಡುಂ ಬೀಡುಂ ಜಾತ್ರೆವೋಗೆ ಕೇಳ್ದು ಕಂಸನಾಶಂಕೆಗೊಂಡು ಎನಗೆ ಬಂದ ಮಾರಿಯಾಗದೆ ಮಾಣದೆಂದು ಮನದೊಳೇವಯಿಸುತ್ತುಮಿರ್ಪನ್ನೆಗಮಾ ದೇವತೆಗಳ್ ಪಾೞ್ದೆಗುಲದ ದೇವತೆಗಳಂತೆ [5]ಖಿನ್ನರಾಗಿ[5]ಬನ್ನಂಬೆತ್ತು ಬಂದು ನಿಂದಾ ಪಗೆ [6]ಎಮ್ಮ ಪವಣಲ್ಲೆಂ[6]ದು ಪೋಪುದುಂ ಪಲ್ವೋದ ಪಾವಿನಂತಾಗಿ ತಲೆಯಂ ತೂಗಿ

---

1 ಧೈರ್ಯಂ (ಚಟಡಣ) 2 ಣ್ಮಿ (ಜ) ಣ್ಮೆ (ಞ) 3 ಜಾಲ ಜರ್ಝರಂ ಕೞ್ತೆವಂತೆ ಕಱೆವ ಕಲ್ಲಮೞೆಗಳಂ (ಚಟಡಞ) ಜರ್ಝರನಿರ್ಜರಂಗಳಂ (ಜ) 4 ಚಕ್ಕಳುಂ ಪು (ಞ) 5 ಬಿನ್ನನಾಗಿರೆ (ಚಟಞ) 6 ಯೆಂವಣಲ್ತೆಂ (ಜ)

[1]ಮೊ[1]ಳೆಯೊಳೆ ಪೆರ್ಗೊಡಲಿಗಳುಂ
ಕೊಳಲಾಱದೆ ಮುಕ್ಕುವೋದುವೆಂದೊಡೆ ಮುಂದಿಂ
ಬಳಿದು ಮರನಾದ ಕಾಲಂ
ಕೊಳಲುಂ ಕಡಿಯ[2]ಲ್ಕ[2]ಮಾರ್ಪುದಾವುದುಮುಂಟೇ ||೧೭||

ವ|| ತನಗಿಷ್ಟನಪ್ಪರಿಷ್ಟನೆಂಬ ದಾನವನ ನಡುವಣಕ್ಕರಮಿಲ್ಲದ ದಾನವನಂ ಪ್ರತ್ಯ[3]ನೀಕದ[3] ವನಕ್ಕೆಂದು ಬರಿಸಿ "ಯಾವದಸ್ತಿ ಪ್ರತೀಕಾರಸ್ತಾವತ್ಕುರ್ಯಾತ್ ಪ್ರತಿಕ್ರಿಯಾಂ" ಎಂದೋದಿ ವಿರೋಧಿಯುಮಂ ವ್ಯಾಧಿಯುಮಂ ಬಳೆಯದ ಮುನ್ನಮೆ [4]ಕಿಱ[4]ದೆಂದು ಕಡೆಗಣಿಸದೆ ಕಿಡಿಸುವುದು ಕಜ್ಜಮೆಂದು ಕೃಷ್ಣನ ಮೇಲೆ ಪೇೞಲೆಂದಿರ್ದನನ್ನೆಗಂ ಗೋಕುಲದೊಳ್

ಅಡೆಯಂ [5]ಕೋ[5]ದೆತ್ತುತುಂ ಮಾರ್ದನಿಗೆ ಮಸಗುತುಂ ದರ್ಪದಿಂ ಛಾಯೆಯೊಳ್ [6]ಕೋ[6]ಡಿಡುತುಂ ಪೋರ್ದಲ್ಲಿ ಪುಣ್ಚೆತ್ತಿ ಣಿಗೆಱಗೆ ನೋಣಂ ಶೀರ್ಣಶೃಂಗಾಗ್ರದಿಂ ಮಾ[7]ದೋ[7]ಡೆಯುತ್ತುಂ ಪಾಯ್ದು ಪಿಂಡಂ ಕಲಕಿ ಕೆಲೆಯುತಂ ಬೆರ್ಚೆ ಬಲ್ಗೂಳಿಗಳ್ ಬೆಂಗುಡೆ ಗಂಡಂ ಸೂಸುತುಂ ಬಂದುದು ಮದವಿದಳತ್ಪಿಂಗಳಾಕ್ಷಂ ಮಹೋಕ್ಷಂ ||೧೮||

ಆರಣಿಗೊಂಡು ಮುರಾರಿಯ
ನೀರದ ಸನ್ನಿಭನ ವಿಷಮುಕರ ವೀರರಸಾ
ಸಾರಕ್ಕಿದಿರಂ ನಡೆದತಿ
ವಾರಣ ವೃಷಮಿಱಿವ ಕೋಡನೇಂ ತೋಱಿದು[8]ದೋ[8] ||೧೯||

ವ|| ತೋಱಲೊಡನೆ

ದಿಟ್ಟೆ ಪೊಱಪಾಯೆ ಗುಱುಗುಱು
ಗುಟ್ಟೆ ವೃಷಂ ಮಡಿದು ಕೆಡೆಯೆ ಗೋಣ್ಮುರಿಗೊಂಡಂ
ತೊಟ್ಟಜೆಯಿಂದವೆ ಸುಟ್ಟೆಪ
ಬೊಟ್ಟೆಂದವೆ ಮೂಗನೂಱ ಬಿಟ್ಟಂ ಕೃಷ್ಣಂ ||೨೦||

ವ|| ಅಂತು ಶಾಕ್ವರವರನಾಗಿ ಕೆಕ್ಕಳಿಸಿ ಕೆಳರ್ದಟ್ಟೆಕೊಂಡು ಬಂದ ಕಂಸನಟ್ಟಿದರಿಷ್ಟನಂ [9]ಅಂದಿ[9]ನರಿಷ್ಟನಂ ಕೊಂದಂತೆ ಕೊಲ್ಲದೆ ಪಶುವೆಂದು ಪೇಸಿ ಪಶುಪಾಲನಪ್ಪ ಕಾರಣದಿಂ ಕರುಣಿಸಿ ಕಾದು ಸೋ[10]ದು[10]ಕಳೆದನದೆಲ್ಲಮಂ ಕೇಳ್ದು ಮೂಱುಂ ಲೋಕ

1 ಪೊ (?) 2 ಲ್ಕೆ (ಚಜಟಡ) 3 ಕ್ಷಸಾ (ಜ) 4 ಕಿಱಿ (?) 5 ಕೊಂ (ಚಟ) 6 ಕೊಂ (ಚಟ) ಕಾ (ಜ) 7 ದೊ (ಚಟ) 8 ವೋ (ಚಟಡ) 9 ಅಧೀ (ಚಟಙ) ಅದಿ (ಡ) 10 ದುರ್ (ಚಟಡಙ)

ಮನಾಳ್ದನಿತು ಸಂತೋಷಂಬಟ್ಟು [1]ಸೋ[1]ಡಲೆಂದಟ್ಟಿವಟ್ಟು ಗೋಮುಖಿಯೆಂಬ ನೋಂಪಿಯ ನೆವದಿಂ ದೇವಕಿಯುಂ ವಸುದೇವನುಂ ಬಲದೇವನುಂ ವಾಸುದೇವನು ಮಿರ್ದ ತುಱುಪಟ್ಟಿಗೆ ಪಿರಿದಪ್ಪ ವಿಭವಂಬೆರಸು ಬಂದು ಸೌಖ್ಯದ ಸೀಮೆಗಾಣ್ಬಂತೆ ಕೃಷ್ಣನಂ ಕಂಡು ತೆಗೆದು ತಕ್ಕೈಸಿಕೊಂಡು

ಕಡುದೊರೆದ ಮೊಲೆಯಿನಂಬಿರಿ
ವಿಡುತಂದುವು ಪಾಲ ಧಾರೆ ಪಲಕಾಲಮಗ
ಲ್ದೊಡವೆಯನಮೃತ ಕಳಾಳಿಗ
ಳೊಡರಿಸಿ ಶಶಿಕಾಂತವೊಸರ್ವುದೊಂದಚ್ಚರಿಯೇ ||೨೧||

ವ|| ದೇವಕಿ ಕಡುಗಂದಿಯಪ್ಪುದಱಿಂ ತೊರೆದೆಚ್ಚು ಪಾಯ್ವ ಮೊಲೆವಾಲಿಂ ಮಗನಂ ಮಜ್ಜನಂಬುಗಿಸಿ ಪುಗುಳ್ನಗೆ[2]ಯ[2] ಮುತ್ತುಮಂ ಬೆರಸಿ ಸೇಸೆಯನಿಕ್ಕಿ ಯಕ್ಷಕರ್ದಮದೊಳಣ್ಪನಿಕ್ಕಿ ಕಣ್ಣಂಜಲಕ್ಕುಮೆಂದು ಸೊಡ[3]ರ್ವಕ್ಕನಿಕ್ಕು[3]ವಂತೆ ಗಾಳಿಸೋಂಕದ ಸೊಡರಂತಿರ್ದ ಪೊನ್ನ ಸಿಪ್ಪಿನ ಕಸ್ತುರಿಯಂ ಕೊಂಡು ಬೊಟ್ಟ ನಿಟ್ಟು ಬೆಲೆಗೆ ಬ[4]ಣ್ಣಿ[4]ದುವುಂ ಮೆಯ್ಗೆ ನೊಚ್ಚಿದುವುಮಪ್ಪ ದೇವಾಂಗಮನುಡಿಸಿ ಮಾಣಿಕದೊಡಿಗೆಯಂ ತೊಡಿಸಿಯಮೃತಾನ್ನಮನೂಡಿ ತನಯನ ಪಂತಿಯೊಳ್ ಗೋಪಕುಮಾರರ್ಗೆಯುಡಲುಂ ತುಡಲುಮುಣಲುಮಿತ್ತು ಯಶೋದೆ ಮೊದಲಾದ ಗೋಪಿಯರ್ಗೆಲ್ಲಂ ಪೊನ್ನರನ್ನದ ಬಾಯಿನಂಗಳಂ ಕೊಟ್ಟು ನೋಂಪಿಯ ನೋಂಪ ವಿಧಾನಮಿಂತುಟೆಂದು ತನ್ನ ಮಗನಿದಾರ ಮಗನೀತಂ [5]ಪೊಂ[5]ಗಮಾದಿತ್ಯಂಗಂ ದೇವಂಗಂ ದೇವಿಗಂ ಪುಟ್ಟಿದಂತಿರ್ದಪನೆಂದು ತೊಡೆಯನೇಱಿಸಿಕೊಂಡು ನೋಡು ವಾಗಳ್

ಉಡುಗಣದ ನಡುವೆ ಮೃಗಧರ
ನೆಡೆಗೊಂಡಿರ್ಪಂತೆ ಕಮಳನಯನಂ ಸಲೆ ತ
ನ್ನೊಡನಾಡುವ ಗೋವರ್ಕಳ
ನಡುವೆ ಕರಂ ತನ್ನ ಬೆಳಗೆ ಬೆಳಗಾಗಿರ್ದಂ ||೨೨||

ವ|| ಅನ್ನೆಗಮತ್ತಾ ನಂದಗೋಪಂ ಗೋಪವೃದ್ಧಿಯರ್ವೆರಸು ವಸುದೇವ ಬಲದೇವರನೊಡಗೊಂಡು ಪೋಗಿ [6]ಪಂಕ[6]ಜಾಕ್ಷನುಮನಾಂಕೆ ಗೊಂಕೆಯಂ ನುಲಿದ ಕಾಗೆಯಂ [7]ಕ[7]ನ್ನೆತ್ತರನುಂಡ ನೆಲನೆಲ್ಲಂ ಕೆಮ್ಮಣ್ಣ ನೆಲನಾಗಿ [8]ವಾಸಿ[8]ಸಿದೊಡೆ

---

1 ಬನಮುಂ ಸೋ (ಜ) 2 ಯುಂ (ಚಟ) ಯಂ (ಡಣ) 3 ರಕ್ಕೆ ನೀಡು (ಚಟಡಣ) 4 ಣ್ಣ (ಜ) 5 ಪೆಂ (ಜ) 6 ಕಂ (ಚಟ) 7 ಕೆ (ಣ) 8 ರಾಗಿ (ಜ)

ನೆತ್ತರ್ನಾಱು[1]ಮಾಗಿ ಪೇಸಂ[1] ಪಡೆದುರ್ವಿಯುಮಂ ದೇವಕೀಪುತ್ರಂ [2]ಪೀ[2]ರ್ದ ಪೂತನಿಯ ಸತ್ತ ನೆತ್ತರ ಪ[3]ಲ್ಲೆಗ[3]ಳಿಂ ಜಾದುಕಲ್ಲಕಣ[4]ಯಂದಮಂ [5]ಮೆ[5]ಱೆದು ಮೆಟ್ಟೆ ಬಾಣತಿಯ ಮೊಲೆವಾಲ್ ನಂಜಪ್ಪ ವಿಷಮೃತ್ತಿಕೆಯೆಂಬಿವಂ ತಗುಳ್ದು ಗುಱಿಳ್ದೊಡೆ ಕಾಗೆಗಳೆ ಪೊಱಮಟ್ಟು ಪಾಱುವ ಕಾಕಗರ್ಭೆಯೆಂಬ ನಾಮಮನಾಳ ಭೂಮಿಭಾಗಮುಮಂ ಶಕಟ ಕುಠಾರನ ಕಾಲ [6]ಕೋ[6]ಳಿಂ ನುರ್ಚುನೂಱಾಗಿ ಪಾಱಿ ಕೆಡೆದ ಕಠಿನ ಶಕಟದೀಷಾದಂಡಹತಿಯಿಂ ಪೃಥ್ವೀತಳಂ ಪಾತಾಳಕ್ಕೆ ತೂತುವೋಗೆ ಬಾಗಿ ನೋಡಿದರ್ಗೆ ಛಾಯಾಭಗವತಿಯಂತೆ ಶಕಟಚ್ಛಾ[6]ಯೆಯೆ[6] ತೋಱುವ ಶಕಟದ್ವಾರಮೆಂಬ ಬಿಲದ್ವಾರಮುಮಂ ಯಮಳಾರ್ಜುನಭಂಜನಂ ಕಾಕೇಭಕುಂಜಂಗಳಂ ಕಿಟ್ಟಿೞಡಾಡೆ ಕೂಪದನಿತು ಕುೞಿಯಾಗೆ ನೆಲದನಿತು ಮಣ್ಣುನಡಕಿ ಪೊಯ್ದೊಡ ಮಾಶಾಗರ್ತದಂತೆ ಪೂೞಿದರ್ಜುನಗರ್ತಮೆಂಬ ನೆಗೞ್ತೆವಡೆದ ಗರ್ತಮುಮಂ ಮುಂಜ ಕೇಶಿ ಕಿಶೋರನ ಬಾಯಿಂ ಸೀಱಿ ಸುರಿದ ರುಧಿರದಿಂ ಧರಣೀರೇಣುಸಿಂದುರಂ ಬಿರ್ದುದು ಪುಸಿಯೆಂದು [7]ಮೆ[7]ಟ್ಟಿದ ಮೊಗಂಗಳ್ಕಾ[8]ಲಿ[8]ನ ಮೊಗದಂತೆ ಕುದುರೆ ಮೊಗ ಮಾಗೆ ತುರಗಮುಖಿಯೆಂಬಾಖ್ಯಾನಮನಾಂತ ಭೂತಳಮುಮಂ ಮುರಾರಿ ಮು[ಂ]ಖರನಂ ಸಜ್ರನೆ ಸೀೞ್ದುಱಿದ ಮುನಿಸಿಂದೊಗೆದಾಱ[9] ಪರಪೆ ಧಾತು ನಿರ್ಝರ ದಂತಶ್ರು[9][ಜ][9]ಳಮೊಱೆತು ಜುಱಿಯುತ್ತುಮಿರ್ಪ ಧಾತ್ರಿಯಪ್ಪುದುಂ ಕಟ್ಟಿಗಱಿವ ಕಟ್ಟಿಗಲ್ಲೆಂಬಂಕದ ಕಲ್ಲುಮಂ ನಗಧರಂ ಕಿೞ್ತಿಕ್ಕೆ ಮುನ್ನಿರ್ದೆಡೆವಲ್ಲದೊ ಗುರ್ಡಿಸಿ ಕೆಡೆದು ಗೋವರ್ಧನಮೆಂಬಭಿಧಾನಮಂ ತಳೆದ ಗಿರಿಯುಮಂ ತೋಱುತ್ತುಂ ಬರ್ಪುದುಮವರ ಪೆಱಪೆಱಗೆ ಗೋಪೀಜನ ಪರಿವೃತೆಯಾಗಿ

ಕಡುಪಿಂದಾ ಕಾ[10]ಕ[10]ನಂ ಕುಪ್ಪಳಿಸಿದೆಡೆಯಿದಾ ಪೂತನೀರಕ್ತಮಂ ಪೀ
ರ್ದೆಡೆಯಾ ತೇರಯ್ಪ ತೇರಂ ಪರಪಿದೆಡೆಯಿದಾಮತ್ತಿಯಂ ಲೀಲೆಯಿಂ ಕಿ
ೞ್ತೆಡೆಯಾತಾಟಂ ಕುಮಾರಂ ಕೆಡಪಿದೆಡೆಯಿದಾ ಗರ್ದಭಾಶ್ವಂಗಳಂ ಸೀ
ೞ್ದೆಡೆಯೆಂದಾ ದೇವಕೀದೇವಿಗಮನಿತೆಡೆಯಂ ತೋಱಿದಳ್ಗೋಪಿಯಾಗಳ್ ||೩೩||

*ನೀಂ ಬೆಸಗೊಳ್ವುದದೇನಾ
ಣಂಬಿಯನವಯವದೆ ಕೀೞ್ವ ತೆಱದಿಂ ಕಿೞ್ತೀ
ಯಂಬುಜಲೋಚನನೇೞುದಿ
ವಂಬರಮೆತ್ತಿರ್ದ ಗಿರಿಯಿದಂಬುಜವದನೇ ||೩೪||

---

1 ವ ಪೇರಂ (ಜ) ಮಾಗಿ ಪೇರಂ (ಡ) 2 ಜಿ (ಙ) 3 ಲ್ಲೆಳ (ಚಟ) ಲ್ಗೆಳ (ಡಣ) 4 ಳ (ಚಟಡಣ) 5 ಒಳಿಯಿಂ (ಜ) 6 ಯೆತೋಯೆ (ಚಟಣ) ಯೆತೋರೆ (ಡ) 7 ಮು (ಜ) 8 ವಿ (ಜ) 9 ಕಜ್ಜ (ಣ) 10 ನ (ಚಟಡಣ) * 'ಜ' ಪ್ರತಿಯಲ್ಲಿಲ್ಲ

ವ|| ತೋಱೆ ತನ್ನ ಸುತನ ಶಕ್ತಿಗಂ ಸಾಹಸಕ್ಕಂ ವಿಸ್ಮಯಂಬಟ್ಟು ಮನೆದೊಳ್ಕಂಸಂ ಮುನಿದಪನೆಂದೊಡೆ ಮುನಿಯಬೇಡಾ ಎಂದುಪ್ಪಂ ನಿವಳಿಸಿ ತೂಪಿಱಿದು ಮಗನಂ ಬಿಟ್ಟು ಬರಲಾಱದ ದೇವಕೀದೇವಿಯನೆಂತಾನುಮೆೞಿದುಕೊಂಡು

ನಂದನ ವಿಕಸಿತ ಮುಖಮಕ
ರಂದ[1]ಮನು[1]ಗುಟ[1]ಸೆಯುಮಗಿವ ದೃಗುವೃಂದಮನಾ
ನಂದದೊಳಾನಕದುಂದುಭಿ
ದುಂದುಭಿಯಂ ಪೊಯಿಸುತಂದು ಪೊಟಲಂ ಪೊಕ್ಕಂ ||೨೫||

ವ|| ಆ ಪ್ರಸ್ತಾವದೊಳಾ ಪೊಟಲ್ಗೆ ಕಾರಣಭೂತಮ[2]ಪ್ಪ[2] ಚೈತ್ಯಾಲಯದ ಮುಂದಣ ದೇವತಾಯತನಮಪ್ಪ ಬಿಲದ್ವಾರದೊಳ್

ಸುಚಿರ ರುಚಿಗಳ್ ಜಯಶ್ರೀ
ಸಚಿವಂಗಳ್ ಹರಿಯುದೊಂದು ಪುಣ್ಯೋದಯದಿಂ
ಶುಚಿನಾಗಶಯ್ಯೆಯುಂ ಶಾ
ರ್ಙ್ಗಚಾಪಮುಂ ಪಾಂಚಜನ್ಯಮುಂ ಪುಟ್ಟುವುದುಂ ||೨೬||

ಸುರದುಂದುಭಿರವಮೆಸೆದುದು
ಸುರತರುವಿಂ ಸುರಿದುದಲರ ಸರಿ ಸೂಸಿದುದಾ
ಸುರಮುಖ ಸರಸಿಜದಿನಹೋ
ಪುರುಷೋತ್ತಮ ಪುಣ್ಯಮೆಂಬ ನಾದಾಮೋದಂ ||೨೭||

ಭೂವಿವರದಿನೊಗೆತಂದಾ
ಪಾವೆಸೆದುದು ಸಪ್ತಫ[3]ಣ[3]ಮಣಿ ಪ್ರಭೆಯಿಂ ಭೂ
ದೇವಿ ಫಣಿರಾಜ ಸಂಭೋ
ಗಾವಸ್ಥಿತೆ ಬೆಸಲೆಯಾದ ಪಾವೆಂಬಿನೆಗಂ ||೨೮||

ಪಸರಿಸಿ[4]ದ ಮೂರ್ಮಿ[4] ವಿದ್ಯು
ದ್ವಸಿತಮನದು ತನಗೆ ತಾನೆ ಶಾರ್ಙ್ಗಂ ಸಿಂಗಂ
ಮಸಕದಿನಯ್ವಾಯಿಂ ಗ
ರ್ಜಿಸುವವೊಲಯ್ವಾಯ ಶಂಖಮೇಂ ಗರ್ಜಿಸಿತೋ ||೨೯||

---

1 ಮುವ (ಚಟಡ) ಮುಮು (ಜ) 2 ಪ್ಪ ಮೂಲ (ಜ) 3 ಣಿ (ಜ) 4 ಯೌರ್ವಿ (ಜ) ಮೂರ್ವಿ (ತ)

ಭುಜಂಗಪ್ರಯಾತ ವೃತ್ತಂ ॥ ಅವಂ ಕಂಡು ಕಂಸಂ ಭಯಂಗೊಂಡು ಪೋತಂ
ದವಂ ಮೂಲ ಚೈತ್ಯಾಲಯಕ್ಕಲ್ಲಿ ಪಾದಾ
ರವಿಂದಂಗಳೊಳ್[1] ಬಿೞ್ದು[1] ಯೋಗೀಶ್ವರರ್ಗ್ಗಂ
ದಿವಾದೊಂದು ವೃತ್ತಾಂತಮಂ ಪೇೞೆಂ[2]ದಂ[2] ॥೩೦॥

ವ॥ ಅವರಿಂತೆಂದರಿವು ಮೂಱುಂ ಮಹಾರತ್ನಂಗಳ್ ಪರಮ ಪುರುಷ ಪುಣ್ಯಪ್ರೇರಣೆಯಿಂ ಪುಟ್ಟಿದುವಲ್ಲದುತ್ಪಾತಂಗಳಲ್ಲಂ ಆವನಾನುಮೊರ್ವ [3]ಮಹಾಭಾಗನ್[3] ನಾಗಶಯ್ಯೆಯನೇಱುವನೀ ಶಾ[4]ರ್ಙ್ಗಧರ್ಮ್ಮವ[4]ನೇಱಿಸುವನೀ ಪಾಂಚಜನ್ಯಮಂ ಪೂರಿಸುವನಾತನರ್ಧ ಚಕ್ರವರ್ತಿಯಾಗಿ ಪೃಥ್ವೀರಾಜ್ಯಗೆಯ್ಗುಮೆನೆ ಕಂಸನಿದನೀಗಳೆ ನೋೞ್ಪೆನೆಂದಾ ನಾಗಶಯ್ಯೆಯನೇಱಿದಂಗೆ [5]ಪಾವಿನ ಪಾಸ್[5] ಪಸೆಯಾಗಲರಸಂ ತನ್ನ ಮಗಳನಿತ್ತಪನೆಂದು ಸಾಱಿಮೆನೆ ಮಹಾಪ್ರಸಾದಮೆಂದು ಪೆರ್ಗ್ಗಡೆಗಳ್ ಪೋಗಿ ಗೋಸಣೆಯಂ ಮಾಡೆ

ಪಾವೆಂದೊಡೆ ಪಡೆ ನಡುಗುವು
ದೇವೆಯೊ ಪಸೆಯಲ್ಲಿ ಪಾವು ಕೊಳ್ವೊಸಗೆಯಸೋ
ವೋವೊ ಪುಸಿಮದುವೆ ಮೊದಲೊಳ್
[6]ಸಾವು ದಿಟಂ[6]ಸತ್ತು ಮದುವೆಯಪ್ಪರುಮೊಳರೇ ॥೩೧॥

ವ॥ ನಿಮ್ಮರಸನ ಕನ್ನೆ ವಿಷಕನ್ನಿಕೆಗಾಕೆಗಂಜುವೆವಿಲ್ಲೀ ಸೂಲಮನೇಱಿ ಪಾಲ್ಗುಡಿವರಿಲ್ಲೆಂದು ಬೀರರುಂ ಶೂರರುಮಪ್ಪ ರಾಜಪುತ್ರರ್ ಕಿವಿಯಂ ಮುಚ್ಚಿಕೊಂಡು ಪೋದರಾ ಗೋಸಣೆಯಂ ಘೋಷದೊಳಿರ್ದ ಕೃಷ್ಣಂ ಕೇಳ್ದು

ಏನಿಂ ಪಾಸುರಗನೆ ಬಿ
ಲ್ಲಾನ[7]ದು ಶೃಂ[7]ಗಜಮೆ ಶಂಖಮೈವಾಯದೆ ಪೋ
ಗಾನೇಱುವೆನಾನೆತ್ತುವೆ
ನಾನೊತ್ತುವೆನೆಂದು ಪಿಡಿಸಿದಂ ಡಂಗುರಮಂ ॥೩೨॥

ವ॥ ಪಿಡಿಸಿ ಮನೆಗೆ ಪೋಗದೆ ಗೞಿಪಱಿಯ ಪಾವಿನಂತೆ ಗೋಸಣೆಯ ಱಿಯನರಮನೆಗೆ ಪೋಪುದುಂ ಕಂಸಂ ಕಂಡಿದೆನ್ನ ಪಗೆಯುಂ ಬಗೆಯುಂ ಸಾಧ್ಯ ದುದು ನೋಂತರ ಪಗೆಯನೆೞ್ತಱಿದಂತೆ ಪಾಟ್ಸೆನೆಂದು ಚೈತ್ಯಾಲಯದ ಮುಂದೆ

1 ಳವೊಳಿ (ಚಟ) ಳುಪೊಳಿ (ಡ) 2 ದೂ (ಚಟಡ) 3 ನಿ (ಜ) 4 ಜ್ಞಾರ್ಯು ೨ (ಜ) 5 ಹಾವಿನ (ಜ) 6 ಸಾವುದು ಧೀರಂ (ಚಟ) ಸಾವುದು ದಿರಂ (ಡ) ಸಾವುದಿವಂ 7 ದೃಶೀ (ಜ)

ಮಹಾಸ್ಥಾನಮಂ ಮಾಡಿ ವಸುದೇವಬಲದೇವ ಮಂಡಳಿಕ ಮಕುಟ ಬದ್ಧ ಸಾಮಂತ
ಮಂತ್ರಿ ಸಮೇತನಾ[1]ಗಿ ಕುಳ್ಳಿರ್ದು[1] ಮಂತ್ರವಾದಿಗಳಿನವನಾಹ್ವಾನಂ ಮಾಡಲೊಡನೆ

ಮೊದಲೊಳ್ಕಾಳಾಹಿಯಂ ಕಾಣುವನ್ರೊಲೊಗೆಯೆ ಧೂಮಾಳಿ ಫೂತ್ಕಾರದಿಂದಂ
ತಿದಿಯಂ ಕೊಂ[2]ಡೊ[2]ತ್ತಿದಂತುಚ್ಚಳಿಸೆ ಬಟಿ ವಿಷಜ್ವಾಲೆ ವಕ್ತ್ರಂಗಳಿಂ ಪಾ
ಱಿದ ಕೆಂಡಂ ನೆತ್ತಿಯೊಳ್ಬಿರ್ದವ್ರೊಲಿರೆ ಫಣಿಮಾಣಿಕ್ಯಸಂದೋಹದಿಂ ತಂ
ದುದೊ ಕೋಪಾಟೋಪದಿಂ ವಾಸುಗಿಗೆ ವಿಷಯಶಃಶೋಷಮಂ ಲೇಲಿಹಾನಂ ||೩೩||

ವ|| ಆ ಕುಂ[3]ಭೀನಸ ವಿಜೃಂಭಣಕ್ಕೆ ನೆರೆದ ನೆರವಿಯೆಲ್ಲಮೊಲ್ಲದೇ ನುಲಿದೋಡೆ
ಕಂಸನೊಳಂಗೊಂಡು (?) ನೋಡಿ ಗದಗಂಪಂಗೊಂಡು ಮಹಾಮಂತ್ರವಾದಿಗಳಪ್ಪ
ಮುನಿಮುಖ್ಯರ ಮ...ಗೊಂಡು ಪಂಚನಮಸ್ಕಾರಮಂ ಜಪಿಯಿಸುತ್ತುಮಿದನೇಱುವೆ
ನೆಂದುಬಂದ ಕಲಯಂ ಕರೆಯಿಮೆಂಬುದುಮಾ ಮಾತಿಂ ಮುನ್ನಮೆ

ಗರುಡಧ್ವಜನೆಟ್ಟಿರ್ದು
ಮುರಿವುರಿನಂಜುರಿಯ ಮೇಲೆ ನೀರ್ವೊಯ್ದವೊಲಾ
ಯ್ತುರಗಂಗಂ ನವಿಲಂ ಕಂ
ಡುರಗನ ತೇಜನಾಯ್ತು ನೆರವಿಗಾಯ್ತತಿಚೋದ್ಯಂ ||೩೪||

ಸೂಸೆ ಮುಗಮುಗಪ [4]ಕಂಪಿ[4]ನ
ವಾಸನೆ ಪಾಯ್ದೇಱಿದಂ ತದುರಗೇಂದ್ರನ ತ
ಣ್ಪಾಸನನರೆವಿರಿದ ಜಾದಿಯ
ಬಾಸಿಗದೊಳ್ ಪಾಯ್ದ ತುಂಬಿಯಂತಿರೆ ಕೃಷ್ಣಂ ||೩೫||

ಮಂಡಳಿಸಿದ ಮುಕ್ತಾಫಲ
ಪಾಂಡುರ ಫಣಿಪತಿಯ ಮೇಲೆ ಶರದದ ಹಿಮ ಕೃ
ನ್ಮಂಡಲದ ಮೇಲೆ ಚೆಲ್ವಂ
ಕೊಂಡೆಸೆವ ಕಳಂಕದಂತಿರೆಸೆದಂ ಕೃಷ್ಣಂ ||೩೬||

ಆ ಜಳಜಲೋಚನಂಗೆ ವಿ
ರಾಜಿಸೆ ಜಯಲಕ್ಷ್ಮಿ ತನ್ನದೊಂದೊಲವಿಂ ನೀ
ರಾಜಿಸುವಂತೆಸೆದುವು ಫಣಿ
ರಾಜನ ಬಿಡದೊಲೆವ ಪೆಡೆಯ ಮಣಿದೀಪಿಕೆಗಳ್ ||೩೭||

---

1 ಗಿ (ಜ) 2 ಡೆ (ಜ) 3 ಭಿನೀಸ (ಚಟ) ಭೀವಿಷವಿ (ಜ) 4 ನಂಜಿ (ಜ)

ಒಡೆವಂತಾಗಿರೆ ಭೂತಧಾತ್ರಿಯೆರ್ದೆ ಕಾಲ್ಮೇಲಾಗಿ ದಿಗ್ದಂತಿಗಳ್
ಕೆಡೆವಂತಾಗಿರೆ ಲೋಕವಾಲಿವರಲೆಂದಾರಯ್ದುಮಾಕಾಶದಿಂ
ಬಿಡುವಂತಾಗಿರೆ ತಾರಕಾನಿಕರವೀ ಬ್ರಹ್ಮಾಂಡಭಾಂಡಂ ಸಿಡಿ
ಲ್ದೊಡೆವಂತಾಗಿರೆ ಪಾಂಚಜನ್ಯ ನಿನದಂ ಪರ್ವಿತ್ತು [1]ದಿಕ್ಪಾ[1]ರವಂ ||೩೮||

ವ|| ಈ ಶಂಖಮನಿನ್ನುಂ ಪಿಡಿದೊಡೆ ಜಗಂ ಪಿಡುಗಿ ಕೆಡುಗುಮೆಂದು ಕರುಣಿಸಿ ದಂತೆ ಮನಿವರ್ ಮನಮಿಟ್ಟಪೆ[2] ಶಾರ್ಙ್ಗಶಂಖನುನಿಟ್ಟಪಿ[3] ನಾಗಶಯ್ಯೆಯಿಂದಿಳಿದು ಪೋಪುದಂ ಕಂಡು ಕರೆದು ಕಂಸನಿಂತೆಂದಂ

ತೊದಳೇನೊ ಮೆಚ್ಚಿದೆಂ ನಿ
ನ್ನದಟಂಗೆಲೆ ಗೋಪ ತರ್ಪುದೀ ಬಸದಿಗೆ ನೀ
ನುದಯಕ್ಕೆ ಮುಂಚೆ ನಾ[4]ಗ[4]
ಹ್ರದದೊಳಗಣ ಸಾವಿರೆಸಟ ತಾವರೆಯಲರಂ ||೩೯||

ವ|| ತಂದು ದೇವರ ಶ್ರೀಪಾದಪದ್ಮದೊಳೇಱಸಿದೊಡೆ ನಿನ್ನ ನಾನೆ[4]ಯೇ[4] ಱಸುವೆನೆಂಬುದುಮದರ್ಕೊಂಮ ಕಯ್ಯನೆ ತಂದಪೆನೆಂದಾ ಕಯ್ಕೊಳೆ ಕೃಷ್ಣನಾ ಯಮುನಾ ನದಿಯ ನಾಗಹ್ರದಕ್ಕೆ ಪೋದನದೆಂತಿರ್ದುದುದೆಂದೊಡೆ

ಬಳೆದು ವಿಷಾಗ್ನಿಯಗ್ಗವಳೆದೆಣ್ಣೆಯೊ[5]ಳೆಟ್ಟು[5]ರಿವಗ್ನಿಯಂತೆ ನೀ
ರೊಳಗುರಿದೇಱ ಪರ್ವಿ ಬಡಬಾಗ್ನಿವೊಲಾ ಮಥನಾದ್ರಿ ಪೀಡೆಗು
ಮ್ಮಳಿಸಿ ಲಯಾಗ್ನಿ ಘೋರ ಗರಳಾಗ್ನಿಯನೀ ಭುವನತ್ರಯಂ ಭಯಂ
ಗೊಳೆ ಕೆಳರ್ದಾಸುರಕ್ಕುಗುಟ್ವ ವಾರ್ಧಿವೊಲಿರ್ದುದು ಕಾಳಿಯಹ್ರದಂ ||೪೦||

ಮಿಗೆ ನಂಜು ತಾಗೆ ನೀ[6]ರ್ಗಂ[6]
ಪು[7]ಗಳೊ[7]ಗೆದವೊಲೊಗೆಯೆ ಬುದ್ಬುದಾವಳಿ ಕಾಳೋ
ರಗ ನಿಶ್ವಾಸಾನಿಳನಿಂ
ಜಗುನೆಯ ಮಡು ತೆಕ್ಕತೆಕ್ಕನುಕ್ಕುತ್ತಿರ್ಕುಂ ||೪೧||

ಕಾಳಿಯನ ವಿಷದ ಪೊಗೆ ಮಿಗೆ
ಕಾಳಿಂದಿ ಕಱಂಗಿ ಕೂಡಿ ಕಾಡಿಗೆಗೊಂಡೀ
ಭೂಲಲನೆಯ ಬಾಸೆವೊಲಾ
ಯ್ತಾಲೋಕಿಗೆ ಕಱಯ[8]ತೊ[8]ಱಯ ಪರಿದೆಡೆಯುಂಟೇ ||೪೨||

---

1 ದೀಕ್ಸ್ಟಿ (ಜಡ) 2 ಪೆ (ಜ) 3 ರಾ (ಜ) 4 ಱಯಲೇ (ಜ) 5 ಳಿರ್ದು (ಚಟಡಣ) 6 ರ್ಗಳ್ (ಚಟಡಣ) 7 ಗಳೊ (ಚಟಡಣ) 8 ದೊ (ಚಟಡಣ)

ಅನಿಲಂ ಮೇಗ[1]ಡೆ[1] ಪೋಗಲಣ್ಮನಿವನಿಂತಂದಾದೊಡಾ ಶಂಖಚೂ
ಳನನೇಂ ಕಾ[2]ವ[2]ನೆ ಸರ್ಪವೈರಿ ಸರಮಂ ಕೊಂ[3]ಡಂ[3]ದು ಗುಳ್ಕೆಂದು ನುಂ
ಗನೆ ದಲ್ ಪೋಳಿಯನೆತ್ತಿ [4]ತು[4]ತ್ತನೆ ಲಯೋಗ್ರಜ್ವಾಳೆಯಂ ತಿಂದು ತೇ
ಗನೆ ಮಾಕಾಳಿಯನುರ್ಚಿ ಮುಕ್ಕನೆ ವಿಯನ್ಮಾಕಾಳಿಯಂ ಕಾಳಿಯಂ ||೪೩||

* ಬಿಸನುಂ ನುಂಗಿದನೆಂದು ಕೇಳ್ದಿನದು ಮುನ್ನೀಗ್ಗ ಗಂಟೆ ಮುನ್ನಾ ವಿಷಂ
ಪುಸಿ ಪೋಗಾನುಗುಳ್ದಪ್ಪೆನೆನ್ನ ವಿಷಮಂ ತಾಂನುಂಗಿ ನೋಟಿಕ್ಕೆಂದು ಗ
ರ್ಜಿಸಿ [5][ದೂ][5]ತಟ್ಟಿದ ತನ್ನ ಪಾವುಗಳನೀಶಂ ಭೂಷಣಂ ಮಾಡಿ ಮ
ನ್ನಿಸಿದಂ ಪೇಟುಟಿದಂದು ತೀರ್ಚ್ಚನೆ ಕನಲ್ದಾ ಶೂಲಿಯಂ ಕಾಳಿಯಂ ||೪೪||

ವ|| ಎನಿಪ ದಂದಶೂಕನ ದಾಡೆಗಳಿನೊಸರ್ತ ವಿಷದ ಮಡುವಿನಂತಿರ್ದ ಜಗುನೆಯ ಮಡುವಂ ಕ್ರೀಡಾಸರೋವರಮಂ ಪುಗುವಂತೆ ಪೊಕ್ಕು

† ಆಟಲೆ ಫಣಿ ಕಟಲೆ ಕೇಸರ
ವೆಟಲೆ ರುವನ್ಮಧುಪಮಾಳೆ ಹರಿ ತನ್ನಯ ಪೊ
ರ್ಕುಟಿ ಕಮಳದಂತೆ ಜಗುನೆಯ
ಸುಟಿಯೊಳ್ ಸೊಗಯಿಸುವ ಕಮಳದಲರಂ ಕೊಯ್ದಂ ||೪೫||

§ ವ|| ಕೊಯ್ದು ಗೋಪರ ಕಯ್ಯೊಳ್ಕೊಟ್ಟು ಮಗುಳೆ ಕಾಳಿಯನ್ವೇಷಣದಿಂ ಪೊಕ್ಕು

ಕಾಳಿಂದಿಯ ಮಡುವಂ ಹರಿ
ತೋಳಿಂ ತುಳ್ಕಾಡಿ ನೊರೆದು ಮೇಲ್ವಾಯ್ದ ಮಹಾ
ಸ್ಥೂಳ ತರಂಗಾವಳಿಯಂ
ಕಾಳಿಯನೆಂದಡಸಿ ಪಿಡಿದು ಪೊಡೆದಂ ತಳದಿಂ ||೪೬||

ಅಡಗಿದ ಪಾವಂ ಜಗುನೆಯ
ಮಡುವಿನೊಳಱಸುವನ ಕರನಖಾರುಣರುಚಿಗಳ್
[6]ಕಡು[6] ಕತ್ತಲೆಯೊಳ್ ಪಲವುಂ
ಸೊಡರಂ ಕೊಂಡಱಸುವಂತಿರೇಂ ತೊಳಗಿದುವೋ ||೪೭||

---

1 ನೆ (ಚಜಟಡ) 2 ಯ (ಚಜಟಡ) 3 ಡೊಂ (ಣ) 4 ಕು (ಡಣ) 5 ಬೂ (ಜ) 6 ಗಡ (ಣ)

* 'ಜ' ಪ್ರತಿಯಲ್ಲಿರುವ ಹೆಚ್ಚಿನ ಪದ್ಯ. † 'ಡ'ದಲ್ಲಿ ಇಲ್ಲ. § 'ಜಡ' ಗಳಲ್ಲಿಲ್ಲ.

ಫಣಾರತ್ನಜ್ಯೋತಿಯಿಂ ಕಾಳಿಯನೆಯಱಿಸಿ ಕಂಡೆಯ್ದಿ ಗೋಪಾಳಚೂಡಾ
ಮಣಿ ಜೀವಂಬೆತ್ತ ಗಾರುತ್ಮತ ಮಣಿಯವೊಲಂಗ ಪ್ರಭಾಮಾಲೆ ದುರ್ವಾ
ಪಣಮಂ ಕಾಳಿಂದಿಯೊಳ್ ಪುಟ್ಟಿಸಿ ಪಿಡಿಯಲೊಡಂ ಕೃಷ್ಣನಂ ಕಾಳಿ[1]ಯಾಂ[1]ಗಂ
ಪೆಣೆದತ್ತಾ ಪಾದಮಸ್ತಂ ಲತೆಯೊಳೆ ಬಿದಿರಂ ಪರ್ವುವಂತೊಂದಗುರ್ವಂ ||೪೮||

ಬಿಸುಸುಯ್ದೀಕ್ಷಿಸಿ ನುಂಗುವಂತೆ ಮೊಗಮಂ ಪ್ರೋ[2]ದ್ಯ[2]ತ್ಫಣಾ ಹಸ್ತದಿಂ
ಮುಸಕಂಗುಂದದೆ ಪೊಯ್ದು ಮುಂದಲೆಯನಂಗೋಪಾಂಗಮಂ ಕೂಡೆ ಬಂ
[3]ಚಿ[3]ಸಿ ಮೈ ಬೇಱಿರಡಿಲ್ಲೆನಲ್ಪಮರತತ್ವಾಟೋಪದಿಂ ತಳ್ತು ಪು
ಟ್ಟಿಸಿದಂ ಪಂಕಜಲೋಚನಂಗೆ ವಿಜಯಶ್ರೀ ಕೇಳಿಯಂ ಕಾಳಿಯಂ ||೪೯||

ಮತ್ತಮಯೂರಗರ್ಜನೆಗೆ ಚಂದನಮಂ ಬಳ್ಸಿರ್ದ ಪನ್ನಗಂ
ಸುತ್ತಱುವಂತೆ ತನ್ನ ಗಳಗರ್ಜನೆಗಂಜಿ ನಿಜಾಂಗಮುಷ್ಟಿಯಿಂ
ಸುತ್ತಱಿದಿರ್ದ ಪನ್ನಗನ ಗಂಟಲನೊತ್ತಿದನೊತ್ತಿ ಮೊಂಮು ಕೆ
ಯ್ಮತ್ತಮದೊಂದು ಕಾಲಭುಜಗಂ ಪಿಡಿದಂತಿರೆ ಕಾಳಿಯಾ[4]ಹಿ[4]ಯಂ ||೫೦||

ವ|| ಅಂತು ಕಾಳಿಯುಂ ಗಾಳಿಯುಂ ಗರಳಮುಮನೊಳಗಾಗಿ ಕಾಱಿ ಕಾಳಿಂದಿಯ ಸೋರ್ಮುಡಿಯಂ ಪಿಡಿತರ್ಪಂತೆ ಪಿಡಿತಂದು ಗೋಪಾಲಬಾಲಕರ ಕಯ್ಯೊಳ್ಕೊಟ್ಟು ಕಂಸನಲ್ಲಿಗೆ ಕಮಳದೊಡನೆ ಕಳಿಪಿ ಕೃಷ್ಣಂ ಗೋಕುಳಕ್ಕೆ [5]ಮಗುಳ್ದಾ[5]ಗಳ್

ಅಯನಯ ನಿಧಾನ ತೇಜೋ
ಮಯ ಕೆಂಡಮನೊಱಲೆ ಪತ್ತಲಾರ್ಕುಮೆ ಜಗತೀ
ಜಯಿಯೆನಿಪ ಕಂಸ[6]ನೆಸ[6]ಗುವ
ಕುಯಕಂ ಕೊಳ್ಗುಮೆ ಪರಾಕ್ರಮೋನ್ನತ ನಿನ್ನಂ ||೫೧||

ವ|| ಎಂದಶರೀರ ವಾಕ್ಯಮಂ ಕೇಳ್ದು ಪೂತನೆ ಮೊದಲಾಗಿ ಕಾಳಿಯಂಬರಂ ಮಾಡಿದಪಚಾರಮೆಲ್ಲಮುವನ ಮಾಟಮೆಂದು ನಿಶ್ಚೈಸಿ ಪಲವು ಮುನಿಸುಮನೊಂದೆ ಮುನಿಸುಮಾಡಿ ಮುನಿದು ಕಂಸಂ ಮಾಡು[7]ವು[7]ಪಾಂಸಮೆಲ್ಲಮುನಱಿದುಮಿರ್ದನತ್ತ ಸಹಸ್ರ ಪತ್ರದೊಡನೆ ಕಾವುವೆರಸಿದ ಕರಿಯ ನೆಯ್ದಿಲನಟ್ಟುವಂತೆ ನಾರಾಯಣನಟ್ಟಿದ ಪಾವುಮಂ ಪೂವುಮಂ ಕಂಸಂ ಕಂಡು ಪಾವಡರ್ದ ಪಂದೆಯಂತೆ ಕಿಱಿದು ಬೇಗ ಮಿರ್ದು ತನ್ನೊಳಿಂತೆಂದಂ

---

1 ಯಂ (ಚಜಟಡ) 2 ದ್ಯು (ಜ) 3 ಜಿ (ಚಟಡ) 4 ಹಿ (ಚಟ) 5 ಬಪ್ಪಾ (ಜ)
6 ನಿಂ (ಚಟಣ) ನಂ ನುಂ (ಡ) 7 ವ (ಜ)

ಬಲಯುತನಾದಂ [1]ಪ[1]ಗೆವಂ
ಕೊಲಲಾಱಂ ಕಾಳಿಯಂ ಗಡಿನ್ನಾರ್ಪವರಾರ್
ಸಲೆ ಕೊಲಬಾರದ ಪಗೆಯಂ
ಗೆಲವಾರದದೆಂದುಮೆಂತುಮೆಂಬುದು ಪದನೇ ||೫೨||

ವ|| ಎಂದು ಮಂತ್ರಶಾಲೆಗೆ ಪೋಗಿ ಮಂತ್ರಿಗಳಂ ಬರಿಸಿ ಬೆಸಗೊಂಡೊಡವರಿಂತೆಂದರ್

ಪಗೆವಂ ಬಲ್ಲಿದನಾದನಾದ ರಸದ ಪ್ರಚ್ಛನ್ನ ತೀಕ್ಷ್ಣಾದಿ ಬಾ
ಧೆಗಳಂ ಗೆಲ್ದನದೇಕೆ ಮುಚ್ಚುಮಱೆಯಿನ್ನುರ್ವೀಶ್ವರರ್ತಮ್ಮ ವೈ
ರಿಗಳಲ್ತಾ[2]ರು[2]ಮನಿಕ್ಕಿ ಬಾರಿಸುವರಾರ್ ಕೇಳ್ಮಂತ್ರಮಂ ಮಲ್ಲಗಾ
ಳಿಗಮಂ ಮಾಡಿಸಿ ಕೊಲ್ವುದುಳ್ಳೊಡರಿಯಂ ಕಂಸಾವನೀವಲ್ಲಭಾ ||೫೩||

ಜಗಮೆಲ್ಲಮಱಿಯೆ ತಂಗೆಯ
ಮಗನನದೆಂತಿಱಿವೆಮೆಂಬೊಡನುಜರ್ತನುಜಾ
ದಿಗಳಲ್ಲದೆ ಭೂಪಾಳರ
ಪಗೆವರ್ಮತ್ತೊಂದು [3]ದೀವ[3]ದಿಂ ಬಂದಪರೇ ||೫೪||

ಮೊದಲೊಳ್ಮಿಲ್ಲನೆ ಮಲ್ಲರಿಂ ಮುಱಿಸು ಮಲ್ಲರ್ ಸೋಲ್ತೊಡಾ ಬೇಗದೊಳ್
ಮದವದ್ದಂತಿಯಿನೊಕ್ಕಲಿಕ್ಕಿಸು ಮದೇಭವ್ರಾತ[4]ಮುಂ[4] ಸೋಲ್ತೊಡೊ
ಟ್ಟಿದ ಕಿರ್ಚಿರ್ಪವೊಲಿರ್ದ ಖಟ್ಗಿಬಲಮಂ ಪೇೞ್ ಖಟ್ಗಿಗಳ್ ಸೋಲ್ತೊಡೋ
ವದೆ ನೀ[5]ನೊರ್ವನೆ[5] ಕಾದಿಕೊಲ್ ಪಗೆವನಂ ಕಾಳಾಂತಕಂ ಕೊಲ್ವವೊಲ್ ||೫೫||

ವ|| ಎಂಬುದುಮಿದೇ ಮಂತ್ರಮೆಂದು ನಿಶ್ಚೈಸಿರ್ದನಾ ಪ್ರಸ್ತಾವದೊಳ್ ಪಡಿಯಱಿಂ ಪೊಡೆವಟ್ಟು ಮಹಾಮಾತ್ಯಂ ಬಾಗಿಲೊಳ್ಪಂದಿರ್ದಪನೆನೆ ಕಂಸಂ ಬರವೇೞಿಂಬುದುಮಾರೋಹಕಂ ಬಂದು ಕಂಡು ಸಾಷ್ಟಾಂಗವೆಱಗಿ ಮುಂದೆ ನಿಂದು

ಕರಿ ಕೊಲೆಯೊಳ್ಜವಂಗೆ ಪುದು ಕಾಯ್ಪಿನೊಳಗ್ನಿಗೆ ದಾಯಿಗಂ ಜಹೋ
ದರವಳವಿಂ ಸಿಡಿಲ್ಗೆ ಮದದೊಳ್ಕಿಳಿ[6]ಕಾ[6]ಳಿಗೆ ಕಾಲತಕ್ಕಿಸೊಳ್
ಗುರು ಗರುಡಂಗೆ ಮಾರಿಗೊವಜಂ ಮುಳಿಸಿಂಪೆನೆ ನಿನ್ನ ಗಂಧ ಸಿಂ
ಧುರಪತಿಯಗ್ಗದಗ್ಗಳಿಕೆಯಗ್ಗಳಮಾದುದಿಳಾಧಿನಾಯಕಾ ||೫೬||

---

1 ಬ (ಚಟಡಣ) 2 ಗು (ಜ) 3 ದ್ವೀಪ (ಡ) ದೀವ (ಣ) 4 ಮಂ (ಚಟಡ) ಮಾ (ಣ)
5 ನಾತನೆ (ಚಟಡಣ) 6 ಗಾ (ಜ)

ಗಿರಿ ಪರಮಾಣುವಾಗೆ ಕಡಲೆಯ್ದೆ ಲಯಾನಳನೆಯ್ದೆ ಲೋಕಮಂ
ಧರಿಯಿಸಿ ನಿಂದ ವಾಯುಚಯಮೆಯ್ದೆ ವಿಹಾಯಸಮೆಯ್ದೆ ಕಾರಣಂ
ಕರಿಗುಱಿದಂತು ದಂತಿಗಳೊಳೀ ಬಲಮೀ ಮದಮೀ ಪ್ರತಾಪಮೀ
ಭರಸಹಸತ್ವ[1]ವಿಾ[1]ಸ್ಥಿರ ಮಹೋದಯಮುಕ್ಕುಮೆ ಕಂಸ ಭೂಪತೀ ||೫೭||

ವ|| ಎಂದು ಬಿನ್ನವಿಸಿ ತನ್ನ ಮನದ ವಿಷಾದಮಂ ಕಳೆದ ನಿಷಾದಿಗೆ ಚಿತ್ತಮು ಮನಂಗಚಿತ್ತಮುಮನಿತ್ತೆನ್ನ ಪಗೆಯುಂ ಬಗೆಯುಮಿಂದು ಸಾಧ್ಯಮಾದುದು ಮಧು ಸೂದನನಂ ಮುನ್ನಂ ಕೊ[2]ಲ್ವೆ[2]ನಿನ್ನು ಕೊಂದಪೆನೆಂದು ತೊಡೆಯಂ ಪೊಯ್ದು ತಡೆಯದೆ ಚಾಣೂರ ಮಲ್ಲನಂ ಕರೆಯಲ್ಕಳಿಪಿ ವೀರಾವೇಶದಿಂ ಮೆಯ್ಯಱಿಯದೆ ಕಂಸನಿಂತೆಂದ ನೆಂದಾನುಮೊರ್ಮೆ ಗಂಡಗರ್ವದ ದೆಸೆಯಿಂ ಕೈಟಭನೆಂಬ ದಾನವಂಗಾಂ ಪ್ರಾಣ ದಾನಂಗೆಯ್ದೊಡಾತಂ ವಿನೀತನಾಗಿ ನೀನೆನಗೆ ಪರೋಪಕಾರಿಯೈ ನಿನಗೀ ಭವದೊಳ್ಪೆ ಸಕೆಯ್ದಪ್ಪೆನಲ್ಲದೆ ಬೆಸೆದಿರ್ಪೆನಲ್ಲೆನೆನಗೆ ಬೆಸನೇನೆಂದೊಡಾನಾ ದಾನವನ[3]ವಂ[3] ಕಡು ಪುಮಂ ಕಾಯ್ಪುಮಂ ಕಂಡೀ ರಕ್ಕಸನಾನೆಯಾಗಲ್ತಕ್ಕನೆಂದು ಬಗೆದು ನೋಡಿ ನೀನೆ ನ[4]ಗೆ ಸಾಂ[4]ಗ್ರಾಮಿಕ[5]ನ[5]ಪ್ಪ ನಾಗನಾಗಿರೆಂದೊಡಾಗೆ ನಿಜಗಲಿಯಪ್ಪಜಿತನೆಂಬ ಗಜಮಂ ಪರಾಜಿತಂ ಮಾಡಿಯಜಿತಂ ಜಯನೆಂಬ ಪೆಸರುಮಂ * ವಿಕಾಸಿಸಿ ತಾನೇಕ ಕುಸುಮ ಕಾಸಾರ ಸರಿತ್ಸರೋವರಂಗಳೊಳಪೊಕ್ಕು ಕುವಳಯಮನೆ ಕಿತ್ತು ಮಸ್ತಕ ಪಿಂಡದೊ ಳೊಟ್ಟಿಕೊಂಡು ಕುವಳಯಾಪೀಡನುಮೆಂಬ ಪೆಸರುಮಂ* ಪಡೆದುದೆಂದದಱ ಪೂ[6]ರ್ವಾಂ ತ[6]ರಮಂ ತಿಳಿಪಿ ಮಾವಂತನಂ ಕರೆದು ಕಿವಿಯೊಳ್ ನಾಳೆ ನೀನುಂ ನಿನ್ನಾನೆಯುಂ ಗೋಪುರದೊಳ್ ಕಟ್ಟುಗೊಂಡಿರ್ದು ಪುರಮಂ ಪುಗುವ ನಂದನ ಮಗನಂ ಯಮ ಪುರಮಂ ಪುಗಿಸಿ ನೋಂತರ ಪಗೆಯನೆತ್ತಿಱಿದಂತೆ ಮಾಡೆಂದು ಕಳಿಪಿದನನ್ನೆಗಂ ಚಾಣೂರಂ ಬಂದು ಭುಜಾಸ್ಫಾಲನ ಪುರಸ್ಸರಂಬೆ[7]ಸಸು[7] ಬೆಸಸೆನೆ ಕಂಸನಿಂತೆಂದಂ

ಮೆಚ್ಚುಂಟು [8]ನಾಳೆ ನಿನ್ನೊಳ್
ಮ[8]ಚ್ಚರಿಸುವ ನಂದಸುತನ ಮೂಗಿಂ ಬಾಯಿಂ
ದುಚ್ಚಳಿಸೆ ರುಧಿರಮೆನಗಾ
ದಚ್ಚಿಗಮಂ ಮುಱಿವಡೊತ್ತಿ ಮುಱಿ ಚಾಣೂರಾ ||೫೮||

ವ|| ಎಂದ ಕಂಸಂಗೆ ಚಾಣೂರಮಲ್ಲಂ ಮುನಿದು

---

1 ಮ (ಚಜಟಡ) 2 ಲ್ಲಿ (ಚಜಟಡ) 3 ವುಂ (ಚಜಟಡ) 4 ಗೈಸಾಲ (ಚಟಡಣ) 5 ಮ (ಚಟಣ) 6 ರ್ವಾವತಾ (ಜ) 7 ಸ (ಚಟಡ) ರೆಸು (ಜ) 8 ಮೆಚ್ಚುಂ ಜಯೆ ನಾಳೆ ನಿನ್ನೊಳ (ಡ) * ಈ ಭಾಗ 'ಜ' ಪ್ರತಿಯಲ್ಲಿಲ್ಲ.

ಕ್ಷೋಣಿಪ ನೀವೀ ಮಾತಂ
ಮಾಣಕ್ಕಟ ಕೀಡೆ[1]ಯಂ[1] ಕಿಮುಟ್ಟುವುದಕ್ಕೀ
ಚಾಣೂರನೇಕೆ ಮುಳಿದಾಂ
ಪೂಣಿಸಿದೊಡೆ ಕೃಷ್ಣನೆಂಬ ಮಾನಸನೊಳನೇ ||೫೯||

ದೆಸೆಯಂ ನುಂಗೆಂಬುದೇ[2]ಕಾ[2]ಗಸಮನುಡುಗಿ ಕಟ್ಟೆಂಬುದೇಕರ್ಕನಂ ನೀಂ
ಪೊಸೆದೀಡಾಡೆಂಬುದೇಕಾ ದಿಗಿಭದೊಡನೆ ಪೋರೆಂಬುದೇಕೆನ್ನ[3]ನೆಮ್ಮಾ[3]
ಪಸುವಂ [4]ಕಾದುಂ[4]ಬ ಪಾಲ್ವಲ್ಗಳ ಹಸುಳೆಯನಿಕ್ಕೆಂದು ಬಾಳರ್ಗೆ ಪೇೞ್ವೀ
ಬೆಸನಂ ಚಾಣೂರಮಲ್ಲಂಗೆನಗೆ ಬೆಸಸಲೇಂ ತಕ್ಕುದೇ ಕಂಸರಾಜಾ ||೬೦||

ಭಾವಿಪೊಡಾಂ ಜಟ್ಟಿಯವಂ
ಗೋವಳನೆಂದಂದು ದೇವ [5]ಪೋರ್ತದೊ[ಳ್][5]ವನೆ
ನ್ನಾವೆಡೆಗೆ ವರ್ಪನೆನಗಂ
ದೇವಕಿಯ ಸುತಂಗಮುಜಗಜಾಂತರಮಲ್ತೇ ||೬೧||

ವ|| ಆದೊಡಂ ದೇವರಭಿಪ್ರಾಯಮನಱಿದೆಂ ದ್ರೋಹರನಾನೆಗಿಕ್ಕುವುದು ತಕ್ಕುದಲ್ಲನೆ ತಗದೆನಲಾಗ ನಾಳೆ ದೇವಕಿಯಕ್ಕೆಯನಖ್ಖಡದೊಳ್ ದೇವರ ಕಿವಿಗೆಯ್ದಿಸುವೆನಂತುಮಲ್ಲದೆ

ತ[6]ನ್[6]ತನಗೀ ಜಗತ್ರಯಮುಮಿರ್ಪುದು ತಾಂ ಗಡ ಪೇೞದೆಲ್ಲಿದ
ರ್ಮುನಿವರುಮೆಲ್ಲಮುಲ್ಲಿರದೆ ಪೂತನಿಯಂ ಖರಕೇಶಿಯಂ ಯಮಾ
ರ್ಜುನರನರಿಷ್ಟನಂ ಶಕಟನಂ ಪಟುಕಾಳಿಯನಂ ಕಡಂಗಿ ಕೃ
ಷ್ಣನ ಬಸಿಱಿಂದಮಾಂ ತೆಗೆಯದಿರ್ದೊಡೆ ನೀಂ ತೆಗೆಯೆನ್ನ ಜೋಳಮಂ ||೬೨||

ವ|| ಎಂದು ಚಾಣೂರಂ ಪೋಗೆ ಕಂಸಂ ಗೃಹಮಹತ್ತರನಂ ಕರೆದು ನಾಳೆ ಮಲ್ಲಗಾಳೆಗನೆಂಬುದುಮವಂ ಮಹಾಪ್ರಸಾದಮೆಂದ[7]ಖ್ಖ[7]ಡಮಂ ಸಮೆಯೆ

ವಿಕಿರನ್ನಾನಾಪತಾಕಾಪಟಳ ಪಟುಪಟೀ ಪ[8]ಕ್ಷ[8]ವಿಕ್ಷೇಪದಿಂ ಮೇ
ಚಕಿತಂ ರತ್ನಾವಳೀ ತೋರಣ ಕಿರಣ ಮರುಚ್ಚಾಪ ಚಾರಂಗಳಿಂ ಚಂ
ದ್ರಕಿತಂ ಪುಷ್ಪೋಪ ಹಾರೋಜ್ವಲ ಮುಕುಳಮಿಲತ್ಕೀರ್ಣ ಕರ್ಪೂರದಿಂ ತಾ
ರಕಿತಂ ತಾನಾಗಿ ಪೊಲ್ತಿರ್ದುದು ವಿಮಳನ[9]ಭೋ[9]ರಂಗಮಂ ಮಲ್ಲರಂಗಂ ||೬೩||

---

1 ಯುಂ (ಚಟ) 2 ರಾ (ಚಟಡ) ನಾ (ಣ) 3 ನಯ್ಯೋ (ಚಟಡಣ) 4 ಕೊಯ್ದುಂ (ಜ) 5 ಪೋರ್ತದೊಡ (ಚಟಣ) ಪಾದೋರ್ಡವು (ಜ) ಪಾರ್ದ್ಧದೊ (ಡ) 6 ನು (ಚಟಡಣ) 7 ಖಂ (ಚಟಡಣ) 8 ಕ್ಷಿ (ಚಜಟಡ) 9 ಭಾ (ಚಟಡ)

ಪಿರಿದುಂ ಪೊತ್ತಿರ್ಪಿನಂ ಕಟ್ಟಿದ ಪಟಿಗೆಗಳ ಕ್ಷ್ಣಾಣನಕ್ಷತ್ರ ಮಾಳಾ
ಭರ[1]ಮಂ ಮುಂ[1]ದಿರ್ದ ಕಂಭಂ ಕರಮೆನೆ ಕಳಶಂ ಕುಂಭದಂತಾಗೆ ಬೇಗಂ
ಕರೆದತ್ತುತ್ಪಾತಮಂ ನಿರ್ಗತ ವಿಪುಳ ತಳಾಸ್ಥೂಳವಂತಂ ಗವಾಕ್ಷ
ಸ್ಫುರಿತಾಕ್ಷಂ ಪಕ್ಷಕೇತು[2]ಶ್ರುತಿ[2] ಧರಣಿಕರೇಣೂತ್ತಮಾಂಗಂ ತವಂಗಂ ||೬೪||

ವ|| ಆ ತವಂಗಮಂ ತೋಱತುಱುಂಬುಂ ಪೆಡೆಯಂ ಸ್ರೋಲಿ ಕೊಂಡ ಖೇಟಕಮುಂ ಕಿಟ್ಟಿ ಕರವಾಳುಂ ಭಯಂಕರಾಕಾರಮಾಗೆ ಪೂಸಿದ ಸಿರಿಖಂಡದ ಕಂಪುಂ ಸೂಡಿದ ಕೇದಗೆಯ ಸೊವಡುಂ ದೆಸೆದೆಸೆಗೆ ಸುಟ್ಟುರೆಗೆ ಗರುಡಧ್ವಜನೆಂಬ ಗರುಡನ ಬಾರಿಗೆ ವಧ್ಯಶಿಲೆಯನೇಱುವ ನಾಗಕುಮಾರನಂತೆ ವಿಷಮುಖನಪ್ಪ ಕಂಸಂ ಬಂದೇಱಲೊಡನೆ

ಕೊನರಿಸೆ ಕೇಶಪಾಶರುಚಿ ಕಟ್ಟಿಲೆಯಂ ಮಣಿಭೂಷಣಾಂಶುಗಳ್
ಘನಕುಚಕೋಕಮಂ ಬಿಸಿಲನಾಗಿಸೆ ಚಂದ್ರಿಕೆಯಂ ತುಳುಂಕೆ ಲೋ
ಚನಮೊಡನೇಱಿ ನೂಪುರ ಝುಣತ್ಕೃತಿ ನೆತ್ತರ ಪಾನಗೋಷ್ಠಿಗಾ
ತನ ಬಟಿ[3]ಸಲ್ವ ಯೋಗಿನಿಯರಂತೆವೊಲೇಱಿ[3]ದುದಂಗನಾಜನಂ ||೬೫||

ಪೊಳೆದು ಪಳಂಚಿ ಮಿಂಚಿ ಮಣಿಮಂ[4]ಗಿ[4]ಳ ದೀಧಿತಿಯಲ್ತು ತಾರೆ ಬಾ
ಳ್ವೆಳಗಿನ ಬಂಬಲೊಳ್ಸಕಳ ನಾಯಕದಾಯಕ ದಂಡನಾಥ ಮಂ
ಡಳಿಕ ಮಹಾಪ್ರಧಾನ ಮಹಿಪಾಳ ಕುಮಾರಕರೋಳಿಗೊಂಡು ಚೌ
ಪಳಿಗೆಯನೇಱಿ[3]ದರ್ಮುಗಿಲನೇಱುವ ಖೇಚರರಾಜರಂದದಿಂ ||೬೬||

ಅನಿ[5]ಮೋ[5]ಷ ....
....ಗೆ್ಡೆಯಿಲ್ಲದಂತು ಗಗನಂ ಬಂದಿರ್ದನಿಂದ್ರಂ ಮಹಾ
ಧ್ವನಿಯಿಂ ನಾರದನಾಱಿ ತನ್ನ ತನುವಂ ತೀವಿರ್ದ ಕಂಣಾರೆ ಕೃ
ಷ್ಣನ ಚಾಣೂರನ ಮಲ್ಲಗಾಳೆಗವನಾಗಳ್ ನೋಡುವಾನಂದದಿಂ ||೬೭||

ವ|| ಅನ್ನೆಗಂ ನೆಲಕ್ಕಮಾಗಸಕ್ಕಂ ಕೀಲ್ಗೊಂಡಂತಪ್ಪ ದೀರ್ಘಾಕಾರ ಮುಮ್ಮೇಱಿಂ ಟಾನೆಯನೊಂದು ಮಾಡಿದಂತಪ್ಪ ತೋರಮುಂ ಎರಡು ತೊಡೆಯುಂ ತೋಱಿ ತೆಮಳ್ದು ಬಿಗಿದುಟ್ಟ ನೇತ್ರಾವಳಿಯ ಚಲ್ಲಣಮುಂ ತಲೆಗೆ ಮೂದಲೆಯಾದ ಭೂರಿಭೂಜಶಿಖರಂ ಗಳ್ಗೆ ದಿಟ್ಟಿಯಾಗದಂತಿಟ್ಟ ಕತ್ತುರಿಯ ಬೊಟ್ಟುಂ ನೆಲನಂ ತಕ್ಕೈಸಲ್ತಕ್ಕಂತಪ್ಪ ತೋಳ್ಗಳುಂ ಮಿಡಿದ ಬೆರಲೊಡೆವಂತಪ್ಪ ಮುಷ್ಟಿಯುಮುರ್ಕಿಂಗೆ [5]ಮೆಚ್ಚ[5]ಲ್ನೆಱಿವಂತಪ್ಪ

---

1 ಣಂವಂಂ (ಜ) 2 ಶೃತಿ (ಚಜಟಡ) 3 ಡ (ಜ) 4 ಖಿ (ಚಟಡಣ) 5 ಮುಳ್ಳ (ಜ)

ಮುಷ್ಟಿಯುಂ ಸಱಿಯನುರ್ಚಿ [1]ಪೋಗಲ್ ಸಾ[1]ಲ್ವಂತಪ್ಪ ತಿಣ್ಪಿಂ ಮಿಂಚಿಂ ಮಾಡಿ ದಂತಪ್ಪನುಣ್ಪುಮನೆ ನೇರಿತಾಗಿ ಚೂರಿಸಿದ ಸಿರಿಖಂಡದ ತಿಮಿರುಮಿಕ್ಕಿದ [2]ಜವಿ[2]ಯ ದಂಡೆಯುಂ ಸೊರ್ಕಾನೆಯ ಕಯ್ಯ ಕರಿಯ ಪಿರಿಯ ಪಿಲ್ಲಣಿಗೆಯೆಮಗುರ್ವುಮದ್ಭುತ ಮಾಗೆ

ಕಡೆದಂತಪ್ಪಂಗಮುಂ ಕಂಡರಿಸಿ ಬೆರಸಿದಂತಪ್ಪಪಾಂಗಂಗಳುಂ ಮುಂ
ದಿಡೆ ಬಲ್ಪಿಂ ತುಂಬಿ ಬೀಳ್ಗೊಟ್ಟಿದ ಮಳಯಜದೊಳ್ಮಿಕ್ಕಿ ನಿಳಾಳಕಂಬೋಲ್
ಕುಡೆ ಚೆಲ್ವಂ ಚಲ್ಲಣಂ ಚಂಡಿಕೆ ಮಿಳಿರೆ ಭುಜಾಸ್ಫಾಳನಂಗೆಯ್ಯುತುಂ ಬೊ
ಬ್ಬಿಡುತುಂ ಗಂಡೇಱಿ ಬಂದಂ ಮದಗಜಗತಿಯಿಂದುರ್ವಿ ಚಾಣೂರಮಲ್ಲಂ ||೬೮||

ಮಲ್ಲನ ಗಂಡಸ್ಥಳಿಗಳ
ವಲ್ಲದೆ ಕವಿದತ್ತು ಕಿವಿಯ ಕತ್ತುರಿ [3]ಮದವೊಂ[3]
ದಲ್ಲುಗುವಂತಿರೆ ತನ್ನೊಳ್
ಪಲ್ಲಟಿಸಿ ಕರೀಂದ್ರಕಾಯ[4]ಬಲಮುಂ ಚಲ[4]ಮುಂ ||೬೯||

ನಗವೆಂಪೆ ವೊಗಸಿ ಮುತ್ತುವ
ಮುಗಿಲಂತಿರೆ ಮಲ್ಲನಿಕ್ಕಿದಣ್ಪಿನ ಕಂಪಿಂ
[5]ದ[5]ಗಿದಗಿದು ಮುಸುಱಿ ಮುತ್ತಿದು
ವಗಣಿತಮತಿ ಒಹಳ ಮಧುವ್ರತಪಟಳಂ ||೭೦||

ಐರಾವಣದಯೆ ಪೆಱಗನೆ
ವಾರಣಗಣವಾಸೆಯಿಂದೆ ಬರ್ಪಂತಿರೆ ಚಾ
ಣೂರನ ಪೆಱಗನೆ ಮುಷ್ಟಿಕ
ಧೀರೋದ್ಧತ ಮುಖ್ಯರಪ್ಪ ಮಲ್ಲರ್ವಂದರ್ ||೭೧||

ವ|| ಬಂದು ಕಡಿತಮಂ ಬಳಸಿಕೊಂಡಿರ್ಪ ಜೂದುಗಾಱರಂತೆ[6]ಯಖ್ಖ[6]ಡಮಂ ಬಳಸಿಕೊಂಡು ಕುಳ್ಳಿರಲೊಡನೆ

ಎಡೆವಿಡದೆ ಮಲ್ಲಗಳನಂ
ಕುಡಿಮಿಂಚಿನ ತಟ್ಟೆ ಸುತ್ತಿದಂತಿರೆ ಬಾಳುಂ
ಕಡಿತಲೆಯುಂ ಹಲಗೆಯುಮವು
ಕಿಡಿಗುಟ್ಟೆ ಪಳಂಚೆ ಸುತ್ತಿದರ್ಕೂರಾಳ್ಗಳ್ ||೭೨||

---

1 ಸಾ (ಚಟಡಣ) 2 ವಿಜ (ಟಣ) 3 ಮ-ದವೊ (ಚಡಣ) ಮೊದವ-(ಟ) 4 ಮಂ ಚಲಕರ (ಚಟಡಣ) 5 ನ (ಚಟಡ) 6 ಯಸ್ಥ (ಚಟಡ)

ಶರನಿಧಿಯ ತೆರೆಗಳುಂ ದಿ
ಕ್ಕರಿಕುಳಮಂ ಬಳಸಿದಂತೆ ನೆಲನಂ ನೆಲೆಯೊಳ್
ತುರಗದಟಿಮುಂ ಮಧೇಭೋ
ತ್ಕರ[2]ಮುಂ[1] ಬಳಸಿದುವು ಮಲ್ಲರಂಗಮನಾಗಳ್ ||೭೩||

ವ|| ಅಂತು ಕಂಸಂ ಕೃಷ್ಣಂಗೆ ಕೆಡೆವಂದುದಂ ಕಂಡು ವಸುದೇವಂ ಬಲದೇವಂಬೆರಸು ಚಾತುರ್ದಂತ ಬಲಮಂ ಕೂಡಿಕೊಂಡು ನಿಯುದ್ಧರಂಗದ ಕೆಲದೊಳ್ ಯುದ್ಧಸನ್ನದ್ಧರಾಗಿರ್ದಾಗಳುದ್ಧತನಾಗಿರ್ದ ಕಂಸಂ ಪಡಿಯಱನಂ ಕರೆದು ಕಿವಿಯೊಳ್ ಪರ್ಚುವುದುಮಾತನಂತೆಗೆಯ್ವೆನೆಂದು ಪೋಗಿ ಯಶೋದೆಗೆಂದಂ ನಿನ್ನ ಮಗನೆಲ್ಲಿಗಾದೊಡಂ ಕಾಳೆಗವೆಂದೊಡೆ ಪೂಣೆಗನಾಗಿ ಪಱಿವಱಿಯಪ್ಪನ ವ್ಯಸನಮುಂ [2]ಬೆ[3]ಸನಮುಳ್ಳೊಡೆ ಬಂದು ಚಾಣೂರಮಲ್ಲನೊಳ್ ಮಲ್ಲವೋರ್ದು ಪರ್ವಕ್ಕೆ ನೆರೆದರಸುಮಕ್ಕಳ ಕಣ್ಗೆ ಪರ್ವಮಂ ಮಾಟ್ಕೆಂದು ಕಂಸಮಹಾರಾಜಂ ಬೆಸಸಿಯಟ್ಟಿದನಿವೆ ತಿವುರುಂ ತಿಳಕಮುಂ ಬೆರಸುತಪ್ಪೊರಿಸಿಕೊಂಡು ಬರ್ಕೆಕೊಳ್ಳಿಮಾತನೆಲ್ಲಿದನೆಂಬುದಂ ಯಶೋದೆ ಮುಗುಳ್ನಗೆ ನಗುತಿಂತೆಂದಳ್

ಎನ್ನ ಮಗನಾವ ತಿವುರಿಂ
ಮುನ್ನಿಕ್ಕಿದನಣ್ಣ ಶಕಟನರ ಪೂತನಿಯಂ
ಪನ್ನಗನಂ ಯಮಳಾರ್ಜುನ
ರನ್ನರಕ[3]ನ[3]ನವನಿನಧಿಕನೇ ಚಾಣೂರಂ ||೭೪||

ವ|| ನಿಜದಿಂ ಕೂರ್ಪುಳ್ಳನುಮಂ ಕತ್ತರಿವಾಣಿಯುಮಂ ಮನೆಯಲೇಕೆ ಸಿಂಗಮಾನೆಯಂ ಮುಱಿವಲ್ಲಿಗಾವಭ್ಯಾಸಮಂ ಮಾಡಿದುದು ಮುರಾಂತಕ[4]ನಂ ಅಂ[4]ತಕನುಂ ಕೊಲ್ವುದನಿನ್ನು ಕಲ್ತಪರಿ ಕೇಳಿಮೆನ್ನ ಮಗಂ ನೀರೊಳ್ಮಾನಂ ಬಿಸಿಲೊಳ್ಬಾಡಂ ಬೆಂಕಿಯೊಳ್ಬೇಯಂ ಜವನ ಕಯ್ಯೊಳ್ ಸಾಯಂ ಏನುಂ ಬೇಡೊಡಗೊಂಡು ಪೋಗಿಮೆಂಬನಿತರ್ಕೆಯಂಬುಜೋದರಂ ಬಂದಬ್ಬಾ ಪಸಿದೆನೆಂಬುದುಂ ಯಶೋದೆಯಿಂತೆಂದಳ್

ಸಮೆದೆಂ ಮೊಸರಂ ಬಾಟಿಪ್ಪೊಸ
ರುಮನಾಂ ಘನವಾಗಿ ತಂದೆನಿಕ್ಕಿದಪೆಂ ಲಂ
ಚಮನೆನ್ನ ಮಲ್ಲ ಚಾಣೂ
ರಮಲ್ಲನಂ ಮುಱಿದು ಬಂದು ಹಸಿವಂ ಮುಱಿಯಾ ||೭೫||

---

1 ವಂ (ಚಟ) 2 ಬ್ಯ (ಚಟ) ವ್ಯ (ಡಙ) 3 ಲಿ (ಚಟ) ರಿ (ಜ) 4 ನಂ (ಜ) ನುಂ ಅಂ (ಙ)

ವ॥ ಅನಿತರ್ಕೆ ನಿನ್ನ ಪೊಡರ್ಪುಂ ಪಸಿವುಂ ಕೂರಿತಕ್ಕುವೆಂಬುದುಮಕ್ಕಟಾ ! ಸಗ್ಗಮೆ ಕಾಳೆಗವುಳ್ಳೊಡೆ ಕೂಟಕೀವುದೆಂದು ಪಡಿಯಱರನೀ ಬಂದೆನೆ ನಡೆಯಿಮೆಂದು ಮುಂದೆ ಕಳಿಪಿ ತಾನುಟಿಯ ತನ್ನೋರಗೆಯ ಗೋಪರೆಲ್ಲರಂ ಮಲ್ಲವಸದನಂಗೊಳಿಸಿ ತಾಯ್ಗೆಱಗಿ ಪೊಡೆವಟ್ಟನಂ ಯಶೋದೆ ವೀರಶ್ರೀಗಾಣ್ಮನಾಗೆಂದು ಪರಸೆ ಪರಕೆಯನಾಂತು ಗೋವಳರೊತ್ತುವ ತಿತ್ತಿರಿಗಾಳೆಯ ತೂತ್ಕಾರಮುಮೂದುವ ಕೊಟಿಲ ಸರನುಂ ಪಿಡಿವ ಕೊಂಬಿನ ನಿನದಮುಂ ಪೊಯ್ವಕ್ಕವದ್ದಳೆಯ ದನಿಯುಂ ಊದುವ ಱುಂಚೆಯ ರವಮುಂ ಬಾರಿಪ [1]ಜಂಕ[1]ರವುಂ ರವಳಿಯಂ ನೆರಪೆ ನರಪತಿಯ ಪುರಕ್ಕಾಗಿ ನರಕಮಥನಂ ಮಸಗಿ ಬರ್ಪನನ್ನೆಗಂ [2]ಕಂ[2]ಸನಿಂ ಮುಂದೊಂದು ಕಾಲಮು ಪಕ್ರತನಾದ ಮಧುವೆಂಬ ದಾನವನವನ ಬೆಸದಿನಸಗನಾಗಿ ಪಿಸರುಹೋದರನನಸಗವ್ರೊ[3]ಯ್ಲ್ಲನು[3]ಯ್ವೆನೆಂದು ಬಂದೊಗೆಯುತ್ತುಮಿರ್ಪ ಮಡಿವಳನ ಮುಂದಣ ಮಡಿಯುಮಂ ತನ್ನೊಡನೆಯ ಗೋವಳಿಗರುಟ್ಟ ಮೈಲಗೆಯುಮಂ ಮಧುಸೂದನಂ ಕಂಡು ಸಮೀಪಕ್ಕೆ ವಂದು

ಒಗೆದೊಗೆದು ಮುರಿದು ಜಗುನೆಯೊ
[4]ಳಗಲೊಗೆದುಂ[4] ಪಿಂಡುತಿರ್ಪ ರಜಕನನೀ ಸೀ
ರೆಗಳನುಡಲೀವುದೆಮಗೆನೆ
ಜಗಳಂ ಜಕ್ಕುಲಿಸಿದಂತೆ ನಕ್ಕಂ ರಜಕಂ ॥೭೬॥

ವ॥ ನಕ್ಕು ರಜಕಂ ಸೀರೆಗಳಂ ಕಂಸದೇವನುಡುಗುಮೆಂದಾತನ ಬೀಟುಡೆಯವರುಮುಡುಗುವಲ್ಲದೆಡೆಯ ಕಡೆಯ ಬಡವರುಡಬಾರದೆನೆ ಮುಕುಂದನಿವನಂದಮಕ್ಕುಮೆಂದು ಮತ್ತಂ ಕೇಱು ಬೇಡೆ

ಅಣ್ಣ ಟಿಯದರಸರುಡುವೀ
ಬಣ್ಣಂಗಳನುಡ[5]ಲ[5] ಬಯಸಿದಣ್ಣನ ನೊಸಲೊಳ್
ಕಣ್ಣುಂಟೆ ತೋ[6]ಱ[6] ನೊಸಲೊಳ್
ಕಣ್ಣುಳ್ಳನುಮಾಱ[7]ನಾರ್ಪ[7]ಡುಡುವನೆ ತೊವಲಂ ॥೭೭॥

ವ॥ ಎನೆ ವನಮಾಳಿ ಮಾಳಾಪ್ರಪಂಚಂ ಬೇಡ ಬಿಡುಬಿಡೆಂದು ರಣರಂಗಾರ್ಥಿಯಾಗಿ ರಂಗಕಾಱನ ಕಯ್ಯ ಸೀರೆಯಂ ಸೆಳೆಯಲನುಗೆಯ್ಯಲೊಡನೆ

---

1 ಜಂಕರದ ಜಿಂಕ (ಜ) ಚಿಂಕಾ (ಡ) ಚಿಂಕಿ (ಙ) 2 ಮುಂದೆ ಕಂ (ಜ) 3 ಯ್ಯುವ್ರೊ (ಚಜಟ) ಯ್ಲಿಪೊ (ಡ) 4 ಳೊಲೆದೊಲೆದು (ಜ) ಳಗಲೊಗೆದಾಂ (ಡ) 5 ಲು (ಚಟಡ) 6 ಱ (ಜ) 7 ಮಾರ್ಪ (ಚಡ) ನಾರ್ಪೋ (ಙ)

ಕಟ್ಟೆಣ್ಮಾರ್ಕಾಱನಿವನಿ
ನ್ನುಟ್ಟಲ್ಲದೆ ಮಾಣನುಡಿಸುವೆಂ ಗಡಮಿವನಾ
ನುಟ್ಟಪೆನೆಂಬನ ಮುನ್ನು
ಳ್ಳುಟ್ಟುದುಮಂ ಸುಲಿದು ದೇಸೆ[1]ಯಂ[1] ಕಾಸೆಯುಮಂ ||೭೮||

ವ|| ಇವಂ ಮುಟ್ಟಿದೊಡೆ ಕಂಸದೇವನಾಣೆಯೆನೆ ನೀ ಕುಡದೊಡೆ ಕಂಸದೇವ ನಾಣೆಯೆಂದ[2]ಷಿ[2]ತಾಂಬರಂ[3]ಗಂ[3]ಬರನೆ ರಜಕನಂಬರಂಬರಂ ತುಂಬುರಗೊಳ್ಳಿಯಂತೆ ಪಿಡಿದಿಂತಪ್ಪ ಪಿತಗನನೆಲ್ಲಿಯುಂ ಕಾಣೆನಾಣೆಗೆ ಮಾಱಾಣೆಯಿಟ್ಟಪಂ ನಾಯ ಬಾಯ ಪೀರೆಯಪ್ಪೊಡೆ ಪೀರೆಯತ್ತ ಸಾರೆಂದು ಮುಂದೀಡಾಡಿ

ಉಡುವೊಡುಡು ಪೇೞ್ದಿನರಸರ
ಮಡಿವರ್ಗಮಿವುಟ್ಟುಕೊಳ್ವ ಕಲಿಗಳ ಕಾಲಂ
ಪಿಡಿದಡಿಸಿ ಕಂಸದೇವನ
ಮಡಿವಳನೊಗೆದಾೞ್ತಿ ಪರಪಲಿಂ ಕಲ್ತಪನೇ ||೭೯||

ವ|| ಎನೆ ಕೃಷ್ಣಂ ಕಿಱುಮುನಿಸು ಮುನಿದು

ಇದು ಸತ್ಯಮೊಗೆವ ಕಯ್ಯಾ
ವುದು ತೋೞ್ಕಂದಸಗನೆರಡು ಕಯ್ಯಂ ಮುಱಿದಿ
ಕ್ಕಿದನೂರ ಪೀರೆಗಸಗಂ
ತಡೆವಡೆದನೆನಿಪ್ಪ ಸಾಪ ನುಡಿ ಪರೆವಿನೆಗಂ ||೮೦||

ವ|| ಮುಱಿದಿಕ್ಕಿ ಸು[4]ಬ್ಬ[4]ರಸೂೞ್ಕ[5]ಯಾ[5]ಗೆ ಮಡಿವರ್ಗಮಂ ಗೋವರ್ಕಳ್ಗೆ ಸೂೞ್ಕಿಗೊಟ್ಟಸಗವೊಟಕಿಯಂ ಪುಯ್ಯಲಿಡಿಸೆ ಪೋಟಲಂ ಪುಯ್ಯಲಿಡಿಸಲೆಂದು ಪುರು ಷೋತ್ತಮನಾ ಪುರದ ಗೋಪುರಮಂ ತಾಗೆವರೆ ತೊಟ್ಟನೆ ಕಟ್ಟಿದಿರೊಳ್

ಮುಗಿಲಂ ಮುಟ್ಟಿದ ಕಾಳಕಾಯ ಬಲದಿಂದರ್ಕಂಗೆ [6]ಕೋಡಿ[6]ಟ್ಟ ಕೋ
ಡುಗಳಿಂ ಬಿಟ್ಟದ ಬೀಟಲಂತಲೆವ ಕ[7]ಯ್ಯಿಂ[7] ಪೃಥ್ವಿಪಾತಾಳಮಂ
ಪುಗೆ ಗಾತ್ರಾಪರಮಿಟ್ಟು ಮೆಟ್ಟುವಳವಿಂ ಸಪ್ತಾರ್ಚಿಯಂ ಸೂಸುವ
ರ್ಚಿಗಳಿಂದೇಂ ಕೆದಱುತ್ತೆ ಬಂದುದೊ ಮದಸ್ತಂಬೇರಮಂ ಬೇರಮಂ ||೮೧||

---

1 ಯುಂ (ಜಡ) 2 ಪೀ (ಜಡ) 3 ಗಳಂ (ಜ) 4 ಚ (ಜ) 5 ಯೋ (ಚಟಡಣ) 6 ಟಟ್ಟ (ಜ) 7 ಯ್ಯಂ (ಚಟಡಣ)

ಕಕುಭಂ ಮುಂಗಾಲ್ ಕ[1]ಕು[1]ದ್ಮತ್ವತಿ ವಿಷಮ ವಿಷಾಣಂ ರದಂ ಪೂತನಾ ತುಂ
ಗಕುಚಂ ಕುಂಭಸ್ಥಳಂ ಕಿಟ್ಟಿ ವನಿಧರವೊಡಲ್ಯಾಳಿಯಂ ಸ್ಥೂಳಹಸ್ತಂ
ಶಕಟಂ ಪೃಷ್ಠಪ್ರ[2]ದೇಶಂ[2]ಹರಿಖರಪರಿಕೋಪಾಗ್ನಿ ಕಣ್ಣಾಗ್ರ ವಿದ್ವೇ
ಷಕವೊರ್ಮೆಯ್ಯಾಗೆ ಮತ್ತಂ ಹರಿಗೆ ಮುನಿದು ಬರ್ಪಂತೆ ಬಂದತ್ತಿಭೇಂದ್ರಂ ||೮೨||

ಜಗಳದಿಭ ಮಾಡುವಂತೆವೊ
ಲುಗೆ ನೆತ್ತರ್ಕುತ್ತಿ ಕೆಡಪೆ ಮದದಾನೆಗಳಂ
ಮೊಗಮಿಕ್ಕಿಯಾನೆಯಿಱಪೆಗೆ
ಮೊಗಮಿಕ್ಕಿದ ತೆಱದಿನಿರ್ದುದೇಂ ಕರಿ ಪಿರಿದೋ ||೮೩||

ಅಂಗಕ್ಕೆಯ್ದುದು ಗಗನಂ
ತುಂಗರ[3]ದ[3]ಕ್ಕೆಯ್ದುದಿಱಿಯಲಗನಿಕರಂ ಧೀಂ
ಕಿಂಗೆಯ್ದುದು ಧಾರಿಣಿ ಮುಳಿ
ಸಿಂಗೆಯ್ದುದು ಮೂಱು ಲೋಕಮಾ ಮದಗಜದಾ ||೮೪||

ವ|| ಆ ಕೈಟಭನೆಂಬ ಕಟ್ಟಾನೆ ಮುನ್ನಮೆ ತಾಂ ರಕ್ಕಸನಪ್ಪುದಱಿಂ ಮಾನಿಸರನೆ ಕಡಿಗೊಂಬುಗೊಂಡುಮೆಂತಾಂ ಮೆಚ್ಚಿದ ಕೂಳೆಗಡಿಯನಾಗಿ ಬಿಟ್ಟ ಕಣ್ಣುಂ ಬಿಗಿದ ಮೊಗಮುಂ ಮನದ ಮುನಿಸುಂ ಮೆಯ್ಯ ಮುಱುಕಮುಂ ಪ್ರತಿಮಾನದ ಪೆಣನುಮಣ ಲೊಳಡಸಿದಾನೆಯಡಂಗುಂ ಕೋಡ ಕಯ್ಯ [4]ಪೊ[4]ೞಿಪಣಿಯ ನೆತ್ತರನೊಂದು ನಿಮಿಷ ಮುಂ ಕುಂದಿಸದ ಕ್ರೋಧಿನಿಯೆಂಬಯ್ದಾನೆಯ ಮದದೊಳ್ ಮದಕ್ಕೆ ವಂದ ಕೀನಾಶ ನಂತೆ ಮಾಮುಸಕಂ ಮುಸಗಿ ಬರೆ ಮುಂದೆ ಪರಿತಪ್ಪ ಪರಿಕಾಱರ್ ರಾಮಕೃಷ್ಣ[5]ರಂ[5] ತೊಲಗು ತೊಲಗೆನೆ ಗೋವರೇಕಣ್ಣ ಕಣ್ಣ ತಲೆಯ[6]ಳ್ತೊ[6]ಲಗುವಂತಾಗಿ ಕಟ್ಟಾನೆಗೆ ಕಿಟ್ಟಳಮಾದುದೇಮಾನೆಯು[7]ಮಿದಿ[7]ರ್ಪಪ್ಪುದನಾರ್ಪಡೆವರೆನೆ ಪರಿಕಾಱ[8]ರೆಳ[8]ಗೊರ್ವಂ [9]ಗೊ[9]ರ್ವಿದ ಗೋವಳಿಗರ ಗರವಂ ಕಳೆದಾನೆ ತಾನೆ ತೊಲಗಿಸಿದಪುದು ನಮ್ಮಚ್ಚಿಗ ಮೇಕೆಂಬನಿತು ಬೇಗೆಯುಂ ಅಂಬುಂ ದೃಷ್ಟಿವಿಷಮುಂ ದಿಷ್ಟಿಯ ಮುಖಮುಂ ಮುಷ್ಟಿಯುಮಪ್ಪ ಮದದಾನೆಯೊಳ್ ಕೃಷ್ಣಂ ಕಯ್ಯಿಕ್ಕಿ ಕರಿಯ ಕಯ್ಯಂ ತನ್ನ ಕಯ್ಯ ಪವಣುಂ ತ್ರಾಣಮುಮಂ ಪಡಿಯಿಟ್ಟುನೋಟ್ಪಂತೆ ಪಿಡಿದು ಪೊಱದುರ್ ಬಣೆವಾವಿನಂತೆ ಪೆಣೆದ ಕಯ್ಯ ಕಾಲ ಕೊಂಬಿನ ಕುಂಭಸ್ಥಳದೆಡೆಗಳೊಳ್ ಬೆಣ್ಣೆದೊಡೆದ ಬಟ್ಟನಂತೆ ನುಣ್ಚಿ ನುಸುಳ್ದು ನೆರೆದು ನೋಟ್ಪರ ಕಣ್ಣಾರೆ ತನ್ನ ಮನಮಾರೆ ವಿನೋದಕ್ಕಾನೆ

---

1 ಕೆ (ಚಜಟಡ) 2 ದಂಗಂ (ಚಟಿದಣ) 3 ದ (ಚಟದಣ) 4 ಪೊಸಂ (ಜ) 5 ನಂ (ಚಜಟಡ) 6 ಳೊಳ (ಜ) 7 ನುದು (ಚಟಣ) ಉದು (ಡ) 8 ರೊಳೊ (ಚಣ) ರಳೆ (ಟ) ರ (ಡ) 9 ಕೊ (ಣ)

ಯೊಳೊಡಗೊಂಡಲಿಕ್ಕಿ ಲ[1]ಕ್ಕೆ[1]ತಱದಿಂ ಚಾಣೂರಮಲ್ಲನೊಳ್ ವ[2]ಲ್ಲಿಕ್ಕ್ಯವುದಕ್ಕೆ ಶ್ರಮ
ಮಂ[2] ಮಾಡುವಂತೆ ಗಜಮಲ್ಲನೊಳ್ ಪ್ರತಿಮಲ್ಲಂ ಮಲ್ಲವೋ[3]ರ್ದು ಸಿಂಹನಾದದಿನಾರ್ದು

ಒತ್ತಿದೊಡೊತ್ತಿ ಪತ್ತಿದೊಡೆ ಪತ್ತಿ ಪೊರಳ್ಚಿದೊಡಂ ಪೊರಳ್ಚಿ ಕಾ
ಯ್ದೆತ್ತಿದೊಡೆತ್ತಿ ಕುತ್ತಿದೊಡೆ ಕುತ್ತಿದ ಕೊಂಬನೆ ಕೂಂಕೆ ಕು[5]ತ್ತಿ[5] ಕೂ
ರ್ಗತ್ತಿಗೆಯಂ ಕನಲ್ದೊಱಯಿನುರ್ಚುವವೋಲ್ ವೊ[6]ಗ[6]ದಿಂದಮುರ್ಚ್ಚಿ ಮು
ನ್ನೆತ್ತಿ ಪಿಸುಳ್ದ [4]ಮುತ್ತ[4]ನುಗೆ ಮತ್ತಿಭಮಂ ಹರಿ ಪೊಯ್ದುರುಳ್ಚಿದಂ ||೮೫||

ವ|| ಕಮ್ಮಱನಂಬು ಕಮ್ಮಱಂಗೆಂಬಂತೆ ಬಟ್ಟ ಉತ್ತರಬಾ[6]ಳಂ[6]ತೆ ತನ್ನ ಕೊಂಬೆ
ತನಗೆ ಘಾತಕಮಾಗೆ ಸೊವಡಿಂಗಮುಗ್ಗಿಸಿ ತುಂಬಿವೆರಸು ಕೂಂಕೆ ಬಂಕೆ ಬಿ[7]ಟ್ಟು[7]
ಕುವಳಯಾಪೀಡನಂ ಕುವಳಯಾಪೀಡನಂ ಮಾಡಿ

ಮತ್ತಗಜೇಂದ್ರದೊಳ್ಪೊಣರ್ದು ಪೋರೆ ಮದಂಬೊರೆದಂಗಯಷ್ಟಿಯೊ
ಳ್ಕತ್ತುರಿಯಣ್ಪಿನಂತೆಸೆಯೆ ನೆತ್ತಿಯ ಸಿಂಧುರಮುಂ ಲಲಾಟದೊ
ಳ್ಪತ್ತಿ ಲಲಾಮದಂತಮರೆ ಕುಂಭಿಯ ಕೊಂಬರುಣಾಂ ಕವುಂಕುಳೊ
ಳ್ಕತ್ತಿದ ಪೊನ್ನ ಪಿಲ್ಲಣಿಗೆಯಂತಿರೆ ಕೈಟಭಮಲ್ಲನೊಪ್ಪಿದಂ ||೮೬||

ವ|| ಆ ಗಜಮಲ್ಲನೋಳ್ಪೋರ್ತಂಗೊಂಡುದೆ ಮಲ್ಲಸಿಂಗರಂಗೆಯ್ದಂಕಾಗೆ ಗ[8]ಲ್ಲಂ
ಗೊಂಡು[8] ಜೀವವಿರ್ದಂದದೊಳಾ ದ್ವಿಪದ ಪಿಂಗಾಲಂ ಪಿಡಿದು ಪಂದಿಯನೆ[9]ಟೆವಂತೆ[9]ಟಿದು
ಕೊಂಡು ಬಂದು ಮೂಱುಂ ಲೋಕಮುಮೊಂದೆಡೆಗೆ ವಂದಂತಿರ್ದ ಮಲ್ಲಗ[10]ಜ[10]ದ ನಡು
[10]ವ[10] ತಂದಿಡೆ ತವಗದ ಮೇಲಿರ್ದ ಕಂಸಂಗೆ ಹಾಸ್ಯಗರ್ಭಮಪ್ಪ ಗಂಡಗರ್ವದಿಂ
ಕೃಷ್ಣನಿಂತೆಂದಂ

ಅವಧರಿಸು ದೇವ ನಿನ್ನಂ
ತೆವೊಲಾರ್ಮೆಯ್ಯಱಿಯದರಸರಾರಿರ್ದರಿದಂ
ನವನವದಾವಸ್ಥಿತಮಿ
ನ್ನವು ಮದಗಜಮೊಳವೆ ಕಾಡೊಳಂ ಕಂ[11]ಜ[11]ದೊಳಂ ||೮೭||

ಬಳವದ್ದಂತಿಯನಿಂತುಪೇಕ್ಷಿಸುವರೇ ಬಿದ್ದಿರ್ದುದೀ ದಂತಿ ಭೂ
ತಳದೊಳ್ ತೋಱುವೆನೆಂದು ತಂದೆನಿದನಾಂ ದೇವರ್ಗಿದೆನ್ನೋಲಗಂ
ಗಳನೋ ಗಾಳಿಯೊ ಸ[12]ಪ್ತ[12]ಮೋಗ್ರಮುದವೋ ಕಾಷ್ಠಾಗ್ನಿಯೋ ಕೂಟಪಾ
ಕಳನೋ ತೋಱಿಸು ವೈದ್ಯರಂ ಕರೆದಲೇ ಕಂಸಾವನೀಪಾಳಕಾ ||೮೮||

1 ಕ್ಕೆ (ಚಟಡಣ) 2 ಲ್ಲಿಕ್ಕುರ್ದಕ್ಕೆ ಸವಂ ಮಾಡುವಂತೆ ತನ ನಿಲ್ಲನೊಳ್ಮಲ್ಲಿಕ್ಕುರ್ವುದಕ್ಕೆರ್
ಸೇವಂ (ಜ) ಲ್ಲ ಕೂಟಕ್ಕೆ ಶ್ರವವುಂ ಮಾಡುವಂತೆ ಗಜಮಲ್ಲನೊಳ್ಮಲ್ಲಕ್ಕೊದಕ್ಕೆ ಶ್ರಮವಂ
(ಟ) 3 ಕ್ಕೆ (ಜ) 4 ದ (ಚಟಡಣ) 5 ಯಾತರ್ (ಚಟಡಣ) 6 ಳದಂ (ಜ) 7 ದುರ್ (ಚಟಡಣ)
8 ಲ್ಲಂ (ಚಟಡಣ) 9 ಳ (ಜಡ) 10 ವೆ (ಜ) 11 ಬ (ಜ) 12 ಪರ್ (ಚಟಡಣ)

ವ|| ಈ ದಂತವೆಱಕಿತರ್ಪಲ್ಲಿ ಕಯ್ಯ ಬಾಯಿಗೆ ಬಂದುದಿದಂ ದೇವರವಧಾರಿಸಿ ಭಂಡಾರದೊಳಿರಿಸುವುದೆಂದೆಳವೆಱಕಯನೀಡಾಡುವ [1]ಸೈಂ[1]ಹಿಕೇಯನಂತೆ ಮುಂದೀಡಾಡುವನಿತಕ್ಕೆ ಕರಿಯ ಕಯ್ಯುಂ ಕಾಲುಮಂ ಬಡಿದಸುವಂ ಕಳೆಯೆ ಕಾಳಿಯ ಮಥನನಕ್ಕಟಾ ಸತ್ತುದೀಯಾನೆಯಾನೆಯನಡ್ಡದೆಗೆದಂತಿರ್ದೀ ಚಾಣೂರ ಮುಷ್ಟಿಕಾದಿಗಳಪ್ಪ ಮಲ್ಲರಿಂದಮೆಱಕದೀಡಾಡಿಂ ಪೋರ್ತಕ್ಕೆ ಪೊತ್ತುವೆಳದಪರೆನೆ ಮಲ್ಲರೆಲ್ಲರ ಮೊಗನೊಯ್ಯನಾದುದಿನಿಸಱಿಂ ಕಂಸಂ ಗಂಡಗರ್ವದೊಡನೆ ವಿಗುರ್ವಣೆಯನೆ ತನಗೆ ತಾನೆ ಕಾರ್ಮುಗಿಲಂತೆ ಕರಗಿ ಪೋಗಿ

ಗಜಮದವಿಲಿಪ್ತನಿಜಗುರು
ಭುಜಯುಗದೊಳ್ ಪಾಯ್ದ ಮಧುಪಮಾಳಾಯುಗದಿಂ
ವಿಜಯೋತ್ಸುಕನಾಗಿ ಚತು
ರ್ಭುಜನಾದವೊಲಿರ್ದನುಪನಿಯುದ್ಧಂ ಕೃಷ್ಣಂ ||೮೯||

ವ|| ಇರ್ಪುದುಮೇವಯಿಸಿ ಕಂಸಂ ಕುಂಚಮಂ ಬೀಸುವುದುಂ

ಎಲೆಯಿತ್ತಿತ್ತಲಿದಿರ್ಚಿದಿರ್ಚು ಕಡುಕೆಯ್ ನೀಂ ಬೇಗವಣ್ಮಣ್ಮು ಮೆ
ಯ್ಗಲಿಯಾಗಾಗು ಕೊಲಲ್ಕೆ ನಿನ್ನ [2]ಪವನಂ[2] ಸುತ್ತಿತ್ತು ಮುತ್ತಿತ್ತು ಪೆ
ಣ್ಗೊಲೆಯೇನೀಗುಮೆ ಪೋಗ[3]ಲುಣ್ಣ[3]ದುರಿದೈ ಮಣ್ಣಾಗಲೆಂದೆನ್ನ ತೋ
ಳ್ತಲೆಯೊಳ್ ಸಿಲ್ಕಿದೆಯಿಂದೆ ಸತ್ತೆಯೆನುತುಂ ಚಾಣೂರನೊಟ್ಟೈಸಿದಂ ||೯೦||

ವ|| [4][ಒಟ್ಟೈಸೆ] ಮುಕುಂದಂ[4] ಮುಗುಳ್ನಗೆ ನಗುತ್ತುಮಟ್ಟೆ ತಿಂಬ ದೈವಕ್ಕೆ ಪಾಱಿಂಬಟ್ಟೆಯೆಂದೇಱಿ[5]ಟುಗೊಂಡು ಸಪಶಿ[5]ರದಿಂದಪ್ಪಳಿಸಲೊಡನೆ

ಮುಱಿವನ್ನಂ ಮೋದಿ ಮಾರ್ಮಲ್ಲರ ಗುರುಭುಜವಾಂ ಶೇಷನಂ ಧಾತ್ರಿ ಮುಂದ
ಣ್ಗಿಱಿವನ್ನಂ ಪೊಯ್ದು ಪಾಯ್ದಪ್ಪಳಿಸಿ ಶಿಖರಶೃಂಗಂಗಳಂ ಮಚ್ಚರಂ ಬೇ
ಡೆಱಿಗಿಂ ನೀವೆಂಬವೊಲ್ ಡೊಕ್ಕರಿಸಿ ದಿಗಿಭಹಸ್ತಂಗಳಂ ಮೂಜಗಂ ಬ
ಳ್ಕುಱಿ ಪರ್ವಿತ್ತುರ್ವಿ ವೈಕುಂಠನ ವಿಜಯಭುಜಾಸ್ಫಾಳನಾಭೀಳನಾದಂ ||೯೧||

ಉಭಯವ್ಯೂಹಭವನ್ಮಹಾಕಳಕಳಂ ದೌವಾರಿಕೋ[6]ದ್ಘುಷ್ಟ[6]ಮು
ಲ್ಲಭುಜಾಸ್ಫಾಳನನಿಸ್ವನಂ ನೃಪಸಭಾಕೋಳಾಹಳಂ ದೇವದುಂ
ದುಭಿನಾದಂ ಮೊಳಪೆಲ್ಲ ಮಲ್ಲವಱಿಯೊಂದಿಂದೋಳಮೊಕ್ಕೈಕ್ಕೆಯಿಂ
ನಭಮುಂ ದಿಕ್ಕುಮನೊಕ್ಕಲಿಕ್ಕಿ ಪೊಣರ್ದರ್ ಚಾಣೂರಚಕ್ರಾಯುಧರ್ ||೯೨||

---

1 ಸಿಂ (ಜ) 2 ನೇಕತಾಂ (ಜ) 3 ಲಣ್ಮ (ಜ) 4 ಉದ್ವಯಿಸೆ (ಜ) ಉರಳಿಸಿ ಮುಕುಂದಂ (ಚಟಣ) 5 ಡುಕೊಂಡು ಸಪ್ಪಸ (ಜ) 6 ದ್ಘಟ್ಟ (ಜ)

ತಳಗಳ ಕೋಳ್ ಛಟಚ್ಛಟೆನೆ ಮಲ್ಲರ ತೋಳ್ಗಳ ಕೋಳ್ಕರಂ ಘಳಿಲ್
ಘಳಿಲೆನೆ ಥಟ್ಟು ಪೊಟ್ಟೆನೆ ಘನೋರುಯುಗಂಗಳ ಕೋಳ್ಕರಂಗಳಂ
ಬಳಸುವ ಬೇಡಿಕೊಳ್ವ ಪಿಡಿಪೀವ ಮರುಳ್ಚುವ ನುಣ್ಚುವಾಸೆಯೊಳ್
ಸೆಳೆವೆಡೆ [1]ಸಾ[1]ರ್ವ ರ್ವೋರ್ವಳವಿಯೊಪ್ಪಿದುದಿರ್ವರ ಹಸ್ತಯುದ್ಧದೊಳ್ ||೯೩||

ಉತ್ತಮಸತ್ವದಿಂ ಪಿಡಿದು ಚಾಣುರನಂ ನೆಲಕಿಕ್ಕಿ ಕೃಷ್ಣನಾ
ಳ್ದೊತ್ತಿದೊಡೊತ್ತಿ ಧಾತ್ರಿ ರಸೆಗರ್ದುದು ರಕ್ಕಸನೊಯ್ದ ಧಾತ್ರಿಯಂ
[2]ತೆ[2]ತ್ತಿದನಾತನುಂ ಹರಿಯ ಗೋ[3]ಣಿ[3]ನಿಱುಂಕೆ ತದಂಘ್ರಿಘಾತದಿಂ
ದತ್ತ ಪತಂಗವೊಂದು ಶಕಟಂ ಮುಱಿದಾ ಶಕಟಂಬೊ[4]ಲೊಪ್ಪಿದಂ[4] ||೯೪||

ಓರೊರ್ವರನಕ್ಷಡದಿಂ
ದೂರಂ ಪೊಱಗಿಕ್ಕಿ ಪೋರ್ದು ಪಾದಾಹತಿಯಿಂ
ಭೂರೇಣುವಾಗೆ ಹರಿ ಚಾ
ಣೂರರ್ಮತ್ತೊಂದು ಮಲ್ಲಗಳನಂ ಸಮೆದರ್ ||೯೫||

ಬೆದಱಿದ ಬೆಱಗಿಂ ಬೆನ್ನಿ
ಕ್ಕಿದ ಕೃಷ್ಣಂ ಮೊಗದೆಗೊಂಡು ಮೊಗದೊಳ್ಮೆಯ್ಯಿ
ಕ್ಕಿದ ಚಾಣೂರನನಾರ್ದೆ
ತ್ತಿದನವನಿಯನೆತ್ತುವಂತಿರಾದಿವರಾಹಂ ||೯೬||

ಕೆಡೆದರ್ಪೋರ್ದರ್ ಪೊರಳ್ದರ್ಮಿಗೆ ಪಿಡಿಯದರಾರ್ದೊತ್ತಿದರ್ಮತ್ತಮೆರ್ದರ್
ನಿಡುಗಯ್ಯಂ ಬೀಡಿದರ್ನೀಡಿದರೆಱೆದು ನೆಲಕ್ಕಿಕ್ಕಿದರ್ಕೊಂಕಿದರ್ಮೇ
ಗಡಿಯಾದರ್ಪತ್ತಿ ಗಾಯಂಗೊಳಲೆ ಮಿಡುಕದಾರಯ್ದಾರಯ್ದು ಗಾಯ
ಕ್ಕೆಡೆಗೊಟ್ಟರ್ಕೊಟ್ಟುಕೊಂಡರ್ಪೆಱೆದು ಬಿಡಿಸಿದರ್ ಕೃಷ್ಣಚಾಣೂರಮಲ್ಲರ್ ||೯೭||

ಪಿಡಿವಡೆ ಕೃಷ್ಣನ ತೋಳುಂ
ತೊಡೆಯುಂ ದೊಡ್ಡಿದುವಿಪೆನ್ನ ಮುಷ್ಟಿಗೆ ಪವಣೆಂ
ದಡಹಡಿಸಿ ನಳಿನನಾಭನ
ನಡುವಂ ಮುಱಿಯಲ್ಕೆ ನೋಡಿದಂ ಚಾಣೂರಂ ||೯೮||

---

1 ಸೋ (ಜ) ಪಾ (ಡ) 2 ಕೆ (ಚಟಣ) 3 ವ (ಚಟಡಣ) 4 ಅರ್ಪಿನಂ (ಚಟಡಣ)

ಮರನಂ ಕಿಟ್ತುಮುರಾರಿಯಾಱನೆ ಕಿಟಿಲ್ಕುಂಗಯ್ಯ ರೋಮಂಗಳಂ
ಕರಮಂ ಕೊಟ್ಟೊಡಮಾರ್ತನಿಲ್ಲ ಪಿಡಿಯಲ್ತತ್ಕಾಳಿಯಗ್ರಾಹಕಂ
ಧರೆಯಂ ಬೆಂಬಲದೊತ್ತಿಪತ್ತೆ ಗಿರಿಯಂ ಮುನ್ನೆತ್ತಿ ಪೊತ್ತಾ ಮಹೀ
ಧರನಂತಿಂತು ತಳರ್ಚಲಾಱನೆ ಕರಂ ಚಾಣೂರನೇಂ ಶಕ್ತನೋ ||೯೯||

ವ|| ಅಂತು ಮುನ್ನ ಮಾಡಿದ ಸಾಹಸಂಗಳಂ ಮಾಟ್ಪಂತೆ ಮುಂಗೆಯ್ವಲ ದೊಳ್[1]ಬೆ'ದಕಿ ನೋಡಿಯುವನರಿಯನುಂ [2]ಪ[3]ರಿಯನುಮಪ್ಪುದನಱಿದು

ನರರುಂ ದೇವರ್ಕಳುಂ ನೋಡಿದಪರಿಳೆಯೊಳಂ ಬಾನೊಳಂ ನೋಂಕೆ ನುಗ್ಗಾ
ಗಿರೆ ನೋಟ್ಪರ್ ನಾಳೆಯೇಂ ನೋಡಿದಪರೆ ನೆಱೆನೋಟಿಕ್ಕಿಂದು ಚಾಣೂರನಂ ನೋ
ಟ್ಪರ ನೇತ್ರಾನಂದಮಂ ನಂದಿಸುವುದುಚಿತಮಲ್ತೇಂ ಪ್ರೌಢರ್ದಂ ವಿನೋದ
ಕ್ಕರಿಗಾತ್ಮ ಪ್ರಾಣಮಂ ತೋಱದ ಹರಿ ಹರಿಗೊಟ್ಟಂತು ಒಲ್ಲೊಂದು ಜಾವಂ ||೧೦೦||

ವ|| ಇ[3]ವನನ[3]ನಿತೆನಿತಂ ಕೊಂಡಾಡುವೆನೆಂದು ವಿಶ್ವಂಭರಂ ಭರಂಗೆಯ್ಯಲೊಡನೆ

ದಾರುಣದೊಳ್ ನಿಷ್ಠುರ ಚಾ
ಣೂರ ಭುಜಾದಂಡ ಪೃಷ್ಠದೊಳ್ ಪುಟ್ಟಿದುದಾ
ನಾರಾಯಣನುರು ಭುಜಶಾ
ಖಾರಣಿಯೊಳ್ ಶಕ್ತಿರೂಪ ತೇಜೋಜ್ವಲನಂ ||೧೦೧||

ವ|| ಅಂತು ಜಳಧರದೊಳಶನಿ ಪುಟ್ಟುವಂತೆ ಜಳಧರಶ್ಯಾಮನೊಳ್ ಸರ್ವ ಶಕ್ತಿ ಪುಟ್ಟೆ

ಎಟಿವಿ ಮ[4]ಳಪಿ[4]ಕ್ಕಿ ಕಳಲುಂ
ಕೆಟಿಗಂ ತರಹರಿಸಿಕೊಳಲುಮಿಕ್ಕಿದ ಕಯ್ಯಂ
ಕಿಟಿಲುಮಣಮಾಱದಸುರಂ
ನೆಟಿಲೊಳ್ಪೊಣರ್ವಂತೆ ಪೋರ್ದು ಕಟಿಯೆ ಬಟಲ್ದಂ ||೧೦೨||

ಪೋರ್ಕುಳಿ[5]ಯಾದಡೆ[5] ಹರಿಯಂ
ಮಾರ್ಕೊಳ್ಳದೆ ತೆಗೆದ ಕಯ್ಯ ಬಟಿಯನೆ ಬಂದಂ
ಸೊರ್ಕಿದಿಭಪತಿಯ ಕಯ್ಯೊಳ್
ಸಿಕ್ಕಿ ತೊಗಲ್ಪಾಪೆಯಂದದಿಂ ಚಾಣೂರಂ ||೧೦೩||

---

1 ಕೆ (ಚಟಣ) 2 ಪಿ (ಜ) 3 ನ್ನೆ (ಜ) 4 ಱಪಿ (ಜ) ಳಬ (ಡ) 5 ಯಾಡದೆ (ಜ)

ಹೊಣಿಸಿ[1]ದಿ[1]ದ ಕ[2]ತ್ತು[2]ರಿಯಂ
ಕಾಣಿ[3]ಸಿ[3] ಕ[4]ತ್ತು[4]ರಿಯ ನಡುವಣ[5]ಳಿ[5]ರೋಮದವೋಲ್
ಚಾಣೂರನಿರ್ದನೆನೆ ಸ
ಪ್ರಾಣಮೊಳೇನನನಿ[6]ಸಾರ[6]ನೋ ಪುರಮಥನಂ (?) ||೧೦೪||

ಪೊರೆದು ಪೊರಲ್ವನಪ್ಪಳಿಪ ತೇಂಕುವ ತೇಂಕ[7]ದೆ[7] ಸುಯ್ವ ಸುಯ್ಯದೆ
ರ್ದರೆ ಜಡಿವಂ ಜವಂಗಿಡುವನೂರ್ಮಡಿಯಪ್ಪ ಬೆಮರ್ತು ಮಲ್ಲರಂ
ಗುರುಗುಣರೇಣುವಂ ತೊಡೆವ ಮೆ[8]ಯ್ಯೆ[8]ಮರೇಟದ ಭಂಗಿ ಕಣ್ಗೆ ಚಾ
ಣುರ[9]ನು [ರು][9] ಸೋಲಮಂ ಹರಿಯ ಗೆಲ್ಲಮನೇಂ ಪಿಸುಣಾಡುತಿರ್ದುದೋ ||೧೦೫||

ಡೊಕ್ಕರವಿಕ್ಕಿ ತಾಯೆನಿಸಿ ಕರ್ಚಿ ಬೆರಲ್ಗೊನೆಯಂ ಧರಾತಲ
ಕ್ಕಿಕ್ಕಿ ಮರುಳ್ಚಿ[10]ನ್ನೈ ಕಟಿಯು[10] ಕ[11]ಟ್ರಿಲೆಗಳ್ಕಿ[11] ಸಡಿಲ್ಚಿ ಕಂದರ
ಕ್ಕಿಕ್ಕಿದ ಬಾಹುಕತ್ತರಿಗೆ ಬಾಯ್ವಿಡೆ ಕಾಯ್ದು ಪೊರಳ್ದು ಪೋಗೆ ಗಾ
ಯಕ್ಕೊಳಗಾದೊಡಂ ಮುಱಿಯಲೊಲ್ಲದೆ ಬಿಟ್ಟಱಗಂಡಿವಿಟ್ಟವೋಲ್ ||೧೦೬||

ವ|| ಅಂದಂ ಕಂಡು ಕಂಸಂ ಪಂದಿಗೆಱಗಿದ ನಾಯಂ [12]ಹೆಕ್ಕ[12]ಳಿಸುವಂತೆ ತೊಡೆಯ ನಪ್ಪಳಿಸಿದುಲ್ಲಹಮಲ್ಲದೊಳ್ ಘಟಶೂರಚಾಣೂರವಿಕ್ರಮದಿಂ ಸಮುಕರ್ತರಿಯನೆನ್ನ [13]ಯ್ಯಂ[13] ಕೊಂಡನೆಂದು ಪಡಿಗಯಿಸಲೊಡನೆ ಸಿಗ್ಗಾಗಿ ಬೇಗಮಾಗಿ ಮನಂಗೆಯ್ದು

ಹರಿಹೊಂಗಿ[14]ಬಿಟ್ಟು[14] ಮಿಡುಕದೆ
[15]ಶರೀರದೊಳ್[15] ಕೂಡೆ ಶಕ್ತಿಯಂ ಪೂರಿಸೆ ಸೈ
ತೆರೆಯಂ ವೇಲ್ವಾಯ್ದುಲಗಿನ
ಗರುಡನನಪ್ಪಿದವೊ[16]ಲಾದನಾ[16] ಚಾಣೂರಂ ||೧೦೭||

ಚಳಕಿ ಚಳವಾಗೆ ಪಾರಂ
ಸೆಳೆವೆಳೆವಂ ಪಟ್ಟೆ ಸಂಡಿ ಪುಟಪಟ್ಟರೆ [17]ಕೆ[17]
ಚ್ಚಳುರ್ದ[18]ರಿ[18]ಲೋಹದವೊಲ್ [19]ಕಂ[19]
ತಳಲೋಹಂ ಕರಗಿ ಕೊರಗಿದಂ ಚಾಣೂರಂ ||೧೦೮||

---

1 ದ (ಚಟಡಣ) 2 ತ್ತ (ಜ) 3 ಸಿ (ಜಡ) 4 ತ್ತ (ಜ) 5 ರಿ (ಜ) 6 ಗಾರ (ಟಡಣ)
7 ರ (ಚಟಡಣ) 8 ಲ್ಪೆ (ಜ) 9 ನನ (ಚಟ) ನ (ಜಡ) 10 ವಾಣಿಕಟ (ಜ) ಣ್ಯೆಕಟ್ಟೆ (ಡ)
11 ಕರಿಗಳ್ (ಜ) 12 ಪೆಕು (ಜ) 13 ಕೈಯ್ಯಂ (ಡ) 14 ವಿಟ (ಚಟ) ದಿಟ್ಟ (ಡ)
15 ದುರದೊಳ್ ಕಾಂ (ಚಟಣ) ದೊಳ್ ಕಾಂ (ಡ) 16 ಲಪ್ಪಲಾ (ಚಟಣ) ಳಾ (ಡ)
17 ಕಿ (ಜ) 18 ಳಿ (ಜ) 19 ಕಂಠ (ಚಟ)

ಒಡೆದುದು ಮುಷ್ಟಿಯುಂ ಪಿಡಿದ ಕಯ್ಯತಳಂ ಕಡು ಸೋಂಕು ಸೋಂಕೆ ಮೆ
ಯ್ಯಡಗಡಗಾಯ್ತು ಡೊಕ್ಕರಿಸಿ ಕಂಸನ ಮಲ್ಲನ ಕಕ್ಷವಕ್ಷದೆ
ಲ್ವುಡಿದುವು ಪೊಯ್ಯುತುಂ ತುಡುಕಿ ತುಟ್ಟಿಸಿ ಕತ್ತರಿವಾಣಿಯಲ್ಲಿ ಕೆ
ಯ್ದುಡುಕಿದವೊಲ್ ಬೆರಲ್ಪಱಿದುವಾ ಹರಿ ಪೂರಿಸೆ ಮೆಯ್ಯ ಶಕ್ತಿಯಂ ||೧೦೯||

ಮಸಗದೊಡೆ ತನ್ನ ನೆಲೆಯಂ
ಮಿಸಕದೆ ಮುನ್ನಿರ್ದ ಕೆಱದಿನಿರ್ದುದೆ ಕಡೆಯೊಳ್
ಮಸಗಿದೊಡೋವೋವೇಕ
ಗ್ರಸನಂಗೊಳ್ಳದೆ ಮಹಾಬ್ಧಿ ಮೂಱುಂ ಜಗಮಂ ||೧೧೦||

ನೆಲನುಂ ಜಲನಿಧಿಯುಂ ಸಲೆ
ತಲೆವತ್ತುವ ತೆಱದಿನಿರ್ದು ಕಡೆಯೊಳ್ ನೆಲನಂ
ಜಲಧಿ ಕಿಡಿಪಂತೆ ಕಿಡಿಸಿದ
ನಲಸದೆ ಚಾಣೂರಮಲ್ಲನಂ ಮುರಮಥನಂ ||೧೧೧||

ಬಿನ್ನಾಣಂ ಬಿನ್ನಗಾಯ್ತೆನ್ನ[1]ಳವಳವಱಿದತ್ತೆನ್ನ ಬಲ್ಪೆಯ್ದೆ ಮೆಲ್ಪಾ
ಯ್ತೆನ್ನಣ್ಮಂತಣ್ಮಿತ್ತಾ[2]ಯ್ತುಂ ನಿಮಗೆ[2]ಮುಗಿದುದೆನ್ನೇಱೆ ಕಟ್ಟೇಱೆಯಾಯ್ತಾ
ನಿನ್ನೇವೆಂ ಸಾವೆನೆಂಬಂತಿರೆ ಬಳಲಿಸಿ ಚಾಣೂರನಂ ಭೂತಳಕ್ಕಂ
ಬನ್ನಕ್ಕಂ ತಂದು ತಂದಂ ರಿಪುನೃಪನ ಮನಕ್ಕಂದು ಕುಂದಂ ಮುಕುಂದಂ ||೧೧೨||

ವ|| ಆಗಳ್ಮುಷ್ಟಿಕಂ ಮುಷ್ಟಿಗೊಂಡು ಮುನಿದು ಮೇಲ್ವಾಯಲೊಡನೆ

ಎರಡುಂ ಕಯ್ಯಿಂ ಕೊಂಡಿ
ರ್ವರುಮಂ ಬೊಂಬೆಗಳನಾಡಿಪವನವೊಲವನೀ
ರ್ವರ ತಲೆಯಂ ತಾಟಿಸಿದಂ
ಬಿರಿವಿನೆಗಂ ತಾಳಕಾಯ್ಗಳಂ ತಾಟಿಪವೋಲ್ ||೧೧೩||

ವ|| ಅಂತು ತಾಟಿಸಿ ಮಲ್ಲರಂಗದೊಳ್ ಪೂವಲಿಗೆದಱಿದಂತೆ ಮಸ್ತಿಷ್ಕಪಿತ್ತಲುಂ
ಸೂಸೆ ಕುಂಕುಮರಸದಿಂ ಜೀರ್ಕೋಟಿವಿಯನೊತ್ತಿದಂತೆ ಮೂಗಿಂ ಬಾಯಿಂ ಬಿಸುನೆತ್ತ
ರುಚ್ಚಳಿಸಿ ಸೂಸೆ ಬಿಸುಬಿಸುವೊ[3]ಯ್ದು[3] ಚಾಣೂರನ ಮುಷ್ಟಿಕನ ಪೆಣದ ಪ್ರೇಣರ

---

1 ಳ (ಜ) 2 ಯ್ತುಂ ನಗಿಪ (ಜ) 3 ಲ್ (ಜ)

ನಿಪ್ಪುರಿಗೂಡೆ ಕಂಡು ಕೆಳರ್ದು ಧೀರೋದ್ಧತ [1]ದುಂದುಭಿಧ್ವಾನಮಹೀಧರ[1] ದುರ್ಧರ ಮಹಾಕಾಳ ಪ್ರಳಯಕಾಳ ಕೋಳಾಹಳ ತಾಳ ಜಂಘೆತಳ ಪ್ರಹಾರಿ ವಜ್ರಮುಷ್ಟಿ ಮೊದಲಾಗೆ ಪೂಸಿದ ಸಿಂಧುರಮುಂ ಬೀಸುವ ಬಾಲಗಚ್ಚೆಯುಂ ಬೆರಸು

[2]ತ್ರೆ[2]ರ್ಕೆಯೊಳುಲಿದೆಯ್ತಂದು ಪೊ
ಣರ್ಕೆಗೆ ಮೇಲ್ವಾಯೆ ಮುಸುಱಿ ಮಲ್ಲ ಸಹಸ್ರಂ
ಮರ್ಕ[3]ಟಿ[3]ಕಟಕಂ ಮುತ್ತಿದ
ಆರ್ಕೆಯ ನೀಳಾಚಲಂಬೊಲಿರ್ದಂ ಕೃಷ್ಣಂ ||೧೧೪||

ವ|| ಅಂತು ಮುಂತಣ ಶೂಲಮನೇಱುವಂತೇಱಿದ ಮಲ್ಲರ ಮೆಯ್ಗಳೆಲ್ಲಂ ಮುಱಿದು ನುರ್ಗುನುರ್ಗಾಗೆ ಮಲ್ಲಲಂಘನಂಗೆಯ್ದು

ಭ್ರಮರಿಗುಡೆ ಕೃಷ್ಣನಾ ಸಂ
ಭ್ರಮದಿಂ ಮತ್ತಿರ್ದ ಮಲ್ಲರೆಂಟುಂ ದೆಸೆಗಂ
ದಮರಿಸಿದ ಮದಸ್ತಂಭೀ
ರಮದಿಂದುದಿರ್ವಂತಿರುದಿರ್ದು ಪಱಿವಱಿಯಾದರ್ ||೧೧೫||

ಗುರು[4]ಭುಜದಂಡ[4]ದ್ವಯದೊಳ್
ತಿರಿತ[5]ನ[5] ಪತ್ತಿರ್ದ ಮಲ್ಲರುಲ್ಲಸಿತಾಕ್ಷಂ
ಹರಿಜಕ್ಕಂದೊಳಲಿಯನನು
ಕರಿಸಿರ್ದಂ ಬಹಳ ಬಾಹುಚಾಳನ ಗತಿಯೊಳ್ ||೧೧೬||

ವ|| [6]ಮತ್ತಂ ಪತ್ತಿ[6] ಬಿಡದ ಮಲ್ಲರನಾನೆ ಮೆಟ್ಟಿದುದೆ ಸಂ[7]ತೆಂಬಂತಾ[7]ವೆಡೆಯುಂ ಪಿಡಿದೊಡಂ ಪಿಡಿದೆಡೆಯೆ ಗಾಯಮಾಗೆ ಬಳೆಯ ಪೇಱನಾನೆ ಮೆಟ್ಟಿದಂತೆ[8]ಲುವೆಲ್ಲಂ ನುರ್ಗುನುರ್ಗಾಗೆ ಮೆಯ್ಯ ತೊವಲಾಗೆ[8] ಸಡಿ[9]ಯೋ[9]ಡುಗಳಂ ತೀವಿದವಲ ಬೇರಂಗಳ ನೀಡಾಡುವಂತೀಡಾಡಿದ ಚಾಣೂರ ಮಥನನ ಮೇಲೆಯಗಸ್ತ್ಯನ ಮೇಲೆ ಕವಿದ ಕಡಲಂತೆ ಕವಿವ ಕಂಸನ ಚಾತುರ್ಬಲಮಂ ಬಲದೇವನುಂ ವಸುದೇವನುಂ ಕಂಡು ತಮ್ಮ ಬಲಮಂ ಕೈವೀಸೆ ಪೆಣಮುಯಂ ಮಾಡೆ ನೆತ್ತರುಗಡಲಂ ಪರಿಯಿಸೆ ಕಟ್ಟೇವಮುಂ ಕಡುಮುಳಿಸುಮಳವಿಗಱಿಯೆ ಸಿಗ್ಗಾಗಿ ಸೈರಿಸಲಾಱದೆ ಅಭಿನವ ನಾರಸಿಂಹಾಡಂಬರ ಮಗುರ್ವುಮದ್ಭುತಮುಮಾಗೆ

1 ದಂದುಮಾರಮುದಂ (ಜ) 2 ಡೊ (ಜ) 3 ಡೆ (ಚಟಡಣ) 4 ಧುಂಡ (ಚ) ಭಂಡ (ಟಡಣ) 5 ರೆಯುಲ್ (ಚಟಡಣ) 6 ಮಲ್ಲರ ಮಸ್ತಕಂ ಕಮಳ ಮತ್ತ (ಚಟಡಣ) 7 ಡೆಂಬಂದಾ (ಚಟಣ) ದೆಂಬಂದಾ(ಡ) 8 ನುಗ್ಗಾಗೆ (ಜ) 9 ಯಾ (ಚಟಡಣ)

ಮಾಡದ ಕಂಭಮಂ ಮುಲಗನೊಳ್ಪರಿಪಾಯ್ದು ನೆಲಕ್ಕೆ ಬಾಳನೆ
ಲ್ಲಾಡೆ ನೆಗಪ್ಪಿಕೊಂಡು ತೊಡೆಗಾ ನರಸಿಂಹನವೊಲ್ಕೆ ಕಂಭದಿಂ
[1]ಮಾ[1]ಡದ ಕಾಳರಕ್ಕಸನನಿಕ್ಕುವವೋಲ್ ನಖದಿಂ ಕರುಳ್ಗಳಂ
ತೋಡಿ ಪಿಸುಳ್ದು ಸೀಟ್ಟು ಬಿಸುಟಂ ಕಲಿಕಂಸನನಬ್ಜಲೋಚನಂ ॥೧೧೭॥

ವ॥ ಅಂತು ಸೀಟ್ದೀಡಾಡೆ[2]ಯು[3]ಮದಂ ಕೈಕೊಳ್ಳದೆ ಕೊಳ್ಳೆನಾರ್ದು ಮುರಿ
ದೆರ್ದು ಖೇಟಕದಿಂ ಕರುಳಂ ತಕ್ಕೈಸಿ ಕತ್ತಿಗೆಯನೆತ್ತಿ ಮೇಲ್ವಾಯ್ದು ಪೊಯ್ವ
ಕಂಸನ ಕಲಿತನಕ್ಕೆ ಕೌತುಕಂಬಟ್ಟು ಕಡಿತಲೆಯನೆಡದ ಕಯ್ಯೊಳ್ಪಿಡಿದು ತಱಗೆಲೆಯ
ನೊರಸುವಂತೊರಸಿ ಬಿಸುಟು

ಕೆಡೆ ಕೆಡೆಯೆಂದರಮುಗನೊದೆ
ದೆಡಗಾಲೊಳ್ ತೊಡರ್ದು ಕರುಳೊ[4]ಳೇನಿ[5]ರ್ದಂ ಕ
ರ್ದಡಿಗಂ ಗೋವಳನಿಕ್ಕಿದ
ತೊಡರೊಳ್ ಮಿಗೆ ಕೋಡದೆಬಲ್ವ ಪಾಪೆಯ ತೆಱದಿಂ ॥೧೧೮॥

ಕ್ಷಿತಿಗೊರ್ವನೆ ದುರ್ಜನನೊಂ
ದತಿವೇಗದೆ ಸತ್ತು ಮಾಡುವುಪಕಾರಮನ
ಪ್ರತಿಮರ್ ಸಜ್ಜನರಾಚಂ
ದ್ರತಾರಕಂ ಬರ್ದು ಮಾಡಲೇನಾರ್ತಪರೇ ॥೧೧೯॥

ವ॥ ಅಂತು ಮಲ್ಲಾಮಲ್ಲಿಯಾಗಿ [6]ಪೋ[6]ರ್ದ ಮಲ್ಲರಂ ಮೇಲ್ವಾಯ್ದು ಕಂಸನುಮಂ
ಕೃಷ್ಣನೊಂದೆ ಕಯ್ಯೊಳೆ [7]ಕಯ್ಯಕೂ[7]ಸನಿಕ್ಕುವಂತಿಕ್ಕಲೊಡನೆ

ಅನಿಮೇಷಾಂಬೋಧಮುಕ್ತಂ ಸುರಿದುದಲರನಟ್ಟೇಱು ಬಾನ್ವಟ್ಟೆಯುಂ ಕೃ
ಷ್ಣನ ಮೇಗೋರಂತೆ ಭೃಂಗವ್ಯತಿಕೃತ ಸುಮನೋ ರೇಣು ಗೀರ್ವಾಣ ಬಾಣಾ
ಸನರವ್ಯಂ ಚೈತ್ರ[8]ತೂ[8]ರ್ಯಸ್ತ[9]ನಿತ[9]ಮುಖರಿತಂ ಮಾಕರಂದಾದ್ರ್ರಧಾರಾ
ತನುಬಂಧೂಕೇಂದ್ರಗೋಪಂ ವಿಚಕಿಳಕುಳ ಮೇಘೋಪಳಾಸಾರ ಸಾರಂ ॥೧೨೦॥

ಮಧುಮಾಯಾ ಮಥನಂ ಸಮುದ್ಧೃತ ಮಹಾಗೋತ್ರಂ ಗುಣೋದ್ದಾಮ ಧ
ರ್ಮ ಧರಾ ಕಂಟಕ ಕೈಟಭಾಪಹರಣಂ ವಾಚಾಳ ಚಾಣೂರ ವಾ
ರಿಧಿ ಸಂಶೋಷಣ ಬಾಡಬಾಗ್ನಿ ಕಲಿಕಂಸಧ್ವಂಸಕಂ ತಾಳ್ದಿದಂ
ಕದನಕ್ರೀಡೆಯನಾಡಿ ನಿತ್ಯಜಯಮಂ ಶ್ರೀ ವೀರನಾರಾಯಣಂ ॥೧೨೧॥

---

1 ಮೂ (ಜ) 2 ಗೆಯ್ದು (ಚಟಡಱ) 3 ಳೆನಿಸಿ (ಜ) 4 ಪೊಱ (ಚಟಱ) 5 ಕೂ (ಜ)
6 ಷಮೂ (ಜ) 7 ಖಳ (ಜ)

ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯ [1]ವ್ಯಂಗ್ಯ ಭಂಗಿ-
ನಿಧಾನ ದೀಪವರ್ತಿ [2]ಚತುರ್ಭಾಷಾ ಕವಿ ಚಕ್ರವರ್ತಿ ನೇಮಿಚಂದ್ರ ಕೃತಮಪ್ಪ ಶ್ರೀಮ-
ತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ [3]ಸೆಜ್ಜೆ-
ವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳ್

ಅಷ್ಟಮಾಶ್ವಾಸಂ

ಸಮಾಪ್ತಂ.

ಅರ್ಧನೇಮಿಪುರಾಣಂ ಸಮಾಪ್ತಂ

1 ಭಂಗಿನಿ (ಜ) ವ್ಯಂಗಭಂಗಿನಿ (ಟ) 2 ಕವಿ (ಜ) 3 ಪದವೀ [illegible] ಸೆ ([illegible])

ಪದ್ಯಗಳ ಅಕಾರಾದಿ

ಘಟ—ಪದ್ಯ

ಅಳ್ಳಿಱ್-ಭೇದಿಸು ೯೫-೯೫ವ
ಅೞ್ಕು-ಅಳುವುದು ೨೨-೧೧೧
ಅೞ್ತಿಗೆ-ಇನಿಯಳು ೩೦-೨೬
ಆಘ್ರಾತ-ಮೂಸು, ವಾಸಿಸು ೧-೨
ಆಟಂದು-ಮೇಲೆ ಬೀಳು ೧೮೦-೬೯
ಅನೀಕ-ಸೈನ್ಯ, ಗುಂಪು ೮೪-೫೩
ಆಪೋದನ-? ೬೬-೯೨
ಅಭೀಳ-ಭಯವನ್ನುಂಟುಮಾಡುವ ೧೦೦-೧೨೧
ಆಮ್ರ-ಮಾವಿನಮರ ೪೦-೭೧
ಆಮ್ನಾಯ-ಸದ್ವಂಶ ೨-೭
ಆಯತಿ-ಉನ್ನತಿ ೨-೭
ಆರ್ತ-ಆಸೆ ೨-೫
ಆರಣಿಗೊಳ್—? ೧೯೨-೧೯
ಆರ-ಹಾರ ೨೦-೧೦೨
ಆರಮೆ-ಆರಾಮ, ಉದ್ಯಾನ ೧೨-೬೩
ಆಲೀಢ-ಬಲ ಮೊಣಕಾಲನ್ನು ಮುಂದು ಮಾಡಿ ಎಡಗಾಲನ್ನು ಹಿಂದಿಟ್ಟು ನಿಲ್ಲುವುದು ೪೮ ೧೪ವ
ಆವೇಷ್ಟಿಸು-ಆವರಿಸು, ಬಳಸು ೧೬೧-೭೯ವ
ಆಸ್ಫಾಲನ-ಅಪ್ಪಳಿಸು ೭೧-೧೧೬
ಆಳೋಕನ-ನೋಡುವಿಕೆ ೪೮-೧೩
ಇಂಗುದಿ-ಇಂಗುದೀಮರ ೫೪-೩೫
ಇಱಿಗಾಱರು-ಕಡೆಗಣಿಸುವವರು ೬-೨೯
ಇೞ್ದು-ಎಳೆದುಕೊ, ಆಕರ್ಷಿಸು ೧೭-೬೦
ಈಷಾದಂಡ-ಕೀಱಾದ ಕೋಲು ೧೯೪-೨೨ವ
ಈಳೆ-ಹೇರಿಳೆಜಾತಿ ಮರ ೧೧೨-೭
ಉಕ್ಕೈವ-ಕಪಟ ೧೬೮-೧೯
ಉಗ್ರಾಸಿ ಭೀಕರವಾದ ಕತ್ತಿ ೧೭೯-೬೪
ಊಗಿ-? ೩೨-೩೬

ಘಟ—ಪದ್ಯ

ಉತ್ಕರ್ಣ-ಮೇಳಕ್ಕೆ ಎದ್ದಿರುವ ಕಿವಿ ೧೩೧-೯೩
ಉತ್ತಂಸ-ಶಿರೋಭೂಷಣ ೧೦೭-೧೫೨
ಉತ್ಪ್ರಸ್ರವ-ಮೇಲಕ್ಕೆ ಚಿಮ್ಮುವ ೫೯-೬೨
ಉದ್ದವಣ-ವಾದ್ಯವಿಶೇಷ ೩೩-೩೯
ಉದ್ವೃತ್ತತೆ-ಅತಿಶಯತೆ ೪೫-೪
ಉಪಾರ್ಜನ-ಸಂಪಾದನೆ ೨೧-೧೦೮
ಉಪಾಂಸ-ಕಾಪಟ್ಯ ೨೦೦-೫೧ವ
ಉಪ್ಪರವಟ್ಟ-ಮೆಲ್ಕಟ್ಟಿನ ಬಟ್ಟೆ ೧೨-೬೪
ಉಮುೞ್-ಉಗುಳು ೬೫-೮೬
ಉರ್ವೀಧರ-ಬೆಟ್ಟ ೧೦-೫೬
ಉರ್ವು-ಉಬ್ಬು, ಹೆಮ್ಮೆಪಡು ೧೧೮-೩೬
ಉಲೂಖಲ-ಒರಳು ೧೮೩-೮೨ವ
ಉಳ್ಕ-ಉಲ್ಕಾಪಾತ ೮೪-೫೩
ಊರುಬ್ಬೆ-ಊರಿಗೆ ಆವಿಗೆಯಂತಿರುವ ೧೧೧-೨ವ
ಊಷ್ಮ-ಝಳ, ಉಷ್ಣ ೧೧೬-೨೦
ಋತ-ಸತ್ಯ ೧೧-೫೯
ಎಡೆಗಱ್-ತುಂಬು ೫೧-೨೩
ಎೞಲ್ಕೆ-ಜೋತುಬಿದ್ದಿರುವುದು ೧೧೯-೩೭
ಎಱವಿ-ನೀವಿ ೨೧೩-೧೦೨
ಏಣ-ಜಿಂಕೆ ೫೯-೬೨
ಏವೈಸು-ವ್ಯಥೆಪಡು ೧೨೫-೬೩ವ
ಏಳ-ಒಂದು ಬಗೆಯ ಕುರಿ ೧೫೪-೫೬
ಒಚ್ಚತ-ಒಂದೇ ಸಮನೆ ೬-೩೨
ಒಟ್ಟಜೆ-ಅತಿಶಯ, ಶೌರ್ಯ ೧೯೨-೨೦
ಒಱಲೆ-ಗೆದ್ದಲು ೨೦೦-೫೧
ಕೊಸಗು-ಕರ್ಣಿಕಾರ, ಬೆಟ್ಟದಾವರೆ ೧೪೩-೧೯
ಓಜೆ-ಶಕ್ತಿ ೨೧೫-೧೧೨
ಔರ್ವ-ಬಡಬಾಗ್ನಿ, ಕಡಲುರಿ ೭೭-೧೭

	ಪುಟ—ಪದ್ಯ
ಅಳ್ಳುಱು-ಭೇದಿಸು	೯೫-೯೫ವ
ಅಟ್ಕ್ಕ-ಅಳುವುದು	೨೨-೧೧೧
ಆಟ್ತಿಗೆ-ಇನ್ನಿಯಳು	೩೦-೨೬
ಆಘ್ರಾತ-ಮೂಸು, ವಾಸಿಸು	೧-೨
ಆಟಂದು-ಮೇಲೆ ಬೀಳು	೧೮೦-೬೯
ಆನೀಕ-ಸೈನ್ಯ, ಗುಂಪು	೮೪-೫೩
ಆಪೋದನ-?	೬೩-೯೨
ಆಭೀಳ-ಭಯವನ್ನುಂಟುಮಾಡುವ	೧೦೦-೧೨೧
ಆಮ್ರ-ಮಾವಿನಮರ	೪೦-೭೧
ಆಮ್ನಾಯ-ಸದ್ವಂಶ	೨-೭
ಆಯತಿ-ಉನ್ನತಿ	೨-೭
ಆರ್ತ-ಆಸೆ	೨-೫
ಆರಣಿಗೊಳ್—?	೧೯೨-೧೯
ಆರ-ಹಾರ	೨೦-೧೦೨
ಆರಮೆ-ಆರಾಮ, ಉದ್ಯಾನ	೧೨-೬೩
ಆಲೀಢ-ಬಲ ಮೊಣಕಾಲನ್ನು ಮುಂದು ಮಾಡಿ ಎಡಗಾಲನ್ನು ಹಿಂದಿಟ್ಟು ನಿಲ್ಲುವುದು	೪೮-೧೪ವ
ಆವೇಷ್ಟಿಸು-ಆವರಿಸು, ಬಳಸು	೧೬೧-೭೯ವ
ಆಸ್ಫಾಲನ-ಅಪ್ಪಳಿಸು	೭೧-೧೧೬
ಆಲೋಕನ-ನೋಡುವಿಕೆ	೪೮-೧೩
ಇಂಗುದಿ-ಇಂಗುದೀಮರ	೫೪-೩೫
ಇಟಾಗಾಱರು-ಕಡೆಗಣಿಸುವವರು	೬-೨೯
ಇಟ್ದು-ಎಳೆದುಕೊ, ಆಕರ್ಷಿಸು	೧೧-೬೦
ಈಷಾದಂಡ-ಕಿಱಿದಾದ ಕೋಲು	೧೯೪-೨೨ವ
ಈಳೆ-ಹೇರಿಳೆಜಾತಿ ಮರ	೧೧೨-೭
ಉಕ್ಕೈವ-ಕಪಟ	೧೬೮-೧೯
ಉಗ್ರಾಸಿ-ಭೀಕರವಾದ ಕತ್ತಿ	೧೭೯-೬೪
ಉಗ-?	೩೨-೩೬
ಉತ್ಕರ್ಣ-ಮೇಲಕ್ಕೆ ಎದ್ದಿರುವ ಕಿವಿ	೧೫೧-೩೩
ಉತ್ತಂಸ-ಶಿರೋಭೂಷಣ	೧೦೭-೧೫೨
ಉತ್ಪ್ರಸ್ರವ-ಮೇಲಕ್ಕೆ ಚಿಮ್ಮುವ	೫೯-೬೨
ಉದ್ಘವಣ-ವಾದ್ಯವಿಶೇಷ	೩೩-೩೯
ಉದ್ವೃತ್ತತೆ-ಅತಿಶಯತೆ	೪೫-೪
ಉಪಾರ್ಜನ-ಸಂಪಾದನೆ	೨೧-೧೦೮
ಉಪಾಂಸ-ಕಾಪಟ್ಯ	೨೦೦-೫೧ವ
ಉಪ್ಪರವಟ್ಟ-ಮೆಲ್ಕಟ್ಟಿನ ಬಟ್ಟೆ	೧೨-೬೪
ಉಮುಟ್ ಉಗುಳು	೬೫-೮೬
ಉರ್ವೀಧರ-ಬೆಟ್ಟ	೧೦-೫೬
ಉರ್ವು-ಉಬ್ಬು, ಹೆಮ್ಮೆಪಡು	೧೧೮-೩೬
ಉಲೂಖಲ-ಒರಳು	೧೮೩-೮೨ವ
ಉಳ್ಕೆ-ಉಲ್ಕಾಪಾತ	೮೪-೫೩
ಊರುಬ್ಬೆ-ಊರಿಗೆ ಆವಿಗೆಯಂತಿರುವ	೧೧೧-೨ವ
ಊಷ್ಮ-ಝಳ, ಉಷ್ಣ	೧೧೬-೨೦
ಋತ-ಸತ್ಯ	೧೧-೫೯
ಎಡೆಗಿಱು-ತುಂಬು	೫೧-೨೩
ಎಟಲ್ಕೆ-ಜೋತುಬಿದ್ದಿರುವುದು	೧೧೯-೩೭
ಎಱವಿ-ನೀವಿ	೨೫೩-೧೦೨
ಏಣ-ಜಿಂಕೆ	೫೯-೬೨
ಏವೈಸು-ವ್ಯಥೆಪಡು	೧೨೫.೬೩ವ
ಏಳ-ಒಂದು ಬಗೆಯ ಕುರಿ	೧೨೫-೫೬
ಒಚ್ಚತ-ಒಂದೇ ಸಮನೆ	೬-೩೯
ಒಟ್ಟಜ-ಅತಿಶಯ, ಶೌರ್ಯ	೧೯೨-೨೦
ಒಱಲೆ-ಗೆದ್ದಲು	೨೦೦-೫೧
ಕೊಸಗು-ಕರ್ಣಿಕಾರ, ಬೆಟ್ಟದಾವರೆ	೧೮೩-೧೯
ಓಜೆ-ಶಕ್ತಿ	೨೫೩-೧೧೨
ಔರ್ವ-ಬಡಬಾಗ್ನಿ, ಕಡಲುರಿ	೭೭-೧೭

	ಪುಟ—ಪದ್ಯ
ಕಕ್ಕಡೆ-ಈಟಿ, ಆಯುಧ	೫೧-೨೫
ಕಕುಭ-ವೀಣೆಯ ಕೆಳಭಾಗದಲ್ಲಿ ಬಗ್ಗಿರುವ ಭಾಗ	೨೦೯-೮೨
ಕಕುದ್ಮತ್-ಎತ್ತು	೨೦೯-೮೨
ಕಂಕಣ-ಬಳೆ	೧೭೩-೪೧
ಕಂಕಪತ್ರ-ಹದ್ದಿನ ರೆಕ್ಕೆಗಳುಳ್ಳ ಬಾಣ	೫೮-೬೦ವ
ಕಂಕಾಳ-ಅಸ್ಥಿಪಂಜರ	೧೧೯-೩೮
ಕಚ-ತಲೆಗೂದಲು	೧೨-೬೫
ಕಂಜ-ತಾವರೆ	೧೩-೭೨
ಕಟ-ಗಂಡಸ್ಥಳ	೧೩೧-೯೨
ಕಡುಗಂದಿ-ಮಕ್ಕಳನ್ನು ಹೆಚ್ಚಾಗಿ ಹಡೆದವಳು	೧೯೩-೨೧ವ
ಕಡೆ-ರಂಗವಲ್ಲಿ	೨೬-೬
ಕಣಿಕೆ-ಚೂರು	೮-೪೬
ಕಂಟಣಿಪು-ಹಿಗ್ಗು, ಅರಳು	೧೦೬-೧೪೮
ಕಂಡಿಕೆ-ತುಂಡು	೧೧೦-೨ವ
ಕಣ್ಬರಿ-ಒಪ್ಪುವ ನೋಟ	೯೨-೮೬
ಕಣ್ಬೇಲಿ-ಕಣ್ಣುಳ್ಳ ನವಿಲುಗರಿ	೧೨೩-೫೫ವ
ಕಣ್ಬೊಣರ್-ಜೊತೆಗಣ್ಣುಗಳು	೨೨-೧೧೩
ಕಣ್ಮರಲ್-ಕಣ್ಣೆಂಬ ಹೂವು	೮೩-೫೧
ಕತ್ತಿಗೆ-ಒಂದು ಬಗೆಯ ಕತ್ತಿ	೧೧೯-೩೮
ಕದಳಿ-ಬಾಳೆ	೪೦-೭೧
ಕಂತುಮನ-ಕಾಮಾಕಾಂಕ್ಷೆ	೯೬-೯೯
ಕಂದರ್ಪ-ಮನ್ಮಥ	೧-೨
ಕಂದಳಿತ-ಚಿಗುರೊಡೆದ	೧೪೭-೨೯
ಕಂದುಕ-ಚೆಂಡು	೭೧-೧೧೪
ಕಮಠ-ಆಮೆ	೧೯೦-೧೩
ಕಂಪಿಲ್ಲ-ಹುಳಿಹೀರೆ	೫೪-೩೫

	ಪುಟ—ಪದ್ಯ
ಕರಂಡಗೆ-ಸಂಪುಟ, ಭರಣಿ	೧೪೬-೨೩
ಕರಪಾತ-ಕಿರಣಗಳ ಬೀಳುವಿಕೆ	೯೧-೮೩
ಕರಸಾದಂ-ನಿರ್ಋತಿ ದೇವತೆ(ನೈರುತ್ಯ)	೧೫೩-೫೫
ಕರಿಮುರಿ-ಸುಟ್ಟು ಕಪ್ಪಾಗುವುದು	೭೦-೧೦೮
ಕರುಮಾಡ-ಉಪ್ಪರಿಗೆ	೪೩-೯೨
ಕರುವಿಡು-ರೂಪಿಸು	೩೭-೫೪ವ
ಕರ್ಬುರ-ನಾನಾವಿಧವಾದ ಬಣ್ಣ	೧೬-೯೭
ಕಲನ್-ಪಾತ್ರೆ	೫೭-೫೧
ಕವ-ಕ್ರಮ	೩೦-೨೩
ಕವಡಿಕೆ-ಕವಡೆ	೧೮೬-೯೨ವ
ಕವಿಲ್ತ-ಕಂದು ಬಣ್ಣದ	೧೪೬-೨೩
ಕಸವರ-ಚಿನ್ನ	೧೭೯-೬೪
ಕಳಮ-ಬತ್ತ	೪೯-೧೮ವ
ಕಳಿಂಚು-ವಂಚನೆ	೫೨-೨೮ವ
ಕಳ್ಳಸಿಗ-ಹೆಂಡ ಮಾರುವವ	೯೯-೧೧೪ವ
ಕಾಕ್ಷ> ಕಕ್ಷ : (?)—ಗೇರುಮರ	೫೪-೩೫
ಕಾಜು-ಗಾಜು	೯-೪೭
ಕಾಂಚನ-ಚಿನ್ನ	೮-೪೬
ಕಾನೀನ-ಕನ್ಯಾಪುತ್ರ, ಕರ್ಣ	೯೫-೯೭
ಕಾಮಿತ-ಇಚ್ಛಿಸುವುದು	೪-೨೨
ಕಾಯ್ಗಾಲಿಗೊಡು ?	೧೨೦-೪೧ವ
ಕಾವಣ-ಚಪ್ಪರ	೧೨೨-೫೨
ಕಾಶ್ಮರ್ಯ-ಶಿವನೇಮರ	೫೪-೩೫
ಕಾಸರಪತಿ-ಕೋಣ	೫೫-೪೪
ಕಾಸಾರ—ಸರೋವರ	೨೦೨-೫೭ವ
ಕಾಳ್ಕೊಱಿ-?	೩೨-೩೬
ಕಾಟ್ಪುರ-ಕಾಡಿನ ಪ್ರವಾಹ	೪೪-೯೬
ಕಿಂಜಲ್ಕ-ತಾವರೆಯ ಕುಸುಮ	೮-೬೮ವ
ಕಿಟಿ-ಕಾಡು ಹಂದಿ	೫೯-೬೨

ಪುಟ—ಪದ್ಯ

ಕೊಟಕ್ಕಿಸರ್-ರಾಡಿಯಾದ ಕೆಸರು ೫೯-೬೪
ಕೋಟರ-ಮರದ ಪೊಟರೆ ೫೫-೪೩
ಕೋದು-ಪೋಣಿಸಿ ೧೦೨-೧೨೭
ಕೋವಣ-ಕೌಪೀನ ೧೪೬-೨೩
ಕೋಟಿಶೃಗ-ಕೊಂಬು ಮೂಡಿದ ಮುಖ ೯೫-೯೬ವ
ಕ್ವಣಿತ-ಶಬ್ದ ೧೨೬-೬೬ವ
ಕ್ಷ್ನೇದ-ಕದಡುವಿಕೆ ೧೩೨-೯೭
ಖದಿರ-ಕಾಚಿನಮರ ೧೨೯-೮೨
ಖರಕರ-ಸೂರ್ಯ ೪೩-೯೨
ಖಟ್ಗಿ-ಕತ್ತಿಯುಳ್ಳದ್ದು ೨೦೧-೫೫
ಖೇಟಕ-ಗುರಾಣಿ ೨೦೪-೬೪ವ
ಗಜಗಲಿಸು-ಮಿನುಗು, ಹೊಳೆ ೯೯-೧೧೪ವ
ಗಂಧಿಗ-ಗಂಧವನ್ನು ಮಾರುವವ ೧೩೨-೯೭
ಗರಗರಿಕೆ-ಲಾಲಿತ್ಯ ೧೪೫-೨೦ವ
ಗರ್ತ-ಕುಳಿ ೧೯೪-೨೨ವ
ಗಹ್ವರ-ಗುಹೆ ೪೨-೮೩
ಘಟ್ಟಿವಟ್ಟ-ಗಣೆಯ ದಾರಿ ೧೩೫-೧೧೩ವ
ಗಾಡಿ-ಸೌಂದರ್ಯ, ಚೆಲ್ವು ೪೮-೧೫
ಗಾಯಿಲೆ-ಖಾಯಿಲೆ ? ೧೧೦-೨ವ
ಗಾರುತ್ಮತ-ಗರುಡಮಣಿ ೨೦೦-೪೮
ಗಾಹರ-ಶಬ್ದ ೧೨೭-೬೮
ಗಾಳಿಸು-ಬಿಗಿಯಾಗಿ ಕಟ್ಟು ? ೧೪೦-೧೦
ಗೀರ್ವಾಣ-ದೇವತೆ ೨೧೭-೧೨೦
ಗುಗ್ಗುಳ-ಸುವಾಸನಾ ದ್ರವ್ಯ ೧೩೨-೯೭
ಗುಣಾಣೆ-ಸ್ತ್ರೀಯರ ಶೃಂಗಾರದ ಕೊಠಡಿ ? ೮೭-೬೮ವ
ಗುಂದ್ರಾ-ಪ್ರೇಂಕಣಗಿಡ ೫೪-೩೫

ಪುಟ—ಪದ್ಯ

ಗೂಂಟು-? ೧೧೧-೨ವ
ಗೃಹಮೇಧಿ-ಗೃಹಸ್ಥ ೧೫-೭೯
ಗೇಯ-ಸಂಗೀತ ೧೨೭-೬೮
ಗೊಂಕೆ-ಕೊರಳು ೧೯೩-೨೨ವ
ಗ್ರಾವ-ಬಂಡೆ ೫೯-೬೩
ಗ್ರೀವ-ಕೊರಳು ೫೯-೬೨
ಗ್ರೈವೇಯಕ-ಕೊರಳಹಾರ ೩೫-೪೯
ಚಂಚರೀಕ-ತುಂಬಿ ೮೮-೬೮ವ
ಚಂಡಿಕೆ-ತಲೆಗೂದಲ ಗಂಟು ೧೮-೬೨ವ
ಚದುಕ-? ೩೩-೩೯
ಚಪೇಟ-ಅಂಗೈ ೫೬-೪೬
ಚರೆಯು-? ೧೫೬-೬೬ವ
ಚಲ್ಲ-ಸೊಗಸು ೪೪-೯೫
ಚಲ್ಲಣ-ಚಡ್ಡಿ ೨೦೪-೬೭ವ
ಚಳೆಯ-ತಳೆಯುವುದು ೪೪-೯೫
ಚಾಂಪೇಯ-ಸಂಪಿಗೆಗೆ ಸಂಬಂಧಪಟ್ಟ ಮರ ೩೭-೫೬
ಚಾಳಯ-ಗತಿಲಂಘನ ೬೮-೧೦೧ವ
ಚಿಕುರ-ಮುಂಗುರುಳು ೨೭-೧೨
ಚೌಪಳಿಕೆ-ಮನೆಯ ಮುಂಭಾಗದ ಮಂಟಪ ? ೪೭-೧೦ವ
ಜಕ್ಕುಲಿಸು-ಚಕ್ಕಳಗುಳಿ ಇಡು ೨-೯
ಜಂಗಮವಿಷ-ಓಡಾಡುವ ವಿಷ ೧೧೮-೩೪
ಜತಿ-ಯತಿ, ಲಯ ೧೫೦-೪೦
ಜತ್ತುಕುಜ-? ೧೮೪-೮೫
ಜಂಬೂ—ನೇರಿಲೆ ಮರ ೪೦-೭೧
ಜಂಭ—ನಿಂಬೆಗಿಡ ೫೪-೩೫
ಜರಗು—ಚಿನ್ನದ ಕಣಗಳನ್ನುಳ್ಳ ಮರಳು ೯-೪೯
ಜಲಕನಾಗು—ಶುಭ್ರವಾಗು, ಪ್ರಕಾಶವಾಗು ೧೧೩-೮

	ಪುಟ—ಪದ್ಯ		ಪುಟ—ಪದ್ಯ
ದೀಂಟಿ-ಮರಳಿನ ರಾಶಿ	೫೭-೫೧	ನಿಬ್ಬಣ-ಉತ್ಸವ	೧೫೨-೪೮
ದೀಧಿತಿ-ಪ್ರಕಾಶ	೨೦೪-೬೬	ನಿರ್ಧೂಮಧೂಮ-ಕಾಂತಿ ಯಿಲ್ಲದ ಹೊಗೆ	೧೦೯-೨
ದೀಪ್ರ-ಹೊಳೆಯುವ	೪೧-೬೯	ನಿರ್ಬಾಧ-ಕಷ್ಟವಿಲ್ಲದ	೭೪-೪
ದೀಪ-ಮೃಗಗಳನ್ನು ಆಕರ್ಷಿಸಲು ಉಪಯೋಗಿಸುವ ಪ್ರಾಣಿ	೮೮-೬೮ವ	ನಿಷಾದಿ-ಮಾವುತ	೨೦೩-೫೭ವ
ದೀವರ-ಬೇಡ	೬೪-೮೪	ನಿಸದ-ಸತ್ಯ	೧-೪
ದುಮ್ಮಾನ-ವ್ಯಥೆ	೨೨-೧೧೧	ನಿಸ್ತ್ರಿಂಶ-ಕ್ರೂರ	೧೧೩-೮
ದುರಘ-ಪಾಪ	೪೯-೧೮ವ	ನಿಳಿಂಪ-ದೇವತೆ	೫೩-೩೨ವ
ದೂವೆ-ಧೂಮ, ಹೊಗೆ	೧೨೦-೪೧ವ	ನೀಕರಿಸು-ಅವಹೇಳನ ಮಾಡು	೧೧೦-೨ವ
ದೂರ್ವಾಪಣ-ಗರಿಕೆಯ ಮೊಳಕೆ	೨೦೦-೪೮	ನೀರಾಜನ-ಆರತಿ	೩೮-೫೯ವ
ದೃಪ್ತ-ಗರ್ವಿತ, ಸೊಕ್ಕಿನ	೭೧-೧೧೬	ನುಣ್ಬಸೆ-ನಯವಾದಹಾಸಿಗೆ	೧೦೬-೧೪೬
ದೊಣೆ-ಬತ್ತಳಿಕೆ	೧-೨	ನೃಶಂಸ-ಕ್ರೂರ	೧೭೦-೩೦
ದೊಮ್ಮಳಿಸು-ಗಾಬರಿಗೊಳ್ಳು	೧೫೦-೩೯ವ	ನೆಕ್ಕ-ನೆಗ್ಗಿಹೋದ	೧೮೧-೭೦
ದೋಹಳ-ಬಯಕೆ	೩೦-೨೬	ನೇವುರ-ಕಾಲಂದುಗೆ	೧೮-೯೨ವ
ದೌವಾರಿಕ-ದ್ವಾರಪಾಲಕ	೨೧೧-೯೨	ನೊಣೆ-ನುಂಗು	೧೮೦-೬೯
ದ್ಯುತಿ-ಪ್ರಕಾಶ	೯೮-೧೦೯	ನೊಪ್ಪು-ಹಗುರವಾಗಿರುವಿಕೆ	೪೯-೧೬ವ
ದ್ವಿರದ-ಆನೆ	೭೬-೧೩ವ	ನೋಗು-ವ್ಯಥೆಪಡು	೧೧೨-೫ವ
ದ್ವಿಷ-ಶತ್ರು	೮೮-೬೮	ನೋಂಪಿ-ವ್ರತ	೧೯೩-೨೦ವ
ಧೂರ್ಜಟಿ-ಶಿವ	೧೦೭-೧೫೨	ನ್ಯಗ್ರೋದ-ಆಲದಮರ	೫೪-೩೫
ನನೆಗಣೆ-ಹೂಬಾಣ	೧೪೨-೧೫	ಪಕ್ಕಣ-ಬೇಡರಹಳ್ಳಿ	೫೬-೫೦
ನವಾಸಾರ-ಹೊಸದಾದ ಮಳೆ	೪೭-೧೨	ಪಕ್ಕರಿಸು-ಜೇನನ್ನು ಹಾಕು	೧೦೫-೧೪೧
ನಳಿನ-ತಾವರೆ	೮೫-೬೨	ಪಕ್ಷ್ಮ-ಕಣ್ಣಿನ ರೆಪ್ಪೆ	೯೩-೯೧
ನಾಗವಲ್ಲಿ-ವೀಳೆಯದೆಲೆಯ ಬಳ್ಳಿ	೮೭-೬೮ವ	ಪಂಗಿಗ-ಹಂಗಿಗ, ಋಣಿ	೧೫೮-೭೧
ನಾದೇಯ-ಕಾಗಿಹೇರಳೆ ಗಿಡ	೫೪-೩೫	ಪಚ್ಚಡ-ಹಚ್ಚಡ, ದುಪ್ಪಟಿ	೧೨೬-೬೭
ನಾರಂಗ-ಕಿತ್ತಳೆ	೪೦-೭೧	ಪಚ್ಚವಡಿಸು-ಹೊದೆಸು	೮೩-೫೦ವ
ನಾಟ್-ನಾಡು	೧೧-೬೨ವ	ಪಟಳ-ಸಮೂಹ	೫೫-೪೩
ನಿಚಯ-ರಾಶಿ, ಸಮೂಹ	೧೪೧-೧೪ವ	ಪಡಲಗೆ-ತಟ್ಟೆ	೧೬೪-೫ವ
ನಿಚುಳ-ನೀರುಹಲಸಿನ ಮರ	೫೪-೩೫	ಪಡಲಿಡು-ಚೆದರಿಹೋಗು	೧೦೬-೧೪೫
ನಿಚ್ಚಡ-ನಿಶ್ಚಲ?	೯೧-೮೨	ಪಡಿಯಱತಿ-ಬಾಗಿಲು ಕಾಯುವವಳು	೨೭-೧೩

ಪುಟ—ಪದ್ಯ

ಪಣವ-ಮದ್ದಲೆ ೧೫೦-೩೯ವ
ಪತ್ತಿ-೧ರಥ, ೧ಆನೆ, ೩ಕುದುರೆ
ಗಳು ಮತ್ತು ೫ಕಾಲಾ
ಳುಗಳ ಗುಂಪು ೩೬-೫೩
ಪಥ-ಅಳಲೇಕಾಯಿ ಮರ ೫೪-೩೫
ಪದಿರ್-ಸಂಕೇತದ ಮಾತು ೨೦೨-೧೨೬ವ
ಪನಸು-ಹಲಸು ೩೭-೫೬
ಪನೆ-ಮೊಳೆವ ಹಲ್ಲು ೧೮೨-೭೬
ಪಂದರ-ಚಪ್ಪರ ೫೭-೫೧
ಪಯೋಜ-ಕಮಲ ೮೫-೫೮
ಪಯೋದ-ಮೋಡ ೧೭೬-೪೯
ಪರಲು-ಹರಳು ೧೯೦-೧೧
ಪರಾಂಗಣ-ಅಂಗಣದ
ಹಿಂಭಾಗ ೮೩-೫೦ವ
ಪರಿಜು-ಆಕಾರ, ರೂಪು ೧೧೦-೨ವ
ಪರಿಮರಿ-ಜಾರುಗುಪ್ಪೆ ೮೬-೬೪
ಪರಿವಿಷ್ಟ-ಕುಳಿತುಕೊಂಡ ೨೧-೧೯ವ
ಪರಿವೇಷ-ಸೂರ್ಯಚಂದ್ರರ
ಸುತ್ತ ಬೆಳಕು ಕಟ್ಟುವುದು ೪೧-೮೦
ಪರೇತವನ-ಶ್ಮಶಾನ ೧೧೬-೨೧
ಪಲಗೆಜೂಜು-ಜೂಜಿನ
ಒಂದು ಬಗೆ ೧೧೮-೩೬
ಪಲಾಶ-ಮುತ್ತುಗದ ಮರ ೧೪೬-೨೩
ಪಲ್ಲವ-ಚಿಗುರು ೨-೮
ಪಲ್ಲೆ-ಹಲ್ಲೆ ೧೯೪-೨೭ವ
ಪಸದನ-ತೊಡಿಗೆ ೨೭-೧೩ವ
ಪಸಲೆ-ಹಸಲೆ, ಗರಿಕೆ ೧೭೫-೪೭ವ
ಪಸಾಯ-ಪ್ರಸಾದ ೧೨೬-೬೭ವ
ಪಸುಗೆ-ಕ್ರಮ ೩೬-೫೨
ಪಳಿಯಿಗೆ-ಬಾವುಟ ೭೧-೧೧೪
ಪಾಟಳ-ನಸುಗೆಂಪು ೧೦೦-೧೨೧

ಪುಟ—ಪದ್ಯ

ಪಾಟಿತ ಒಡೆದ ೫೬-೪೬
ಪಾಣವಿಕ-ಮದ್ದಲೆಯವ ೧೫೦-೩೯ವ
ಪಾಣ್ಬ-ಜಾರ, ಸಿತಗ ೩೪-೪೫
ಪಾದಪ-ಮರ ೧೧-೬೧
ಪಾಪೆ-ಕಣ್ಣಿನ ಪಾಪೆ ೧೧೬-೨೪
ಪಾಯ್ದಾಳ-ಕಾಲಾಳು? ೮೮-೬೮ವ
ಪಾರಾವತ-ಪಾರಿವಾಳ ೭೦-೧೦೭
ಪಾಱ್-ವಿಮಾನ ೧೫೩-೫೫
ಪಾಱುಗಳ್-? ೪೨-೮೩
ಪಾರ್ವಣಶಶಿ-ಪರ್ವ
ಕಾಲದ ಚಂದ್ರ ೩೦-೨೭
ಪಾವಸೆ-ಪಾಚಿ ೧೬-೮೭
ಪಾಷಾಣಕ-ಕಲ್ಲು ೯೯-೧೧೩
ಪಿಚುಳ-ಕಕ್ಕೇಗಿಡ ೫೪-೩೫
ಪಿಂಛ-ನವಿಲುಗರಿ ೧೨೭-೬೯
ಪಿಂಜರ-ಪಿಂಗಲ, ನಸುಗೆಂಪು ೪೦-೬೯
ಪಿಣಿಲ್-ಹೆರಳು ೬೬-೯೨
ಪಿಪ್ಪಲ-ಹಿಪ್ಪಲಿಮರ ೧೦೭-೧೫೩
ಪಿಲ್ಲಣಿಗೆ-ಪಿಲ್ಲಿ ಎಂಬ
ಕಾಲುಂಗುರ ೪೮-೧೪
ಪಿಲ್ಲಿಸು-? ೪೮-೧೪
ಪಿಶುನ-ಚಾಡಿಕೋರ ೧೧೫-೧೯
ಪೀತನ-ಅಂಬಟೆಮರ ೪೦-೭೧
ಪೀಲಿ-ನವಿಲುಗರಿ ೧೫-೮೩
ಪುಡಿಕೆ-ಪೆಟ್ಟಿಗೆ ೪೧-೭೫
ಪುಣಿಲ್-ಮರಳು ೮೦-೨೭
ಪುತ್ರಕಾಮ್ಯ-ಮಗನ ಬಯಕೆ ೨೬-೮
ಪುದು-ಸಮಾನ ೨೦೧-೫೬
ಪುನ್ನಾಗ-ಸುರಹೊನ್ನೆ ೫೪-೩೮
ಪುರುಡು-ಹುರುಡು, ಸ್ಪರ್ಧೆ ೫೩-೩೨
ಪುಳುಂಬು-ಬಾಣ ೧೨೩-೫೫ವ

	ಪುಟ—ಪದ್ಯ
ಪುಳ್ಳಿಳಿ-ಹುಳಿ ಮಜ್ಜಿಗೆ	೧೫೯-೭೪ವ
ಪೂಣ್-ಪ್ರತಿಜ್ಞೆ	೬೪-೭೯ವ
ಪೂತ-ಪರಿಶುದ್ಧ	೬೧-೭೧ವ
ಪೇಚಕ-ಬಾಲದಬುಡ	೧೩೦-೮೯
ಪೇರಣೆಮಣಿ--?	೧೦೧-೧೨೨
ಪೇಳಿಗೆ-ಪೆಟ್ಟಿಗೆ	೧೯೧-೧೫
ಪೈಶೂನ್ಯ-ಚಾಡಿ ಹೇಳುವಿಕೆ	೧೮೦-೬೮ವ
ಪೊಕ್ಕಳಿಗೊಡು-?	೧೦೯-೨ವ
ಪೊಗಸು-ಪ್ರಾತಃಕಾಲ	೭೯-೩೨
ಪೊಂಗು-ಉಬ್ಬು, ಸಂತೋಷಪಡು	೬೮-೨೧
ಪೊಟ್ಟಣ-ಪಟ್ಣ	೯೫-೯೮
ಪೊಡೆಸೆಂಡು-ಹೊಡೆಯುವ ಚೆಂಡು	೪೩-೯೧
ಪೊಂತಿವಣೆ-?	೨೦೯-೮೪ವ
ಪೊಂಬಡಲಗೆ-ಚಿನ್ನದ ತಟ್ಟೆ	೨೯-೧೯
ಪೊರಜೆ-ಆನೆಯ ಕೊರಳಿಗೆ ಬಿಗಿಯುವ ಹಗ್ಗ	೧೩೬-೧೧೩ವ
ಪೊಳೆಯ-?	೬೮-೧೦೧ವ
ಪೋತಕ-ಮರಿ	೧೮-೯೪
ಪೋರ್-ಬಿಲ	೧೭-೯೦
ಪೋಳಿಯನ್-?	೧೯೯-೪೩
ಪೋಟಿಲ್-ಪೊಟರೆ	೬೪-೮೦
ಪ್ರಗಲ್ಭ-ಪ್ರೌಢ	೨೯-೧೯
ಪ್ರಥಿತ-ಪ್ರಸಿದ್ಧ	೧-೧
ಪ್ರಪಂಚಿತ-ವಿಸ್ತರಿಸಲ್ಪಟ್ಟ	೭೫-೯ವ
ಪ್ರವಾಳ-ಹವಳ	೨೨-೧೧೩
ಪ್ರಸ್ವನಿತ-ಹೆಚ್ಚು ಶಬ್ದ ಮಾಡುವ	೧೩೨-೯೬
ಪ್ರಾಜ್ಯ-ಶ್ರೇಷ್ಠ	೩೬-೫೨
ಪ್ರಾಲೇಯ-ಹಿಮ	೧೦-೫೩

	ಪುಟ—ಪದ್ಯ
ಪ್ರಾವೃಟ್-ಮಳೆಗಾಲ	೮೪-೫೬ವ
ಪ್ರಾವೃಷ್-ಮಳೆಗಾಲ	೬೮-೧೦೨
ಪ್ರಿಯಕ-ಹೊನ್ನೇಮರ	೫೪-೩೫
ಪ್ರಿಯಾಳ-ಮೊರಟೇಗಿಡ	೫೪-೩೫
ಪ್ರೇಂಖ—ಉಯ್ಯಾಲೆ	೧೩೭-೧೧೯
ಪ್ರೋಚ್ಚಳಿತ—ಮೇಲಕ್ಕೆ ಚಿಮ್ಮಲ್ಪಟ್ಟ	೧೩೭-೧೧೯
ಪ್ಲಕ್ಷ—ಬಸರೀಮರ	೫೪-೩೫
ಫುಲ್ಲಶರ—ಮನ್ಮಥ	೮೭-೬೮ವ
ಫುಲ್ಲಾಂಬುಜ-ಅರಳಿದಕಮಲ	೬೭-೯೯
ಫೇರವ—ನರಿ	೫೪-೩೫
ಬಕುಳ—ಗೋಳೀ ಹೂವಿನಮರ	೩೪-೩೫
ಬಕ್ಕಳೆ—?	೫೫-೪೩
ಬಕ್ಕುಡಿ—ಚರ್ಜೆ	೧೨೭-೭೧
ಬಗರಗೆ—ಚಿಲುಮೆ	೧೪೫-೨೨ವ
ಬಂಚಿಸು—ವಂಚಿಸು	೨೦೦-೮೯
ಬಟ್ಟಸರಿ—ಕುತ್ತಾಡು ?	೧೧೧-೪ವ
ಬಟ್ಟಸಾಮಿ—ವೇಶ್ಯೆಯರಪರವಾಗಿ ಕೆಲಸಮಾಡುವವ ?	೭-೩೫
ಬಣಂಬೆ—ರಾಶಿ	೧೧೦-೨ವ
ಬಣೆವಾವು—ಒಂದು ಬಗೆಯ ಹಾವು	೨೦೯-೮೪ವ
ಬದರ—ಎಲಚೀಗಿಡ	೫೪-೩೫
ಬದ್ಧವಣ—ಮಂಗಳವಾದ್ಯ	೩೩-೩೯
ಬದ್ದೆ—ಪತಿವ್ರತೆ	೧೦೦-೨ವ
ಬಂಬಳಂಬಾಡು—ಬಂಬಲಿನಂತೆ ಬಾಡು	೧೬೪-೫ವ
ಬರುಂಟು—ಪುಸಲಾಯಿಸು	೧೮೦-೬೬
ಬರ್ಹಿಣ—ನವಿಲು	೧೨-೬೫
ಬವಣೆಗೆ—ಸುತ್ತಾಟ	೧೧೧-೨ವ

ಪುಟ—ಪದ್ಯ

ಬವಸೆ-ಉದ್ಯೋಗ ೧೪-೭೮
ಬಸ-ವಶ ೧೮೪-೯೬
ಬಸನ-ವ್ಯಸನ, ಗೀಳು ೩೭-೫೪ವ
ಬಳ್ವಳ-ಅತಿಶಯ ೪೭-೧೦ವ
ಬಾಂದೊಱೆ-ದೇವಗಂಗೆ ೧೧-೬೨ವ
ಬಾನಂಗುೞಿ-ಗಗನಗರ್ತ ? ೧೬೩-೨
ಬಾಯಿಪ-ಬಾಗಿನ, ಉಡುಗರೆ ೧೯೩-೨೧ವ
ಬಾಯ್ವಸವು-ಬಾಯಿನ ಕ್ಷಾಮ ೧೩೯-೭
ಬಾರಸ-ದ್ವಾದಶ ೧೪೬-೨೩
ಬಾಸಿಗ-ಪೂಮಾಲೆ ೧೯೭-೩೫
ಬಾಸುೞಿ-ಬಾಸುಂಡೆ ೧೫೬-೬೬
ಬಿಕ್ಕ-ಮಾಂಸ ೧೧೯-೪೦
ಬಿಂಜ-ವಿಂಧ್ಯ ೧೦೦-೧೧೬
ಬಿತ್ತರಿಗೆ-ಪೀಠ ೧೨೫-೬೧
ಬಿದುತಟ-ಕುಂಭಸ್ಥಲ ೬೦-೬೫
ಬಿಸ-ಮೃಣಾಲ ೨೮-೧೫
ಬಿಸಟಂಬರಿ-ವಿಸ್ತಾರವಾಗಿ ಓಡು ೧೩೫-೧೧೩ವ
ಬಿಸರುಹ-ತಾವರೆ ೧೨೫-೬೩
ಬಿಸಲತೆ-ತಾವರೆಯ ಬಳ್ಳಿ ೮೦-೩೭
ಬಿಸಸದನ-ಸರೋವರ ೧೩೩-೧೦೪
ಬಿಸುಗದಿರ-ಸೂರ್ಯ ೫೯-೬೩
ಬೀಸರ-ವ್ಯರ್ಥ ೯೨-೮೬
ಬುಗುಟು-ಏಟು ಬಿದ್ದೆಡೆ ಊದುವುದು ೧೮೪-೮೫ವ
ಬುಭುಕ್ಷಿತ-ಹಸಿದ ೧೨೯-೭೮
ಬೆಗಡು-ಭಯ ೧೮೬-೯೧ವ
ಬೆಟ್ಟು-ಬೆಟ್ಟ ೧೦೦-೧೨೦
ಬೆಡಂಗು-ಸೊಬಗು ೮-೪೨

ಪುಟ—ಪದ

ಬೆಬ್ಬಸ-ಅತಿಯಾಗಿ ಗರ್ವಿಸು ೧೮೬-೯೧ವ
ಬೆಳಂತಿಗೆ-ಹೊಳಪು, ಪ್ರಕಾಶ ೨೮-೧೪
ಬೆಳ್ವಾಸ-ಮೊಣಕಾಲುದ್ದ ನೀರಿನಲ್ಲಿ ನಿಂತು ತಪಸ್ಸು ಮಾಡುವುದು ೮೬-೬೩
ಬೇಕರಿ-ಬೆಂದು ಇಜ್ಜಲಂತೆ ಕಾಣುವ ೧೬೩-೨
ಬೇಳ್ವೆ-ಹೋಮ ೧೪೫-೨೦ವ
ಬೊಜಗ-ವಿಟ ೧೧೯-೪೧ವ
ಬೋಧಾಸಿ-ಜ್ಞಾನವೆಂಬ ಕತ್ತಿ ೨-೫
ಬ್ರಾತ-ಸಮೂಹ ೧೭೯-೬೩
ಭಗಣ ನಕ್ಷತ್ರದ ಗುಂಪು ೧೪೫-೨೧
ಭಂಜಿತ-ಭಂಗಮಾಡಲ್ಪಟ್ಟ ೧೪೭-೨೯
ಭಟ್ಟಿತ್ತಿಗೆ-ಪೂಜೆ ಮಾಡುವ ಭಟ್ಟನ ಹೆಂಡತಿ ೧೪೩-೧೭ವ
ಭರ್ತಾರ-ಒಡೆಯ ೫೧-೨೬
ಭಾಸಿ-ಪ್ರಕಾಶವನ್ನುಳ್ಳ ೫೫-೪೦
ಭಾಸುರ-ಪ್ರಕಾಶ ೧-೧
ಭಿಲ್ಲ-ಬೇಡ ೫೭-೫೬
ಭುಂಭುಕ-ಪ್ರಸಿದ್ಧವಾದ ? ೬೭-೯೭ಪ
ಭೂಜ-ಮರ ೫೪-೩೫
ಭೈಕ್ಷ-ಭಿಕ್ಷೆ ೧೭-೯೧
ಮಂಜೂಷ-ಪೆಟ್ಟಿಗೆ ೯೫-೯೬
ಮಂಡನ-ಅಲಂಕಾರ ೪೯-೧೭
ಮದಿಲು-ಪೌಳಿ ಗೋಡೆ ೧೧೫-೧೮ವ
ಮನ್ಯು-ದುಃಖ ೧೭೧-೩೫ವ
ಮಂದಸ-ಚಿನ್ನದ ಪೆಟ್ಟಿಗೆ ೯೪-೯೫
ಮರಕತ-ಪಚ್ಚೆ ೧೭೮-೫೮
ಮರಮಸಕ-ಹೆಚ್ಚಾದ ಕೋಪ ೧೩೫-೧೧೩ವ
ಮರಾಳ-ಹಂಸ ೧೮-೯೨ವ
ಮಲಹಾರಿ-? ೧೧೩-೭ವ

	ಪುಟ—ಪದ್ಯ
ಮಲ್ಲಂತಿಗಿಱು-ಕಾಸೆಯನ್ನು ತೊಡುವುದು	೫೨-೨೮ವ
ಮಲ್ಲೀಮುಕುಳ-ಮಲ್ಲಿಗೆಯ ಮೊಗ್ಗು	೧-೨
ಮಸ್ತಿಷ್ಕ-ತಲೆಯ ಮಿದುಳು	೧೧೯-೪೧
ಮಳಪಿಕ್ಕ-?	೨೧೩-೧೦೨
ಮಳೀಮಸ-ಕೊಳಕು	೧೩೫-೧೧೩ವ
ಮಾಂಕರಿಸು-ತಿರಸ್ಕರಿಸು	೬-೨೯
ಮಾಚಾಳಿಕೆ-?	೧೧೨-೭
ಮಾರ್ಗಡೆ-?	೧೭೫-೪೫
ಮಾಲೂರ-ಬಿಲ್ವಪತ್ರೆಮರ	೫೪-೩೫
ಮಿಸುಪು-ಹೊಳಪು	೬೦-೬೫ವ
ಮಿಳಿ-ಹಗ್ಗ	೧೦೭-೧೨೩ವ
ಮಿಳ್ಳಿಸು-ಅಲುಗಿಸು	೯೫-೯೫ವ
ಮೀಂಗುಲಿಗ-ಬೆಸ್ತ	೭೪-೪
ಮೀನಕೇತು-ಮನ್ಮಥ	೬೬-೯೩ವ
ಮುಟ್ಟುಪಡ-ಅಲಾಭ	೬೨-೭೪ವ
ಮುನ್ನೇಸಱ್-ಪ್ರಾತಃಕಾಲ	೨೨-೧೧೪
ಮುಮ್ಮಟಿ-ಗುಂಪಾಗು ?	೧೫೦-೩೯ವ
ಮುಱುಕ-ತಿರುಗಿಸುವಿಕೆ	೨೦೯-೮೪ವ
ಮುಸು-ಕೋತಿ	೧೩೫-೧೧೩ವ
ಮುಸುಂಬು-ಮೂತಿ	೧೩೫-೧೧೩ವ
ಮುಸ್ತಾಕ್ಷತ-ಗೇಕಿನ ಗಡ್ಡೆಯಗಾಯ	೫೯-೬೩
ಮೂವೆ-ಮೂಱುಸಾರಿ	೪೬-೯
ಮೂರಿ-ಬಾಯಿ	೫೬-೪೫
ಮೂಷೆ-ಲೋಹಕರಗಿಸುವ ಮಣ್ಣಿನ ಕುಡಿಕೆ	೧೪೫-೨೦ವ
ಮೃಣಾಳ-ತಾವರೆಯ ದಂಟು	೩೭-೫೭
ಮೆಡಱು-ಸುತ್ತಿಕೊಳ್ಳು	೧೫೩-೧೧೩
ಮೇದಿನಿ-ಭೂಮಿ	೮೭-೬೮

	ಪುಟ—ಪದ್ಯ
ಮೇಪು-ಮೇವು	೧೭೮-೫೬
ಮೇಷ-ಆಡು	೧೦೦-೧೧೮
ಮೇಳಾಪಕ-ಜೊತೆ	೧೧೬-೨೪
ಮೊಟಕಲಿಸು-?	೧೫೧-೪೧
ಮೌಂಜಿ-ಮುಂಜಿ	೧೪೭-೩೧
ಯಾದವ್ರೋದ-ಮೊಸಳೆ ?	೧೩೫-೫೫
ಯುವಾನ-ತರುಣ	೧೫೨-೫೦
ಯುಷ್ಮತ್-ನಿಮ್ಮ	೧೬೦-೭೬
ರದನಿ-ಆನೆ	೫೫-೩೫
ರಂಭಾ-ಬಾಳೆಗಿಡ	೫೪-೩೫
ರಯ್ಯ-ರಮ್ಯ	೩೯-೬೪
ರವಳಿ-ಶಬ್ದ	೨೦೭-೭೫ವ
ರಾಜಿಳ-ನೀರುಹಾವು	೫೪-೩೭
ರಾಳ-?	೧೧೬-೨೦
ರಿಚೆ-?	೩೩-೩೯
ರಿಣ-ಋಣ	೭೬-೧೩
ರುತಿ-ಧ್ವನಿ	೧೨೮-೭೬
ರುವತ್-ಶಬ್ದಮಾಡುವ	೧೯೯-೪೫
ರೋಚಿ-ಪ್ರಕಾಶ	೬೫-೮೫
ರೋಮಂಥ-ಮೆಲುಕು ಹಾಕುವುದು	೫೬-೪೫
ಱುಂಜೆ-ವಾದ್ಯವಿಶೇಷ	೨೦೭-೭೫ವ
ಱಿಕೋಱಗ-ಹೀಯಾಳಿಸುವವ	೧೩೬-೧೧೩ವ
ಲಕ್ಕೆ-ಲಕ್ಷ	೨೧೦-೮೪ವ
ಲಟಹ-ರಮಣೀಯತೆ	೨-೧೦
ಲಪನ-ಮುಖ	೧-೩
ಲಂಪಳ-ಲಂಪಟ	೧೦೩-೧೨೮
ಲಲಾಮ-ಹಣೆ	೨೧೦-೮೬
ಲಸತ್-ಪ್ರಕಾಶಮಾನವಾದ	೭-೩೬
ಲುಬ್ಧಕ-ಬೇಡ	೬೧-೭೧ವ

	ಪುಟ—ಪದ್ಯ		ಪುಟ—ಪದ್ಯ
ಉಳಿತಾಳಕ-ಗುಂಗುರು		ವಿಲಸಿತ-ಪ್ರಕಾಶಮಾನವಾದ	೧೨೫-೬೦
ಕುರುಳು	೪೩-೮೭	ವಿಶಸನ-ಯುದ್ಧ	೧೧೯-೪೦
ಲೇಲಿಹಾನ-ನೆಕ್ಕುತ್ತಿರುವ	೧೯೭-೩೩	ವಿಶ್ರುತ-ಪ್ರಸಿದ್ಧವಾದ	೮೭-೬೮
ಲೋಚ-ಕೇಶೋತ್ಪಾಟನ	೫೨-೨೮ವ	ವಿಷಯ-ದೇಶ	೩೯-೬೫
ಲೋಧ್ರ-ಸಾಂಬ್ರಾಣಿಮರ	೫೪-೩೫	ವಿಷಾಣ-ಕೊಡು	೧೦೦-೧೨೧
ಲೋವೆ-ಮನೆಯಸೂರಿನ		ವಿಷ್ಟರ-ಪೀಠ	೨೧-೧೯ವ
ಮುಂಭಾಗ	೧೮-೯೨ಪ	ವಿಹಾಯಸ-ಆಕಾಶ	೨೦೨-೫೭
ವಕುಳ-ಬಕುಳ	೧೨೩-೫೫ವ	ವೀತವೃಜಿನ (ತಪ್ಪು) ವೀರವೃಜಿನ-ಪಾಪ	
ವಕ್ತ್ರ-ಮುಖ	೪೪-೯೫	ವನ್ನು ಕಳೆದುಕೊಂಡವನು	೨೧-೧೦೭
ವಟ-ಆಲದಮರ	೫೫-೪೩	ವೃಥೆ-ವ್ಯರ್ಥ	೫೧-೨೭
ವಣಿಕ್ಪತಿ-ವರ್ತಕಶ್ರೇಷ್ಠ	೬೫-೮೫	ವೃಷ-ಸದ್ಧರ್ಮ	೪-೨೨
ವಪ್ರ-ಗೋಡೆ	೪೧-೭೯	ವೇದಂಡ-ಆನೆ	೧೩೪-೧೧೦
ವರುಡಲ್-ಉಜ್ಜುವಿಕೆ	೧೦೧-೧೨೨	ವೈಕುರ್ವಣ-ರೂಪನ್ನು	
ವಲ್ಲೂರ-ಒಣಗಿದಮಾಂಸ	೧೧೯-೪೧	ಬದಲಾಯಿಸುವ ವಿದ್ಯೆ	೧೪೯-೩೬ವ
ವಾಜಿ-ಕುದುರೆ	೮೮-೬೮ವ	ವ್ಯಾದಾನ-ಅಗಲವಾಗಿ ತೆರೆದಿರುವ	
ವಾನೇಯ-ಕಾಡಿಗೆ	೧೦೦-೧೧೬		೧೮೬-೯೦
ವಾಮಾಳಾಕ-ಕೊಂಕಿದ		ವ್ಯಾಧೂತ-ಬೀಸಲ್ಪಟ್ಟ	೧೨೮-೭೪
ಕುರುಳು	೫೪-೩೮	ವ್ಯಾಲೋಲ-ಚಂಚಲ	೮೫-೫೯
ವಾಂಶಿಕ-ಕೊಳಲು	೬೭-೯೭ವ	ವ್ಯಾಳ-ಸರ್ಪ	೧-೨
ವಾಸಕ-ದಿವಸ	೧೭೨-೩೬ವ	ಶಠ-ನಾಯಕನಲ್ಲಿ ಒಂದುಭೇದ	
ವಾಳವಾಯಜ-ಒಂದು			೧೦೭-೧೫೪
ಬಗೆಯ ರತ್ನ	೧೩೧-೯೧	ಶಫರಿ-ಹೊಳೆಯುವ ಹೆಣ್ಣು	
ವಿಗುರ್ವಣೆ-ಭಯವನ್ನು		ಮೀನು	೫೭-೫೫
ಹುಟ್ಟಿಸುವ	೨೧೧-೮೮ವ	ಶಬಾಲಯ-ಶ್ಮಶಾನ	೧೧೬-೭೪
ವಿಚಯನ-ಹುಡುಕು-?	೯೨-೮೫	ಶರ್ವ-ಶಿವ	೬೭-೯೭ವ
ವಿಚ್ಛಿತ್ತಿ-ಕತ್ತರಿಸುವಿಕೆ	೩-೧೧	ಶಲಾಟು-ಹೀಚು	೬೩-೭೭
ವಿಟಪಿ-ಮರ	೫೫-೪೩	ಶಳ-ಮುಳ್ಳುಹಂದಿ	೫೯-೬೨
ವಿದ್ರುಮ-ಹವಳ	೧೧೬-೨೧	ಶಾಕ್ವರ-ಗೂಳಿ	೧೯೨-೨೦ವ
ವಿಪಂಚಿ-ವೀಣೆ	೧೪೩-೧೭ವ	ಶಾಖಾಚರ-ಕಪಿ	೧೦೨-೧೨೬ವ
ವಿಭ್ರಾಜಿಸು-ಪ್ರಕಾಶಿಸು	೮೫-೫೮	ಶಾಬಕ-ಮರಿ	೧೮-೯೪
ವಿಯಚ್ಚರ-ಖೇಚರ	೯೨-೮೫ವ	ಶಾರಿಕೆ-ಹೆಣ್ಣುಗಿಳಿ	೧೮-೯೪

ಪದ	ಪುಟ—ಪದ್ಯ
ಶಾಳಿ-ನೆಲ್ಲು	೮೫-೬೨
ಶಿಲೀಮುಖ-ಬಾಣ	೧೫೧-೪೫
ಶೈಲೂಷ-ನಟ	೮೦-೩೫
ಶ್ರೇಢಿ-ಶ್ರೇಣಿ, ಸ್ತೋಮ	೪೫-೩ವ
ಸಕ್ಕಿ-ಸಾಕ್ಷಿ	೧೩೯-೭
ಸಂಕ್ರಂದನ-ಇಂದ್ರ	೧೫೩-೫೫
ಸಂಚಯ-ರಾಶಿ	೧೧-೬೧
ಸಂಚಳ-ಚಂಚಲ	೧೧-೬೧
ಸಂಛನ್ನ-ಮುಚ್ಚಿದ	೬೭-೯೭ವ
ಸಂಜನಿತ-ಹುಟ್ಟಿದ	೩೯-೬೮
ಸಪವುಡನ್-ಆತುರ, ಸಂಭ್ರಮ	೭೫-೧೧
ಸಣಗ-?	೧೦೦-೧೧೮
ಸಂಡಿ-?	೨೧೪-೧೦೮
ಸತ್ರಾರ್ಣ-ಹಿಂದುಮರ ?	೫೪-೩೫
ಸಪಶಿರ < ಸಪ್ತಶಿರ-ಮುಷ್ಟಿಯ ಒಂದು ವಿಧಾನ	೨೧೧-೯೦ವ
ಸಪ್ತಚ್ಛದ-ಏಳೆಲೆ ಬಾಳೆ ಮರ	೫೫-೩೫
ಸಪ್ತಾರ್ಚಿ-ಅಗ್ನಿ	೮೪-೫೪
ಸಪ್ತಾರ್ಣವ-ಸಪ್ತ ಸಮುದ್ರ	೧೮೯-೭
ಸಮವಾಯ-ಒಟ್ಟಿಗೆ ಸೇರುವುದು	೧೨೦-೪೧ವ
ಸಂಭೇದ-ಕೂಡುವಿಕೆ	೯೭-೧೦೭ವ
ಸಂಮದ-ಸಂತೋಷ	೪೨-೮೨
ಸಮೀರ-ಗಾಳಿ	೧೩೨-೯೬
ಸಮ್ಮುಡಿ-ನೇರವಾದ ವಾದ	೩೭-೫೭
ಸರಟ-ಓತಿ	೧೨೯-೮೨
ಸರಿಗಲ್ಲ-ಬಂಡೆಗಲ್ಲು	೪೯-೧೮
ಸಲಗೆ-ಶಲಾಕೆ	೪೯-೧೮ವ
ಸಲಿಲ-ನೀರು	೪೮-೧೪ವ
ಸವಡಿ-ಜೋಡಿ	೩೦-೨೪
ಸವನ-ಸ್ನಾನ	೪೧-೭೬
ಸವಿರತಿವ್ರತ-ವಿರತಿವ್ರತದೊಡನೆ ಕೂಡಿದ	೧೪-೭೬
ಸಹಕಾರ-ಮಾವು	೪೦-೭೧
ಸಾಗರಾವಾಸನ್-ವರುಣ	೧೫೪-೫೬
ಸಾನು-ಬೆಟ್ಟದ ತಪ್ಪಲು	೪೭-೧೨
ಸಾಂದು-ಸಾದು	೧೧೨-೭
ಸಾಭ್ರಾತ-ಒಡಹುಟ್ಟಿದ	೧೧೨-೫ವ
ಸಾಂಯಾತ್ರಿಕ-ಹಡಗಿನ ವ್ಯಾಪಾರಿ	೧೩೮-೨
ಸಾಂಯುಗೀನ-ಯುದ್ಧ ಚತುರ	೭೬-೧೩ವ
ಸಾಯಕ-ಬಾಣ	೬೧-೬೮
ಸಾರಿಕೆ-ಹೆಣ್ಣು ಗಿಳಿ	೭೦-೧೦೭
ಸಾಸಿಗ-ಸಾಹಸಿಗ	೧೧೪-೧೩
ಸಾಸ್ನಾಪಟ-ಗಂದೊವಲು	೧೦೦-೧೨೧
ಸಿಗ್ಗು-ನಾಚಿಕೆ	೬೬-೯೫
ಸಿತಗ-ವಿಟ	೧೪೮-೩೨
ಸಿತಚಂಚು-ಬಿಳಿಯ ಕೊಕ್ಕು	೮೫-೬೦
ಸಿದ್ಧಿಗೆ-ಚಿತೆ	೧೨೦-೪೧ವ
ಸಿಂಜೆ-ಸಿತಗೆ, ಸೂಳೆ	೪೫-೪
ಸಿಪ್ಪರ್-ಚಿಪ್ಪು	೨೯.೧೯
ಸೀಕರ-ತುಂತುರು ಹನಿ	೧೩೨-೯೮
ಸೀತೋದೆ-ಸೀತೋದಾನದಿ	೩೯-೬೩
ಸೀರ-ನೇಗಿಲು	೧೦೧-೧೨೩
ಸೀವರ-ತುಂತುರುಹನಿ	೧೩೧-೯೨
ಸುಸಿಲ್-ಸುರತ	೧೧೦-೨೫
ಸೂನಂಗಳ್-ಹೂವುಗಳು ?	೧೪-೨೮
ಸೂಸು-ಚೆಲ್ಲು	೧೫-೮೧
ಸೂಳೈಸು-ಶಬ್ದಮಾಡು	೩೬-೫೩
ಸೆಗಳಿ-ಶಾಖ	೧೬೩-೪

	ಪುಟ—ಪದ್ಯ
ಸೆಜ್ಜೆವಳ್ಳ-ಶಯ್ಯಾಗೃಹದ ಅಧಿಕಾರಿ	೨೪-೧೨೦
ಸೆಂದುರ-ಲಕ್ಕೀಹೂವು	೧೩೪-೧೧೧ವ
ಸೆಲ್ಲಿಸು—ಸೆಕ್ಕಿಸು ?	೫೧-೨೫
ಸೆಳೆಗೊಂಬು-ತೆಳ್ಳಗಿರುವ ಕೊಂಬೆ	೨೭-೧೧
ಸೇದೆವಡು-ಬಳಲು	೮೩-೫೦ವ
ಸೈರಿಭ-ಕೋಣ	೫೬-೪೫
ಸೈವಳ-ಸೈವಾಲ, ಪಾಚಿ	೧೩೪-೧೦೮
ಸೋಂದು-ಓಡಿಸು	೮೩-೫೦ವ
ಸೋವು—ಎಬ್ಬಿಸಿ ಓಡಿಸು	೯೧-೮೪ವ
ಸೌರಭೇಯ-ಎತ್ತು	೧೦೧-೧೨೩
ಸ್ತಬಕ-ಹೂಗೊಂಚಲು	೧೪೦-೧೩ವ

	ಪುಟ—ಪದ್ಯ
ಸ್ನಪನ—ಸ್ನಾನ	೧೩೬-೧೧೬
ಸ್ಮರ-ಮನ್ಮಥ	೬೬-೯೩ವ
ಸ್ಫಾರ-ಪ್ರಕಾಶಿಸುವ	೫೪-೩೫
ಸ್ಯಾದ್ವಾದ-ಜೈನ ತರ್ಕ	೨-೧೦
ಸ್ರೋತ-ಪ್ರವಾಹ	೫೬-೪೮
ಸ್ವಾಯತ್ತ-ತನ್ನಲ್ಲಿಯೇ ವಶವಾಗಿರುವುದು	೧-೧
ಹಿಮಕೃನ್ಮಂಡಳ-ಚಂದ್ರ	೧೯೭-೩೬
ಹೀಲಿ-ನವಿಲುಗರಿ	೮೫-೬೨
ಹೂಹೆ>ಹಾಹೆ-ಬೊಂಬೆ	೧೦೭-೧೫೦
ಹೆಕ್ಕಳಿಸು-ಅಧಿಕವಾಗು	೨೧೪-೧೦೬ವ
ಹೆ-ಚಂದ್ರ	೨೮-೧೫
ಹ್ರದ-ಮಡು	೧೯೮-೩೯